ಶೂಟಿಂಗ್ ಸ್ಪರ್ಧೆ

ಮಂಗಳೂರು ಓಪನ್ ಶೂಟಿಂಗ್ ಚಾಂಪಿಯನ್‌ಷಿಪ್‌ನಲ್ಲಿ ಉದಯೋನ್ಮುಖ ಶೂಟರ್ ಅನುರಾಧ ವಿ.ಎಚ್. ಅವರು ಏರ್ ರೈಫಲ್ಸ್ ವಿಭಾಗದ ಸಬ್‌ಯೂತ್ ವಿಭಾಗದಲ್ಲಿ ಸ್ಪರ್ಧಿಸಿದರು

prajavani.net prajavani | ಬುಧವಾರ, ಮೇ 27, 2026 | ಬೆಂಗಳೂರು | ₹ 7.00 | ಸಂಪುಟ 79 | ಸಂಚಿಕೆ 146 | ಪುಟ 14 | www.prajavani.net

ಕ್ಷಣ ಕ್ಷಣದ ಅಪ್‌ಡೇಟ್‌ಗಳಿಗಾಗಿ ಸ್ಕ್ಯಾನ್ ಮಾಡಿ

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ

ಸೆನ್ಸೆಕ್ಸ್ 76,009 | ನಿಫ್ಟಿ 23,913 | $/₹ 95.70 | ಚಿನ್ನ (Std. 10g) ₹1,63,600 (ಬೆಂಗಳೂರು) | ಶುದ್ಧ ಬೆಳ್ಳಿ (kg) ₹2,82,700 (ಬೆಂಗಳೂರು)

ರಾಜೀನಾಮೆಗೆ ಸಿಎಂ ಅಣಿ

ಪದತ್ಯಾಗ ಮಾಡುವಂತೆ 'ಹೈ' ಸೂಚನೆ • ಒಂದೆರಡು ದಿನದಲ್ಲಿ ರಾಜ್ಯಪಾಲರ ಭೇಟಿ ಸಾಧ್ಯತೆ • ಡಿಕೆಶಿ ಪಟ್ಟಕ್ಕೆ 'ಕೈ'ವರಿಷ್ಠರ ತಯಾರಿ

ಪ್ರಜಾವಾಣಿ ವಾರ್ತೆ

ನವದೆಹಲಿ/ಬೆಂಗಳೂರು: ಮಂಗಳವಾರ ನಡೆದ ಕ್ಷಿಪ್ರ ರಾಜಕೀಯ ಬೆಳವಣಿಗೆಯಲ್ಲಿ ರಾಜ್ಯ ಸರ್ಕಾರದ ನಾಯಕತ್ವ ಬದಲಾಯಿಸಲು ಕಾಂಗ್ರೆಸ್ ಹೈಕಮಾಂಡ್ ಮಹತ್ವದ ತೀರ್ಮಾನ ಕೈಗೊಂಡಿದ್ದು, ಮುಖ್ಯಮಂತ್ರಿ ಸ್ಥಾನಕ್ಕೆ ರಾಜೀನಾಮೆ ಕೊಡುವಂತೆ ಸಿದ್ದರಾಮಯ್ಯ ಅವರಿಗೆ ಸೂಚಿಸಿದೆ.

ದೆಹಲಿಯಲ್ಲಿ ಇಡೀ ದಿನ ನಡೆದ ಸರಣಿ ಸಭೆಯ ಬಳಿಕ ಹೈಕಮಾಂಡ್ ಈ ತೀರ್ಮಾನ ಕೈಗೊಂಡಿತು ಎಂದು ಗೊತ್ತಾಗಿದೆ. ರಾತ್ರಿ ಎಂಟೂವರೆಗೆ ವಿಶೇಷ ವಿಮಾನದಲ್ಲಿ ಹೊರಟ ಸಿದ್ದರಾಮಯ್ಯ ಅವರು 11ರ ಸುಮಾರಿಗೆ ಬೆಂಗಳೂರಿಗೆ ತಲುಪಿದರು. ಬುಧವಾರ (ಮೇ 27) ಅಥವಾ ಒಂದೆರಡು ದಿನಗಳಲ್ಲಿ ಅವರು ರಾಜ್ಯಪಾಲರನ್ನು ಭೇಟಿ ಮಾಡಿ ರಾಜೀನಾಮೆ ಸಲ್ಲಿಸುವ ಸಂಭವ ಇದೆ ಎಂದು ಗೊತ್ತಾಗಿದೆ.

ಸರ್ಕಾರ ಅಸ್ತಿತ್ವಕ್ಕೆ ಬಂದು ಎರಡೂವರೆ ವರ್ಷಗಳ ಬಳಿಕ ಅಧಿಕಾರ ಹಸ್ತಾಂತರದ ಒಪ್ಪಂದವಾಗಿತ್ತು ಎಂಬ ಮಾತುಗಳು ಕಾಂಗ್ರೆಸ್ ವಲಯದಲ್ಲಿ ಹರಿದಾಡಿದ್ದವು. ಅಧಿಕಾರಕ್ಕೆ ತ್ಯಾಗಕ್ಕೆ ಒಪ್ಪದ ಸಿದ್ದರಾಮಯ್ಯ ಅವರು, ತಮ್ಮದೇ ಚಾಣಾಕ್ಷ ನಡೆಯಿಂದ ತಮ್ಮ ಅಧಿಕಾರ ಅವಧಿಯನ್ನು ವಿಸ್ತರಿಸಿಕೊಂಡು ಬಂದಿದ್ದರು. ಕೊನೆಗೂ ಅವರನ್ನು ಕುರ್ಚಿಯಿಂದ ಇಳಿಸಲು ಹಾಗೂ ಪಕ್ಷ ಕಷ್ಟದಲ್ಲಿದ್ದಾಗ ಆಸರೆಯಾಗಿ ನಿಂತಿದ್ದ ಡಿ.ಕೆ. ಶಿವಕುಮಾರ್ ಅವರಿಗೆ ಪಟ್ಟ ಕಟ್ಟಲು ಹೈಕಮಾಂಡ್ ನಿರ್ಧರಿಸಿದೆ.

▶6

ಸಿದ್ದರಾಮಯ್ಯ ಮತ್ತು ಡಿ.ಕೆ.ಶಿವಕುಮಾರ್ ಅವರು ನವದೆಹಲಿಯ ಎಐಸಿಸಿ ಕಚೇರಿಯ ಇಂದಿರಾ ಭವನದಲ್ಲಿ ಚರ್ಚೆಯಲ್ಲಿ ತೊಡಗಿದ್ದ ಕ್ಷಣ

ಸಿ.ಎಂ ಗಂಭೀರ–ಡಿ.ಸಿ.ಎಂ ಹಸನ್ಮುಖ

ಸಭೆ ಮುಗಿಸಿ ಹೊರ ಬಂದಾಗ ಸಿದ್ದರಾಮಯ್ಯ ಗಂಭೀರವಾಗಿದ್ದರು. ಶಿವಕುಮಾರ್ ಅವರು ನಗುನಗುತ್ತಾ ಹೊರಬಂದರು. ಮಾಧ್ಯಮಗಳ ಪ್ರಶ್ನೆಗಳಿಗೆ ಸಿದ್ದರಾಮಯ್ಯ ಒಂದು ಸಾಲಿನ ಉತ್ತರ ನೀಡಿದರು. ಆ ಬಳಿಕ ಇಂಧನ ಸಚಿವ ಕೆ.ಜೆ.ಜಾರ್ಜ್ ನಿವಾಸಕ್ಕೆ ತೆರಳಿ ಆಪ್ತ ಸಚಿವರೊಂದಿಗೆ ಸಮಾಲೋಚಿಸಿದರು. ನಂತರ ವಿಶೇಷ ವಿಮಾನದಲ್ಲಿ ಬೆಂಗಳೂರಿಗೆ ನಿರ್ಗಮಿಸಿದರು. ಈ ನಡುವೆ, ಮುಖ್ಯಮಂತ್ರಿ ಬಣದ ನಾಯಕರು ಮೌನಕ್ಕೆ ಶರಣಾದರು.

ಸಭೆಯ ಬಳಿಕ ಶಿವಕುಮಾರ್ ಅವರು ಕರ್ನಾಟಕ ಭವನಕ್ಕೆ ಬಂದರು. ಮಾಧ್ಯಮಗಳ ಪ್ರಶ್ನೆಗೆ ಉತ್ತರಿಸಲಿಲ್ಲ. ಭವನದಲ್ಲಿರುವ ಮುಖ್ಯಮಂತ್ರಿ ಸ್ವೀಟ್‌ಗೆ ತೆರಳುವಾಗ ಲಿಫ್ಟ್‌ನಲ್ಲಿ ವಿಜಯದ ಸಂಕೇತ ತೋರಿದರು. ಸಹೋದರ ಡಿ.ಕೆ. ಸುರೇಶ್, ಆಪ್ತ ಶಾಸಕರು ಹಾಗೂ ಮುಖಂಡರು ಶಿವಕುಮಾರ್ ಅವರ ಜತೆಗೂಡಿದರು. ಶಿವಕುಮಾರ್ ಸ್ವಲ್ಪ ಕಾಲ ಅನ್ಯಮನಸ್ಕರಾಗಿದ್ದರು. ಮಂಗಳವಾರ ಬೆಳಿಗ್ಗೆ ಸಿದ್ದರಾಮಯ್ಯ ಅವರ ಸುತ್ತಮುತ್ತ ಕಾಣಿಸಿಕೊಂಡಿದ್ದ ನಾಯಕರೆಲ್ಲ ಶಿವಕುಮಾರ್ ಅವರನ್ನು ಕಾಣಲು ಬಂದರು. ಆ ಬಳಿಕ ಶಿವಕುಮಾರ್ ಅವರ ಖದರು ಬದಲಾಯಿತು. ನಾಯಕರೊಂದಿಗೆ ಉಲ್ಲಾಸದಿಂದ ಹಾಗೂ ಆಪ್ತವಾಗಿ ಮಾತನಾಡಿದರು. 40 ವರ್ಷಗಳ ಹಿಂದೆ ಪಕ್ಷ ಸಂಘಟನೆಯಲ್ಲಿ ಭಾಗಿಯಾದ ಹಳೆಯ ಚಿತ್ರಗಳನ್ನು ನಾಯಕರಿಗೆ ತೋರಿಸಿ ಸಂಭ್ರಮಪಟ್ಟರು.

ಇಂದು ಡಿಕೆಶಿ, ವೇಣುಗೋಪಾಲ್ ಬೆಂಗಳೂರಿಗೆ

ಬುಧವಾರ ಮಧ್ಯಾಹ್ನ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಕೆ.ಸಿ ವೇಣುಗೋಪಾಲ್, ರಾಜ್ಯ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲ ಅವರೊಟ್ಟಿಗೆ ಡಿ.ಕೆ ಶಿವಕುಮಾರ್ ದೆಹಲಿಯಿಂದ ಹೊರಟು ಬೆಂಗಳೂರು ತಲುಪಲಿದ್ದಾರೆ.

ಸಿದ್ದರಾಮಯ್ಯ ಅವರು ಮುಖ್ಯಮಂತ್ರಿ ಸ್ಥಾನಕ್ಕೆ ರಾಜೀನಾಮೆ ಕೊಟ್ಟ ಬಳಿಕ ಶಾಸಕಾಂಗ ಪಕ್ಷದ ನಾಯಕನ ಆಯ್ಕೆ ಪ್ರಕ್ರಿಯೆ ನಡೆಯಬೇಕಾಗುತ್ತದೆ.

ಕಾಂಗ್ರೆಸ್ ಹೈಕಮಾಂಡ್ ಸೂಚಿಸಿದಂತೆ ಡಿ.ಕೆ. ಶಿವಕುಮಾರ್ ಅವರೇ ಉತ್ತರಾಧಿಕಾರಿ ಆಗಬಹುದಾದರೂ ಅದಕ್ಕೆ ಶಾಸಕರ ಬಹುಮತ ಅಗತ್ಯ. ವಾಡಿಕೆಯಂತೆ ಕಾಂಗ್ರೆಸ್ ಶಾಸಕಾಂಗ ಪಕ್ಷದ ಸಭೆ ಕರೆದು, ಅಲ್ಲಿ ನಾಯಕನನ್ನು ಆಯ್ಕೆ ಮಾಡಬೇಕು.

ಗುರುವಾರ ಅಥವಾ ಶುಕ್ರವಾರ ಕಾಂಗ್ರೆಸ್ ಶಾಸಕಾಂಗ ಪಕ್ಷದ ಸಭೆ ನಡೆಯುವ ಸಾಧ್ಯತೆ ಇದೆ. ನಂತರ ಅಗತ್ಯ ಸಂಖ್ಯಾಬಲದ ಶಾಸಕರ ಸಹಿ ಇರುವ ಪತ್ರವನ್ನು ರಾಜ್ಯಪಾಲರಿಗೆ ಸಲ್ಲಿಸಿ, ಪ್ರಮಾಣವಚನ ಸ್ವೀಕಾರಕ್ಕೆ ಅವಕಾಶ ಕಲ್ಪಿಸುವಂತೆ ಕೋರಬೇಕಾಗುತ್ತದೆ.

ಇಂಧನ ಸುರಕ್ಷತೆ: 'ಕ್ವಾಡ್' ಚೌಕಟ್ಟು

ನವದೆಹಲಿ(ಪಿಟಿಐ): ಭವಿಷ್ಯದಲ್ಲಿ ಇಂಧನ ಪೂರೈಕೆಯಲ್ಲಿ ಆಗಬಹುದಾದ ಅಡಚಣೆಗಳನ್ನು ತಪ್ಪಿಸುವ ಸಲುವಾಗಿ ಮಹತ್ವದ ಹೆಜ್ಜೆ ಇಟ್ಟಿರುವ 'ಕ್ವಾಡ್', ಈ ಸಂಬಂಧ ಹಿಂದೂ ಮಹಾಸಾಗರ–ಪೆಸಿಫಿಕ್ ಇಂಧನ ಸುರಕ್ಷತೆ ಚೌಕಟ್ಟನ್ನು ಮಂಗಳವಾರ ಘೋಷಿಸಿದೆ.

ತೈಲ ಸಂಗ್ರಹ ಹೆಚ್ಚಿಸುವುದು, ಸುಲಲಿತವಾಗಿ ಇಂಧನ ಪೂರೈಕೆ ಖಾತ್ರಿಪಡಿಸಲು ನೀತಿಗಳನ್ನು ರೂಪಿಸುವುದು ಹಾಗೂ ತುರ್ತು ಸಂದರ್ಭಗಳಲ್ಲಿ ಸ್ಪಂದನೆಗಾಗಿ ಸದಸ್ಯ ರಾಷ್ಟ್ರಗಳ ನಡುವೆ ಸಮನ್ವಯ ಸಾಧಿಸುವುದಕ್ಕಾಗಿ ವಿಧಾನ ರೂಪಿಸುವಂತಹ ಕ್ರಮಗಳನ್ನು ಈ ಚೌಕಟ್ಟು ಒಳಗೊಂಡಿದೆ.

ಇರಾನ್ ಮೇಲೆ ಅಮೆರಿಕ ಹಾಗೂ ಇಸ್ರೇಲ್ ದಾಳಿ ಆರಂಭಿಸಿದ ಬಳಿಕ, ತೈಲ ಹೊತ್ತ ಹಡಗುಗಳು ಹೊರ್ಮುಜ್ ಜಲಸಂಧಿ ಮೂಲಕ ಸಾಗುವುದಕ್ಕೆ ತೊಂದರೆಯಾಗುತ್ತಿದೆ. ಇದರಿಂದ ವಿಶ್ವದಾದ್ಯಂತ ಇಂಧನ ಬಿಕ್ಕಟ್ಟು ಕಾಣಿಸಿಕೊಂಡಿದೆ. ಜಗತ್ತಿನ ಐದನೇ ಒಂದರಷ್ಟು ತೈಲ ಹಾಗೂ ಎಲ್‌ಎನ್‌ಜಿ ಈ ಜಲಮಾರ್ಗದ ಮೂಲಕವೇ ಸಾಗಣೆಯಾಗುತ್ತದೆ. ಈ ಕಾರಣಕ್ಕೆ ಇಂಧನ ಸುರಕ್ಷತೆ ಕುರಿತ ಚೌಕಟ್ಟಿಗೆ ಮಹತ್ವ ಬಂದಿದೆ.

▶10

ಫೈನಲ್‌ಗೆ ರಾಯಲ್ ಚಾಲೆಂಜರ್ಸ್

ಧರ್ಮಶಾಲಾ: 'ಹಾಲಿ ಚಾಂಪಿಯನ್' ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡವು ಮಂಗಳವಾರ ನಡೆದ ಐಪಿಎಲ್ ಮೊದಲ ಕ್ವಾಲಿಫಯರ್ ಪಂದ್ಯದಲ್ಲಿ ಗುಜರಾತ್ ಟೈಟನ್ಸ್ ತಂಡವನ್ನು 92 ರನ್‌ಗಳಿಂದ ಮಣಿಸಿ ನೇರವಾಗಿ ಫೈನಲ್ ಪ್ರವೇಶಿಸಿತು. ಈ ಪಂದ್ಯ ಸೋತ ಶುಭಮನ್ ಗಿಲ್ ಪಡೆ ಶುಕ್ರವಾರ ಎರಡನೇ ಕ್ವಾಲಿಫಯರ್ ಆಡಲಿದೆ.

- ಆರ್‌ಸಿಬಿ ತಂಡವು ಐಪಿಎಲ್‌ನಲ್ಲಿ ಐದನೇ ಬಾರಿ ಫೈನಲ್ ಪ್ರವೇಶಿಸಿತು. ಇದಕ್ಕೂ ಮೊದಲು 2009, 2011, 2016 ಮತ್ತು 2025ರಲ್ಲಿ ಪ್ರಶಸ್ತಿ ಸುತ್ತು ತಲುಪಿತ್ತು

ರಜತ್ ಪಾಟೀದಾರ್	
ರನ್	93*
ಎಸೆತ	33
ಬೌಂಡರಿ	5
ಸಿಕ್ಸರ್	9
ಸ್ಟ್ರೈಕ್‌ರೇಟ್	281.82

ಸ್ಕೋರ್

ರಾಯಲ್ ಚಾಲೆಂಜರ್ಸ್ ಬೆಂಗಳೂರು 5ಕ್ಕೆ254 (20 ಓವರ್‌ಗಳಲ್ಲಿ)

ಗುಜರಾತ್ ಟೈಟನ್ಸ್ 162 (19.3 ಓವರ್‌ಗಳಲ್ಲಿ)

ಫಲಿತಾಂಶ

ಆರ್‌ಸಿಬಿಗೆ 92 ರನ್‌ಗಳ ಜಯ

ಕೃಣಾಲ್ ಪಾಂಡ್ಯ	
ರನ್	43
ಎಸೆತ	28

- ಆರ್‌ಸಿಬಿ ತಂಡ ಗಳಿಸಿದ ರನ್ (254). ಇದು ಐಪಿಎಲ್ ಪ್ಲೇ ಆಫ್ ಪಂದ್ಯದಲ್ಲಿ ತಂಡವೊಂದರ ಅತ್ಯಧಿಕ ಮೊತ್ತ

ಇರಾನ್ ಕ್ಷಿಪಣಿ ನೆಲೆ ಮೇಲೆ ದಾಳಿ

ವಾಷಿಂಗ್ಟನ್ (ಎಎಫ್‌ಪಿ): ಸಂಧಾನ ಮಾತುಕತೆಯ ನಡುವೆಯೇ, ಇರಾನ್ ಕ್ಷಿಪಣಿ ಉಡಾವಣಾ ತಾಣಗಳು ಮತ್ತು ಬೋಟ್‌ಗಳನ್ನು ಗುರಿಯಾಗಿಸಿ ಅಮೆರಿಕ ಮಂಗಳವಾರ ವೈಮಾನಿಕ ದಾಳಿ ನಡೆಸಿದೆ.

ಕದನ ವಿರಾಮ ಒಪ್ಪಂದ ಮಾತುಕತೆಗಾಗಿ ಇರಾನ್ ಪ್ರತಿನಿಧಿಗಳು ಕತಾರ್ ರಾಜಧಾನಿ ದೋಹಾಕ್ಕೆ ಬಂದಿಳಿದ ಬೆನ್ನಲ್ಲೇ, ಅಮೆರಿಕ ಹೊಸ ದಾಳಿ ನಡೆಸಿರುವುದರಿಂದ ಉದ್ವಿಗ್ನ ಪರಿಸ್ಥಿತಿ ಮತ್ತಷ್ಟು ಹೆಚ್ಚಿದೆ. ಇನ್ನೊಂದೆಡೆ, ದಕ್ಷಿಣ ಲೆಬನಾನ್‌ನಲ್ಲಿ ಹಿಜ್ಬುಲ್ಲಾ ಬಂಡುಕೋರರನ್ನು ಗುರಿಯಾಗಿಸಿ ಇಸ್ರೇಲ್ ದಾಳಿ ನಡೆಸಿದೆ.

ಅಮೆರಿಕ ಮತ್ತು ಇಸ್ರೇಲ್, ಇರಾನ್ ಮೇಲೆ ಹೊಸದಾಗಿ ದಾಳಿ ಆರಂಭಿಸಿರುವುದು, ಹೊರ್ಮುಜ್ ಜಲಸಂಧಿ ತೆರೆಯುವ ನಿಟ್ಟಿನಲ್ಲಿ ನಡೆಯುತ್ತಿರುವ ಪ್ರಯತ್ನಗಳಿಗೆ ಹಿನ್ನಡೆ ಆಗಿದೆ. ಪಶ್ಚಿಮ ಏಷ್ಯಾ ಸಂಘರ್ಷ ಕೊನೆಗೊಳ್ಳುವ ವಿಷಯದಲ್ಲಿ ಅನಿಶ್ಚಿತತೆ ಮುಂದುವರಿದಿದೆ.

'ಇರಾನ್ ಪಡೆಗಳು ಒಡ್ಡಿರುವ ಬೆದರಿಕೆಯಿಂದ ನಮ್ಮ ಪಡೆಗಳನ್ನು ರಕ್ಷಿಸಲು 'ಸ್ವ-ರಕ್ಷಣೆ' ದಾಳಿ ನಡೆಸಬೇಕಾಯಿತು' ಎಂದು ಯುಎಸ್ ಸೆಂಟ್ರಲ್ ಕಮಾಂಡ್ ಹೇಳಿದೆ.

ಅಬ್ಬಾಸ್ ಬಂದರು ಸಮೀಪ ನಸುಕಿನಲ್ಲಿ ಸ್ಫೋಟಗಳು ಸಂಭವಿಸಿವೆ.

'ಅಮೆರಿಕದ ಡ್ರೋನ್‌ಗಳನ್ನು ಹೊಡೆದುರುಳಿಸಿದ್ದೇವೆ, ಇರಾನ್ ವಾಯುಪ್ರದೇಶ ಪ್ರವೇಶಿಸಿದ ಅಮೆರಿಕದ ಯುದ್ಧ ವಿಮಾನಗಳ ಮೇಲೆ ಗುಂಡಿನ ದಾಳಿ ನಡೆಸಿದ್ದೇವೆ' ಎಂದು ಇರಾನ್ ಹೇಳಿದೆ.

> ಇರಾನ್ ಸಮೃದ್ಧೀಕರಿಸಿದ ಯುರೇನಿಯಂ ಅನ್ನು ಅಮೆರಿಕಕ್ಕೆ ಹಸ್ತಾಂತರಿಸಬೇಕು ಅಥವಾ ಇರಾನ್‌ನಲ್ಲೇ ಅದನ್ನು ಅಂತರರಾಷ್ಟ್ರೀಯ ಅಣುಶಕ್ತಿ ಸಂಸ್ಥೆ ಸಮ್ಮುಖದಲ್ಲಿ ನಾಶಪಡಿಸಬೇಕು
>
> **ಡೊನಾಲ್ಡ್ ಟ್ರಂಪ್,** ಅಮೆರಿಕದ ಅಧ್ಯಕ್ಷ

'ಹೊರ್ಮುಜ್ ತೆರೆಯುತ್ತೇವೆ'

'ಹೊರ್ಮುಜ್ ಜಲಸಂಧಿಯನ್ನು ಒಂದಲ್ಲ, ಮತ್ತೊಂದು ರೀತಿಯಲ್ಲಿ ತೆರೆಯುತ್ತೇವೆ. ಸದ್ಯ ಅಲ್ಲಿ ನಡೆಯುತ್ತಿರುವುದು ಕಾನೂನುಬಾಹಿರ, ಇಡೀ ಜಗತ್ತಿಗೆ ಸ್ವೀಕಾರಾರ್ಹವಲ್ಲ' ಎಂದು ಅಮೆರಿಕದ ವಿದೇಶಾಂಗ ಕಾರ್ಯದರ್ಶಿ ಮಾರ್ಕೊ ರುಬಿಯೊ ಹೇಳಿದ್ದಾರೆ.

'ಇರಾನ್ ಜತೆಗಿನ ಮಾತುಕತೆ ಅಂತಿಮ ಹಂತದಲ್ಲಿತ್ತು, ಆದರೆ, ಹೊರ್ಮುಜ್ ಜಲಸಂಧಿ ವಿಚಾರವಾಗಿ ಇರಾನ್ ಬಿಗಿ ಪಟ್ಟು ಮುಂದುವರಿಸಿದೆ. ಅಮೆರಿಕ ದಾಳಿ ನಡೆಸಿದ್ದರೂ ಇರಾನ್ ಜತೆಗೆ ಒಪ್ಪಂದ ಮಾಡಿಕೊಳ್ಳುವ ಪ್ರಕ್ರಿಯೆ ಮುಕ್ತವಾಗಿದೆ. ಕತಾರ್‌ನಲ್ಲಿ ನಡೆಯುತ್ತಿರುವ ಮಾತುಕತೆಯಲ್ಲಿ ಈ ವಿಷಯವಾಗಿ ಮಹತ್ವದ ಪ್ರಗತಿ ನಿರೀಕ್ಷಿಸುತ್ತಿದ್ದೇವೆ. ಆದರೆ, ಅಂತಿಮ ಒಪ್ಪಂದಕ್ಕೆ ಇನ್ನೂ ಕೆಲವು ದಿನಗಳು ಬೇಕಾಗಬಹುದು' ಎಂದು ಅವರು ಹೇಳಿದ್ದಾರೆ.

ಚಿನಕುರುಳಿ ಪ್ರಕಾಶ್ ಶೆಟ್ಟಿ

ಪರಿಷತ್ 7 ಸ್ಥಾನ: ಜೂ.18ಕ್ಕೆ ಮತದಾನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯ ವಿಧಾನಸಭೆಯಿಂದ ವಿಧಾನ ಪರಿಷತ್ತಿಗೆ ಚುನಾಯಿತರಾದ ಏಳು ಸದಸ್ಯರ ಅವಧಿ ಜೂನ್ 30ಕ್ಕೆ ಮುಗಿಯಲಿದ್ದು, ಆ ಸ್ಥಾನಗಳಿಗೆ ಜೂನ್ 18ಕ್ಕೆ ಚುನಾವಣೆ ನಡೆಯಲಿದೆ.

ಚುನಾವಣಾ ಆಯೋಗವು ಮಂಗಳವಾರ ವೇಳಾಪಟ್ಟಿ ಪ್ರಕಟಿಸಿದೆ. ಜೂನ್ 1ಕ್ಕೆ ಅಧಿಸೂಚನೆ ಹೊರಡಿಸಲಿದ್ದು, ನಾಮಪತ್ರ ಸಲ್ಲಿಸಲು 8ರಂದು ಕೊನೆಯ ದಿನಾಂಕ. 9ಕ್ಕೆ ನಾಮಪತ್ರಗಳ ಪರಿಶೀಲನೆ ನಡೆಯಲಿದ್ದು, ನಾಮಪತ್ರ ವಾಪಸ್ ಪಡೆಯಲು 11 ಕೊನೆಯ ದಿನಾಂಕ. ಜೂನ್ 18ರ ಬೆಳಿಗ್ಗೆ 9ರಿಂದ ಸಂಜೆ 4ರ ಒಳಗೆ ಮತದಾನ ಮತ್ತು ಮತ ಎಣಿಕೆಗೆ ದಿನಾಂಕ ನಿಗದಿ ಮಾಡಲಾಗಿದೆ. ಜೂನ್ 20ರ ಒಳಗೆ ಚುನಾವಣಾ ಪ್ರಕ್ರಿಯೆ ಪೂರ್ಣಗೊಳಿಸಬೇಕಿದೆ.

30ಕ್ಕೆ ನಿವೃತ್ತಿ ಆಗಲಿರುವ ಸದಸ್ಯರ ಪೈಕಿ ಕಾಂಗ್ರೆಸ್‌ನ ಮೂವರು, ಬಿಜೆಪಿಯ ಮೂವರು ಮತ್ತು ಜೆಡಿಎಸ್‌ನ ಒಬ್ಬರು ಇದ್ದಾರೆ. ವಿಧಾನಸಭೆಯ ಈಗಿನ ಬಲ 222 ಇದ್ದು, ಈ ಲೆಕ್ಕಾಚಾರದ ಪ್ರಕಾರ ಕಾಂಗ್ರೆಸ್‌ನಿಂದ ನಾಲ್ವರು ಮತ್ತು ಬಿಜೆಪಿಯಿಂದ ಇಬ್ಬರು ಸದಸ್ಯರು ಚುನಾಯಿತರಾಗುವುದು ಖಚಿತವಾಗಿದೆ.

ಉಳಿದ ಒಂದು ಸ್ಥಾನಕ್ಕೆ ತಮ್ಮ ಅಭ್ಯರ್ಥಿಯನ್ನು ಚುನಾಯಿಸಲು ಕಾಂಗ್ರೆಸ್ ಹಾಗೂ ಜೆಡಿಎಸ್‌ಗೆ ಸ್ವತಂತ್ರ ಬಲವಿಲ್ಲ. ಕಾಂಗ್ರೆಸ್‌ನಿಂದ ನಾಲ್ಕನೇ ಅಭ್ಯರ್ಥಿ ಸ್ಪರ್ಧಿಸಿದರೆ ಜೆಡಿಎಸ್‌ನ ಮತ ಸೆಳೆಯಬೇಕಾಗುತ್ತದೆ ಅಥವಾ ಜೆಡಿಎಸ್ ಅಭ್ಯರ್ಥಿ ಹಾಕಿದರೆ ಕಾಂಗ್ರೆಸ್‌ನ ಮತಕ್ಕೆ ಕೈ ಹಾಕಬೇಕಾಗುತ್ತದೆ.

ನಿವೃತ್ತಿ ಆಗಲಿರುವ ಸದಸ್ಯರು

ಸದಸ್ಯ	ಪಕ್ಷ
ಗೋವಿಂದರಾಜು	ಜೆಡಿಎಸ್
ನಸೀರ್ ಅಹಮದ್	ಕಾಂಗ್ರೆಸ್
ಎನ್.ನಾಗರಾಜು (ಎಂಟಿಬಿ)	ಬಿಜೆಪಿ
ಪ್ರತಾಪ ಸಿಂಹ ನಾಯಕ್ ಕೆ.	ಬಿಜೆಪಿ
ತಿಪ್ಪಣ್ಣಪ್ಪ ಕಮಕನೂರ	ಕಾಂಗ್ರೆಸ್
ಸುನಿಲ್ ವಲ್ಯಾಪುರೆ	ಬಿಜೆಪಿ
ಬಿ.ಕೆ.ಹರಿಪ್ರಸಾದ್	ಕಾಂಗ್ರೆಸ್

ದೆಹಲಿಯಲ್ಲಿ ಲಾಬಿ: ಕರ್ನಾಟಕ ಸರ್ಕಾರದ ನಾಯಕತ್ವ ಬದಲಾವಣೆಗಾಗಿ ಮಂಗಳವಾರ ದೆಹಲಿಯಲ್ಲಿ ಕಾಂಗ್ರೆಸ್ ವರಿಷ್ಠರ ಸಭೆ ನಡೆಯಿತು. ಪರಿಷತ್‌ಗೆ ಪ್ರವೇಶಿಸಲು ಬಯಸಿರುವ ಅನೇಕ ಆಕಾಂಕ್ಷಿಗಳು ಇದೇ ವೇಳೆ ದೆಹಲಿಗೆ ದೌಡಾಯಿಸಿದ್ದರು. ತಮ್ಮ ಹಿತೈಷಿಗಳ ಮೂಲಕ ಪಕ್ಷದ ನಾಯಕರನ್ನು ಭೇಟಿ ಮಾಡಿ, ತಮ್ಮನ್ನು ಅಭ್ಯರ್ಥಿಯಾಗಿಸುವಂತೆ ದೊಡ್ಡ ಮಟ್ಟದ ಲಾಬಿ ನಡೆಸಿದರು. ಆದರೆ, ಕಾಂಗ್ರೆಸ್ ಹೈಕಮಾಂಡ್ ಯಾರ ಹೆಸರನ್ನೂ ಈವರೆಗೆ ಅಖೈರುಗೊಳಿಸಿಲ್ಲ.

ಬಿಜೆಪಿಯಲ್ಲಿ ಆರಂಭವಾಗದ ಕಸರತ್ತು: ತನ್ನ ಪಾಲಿನ ಎರಡು ಸ್ಥಾನಗಳಿಗೆ ಯಾರನ್ನು ಕಣಕ್ಕೆ ಇಳಿಸಬೇಕು ಎಂಬ ಚರ್ಚೆ ಬಿಜೆಪಿಯಲ್ಲಿ ಆರಂಭವಾಗಿಲ್ಲ. 'ಪಕ್ಷದ ರಾಷ್ಟ್ರೀಯ ಅಧ್ಯಕ್ಷ ನಿತಿನ್ ನವೀನ್ ಈಚೆಗೆ ಪಕ್ಷದ ಪ್ರಮುಖ ನಾಯಕರ ಸಭೆ ನಡೆಸಿದಾಗಲೂ ಈ ವಿಷಯ ಚರ್ಚೆಗೆ ಬರಲಿಲ್ಲ' ಎಂದು ಮೂಲಗಳು ತಿಳಿಸಿವೆ.

ಇನ್ನೂ ಸಾಕಷ್ಟು ದಿನಗಳು ಇರುವುದರಿಂದ, ಆಕಾಂಕ್ಷಿಗಳ ಪಟ್ಟಿಯೊಂದನ್ನು ದೆಹಲಿಗೆ ಕಳುಹಿಸಲಾಗುವುದು ಎಂದೂ ಮೂಲಗಳು ಹೇಳಿವೆ.

ಗೃಹಲಕ್ಷ್ಮಿ

ಮನೆ ಯಜಮಾನಿಗೆ ಪ್ರತಿ ತಿಂಗಳು ₹2,000

ಕಳೆದ ಮೂರು ವರ್ಷಗಳಿಂದ ಗ್ಯಾರಂಟಿ ಸರ್ಕಾರವು 'ಗೃಹಲಕ್ಷ್ಮಿ' ಯೋಜನೆಯಡಿ ಪ್ರತಿ ತಿಂಗಳು ₹2,000 ಒದಗಿಸುವ ಮೂಲಕ ಕುಟುಂಬದ ಯಜಮಾನಿಯರನ್ನು ಸಬಲೀಕರಣಗೊಳಿಸುತ್ತಿದೆ. ಸಣ್ಣಪುಟ್ಟ ಗೃಹಬಳಕೆಯ ಅಗತ್ಯಗಳನ್ನು ಪೂರೈಸಲು, ಸ್ವ- ಉದ್ಯಮಿಯಾಗಲು ಹಾಗೂ ಆರ್ಥಿಕವಾಗಿ ಸಶಕ್ತರಾಗಲು ಅವರಿಗೆ ದಾರಿದೀಪವಾಗಿದೆ.

ಗೃಹಲಕ್ಷ್ಮಿ ಯೋಜನೆಗಾಗಿ ಈವರೆಗೆ ₹69,783 ಕೋಟಿ ಅನುದಾನವನ್ನು ನೀಡಿ, ಮಹಿಳೆಯರು ಸ್ವತಂತ್ರ ಹಾಗೂ ಸ್ವಾವಲಂಬಿ ಬದುಕನ್ನು ಕಟ್ಟಿಕೊಳ್ಳಲು ನೆರವಾಗುತ್ತಿದ್ದೇವೆ

ಗೃಹಲಕ್ಷ್ಮಿ ಯೋಜನೆಯ ಮೂಲಕ ರಾಜ್ಯದ 1.24 ಕೋಟಿ ಮಹಿಳೆಯರು ಸಬಲೀಕರಣಗೊಳ್ಳುತ್ತಿದ್ದಾರೆ. ಇದು ಅವರ ಕುಟುಂಬಗಳ ಉಜ್ವಲ ಭವಿಷ್ಯಕ್ಕೆ ಭದ್ರ ಬುನಾದಿ ಹಾಕಿಕೊಟ್ಟಿದೆ

ಸಿದ್ದರಾಮಯ್ಯ
ಸನ್ಮಾನ್ಯ ಮುಖ್ಯಮಂತ್ರಿಗಳು

ಡಿ ಕೆ ಶಿವಕುಮಾರ್
ಮಾನ್ಯ ಉಪ ಮುಖ್ಯಮಂತ್ರಿಗಳು

ಶಕ್ತಿ | ಅನ್ನಭಾಗ್ಯ | ಗೃಹ ಜ್ಯೋತಿ | ಯುವನಿಧಿ

'ಗೃಹಲಕ್ಷ್ಮಿ'ಯಿಂದಾಗಿರುವ ಬದಲಾವಣೆ ತಿಳಿಯಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

CMofKarnataka https://dipr.karnataka.gov.in/
"ಸಾರ್ವಜನಿಕ ಆಸ್ತಿ ಪಾಸ್ತಿ ರಕ್ಷಿಸುವುದು ಮತ್ತು ಹಿಂಸೆಯನ್ನು ತ್ಯಜಿಸುವುದು ಪ್ರತಿಯೊಬ್ಬ ಭಾರತೀಯನ ಮೂಲಭೂತ ಕರ್ತವ್ಯ"
ಕರ್ನಾಟಕ ವಾರ್ತೆ

ಮಾನ್ಯ ಸಚಿವರಾದ ಶ್ರೀಮತಿ ಲಕ್ಷ್ಮಿ ಹೆಬ್ಬಾಳ್ಕರ್ ಅವರು ಗೃಹಲಕ್ಷ್ಮಿ ಯೋಜನೆಯ ಉದ್ಘಾಟನಾ ಸಮಾರಂಭದಲ್ಲಿ ಸನ್ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಸಿದ್ದರಾಮಯ್ಯ ಅವರನ್ನು ಸ್ವಾಗತಿಸಿದ ಸಂದರ್ಭ

ಹವಾಮಾನ ಮುನ್ಸೂಚನೆ: ನಗರದಲ್ಲಿ ಮೋಡ ಕವಿದ ವಾತಾವರಣ ಇರಲಿದ್ದು, ಗುಡುಗು ಸಹಿತ ಮಳೆಯಾಗುವ ಸಾಧ್ಯತೆ ಇದೆ

ಭಾರಿ ಮಳೆ: ಸಂಚಾರಕ್ಕೆ ಅಡ್ಡಿ

ನಗರದ ಉತ್ತರ ಭಾಗದಲ್ಲಿ ಹೆಚ್ಚು ಮಳೆ ● ಇನ್ನೂ 3 ದಿನ ಮಳೆ ಸಾಧ್ಯತೆ: ಹವಾಮಾನ ಇಲಾಖೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ಹಲವೆಡೆ ಮಂಗಳವಾರ ಸಂಜೆ ಸುರಿದ ಮಳೆ ವಾತಾವರಣವನ್ನು ತಂಪುಗೊಳಿಸಿತು.

ಎರಡು ದಿನಗಳಿಂದ ಅತಿಯಾದ ಉಷ್ಣಾಂಶವಿತ್ತು. ಮಂಗಳವಾರ ಮಧ್ಯಾಹ್ನದಿಂದ ಮೋಡದ ವಾತಾವರಣವಿದ್ದು, ಸಂಜೆ ವೇಳೆಗೆ ಹಲವೆಡೆ ಬಿರುಸಿನ ಮಳೆಯಾಯಿತು. ರಾತ್ರಿ ವೇಳೆಗೆ ಉಷ್ಣಾಂಶ 22 ಡಿಗ್ರಿ ಸೆಲ್ಸಿಯಸ್‌ಗೆ ಕುಸಿಯಿತು.

ನಗರದ ಉತ್ತರ ಭಾಗದಲ್ಲಿ ಅತಿಹೆಚ್ಚು ಮಳೆಯಾಗಿದ್ದು, ಹಲವು ರಸ್ತೆಗಳಲ್ಲಿ ಮಳೆ ನೀರು ನಿಂತು ವಾಹನ ಸಂಚಾರಕ್ಕೆ ಅಡ್ಡಿಯಾಯಿತು. ತಡರಾತ್ರಿಯವರೆಗೂ ವಾಹನ ಸಂಚಾರ ನಿಧಾನಗತಿಯಲ್ಲಿತ್ತು.

ಮನೋರಾಯನಪಾಳ್ಯ, ಬಾಗಲಗುಂಟೆ, ಬಸವೇಶ್ವರನಗರ, ದೊಡ್ಡಬಿದರಕಲ್ಲು, ಶೆಟ್ಟಿಹಳ್ಳಿ, ಯಲಹಂಕ, ಪೀಣ್ಯ ಸುತ್ತಮುತ್ತ ಮಳೆ ಹೆಚ್ಚಾಗಿತ್ತು, ಮಂಗಳವಾರ ತಡರಾತ್ರಿಯವರೆಗೂ ಹಲವೆಡೆ ಮಳೆ ಮುಂದುವರಿದಿತ್ತು.

ಇನ್ನೂ ಮೂರು ದಿನ ಮಳೆಯಾಗುವ ಲಕ್ಷಣವಿದೆ ಎಂದು ಹವಾಮಾನ ಇಲಾಖೆ ತಿಳಿಸಿದೆ.

ಹೆಬ್ಬಾಳ ಜಂಕ್ಷನ್, ಚಿಕ್ಕಜಾಲ ವೃತ್ತದಿಂದ ಸುಲ್ತಾನಪಾಳ್ಯ, ಫ್ರೇಜರ್ ಗಾರ್ಡನ್‌ನಿಂದ ಕುಂದಲಹಳ್ಳಿ, ಯಶವಂತಪುರದಿಂದ ಗೊರಗುಂಟೆ ಪಾಳ್ಯ, ಹಳೆಯ ಉದಯ ಟಿವಿ ಅಂಡರ್‌ಪಾಸ್‌ನಿಂದ ಜಯಮಹಲ್ ರಸ್ತೆ, ವರ್ತೂರು ಕೋಡಿಯಿಂದ ವೈಟ್‌ಫೀಲ್ಡ್, ಬಿಇಎಲ್ ಮೇಲ್ಸೇತುವೆಯಿಂದ ಮಾರ್ಕೆಟ್ ವೃತ್ತ, ಕೋಗಿಲು ಕ್ರಾಸ್‌ನಿಂದ ಹೆಬ್ಬಾಳ, ಆರ್‌ಪಿ ರಸ್ತೆಯಿಂದ ಪಿಜಿ ಹಳ್ಳಿ, ಟಿವಿ ಟವರ್‌ನಿಂದ ವಾಟರ್‌ಟ್ಯಾಂಕ್, ವಿನ್ನಿಮಿಲ್ ಅಂಡರ್‌ಪಾಸ್‌ನಿಂದ ನಗರದ ಕಡೆಗಿನ ರಸ್ತೆಗಳಲ್ಲಿ ನೀರು ನಿಂತಿದ್ದರಿಂದ ವಾಹನ ಸವಾರರು ಪರದಾಡಿದರು. ಸಂಚಾರ ಪೊಲೀಸರು, ನಗರ ಪಾಲಿಕೆ ಸಿಬ್ಬಂದಿ ರಸ್ತೆಯ ನೀರನ್ನು ತೆರವುಗೊಳಿಸಲು ಪ್ರಯತ್ನಿಸಿದರು.

ಅಶ್ವಥ ನಗರ ಜಂಕ್ಷನ್, ವೀರಣ್ಣಪಾಳ್ಯ ಜಂಕ್ಷನ್, ಶಾಂತಿನಿಕೇತನ ಜಂಕ್ಷನ್, ಕಸ್ತೂರಿನಗರದಲ್ಲಿ ಮರಗಳು ಧರೆಗುರುಳಿ, ವಾಹನ ಸಂಚಾರ ಸ್ಥಗಿತಗೊಂಡಿತ್ತು.

ಆರ್‌ಎಂವಿ 2ನೇ ಹಂತದ ಹೊರವರ್ತುಲ ರಸ್ತೆಯ ರೈಲ್ವೆ ಅಂಡರ್‌ಪಾಸ್‌ನಲ್ಲಿ ಸವಾರರು ಪರದಾಡಿದರು ಚಿತ್ರ/ ಬಿ.ಕೆ. ಜನಾರ್ದನ್

57 ಮರ ಧರೆಗೆ

ನಗರದಲ್ಲಿ ಮಂಗಳವಾರ ಸಂಜೆಯಿಂದ ತಡರಾತ್ರಿಯವರೆಗೆ ಸುರಿದ ಬಿರುಗಾಳಿ ಮಳೆಗೆ 57 ಮರಗಳು ಧರೆಗುರುಳಿವೆ. ಇದರಲ್ಲಿ ಎರಡು ಮರಗಳನ್ನು ದಕ್ಷಿಣ ನಗರ ಪಾಲಿಕೆ ಸಿಬ್ಬಂದಿ ಹಾಗೂ ಒಂದು ಮರವನ್ನು ಪೂರ್ವ ನಗರ ಪಾಲಿಕೆ ಸಿಬ್ಬಂದಿ ತೆರವುಗೊಳಿಸಿದೆ. ಐದು ನಗರ ಪಾಲಿಕೆಗಳ ವ್ಯಾಪ್ತಿಯಲ್ಲಿ 77 ಸ್ಥಳಗಳಲ್ಲಿ ಮರಗಳ ರೆಂಬೆ-ಕೊಂಬೆಗಳು ಧರೆಗುರುಳಿವೆ.

ನಗರದ ಎಂ.ಜಿ. ರಸ್ತೆಯಲ್ಲಿ ಮಳೆಯಲ್ಲಿ ಸಾಗಿದ ಜನ ಚಿತ್ರ ಎಂ.ಎಸ್.ಮಂಜುನಾಥ್

ಹೆಚ್ಚು ಮಳೆ ಎಲ್ಲೆಲ್ಲಿ? (ಸೆಂ.ಮೀ)	
ಮನೋರಾಯನಪಾಳ್ಯ	5.05
ಬಾಗಲಕುಂಟೆ	4.85
ಬಸವೇಶ್ವರನಗರ	4.3
ದೊಡ್ಡಬಿದಿರುಕಲ್ಲು	4.2
ಶೆಟ್ಟಿಹಳ್ಳಿ	4.2
ಚೌಡೇಶ್ವರಿ	4.2
ಯಲಹಂಕ	4
ನಾಗಪುರ	4
ಪೀಣ್ಯ ಕೈಗಾರಿಕೆ ಪ್ರದೇಶ	3.8
ಹೇರೋಹಳ್ಳಿ	3.65
ಅಟ್ಟೂರು	3.3
ಎಚ್.ಗೊಲ್ಲಹಳ್ಳಿ	3.1
ಕೊಡಿಗೇಹಳ್ಳಿ	3
ಬ್ಯಾಟರಾಯನಪುರ	3
ಬಾಣಸವಾಡಿ	2.55
ಹಂಪಿ ನಗರ	2.35
ನಾಯಂಡಹಳ್ಳಿ	2.35
ಪುಲಕೇಶಿನಗರ	2.3
ನಂದಿನಿ ಲೇಔಟ್	2.2
ಕಾಟನ್‌ಪೇಟೆ	2.1
ರಾಮಮೂರ್ತಿ ನಗರ	2
ಕಾಡುಗೋಡಿ	2

ಗಾಯಾಳು ಯುವಕ ಸಾವು; ಕಣ್ಣು ದಾನ

ಕನಕಪುರ: ಬೆಂಗಳೂರಿನಿಂದ ಶನಿವಾರ ರಾತ್ರಿ ಬೈಕ್‌ನಲ್ಲಿ ಕನಕಪುರಕ್ಕೆ ಬರುವಾಗ ಕುಮಾರಸ್ವಾಮಿ ಲೇಔಟ್‌ನಲ್ಲಿ ರಸ್ತೆ ಗುಂಡಿಗೆ ಬಿದ್ದು ಗಾಯಗೊಂಡಿದ್ದ ಕನಕಪುರದ ಉದಯ್ ಗೌಡ (27) ಚಿಕಿತ್ಸೆಗೆ ಸ್ಪಂದಿಸದೆ ಮಂಗಳವಾರ ಆಸ್ಪತ್ರೆಯಲ್ಲಿ ನಿಧನರಾಗಿದ್ದಾರೆ.

ಇವರು ನಗರದ ಎಸ್ ಕರಿಯಪ್ಪ ರಸ್ತೆಯ ನಿವಾಸಿ, ಉದಯ್ ಎಲೆಕ್ಟ್ರಿಕಲ್ ಮಾಲೀಕ ನಾಗೇಂದ್ರ ಪುತ್ರ. ಅವರಿಗೆ ತಾಯಿ ಮತ್ತು ಒಬ್ಬ ಸಹೋದರ ಇದ್ದಾರೆ. ಬಿ.ಇ ಪದವೀಧರರಾಗಿದ್ದು, ಬೆಂಗಳೂರಿನಲ್ಲಿ ಇಂಟೀರಿಯರ್ ಡೆಕೊರೇಷನ್ ಮತ್ತು ಬಿಲ್ಡಿಂಗ್ ಕನ್‌ಸ್ಟ್ರಕ್ಷನ್ ವಹಿವಾಟು ಮಾಡುತ್ತಿದ್ದರು. ವೈದ್ಯರ ಮನವಿ ಮೇರೆಗೆ ಪೋಷಕರು ಉದಯ್ ಗೌಡ ಅವರ ಕಣ್ಣುಗಳನ್ನು ದಾನ ಮಾಡಿದ್ದಾರೆ.

ಅರ್ಜಿ ಆಹ್ವಾನ

ಬೆಂಗಳೂರು: ಗ್ರಾಮೀಣಾಭಿವೃದ್ಧಿ ಸಚಿವಾಲಯ, ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಶಿಕ್ಷಣ ಟ್ರಸ್ಟ್, ಕೆನರಾ ಬ್ಯಾಂಕ್ ರುಡ್‌ಸೆಟ್ ಸಂಸ್ಥೆಯು ಕಂಪ್ಯೂಟರ್ ಟ್ಯಾಲಿ ತರಬೇತಿಗೆ ಅರ್ಜಿ ಆಹ್ವಾನಿಸಿದೆ. 38 ದಿನಗಳ ಉಚಿತ ತರಬೇತಿಯು ಜೂನ್ 16ರಿಂದ ಆರಂಭವಾಗಲಿದ್ದು, ಗ್ರಾಮೀಣ ಪ್ರದೇಶದ 18ರಿಂದ 50 ವರ್ಷದೊಳಗಿನವರು ಅರ್ಜಿ ಸಲ್ಲಿಸಬಹುದು. ಕನ್ನಡ ಭಾಷೆ ಓದಲು ಮತ್ತು ಬರೆಯಲು ಬಲ್ಲವರಾಗಿರಬೇಕು. ಆಧಾರ್ ಹಾಗೂ ಬಿಪಿಎಲ್ ಕಾರ್ಡ್ ಹೊಂದಿರುವವರಿಗೆ ಆದ್ಯತೆ ನೀಡಲಾಗುತ್ತದೆ.

ಮಾಹಿತಿಗೆ: ರುಡ್‌ಸೆಟ್ ಸಂಸ್ಥೆ, ಅರಿಶಿನಕುಂಟೆ, ನೆಲಮಂಗಲ ತಾಲ್ಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆ, ಮೊಬೈಲ್ ಸಂಖ್ಯೆ: 9481506564, 9380162042,9113880324 ಅನ್ನು ಸಂಪರ್ಕಿಸಬಹುದು ಎಂದು ಪ್ರಕಟಣೆ ತಿಳಿಸಿದೆ.

ನಿಧನ

ಕೆ.ಎನ್.ಕದರಯ್ಯ

(74 ವರ್ಷ ವಯಸ್ಸು)

ಇವರು ದಿನಾಂಕ: **26–05–2026** ರಂದು ನಿಧನರಾದರೆಂದು ತಿಳಿಸಲು ವಿಷಾಧಿಸುತ್ತೇವೆ. ಇವರ ಅಂತ್ಯಕ್ರಿಯೆಯನ್ನು ದಿನಾಂಕ: **27–05–2026** ರಂದು ಮಧ್ಯಾಹ್ನ 1.30ಕ್ಕೆ ಗಂಟೆಗೆ **ದೊಡ್ಡಕಲ್ಲಸಂದ್ರ, ಕನಕಪುರ ಮುಖ್ಯ ರಸ್ತೆ** ಇಲ್ಲಿ ನೆರವೇರಿಸಲಾಗುವುದು.

ಇಂತಿ ದುಃಖತಪ್ತರು: ಮಗ: ನರಸಿಂಹಮೂರ್ತಿ ಕೆ. ಹಾಗೂ ಕುಟುಂಬವರ್ಗದವರು

ಮೊ: 99453 12846

ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ

(ಸಿ.ಐ.ಎನ್: ಯು40109ಕೆಎ1999ಎಸ್‌ಜಿಸಿ025521)

ಸಂಖ್ಯೆ:ಅಇಂ.(ವಿ)/ಪ್ರ(ಕಾ)ವೃ–ಉ/ಕಾ.ನಿಇಂ(ವಿ)/ಸ.ಕಾ.ನಿ.ಇಂ(ವಿ)–1/ಕ–ಟಿ6/26–27/903 ದಿನಾಂಕ:25.05.2026

ಟೆಂಡರ್ ಪ್ರಕಟಣೆ

(ಕೆಪಿಪಿ ಪೋರ್ಟಲ್ ಮೂಲಕ ಮಾತ್ರ)

ಕವಿಪ್ರನಿನಿಯು ಟೆಂಡರ್ ಸಂಖ್ಯೆ: **KPTCL/2026-27/TL/WORK_INDENT2943/Call-2** ರನ್ವಯ ಪ್ರಸರಣ (ಕಾರ್ಯಾಚರಣೆ) ವೃತ್ತ–ಉತ್ತರ, ಬೆಂಗಳೂರು ವ್ಯಾಪ್ತಿಯಲ್ಲಿ ಬರುವ 66ಕೆವಿ DG-1 & DG-2 ಮಾರ್ಗದ ಸ್ಥಳ ಸಂಖ್ಯೆ: 19 ಮತ್ತು 20ರ ನಡುವೆ ಹಾಗೂ 66ಕೆವಿ DG-3 & DG-4 ಮಾರ್ಗದ ಸ್ಥಳ ಸಂಖ್ಯೆ: 22 ಮತ್ತು 23ರ ನಡುವೆ 66ಕೆವಿ NBT KPTCL ವಿನ್ಯಾಸದ ಮಧ್ಯಮ ಟವರ್‌ಗಳನ್ನು ಒದಗಿಸುವ ಕಾಮಗಾರಿಗಾಗಿ ಪೀಣ್ಯ ವಿಭಾಗ ವ್ಯಾಪ್ತಿಯಲ್ಲಿರುವ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಮಲ್ಲಸಂದ್ರ, ಟಿ. ದಾಸರಹಳ್ಳಿ ಪ್ರದೇಶದಲ್ಲಿ ಲೈನ್‌ನ ಉದ್ದನೆ ಅಂತರವನ್ನು ಹೆಚ್ಚಿಸಲು ಟೆಂಡರನ್ನು ಆಹ್ವಾನಿಸಲಾಗಿದೆ.

ಟೆಂಡರ್‌ಗಳ ವಿಷಯದ ಬಗ್ಗೆ ವಿವರವಾದ ಪ್ರಕಟಣೆಯನ್ನು ಕವಿಪ್ರನಿನಿಯ ವೆಬ್‌ಸೈಟ್ **https://kptcl.karnataka.gov.in** ಹೈಪರ್‌ಲಿಂಕ್ **"E Procurement KPTCL"** ಅಥವಾ ವೆಬ್‌ಸೈಟ್ **https://kppp.karnataka.gov.in** ನಲ್ಲಿ ದಿನಾಂಕ **27.05.2026 ರಂದು ಅಥವಾ ತದನಂತರ** ಲಾಗಿನ್ ಮಾಡಿ ಪಡೆಯಬಹುದು. ಹೆಚ್ಚಿನ ವಿವರಗಳನ್ನು ಕೆಳಸಹಿದಾರರ ಕಛೇರಿಯಿಂದ ಪಡೆಯಬಹುದಾಗಿದೆ.

ಸಹಿ/– ಅಧೀಕ್ಷಕ ಇಂಜಿನಿಯರ್(ವಿದ್ಯುತ್)
ಪ್ರಸರಣ (ಕಾರ್ಯಾಚರಣೆ)ವೃತ್ತ–ಉತ್ತರ, ಕವಿಪ್ರನಿನಿ.,
ಯು.ಎ.ಎಸ್. ಕ್ಯಾಂಪಸ್, ಹೆಬ್ಬಾಳ, ಬೆಂಗಳೂರು.

ಸಾರ್ವಜನಿಕ ಪ್ರಕಟಣೆ

ಈ ಸೂಚನಾ ಪತ್ರದ ಮೂಲಕ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ ನಮ್ಮ ಕಕ್ಷಿದಾರರು ಕೆಳಕಂಡ ಷೆಡ್ಯೂಲಿನಲ್ಲಿ ವಿವರಿಸಿರುವ ಷೆಡ್ಯುಲ್ ಸ್ವತ್ತನ್ನು ಮಾಲೀಕರಾದ (1) ದಿವಂಗತ ಕೆ. ವಿ. ಶ್ರೀನಿವಾಸ ಮೂರ್ತಿ ರವರ ಪತ್ನಿ, ಶ್ರೀಮತಿ. ಎಸ್. ಎನ್. ವಿಜಯಲಕ್ಷ್ಮಿ, (2) ದಿವಂಗತ ಕೆ. ವೆಂಕಟರಾಮ ಶಾಸ್ತ್ರಿ ಮತ್ತು ದಿವಂಗತ ಕೆ. ವಿ. ಜಯಲಕ್ಷ್ಮಮ್ಮ ರವರ ಮಕ್ಕಳಾದ ಶ್ರೀಮತಿ. ಕೆ. ವಿ. ವಿಜಯಲಕ್ಷ್ಮಿ,(3) ಶ್ರೀಮತಿ ಕೆ. ವಿ. ಸತ್ಯಲಕ್ಷ್ಮಿ, (4) ಶ್ರೀಮತಿ. ಕೆ. ವಿ. ಸರಸ್ವತಿ (5) ಶ್ರೀ. ಕೆ. ವಿ. ಕೃಷ್ಣ ಪ್ರಸಾದ್, ಮತ್ತು (6) ದಿವಂಗತ ಕೆ.ವಿ. ಪ್ರಭಾಕರ್ ರವರ ಪತ್ನಿ, ಶ್ರೀಮತಿ ನಾಗಲಕ್ಷ್ಮಿ ("ಮಾಲೀಕರು") ರವರೊಡನೆ ವ್ಯವಹರಿಸಲು ಇಚ್ಛಿಸಿರುತ್ತಾರೆ. ಷೆಡ್ಯೂಲಿನಲ್ಲಿ ವಿವರಿಸಿರುವ ಸ್ವತ್ತು ಸದರಿಯವರ ಮಾಲೀಕತ್ವಕ್ಕೆ ಒಳಪಟ್ಟಿರುವುದಲ್ಲದೆ, ಅವರು ಷೆಡ್ಯೂಲ್ ಸ್ವತ್ತಿನ ಮೇಲೆ ಅನಿರ್ಬಂಧಿತ ಮಾಲೀಕತ್ವದ ಹಕ್ಕನ್ನು ಸಹ ಹೊಂದಿರುತ್ತಾರೆಂದು ಸದರಿಯವರು ತಿಳಿಸಿರುತ್ತಾರೆ.

ಸದರಿ ಷೆಡ್ಯುಲ್ ಸ್ವತ್ತಿನಲ್ಲಿ ಯಾವುದೇ ವ್ಯಕ್ತಿಯು ಯವುದೇ ತರಹದ ಹಕ್ಕುಗಳು ಅಥವಾ ಕ್ಲೇಮುಗಳೇನಾದರು ಹೊಂದಿದ್ದಲ್ಲಿ ಅಂತಹ ಕ್ಲೇಮುಗಳನ್ನು ಮತ್ತು ಹಕ್ಕುಗಳಿಗೆ ಸಂಬಂಧಪಟ್ಟ ದಾಖಲೆಪತ್ರಗಳೊಂದಿಗೆ ಈ ಕೆಳಗೆ ಸಹಿ ಮಾಡಲ್ಪಟ್ಟಿರುವ ವಿಳಾಸಕ್ಕೆ ಇಂದಿನಿಂದ 7 ದಿನಗಳೊಳಗಾಗಿ ತಲುಪಿಸತಕ್ಕದ್ದು. ಸದರಿ ಸೂಚಿತ ಮತ್ತು ನಿಗದಿತ ಅವಧಿಯ ತರುವಾಯ ನಮ್ಮ ಕಕ್ಷಿದಾರರು, ಸದರಿ ಮಾಲೀಕರ ಮಾಲೀಕತ್ವಕ್ಕೆ ಮತ್ತು ಸದರಿ ವ್ಯವಹಾರಕ್ಕೆ ಯಾವುದೇ ತಂಟೆ ತಕರಾರುಗಳಿಲ್ಲವೆಂದು ಪರಿಗಣಿಸಿ, ಸದರಿ ಷೆಡ್ಯುಲ್ ಸ್ವತ್ತನ್ನು ವ್ಯವಹರಿಸಲು ಮುಂದಾಗುವರು.

ಷೆಡ್ಯೂಲ್ ಸ್ವತ್ತಿನ ವಿವರ

ಬೆಂಗಳೂರು ಜಿಲ್ಲೆ, ಬೆಂಗಳೂರು ಉತ್ತರ ತಾಲ್ಲೂಕು, ಕಸಬಾ ಹೋಬಳಿ, ಭೂಪಸಂದ್ರ ಗ್ರಾಮಕ್ಕೆ ಸೇರಿದ ಒಟ್ಟು ವಿಸ್ತೀರ್ಣ 21358 ಚದರ ಅಡಿ ಉಳ್ಳ, ಮುನ್ಸಿಪಲ್ ನಂ. 119, PID ನಂ. 100-216-119, ಹಳೆ ಮುನ್ಸಿಪಲ್ ನಂ. 119, 120, 121 ಮತ್ತು 122 ಉಳ್ಳ ಸ್ವತ್ತಿಗೆ ಚಕ್ಕುಬಂದಿ; **ಪೂರ್ವಕ್ಕೆ** : 30 ಅಡಿ ರಸ್ತೆ; **ಪಶ್ಚಿಮಕ್ಕೆ** : ಶಾಸ್ತ್ರಿ ಮೆಮೊರಿಯಲ್ ಹಾಲ್; **ಉತ್ತರಕ್ಕೆ**: 50 ಅಡಿ ರಸ್ತೆ; ಮತ್ತು **ದಕ್ಷಿಣಕ್ಕೆ** : ಪಿ ಅಂಡ್ ಟಿ ಲೇಔಟ್.

ಸ್ಥಳ : ಬೆಂಗಳೂರು **ದಿನಾಂಕ : ಮೇ 27, 2026**

ಸಹಿ./- ಪ್ರಶಾಂತ್ ಶೆಣೈ, ಪಾಲುದಾರರು, **ಅಲೈಡ್ ಲಾ ಪ್ರಾಕ್ಟಿಸಸ್,** ವಕೀಲರು
1/1, 3ನೇ ಮಹಡಿ, ಮಿಲ್ಲರ್ಸ್ ಆರ್ಕೇಡ್, ಮಿಲ್ಲರ್ಸ್ ರಸ್ತೆ, ವಸಂತನಗರ,
ಬೆಂಗಳೂರು - 560 001, **ದೂ: +91 (080) 2222 0003**

ಪ್ರೆಸ್ಟೋನಿಕ್ ಇಂಜಿನಿಯರಿಂಗ್ ಲಿಮಿಟೆಡ್

PRESSTONIC You visualize... We realize

CIN: L28995KA2021PLC145718
ನೋಂದಾಯಿತ ಕಛೇರಿ: ಖಾತಾ ನಂ. 161, ಸೈಟ್ # 275 & 276,
14 ನೇ & 15 ನೇ ಕ್ರಾಸ್, ಕರೀಮ್ ಸಾಬ್ ಲೇಔಟ್, ಪೀಣ್ಯ ಹೆಗ್ಗನಹಳ್ಳಿ, ವಿಶ್ವನೀಡಂ,
ಬೆಂಗಳೂರು - 560091, ಕರ್ನಾಟಕ, ಭಾರತ | ದೂರವಾಣಿ ಸಂಖ್ಯೆ: 080-23480001
ಇ-ಮೇಲ್: cs@presstonengg.co ವೆಬ್‌ಸೈಟ್: www.presstonic.com

ಅಂಚೆ ಮತಪತ್ರದ ಸೂಚನೆ

ಕಂಪನಿಗಳ ಕಾಯ್ದೆ, 2013 ("ಕಾಯ್ದೆ") ಮತ್ತು ಕಂಪನಿಗಳ (ನಿರ್ವಹಣೆ ಮತ್ತು ಆಡಳಿತ) ನಿಯಮಗಳು, 2014 ("ನಿಯಮಗಳು") ರ ಸೆಕ್ಷನ್ 108 ಸೆಕ್ಷನ್ 110 ಮತ್ತು ಇತರ ಅನ್ವಯವಾಗುವ ನಿಬಂಧನೆಗಳು, ಯಾವುದಾದರೂ ಇದ್ದರೆ, ಇವುಗಳನ್ನು ಕಾಲಕಾಲಕ್ಕೆ ತಿದ್ದುಪಡಿ ಮಾಡಿದಂತೆ, ಏಪ್ರಿಲ್ 8, 2020 ರ ಸಾಮಾನ್ಯ ಸುತ್ತೋಲೆ ಸಂಖ್ಯೆ 14/2020, ಏಪ್ರಿಲ್ 13, 2020 ರ ಸಾಮಾನ್ಯ ಸುತ್ತೋಲೆ ಸಂಖ್ಯೆ 17/2020, ಜೂನ್ 15, 2020 ರ ಸಾಮಾನ್ಯ ಸುತ್ತೋಲೆ ಸಂಖ್ಯೆ 22/2020, ಕಾಲಕಾಲಕ್ಕೆ ಹೊರಡಿಸಲಾದ ಅನ್ವಯವಾಗುವ ಸುತ್ತೋಲೆಗಳೊಂದಿಗೆ ಓದಲಾಗುತ್ತದೆ, ಇತ್ತೀಚಿನದು ಕಾರ್ಪೊರೇಟ್ ವ್ಯವಹಾರಗಳ ಸಚಿವಾಲಯ ("ಎಂಸಿಎ") ಹೊರಡಿಸಿದ ಸೆಪ್ಟೆಂಬರ್ 22, 2025 ರ ಸಾಮಾನ್ಯ ಸುತ್ತೋಲೆ ಸಂಖ್ಯೆ 03/2025 (ಇನ್ನು ಮುಂದೆ ಒಟ್ಟಾರೆಯಾಗಿ "ಎಂಸಿಎ ಸುತ್ತೋಲೆಗಳು" ಎಂದು ಕರೆಯಲಾಗುತ್ತದೆ), ಮತ್ತು ಸೆಬಿ (ಬಾಧ್ಯತೆಗಳನ್ನು ಪಟ್ಟಿ ಮಾಡುವುದು ಮತ್ತು ಬಹಿರಂಗಪಡಿಸುವ ಅವಶ್ಯಕತೆಗಳು) ನಿಯಮಗಳು, 2015 ರ ನಿಯಮ 44 ಮತ್ತು ಕಾಯ್ದೆಯ ಇತರ ಅನ್ವಯವಾಗುವ ನಿಬಂಧನೆಗಳು, ಅದರ ಅಡಿಯಲ್ಲಿ ಹೊರಡಿಸಲಾದ ನಿಯಮಗಳು, ಸುತ್ತೋಲೆಗಳು ಮತ್ತು ಅಧಿಸೂಚನೆಗಳು, (ಯಾವುದೇ ತಿದ್ದುಪಡಿ(ಗಳು), ಶಾಸನಬದ್ಧ ಮಾರ್ಪಾಡು(ಗಳು) ಮತ್ತು/ಅಥವಾ ಪ್ರಸ್ತುತ ಜಾರಿಯಲ್ಲಿರುವ ಅದರ ಮರು-ಜಾರಿಗೊಳಿಸುವಿಕೆ ಸೇರಿದಂತೆ), ಎಲೆಕ್ಟ್ರಾನಿಕ್ ವಿಧಾನದ ಮೂಲಕ ("ರಿಮೋಟ್ ಇ-ವೋಟಿಂಗ್") ಮತದಾನದ ಮೂಲಕ ಅಂಚೆ ಮತಪತ್ರ ("ಅಂಚೆ ಮತಪತ್ರ") ಅಂಗೀಕರಿಸಲು ಪ್ರಸ್ತಾಪಿಸಲಾದ ಕೆಳಗಿನ ನಿರ್ಣಯಗಳಿಗೆ ಕಂಪನಿಯ ಸದಸ್ಯರ ಒಪ್ಪಿಗೆಯನ್ನು ಪಡೆಯಲು ಈ ಮೂಲಕ ಸೂಚನೆ ನೀಡಲಾಗಿದೆ.

ಕ್ರಮ ಸಂಖ್ಯೆ	ವಿವರಗಳು	ರೆಸಲ್ಯೂಶನ್ ಪ್ರಕಾರ
1	ಕಂಪನಿಯ ವ್ಯವಸ್ಥಾಪಕ ನಿರ್ದೇಶಕರಾಗಿ ಶ್ರೀ ಹೆರ್ಗ ಪೂರ್ಣಚಂದ್ರ, ಕೆದಿಲಾಯ (DIN:09120129) ಅವರನ್ನು ಮರು ನೇಮಕ ಮಾಡಲು ಷೇರುದಾರರಿಗೆ ಶಿಫಾರಸು ಮಾಡಲಾಗಿದೆ.	ಸಾಮಾನ್ಯ
2	ಕಂಪನಿಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಹೆರ್ಗ ಪೂರ್ಣಚಂದ್ರ, ಕೆದಿಲಾಯ (DIN:09120129) ಅವರಿಗೆ ಪಾವತಿಸಬೇಕಾದ ಸಂಭಾವನೆಯ ಅನುಮೋದನೆ.	ವಿಶೇಷ
3	ಕಂಪನಿಯ ಜಂಟಿ ವ್ಯವಸ್ಥಾಪಕ ನಿರ್ದೇಶಕರಾಗಿ ಶ್ರೀ ಯರ್ಮಲ್ ಗಿರಿಧರ್ ರಾವ್ (DIN:09120130) ಅವರನ್ನು ಮರು ನೇಮಕ ಮಾಡಲು ಷೇರುದಾರರಿಗೆ ಶಿಫಾರಸು ಮಾಡಲಾಗಿದೆ	ಸಾಮಾನ್ಯ
4	ಕಂಪನಿಯ ಜಂಟಿ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಯರ್ಮಲ್ ಗಿರಿಧರ್ ರಾವ್ (DIN:09120130) ಅವರಿಗೆ ಪಾವತಿಸಬೇಕಾದ ಸಂಭಾವನೆಯ ಅನುಮೋದನೆ.	ವಿಶೇಷ

ಎಂಸಿಎ ಸುತ್ತೋಲೆಗಳಿಗೆ ಅನುಗುಣವಾಗಿ, ಕಂಪನಿಯು ಮೇ 26, 2026 ರ ಮಂಗಳವಾರದಂದು ಎಲೆಕ್ಟ್ರಾನಿಕ್ ವಿಧಾನದ ಮೂಲಕ ಅಂಚೆ ಮತಪತ್ರ ಸೂಚನೆಯನ್ನು ಕಂಪನಿ/ಠೇವಣಿದಾರರು ನಿರ್ವಹಿಸುವ ಸದಸ್ಯರ ನೋಂದಣಿ/ಫಲಾನುಭವ ಮಾಲೀಕರ ಪಟ್ಟಿಯಲ್ಲಿ ಹೆಸರು ಇರುವ ಕಂಪನಿಯ ಸದಸ್ಯರಿಗೆ ಕಳುಹಿಸಿದೆ. ಸದಸ್ಯರ ಮತದಾನದ ಹಕ್ಕುಗಳನ್ನು ಮೇ 22,2026 ರ ಶುಕ್ರವಾರದಂದು ಪರಿಗಣಿಸಲಾಗುತ್ತದೆ, ಇದು 'ಕಟ್-ಆಫ್ ದಿನಾಂಕ'. 'ಕಟ್-ಆಫ್ ದಿನಾಂಕ'ದಂದು ಸದಸ್ಯರಲ್ಲದ ವ್ಯಕ್ತಿಯು ಅಂಚೆ ಮತಪತ್ರದ ಸೂಚನೆಯನ್ನು ಮಾಹಿತಿ ಉದ್ದೇಶಕ್ಕಾಗಿ ಮಾತ್ರ ಪರಿಗಣಿಸಬೇಕು. ಅಂಚೆ ಮತಪತ್ರ ಸೂಚನೆಯು ಕಂಪನಿಯ ವೆಬ್‌ಸೈಟ್ https://www.presstonic.com/ ನಲ್ಲಿ, ಸ್ಟಾಕ್ ಎಕ್ಸ್‌ಚೇಂಜ್ ವೆಬ್‌ಸೈಟ್ ಅಂದರೆ NSE https://www.nseindia.com/ ನಲ್ಲಿ ಮತ್ತು ನ್ಯಾಷನಲ್ ಸೆಕ್ಯುರಿಟೀಸ್ ಡಿಪಾಸಿಟರಿ ಲಿಮಿಟೆಡ್ ("NSDL") www.evoting.nsdl.com ನಲ್ಲಿ ಲಭ್ಯವಿದೆ.

ಎಂಸಿಎ ಸುತ್ತೋಲೆಗಳಿಗೆ ಅನುಸಾರವಾಗಿ, ಕಂಪನಿಯು ತನ್ನ ಸದಸ್ಯರಿಗೆ ಭೌತಿಕ ಅಂಚೆ ಮತಪತ್ರ ನಮೂನೆಯನ್ನು ಸಲ್ಲಿಸುವ ಬದಲು ಎಲೆಕ್ಟ್ರಾನಿಕ್ ರೂಪದಲ್ಲಿ ಮತ ಚಲಾಯಿಸಲು ಅನುವು ಮಾಡಿಕೊಡಲು ರಿಮೋಟ್ ಇ-ವೋಟಿಂಗ್ ಸೌಲಭ್ಯವನ್ನು ಮಾತ್ರ ಒದಗಿಸಿದೆ. ಸದಸ್ಯರ ಒಪ್ಪಿಗೆ ಅಥವಾ ಭಿನ್ನಾಭಿಪ್ರಾಯದ ಸಂವಹನವು ರಿಮೋಟ್ ಇ-ವೋಟಿಂಗ್ ವ್ಯವಸ್ಥೆಯ ಮೂಲಕ ಮಾತ್ರ ನಡೆಯುತ್ತದೆ. ಕಂಪನಿಯು ತನ್ನ ಎಲ್ಲಾ ಸದಸ್ಯರಿಗೆ ಎಲೆಕ್ಟ್ರಾನಿಕ್ ರೂಪದಲ್ಲಿ ಮಾತ್ರ ಮತ ಚಲಾಯಿಸಲು ರಿಮೋಟ್ ಇ-ವೋಟಿಂಗ್ ಸೌಲಭ್ಯವನ್ನು ಒದಗಿಸುವ ಉದ್ದೇಶಕ್ಕಾಗಿ NSDL ನ ಸೇವೆಗಳನ್ನು ತೊಡಗಿಸಿಕೊಂಡಿದೆ.

ರಿಮೋಟ್ ಇ-ವೋಟಿಂಗ್‌ಗೆ ವಿವರವಾದ ಕಾರ್ಯವಿಧಾನ ಮತ್ತು ಸೂಚನೆಗಳನ್ನು ಅಂಚೆ ಮತಪತ್ರ ಸೂಚನೆಯಲ್ಲಿ ನಮೂದಿಸಲಾಗಿದೆ. ರಿಮೋಟ್ ಇ-ವೋಟಿಂಗ್ ಬುಧವಾರ, ಮೇ 27, 2026 ರಂದು ಬೆಳಿಗ್ಗೆ 9:00 ಗಂಟೆಗೆ (IST) ಪ್ರಾರಂಭವಾಗಿ ಜೂನ್ 25, 2026 ರಂದು ಗುರುವಾರ ಸಂಜೆ 5:00 ಗಂಟೆಗೆ (IST) ಕೊನೆಗೊಳ್ಳುತ್ತದೆ. ಮೇಲೆ ತಿಳಿಸಿದ ಮತದಾನದ ಅವಧಿ ಮುಗಿದ ನಂತರ NSDL ನಿಂದ ರಿಮೋಟ್ ಇ-ವೋಟಿಂಗ್ ಸೌಲಭ್ಯವನ್ನು ಮತದಾನಕ್ಕಾಗಿ ನಿಷ್ಕ್ರಿಯಗೊಳಿಸಲಾಗುತ್ತದೆ. ತಮ್ಮ ಇಮೇಲ್ ವಿಳಾಸಗಳನ್ನು ನೋಂದಾಯಿಸದ ಸದಸ್ಯರು, ಎಲೆಕ್ಟ್ರಾನಿಕ್ ಹೋಲ್ಡಿಂಗ್‌ಗಳಿಗೆ ಸಂಬಂಧಿಸಿದಂತೆ ತಮ್ಮ ಇಮೇಲ್ ವಿಳಾಸಗಳನ್ನು ತಮ್ಮ ಸಂಬಂಧಿತ ಠೇವಣಿ ಭಾಗವಹಿಸುವವರ ಮೂಲಕ ಠೇವಣಿದಾರರೊಂದಿಗೆ ನೋಂದಾಯಿಸಲು ವಿನಂತಿಸಲಾಗಿದೆ.

ಮತದಾನದ ಅವಧಿ ಮುಗಿದ ಎರಡು ಕೆಲಸದ ದಿನಗಳಲ್ಲಿ ಅಂಚೆ ಮತಪತ್ರದ ಫಲಿತಾಂಶಗಳನ್ನು ಪ್ರಕಟಿಸಲಾಗುತ್ತದೆ. ಈ ಫಲಿತಾಂಶಗಳನ್ನು ಸ್ಕ್ರೂಟಿನೈಜರ್ ವರದಿಯೊಂದಿಗೆ ಕಂಪನಿಯ ಈಕ್ವಿಟಿ ಷೇರುಗಳನ್ನು ಪಟ್ಟಿ ಮಾಡಲಾದ NSE ಗೆ ತಿಳಿಸಲಾಗುತ್ತದೆ. ಹೆಚ್ಚುವರಿಯಾಗಿ, ಫಲಿತಾಂಶಗಳನ್ನು ಕಂಪನಿಯ ವೆಬ್‌ಸೈಟ್ https://www.presstonic.com/ ನಲ್ಲಿಯೂ ಅಪ್‌ಲೋಡ್ ಮಾಡಲಾಗುತ್ತದೆ.

ಯಾವುದೇ ಸಹಾಯ ಬೇಕಿದ್ದಲ್ಲಿ, ಸದಸ್ಯರು www.evoting.nsdl.com ನ 'ಡೌನ್‌ಲೋಡ್' ವಿಭಾಗದಲ್ಲಿ ಲಭ್ಯವಿರುವ ಸದಸ್ಯರಿಗಾಗಿ ಪದೇ ಪದೇ ಕೇಳಲಾಗುವ ಪ್ರಶ್ನೆಗಳು (FAQs) ಮತ್ತು ಸದಸ್ಯರಿಗಾಗಿ ಇ-ಮತದಾನ ಬಳಕೆದಾರ ಕೈಪಿಡಿಯನ್ನು ಉಲ್ಲೇಖಿಸಬಹುದು.

ಪ್ರೆಸ್ಟೋನಿಕ್ ಎಂಜಿನಿಯರಿಂಗ್ ಲಿಮಿಟೆಡ್ ಪರವಾಗಿ
ದಿನಾಂಕ : 27.05.2026 **ಸಹಿ/-**
ಸ್ಥಳ : ಬೆಂಗಳೂರು **ಹೆರ್ಗ ಪೂರ್ಣಚಂದ್ರ, ಕೆದಿಲಾಯ** - ವ್ಯವಸ್ಥಾಪಕ ನಿರ್ದೇಶಕರು

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ

ಟಿ. ಚೌಡಯ್ಯ ರಸ್ತೆ, ಕುಮಾರಪಾರ್ಕ್ ಪಶ್ಚಿಮ, ಬೆಂಗಳೂರು–560 020

ಸಂ.: ಬೆಂಅಪ್ರಾ/ನಯೋಸ/CLU–574/25–26/661/2026–27 ದಿನಾಂಕ: 26.05.2026

ಪ್ರಕಟಣೆ

ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 14–A ರ ಅಡಿಯಲ್ಲಿ ಈ ಕೆಳಕಂಡ ಅರ್ಜಿದಾರರು **ವ್ಯವಸಾಯ** ವಲಯದಿಂದ **ವಾಣಿಜ್ಯ** ಉಪಯೋಗಕ್ಕಾಗಿ ಭೂಉಪಯೋಗ ಬದಲಾವಣೆ ಕೋರಿ ಅರ್ಜಿ ಸಲ್ಲಿಸಿರುತ್ತಾರೆ. ಭೂಉಪಯೋಗ ಬದಲಾವಣೆಯ ಪ್ರಸ್ತಾವನೆಯ ವಿವರಗಳು ಈ ಕೆಳಕಂಡಂತೆ ಇರುತ್ತದೆ. ಸದರಿ ಭೂಉಪಯೋಗ ಬದಲಾವಣೆ ಪ್ರಸ್ತಾವನೆ ಸಂಬಂಧ ಯಾವುದೇ ಆಕ್ಷೇಪಣೆಗಳಿದ್ದರೆ, ಈ ಪ್ರಕಟಣೆ ಪ್ರಕಟವಾದ ದಿನಾಂಕದಿಂದ 15 ದಿವಸಗಳೊಳಗಾಗಿ ಆಕ್ಷೇಪಣೆಗಳನ್ನು ಲಿಖಿತವಾಗಿ ನಗರ ಯೋಜಕ ಸದಸ್ಯರು, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರು ಕಛೇರಿಗೆ ಸಲ್ಲಿಸಲು ತಿಳಿಸಲಾಗಿದೆ. ನಿಗದಿತ ಅವಧಿಯ ನಂತರ ಬರುವ ಯಾವುದೇ ಆಕ್ಷೇಪಣೆಗಳನ್ನು ಪರಿಗಣಿಸುವುದಿಲ್ಲ.

ಅರ್ಜಿದಾರರ ಹೆಸರು	ತಾಲ್ಲೂಕು	ಹೋಬಳಿ	ಗ್ರಾಮದ ವಿವರ	ಸರ್ವೆ ನಂ.	ವಿಸ್ತೀರ್ಣ ಎ/ಗು	ಪರಿಷ್ಕೃತ ಮಹಾಯೋಜನೆ 2015ರ ಪ್ರಕಾರ ಭೂ ಉಪಯೋಗ	ಬದಲಾವಣೆ ಕೋರಿರುವ ಭೂ ಉಪಯೋಗ
ಶ್ರೀ ಡಿ ದಂಡಪಾಣಿ ನಂ.306, 8ನೇ ಅಡ್ಡರಸ್ತೆ, ಶಾಸ್ತ್ರಿನಗರ, ಬನಶಂಕರಿ 2ನೇ ಹಂತ, ತ್ಯಾಗರಾಜನಗರ, ಬೆಂಗಳೂರು ದಕ್ಷಿಣ ತಾಲ್ಲೂಕು, ಬೆಂಗಳೂರು–560 028.	ಯಲಹಂಕ	ಯಲಹಂಕ	ಹೊನ್ನೇನ ಹಳ್ಳಿ	14/2ರ ಪೈಕಿ	0ಎ–18.25ಗುಂ	ವ್ಯವಸಾಯ	ವಾಣಿಜ್ಯ

ಷರಾ: ಅರ್ಜಿದಾರರು ಪ್ರಶ್ನಿತ ಜಮೀನನ್ನು ವಾಣಿಜ್ಯ ಉಪಯೋಕ್ಕಾಗಿ ಭೂಉಪಯೋಗ ಬದಲಾವಣೆ ಮಾಡುವುದರಿಂದ ಸದರಿ ಜಮೀನಿನಲ್ಲಿ ಕಟ್ಟಡ ಕಾಮಗಾರಿಗಳು ನಡೆಯುವಾಗ ಸ್ಥಳೀಯ ಕೂಲಿ ಕಾರ್ಮಿಕರಿಗೆ ಉದ್ಯೋಗ ದೊರಕುತ್ತದೆ ಮತ್ತು ಸುತ್ತಮುತ್ತಲಿನ ಪ್ರದೇಶ ಅಭಿವೃದ್ಧಿಗೆ ಸಹಕಾರಿಯಾಗಲಿದೆ. ವಾಣಿಜ್ಯ ಕಟ್ಟಡದಿಂದ ಹತ್ತಿರದಲ್ಲಿ ಬಹು ಉಪಯೋಗಿ ವಸ್ತುಗಳಿಗೆ ಕಡಿಮೆ ದರದಲ್ಲಿ ಲಭ್ಯವಾಗುತ್ತದೆ. ಸದರಿ ಜಾಗದಲ್ಲಿ ವಾಣಿಜ್ಯ ಕಟ್ಟಡವನ್ನು ಕಟ್ಟುವುದರಿಂದ ಸರ್ಕಾರಕ್ಕೆ ಹೆಚ್ಚಿನ ತೆರಿಗೆ ಸಂಗ್ರಹವಾಗುತ್ತದೆ ಹಾಗೂ ವಾಣಿಜ್ಯ ಚಟುವಟಿಕೆಗಳಿಂದ ಸ್ಥಳೀಯರಿಗೆ ನಿರಂತರವಾಗಿ ಉದ್ಯೋಗಗಳು ದೊರಕುತ್ತದೆ ಎಂಬ ಸಾರ್ವಜನಿಕ ಹಿತಾಸಕ್ತಿ ಅಂಶ ಅಡೆಗಿದೆ ಎಂದು ತಿಳಿಸುತ್ತಾ, ಸದರಿ ಪ್ರದೇಶವನ್ನು **'ವ್ಯವಸಾಯ'** ವಲಯದಿಂದ **'ವಾಣಿಜ್ಯ ಉಪಯೋಗಕ್ಕೆ'** ಭೂಉಪಯೋಗ ಬದಲಾವಣೆ ಮಾಡಲು ಕೋರಿರುತ್ತಾರೆ.

ಸಹಾಯವಾಣಿ/ವಾಟ್ಸಪ್: 94831 66622 (24 x 7). @BDAOfficialGoK

ಸಹಿ/– ನಗರ ಯೋಜಕ ಸದಸ್ಯರು, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರು.

ಜೆ.ಸಿ. ಫ್ಲವರ್ಸ್ ಅಸೆಟ್ ರಿಕನ್‌ಸ್ಟ್ರಕ್ಷನ್ ಪ್ರೈವೇಟ್ ಲಿಮಿಟೆಡ್

ನೋಂದಾಯಿತ ಕಚೇರಿ: 203–206, 2ನೇ ಮಹಡಿ, ವಿಂಗ್ ಎ, ಇನ್‌ಸ್ಪೈರ್ ಬಿಕೆಸಿ, ಬಾಂದ್ರಾ ಕುರ್ಲಾ ಕಾಂಪ್ಲೆಕ್ಸ್, ಬಾಂದ್ರಾ (ಪೂರ್ವ), ಮುಂಬೈ 400 051, ಭಾರತ.
ಸಿಐಎನ್: U74999MH2015PTC264081 | ದೂ. ಸಂ.: +91 22 6978 4100 | ಇಮೇಲ್: teamjcfarc@jcfarc.com | ವೆಬ್‌ಸೈಟ್: www.jcfarc.com

ಸ್ಥಿರ ಆಸ್ತಿಗಳ ಮಾರಾಟಕ್ಕಾಗಿ ಮಾರಾಟ ನೋಟಿಸ್
ಅನುಬಂಧ IV-A [ನಿಯಮ 8(6) ಷರತ್ತಿಗೆ ನೋಡಿ]
ಸೆಕ್ಯುರಿಟೈಜೇಶನ್ ಮತ್ತು ರಿಕನ್‌ಸ್ಟ್ರಕ್ಷನ್ ಆಫ್ ಫೈನಾನ್ಸಿಯಲ್ ಅಸೆಟ್ಸ್ ಮತ್ತು ಎನ್‌ಫೋರ್ಸ್‌ಮೆಂಟ್ ಆಫ್ ಸೆಕ್ಯುರಿಟಿ ಇಂಟರೆಸ್ಟ್ ಕಾಯಿದೆ 2002 ("ಸರ್ಫೇಸಿ ಕಾಯಿದೆ") ರ ಪ್ರೊವಿಸೊ ನಿಯಮ 6,8 ಮತ್ತು 9(1) ನ್ನು ಓದಿಕೊಂಡಂತೆ ಭದ್ರತಾ ಹಿತಾಸಕ್ತಿ (ಜಾರಿ) ನಿಯಮ, 2002ರನ್ವಯ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಆನ್‌ಲೈನ್ ಇ-ಹರಾಜು ಮಾರಾಟದ ಬಗ್ಗೆ ಸಾರ್ವಜನಿಕ ಸೂಚನೆ.

ಸಾರ್ವಜನಿಕರಿಗೆ ಮತ್ತು ನಿರ್ದಿಷ್ಟವಾಗಿ ಕೆಳಗಿನ ಕೋಷ್ಟಕದ ಅಂಕಣ (i) ರಲ್ಲಿ ತಿಳಿಸಲಾದ ಸಾಲಗಾರ, ಸಹ–ಸಾಲಗಾರ(ರು), ಅಡಮಾನದಾರ(ರು), ಜಾಮೀನುದಾರ(ರು) ಅವರಿಗೆ ಈ ಮೂಲಕ ನೋಟಿಸ್ ನೀಡುತ್ತಿರುವುದೇನೆಂದರೆ, ಕೆಳಗಿನ ಕೋಷ್ಟಕದ ಅಂಕಣ (ii) ರಲ್ಲಿ ತಿಳಿಸಲಾದ ಸ್ಥಿರ ಆಸ್ತಿಗಳನ್ನು, ಜೆ.ಸಿ. ಫ್ಲವರ್ಸ್ ಅಸೆಟ್ ರಿಕನ್‌ಸ್ಟ್ರಕ್ಷನ್ ಪ್ರೈವೇಟ್ ಲಿಮಿಟೆಡ್, ಜೆಸಿಎಫ್ ಯೆಸ್ ಟ್ರಸ್ಟ್ 2022–23/1 ("ಪೂರಕ ಭದ್ರತಾದಾರರು") ಎಂದು ತನ್ನ ಸಾಮರ್ಥ್ಯದಲ್ಲಿ ಕಾರ್ಯನಿರ್ವಹಿಸುತ್ತಿದ್ದು, ಇವರ ನಿಯೋಜಿತ ಅಧಿಕಾರಿ (ಎಒ) ಅವರು ಭೌತಿಕ ಸ್ವಾಧೀನ ಪಡೆದಿದ್ದು, ಅಂಕಣ (iii) ರಲ್ಲಿ ತಿಳಿಸಲಾದ ಬಾಕಿ ಮೊತ್ತದ ಮುಂದುವರಿದ ಬಡ್ಡಿ, ವೆಚ್ಚಗಳು ಮತ್ತು ಇತರ ಖರ್ಚುಗಳ ವಸೂಲಿಗಾಗಿ ಜುಲೈ 02, 2026 ರಂದು ಬೆಳಿಗ್ಗೆ 11.00 ರಿಂದ ಮಧ್ಯಾಹ್ನ 02.00 ರವರೆಗೆ ಇ–ಹರಾಜಿನ ಮೂಲಕ "ಎಲ್ಲಿ ಹೇಗಿದೆಯೋ ಹಾಗೆ", "ಏನಿದೆಯೋ ಹಾಗೆ", ಮತ್ತು "ಯಾವುದು ಇದೆಯೋ ಹಾಗೆ", "ಯಾವುದೇ ಅವಲಂಬನೆ ಇಲ್ಲದೆ", ಮಾರಾಟ ಮಾಡಲಾಗುವುದು. ಆಸ್ತಿಯ ಮೀಸಲು ಬೆಲೆ ಮತ್ತು ಅರ್ನೆಸ್ಟ್ ಠೇವಣಿ ಹಣವನ್ನು ಈ ಕೆಳಗೆ ನೀಡಲಾಗಿದೆ.

ಹರಾಜಿಗಿಟ್ಟಿರುವ ಭದ್ರತಾ ಸ್ವತ್ತಿನ ವಿವರ

ಕ್ರ. ಸಂ.	ಸಾಲಗಾರ/ಸಹ–ಸಾಲಗಾರ/ರ ಜಾಮೀನುದಾರ/ರ ಹೆಸರು	ಆಸ್ತಿಯ ವಿವರ	ತಗಾದೆ ಸೂಚನೆ* ಒಟು ಬಾಕಿ ಮೊತ್ತ	ಮೀಸಲು ಬೆಲೆ	ಅರ್ನೆಸ್ಟ್ ಠೇವಣಿ ಹಣ
1.	1. ನೆಪ್ಚೂನ್ ಟ್ರಾವೆಲ್ಸ್ ಇಂಡಿಯ ಪ್ರೈವೇಟ್ ಲಿಮಿಟೆಡ್ ("ಸಾಲಗಾರ") 2. ಶ್ರೀ ಹರೀಂದರ್ ಅಗರ್‌ವಾಲ್ ("ಸಾಲಗಾರ"/ "ಜಾಮೀನುದಾರ"/ "ಅಡಮಾನದಾರ") 3. ಶ್ರೀಮತಿ ಉಮಾ ಅಗರ್‌ವಾಲ್ ("ಸಹ–ಸಾಲಗಾರ"/ "ಜಾಮೀನುದಾರ") 4. ಶ್ರೀಮತಿ ಮೋನಿಕ ಅಗರ್‌ವಾಲ್ ("ಜಾಮೀನುದಾರ")	ಷೆಡ್ಯೂಲ್ "ಎ" ಆಸ್ತಿ: ಆಸ್ತಿಯ ಎಲ್ಲಾ ಭಾಗಗಳು ಸೇರಿದಂತೆ, ವಾಯೋಗ್ಯ ಪರಿವರ್ತಿತ ಭೂಮಿಯ ಪರಿವರ್ತಿತ ಭೂಮಿಯ ಒಟ್ಟು ವಿಸ್ತೀರ್ಣ 1 ಎಕರೆ 20 ಗುಂಟೆಗಳು, ಬಿಬಿಎಂಪಿ ಖಾತಾ ನಂ. 5, ಸರ್ವೆ ನಂ. 49/1ಬಿಯ ಭಾಗದಲ್ಲಿ ರಚಿತವಾಗಿದ್ದು, ಕೊತ್ತನೂರು ಗ್ರಾಮ, ಕೆ ಆರ್ ಪುರಂ ಹೋಬಳಿ, ಬೆಂಗಳೂರು ಹೋಬಳಿ, ಬೆಂಗಳೂರು ಪೂರ್ವ ತಾಲೂಕು ಇಲ್ಲಿದ್ದು (ಪರಿವರ್ತಿತ ಕಚೇರಿ ಮೆಮರಾಂಡಮ್ ಸಂ. ಎಎಲ್ಎನ್(ಪೂರ್ವ). ಎಸ್ಆರ್.(ಕೆಹೆಚ್).264/2007–08 ದಿನಾಂಕ 12/11/2008 ಓದಿಕೊಂಡಂತೆ ಜೊತೆಗೆ ಕಚೇರಿ ಮೆಮರಾಂಡಮ್ ಸಂ. ಎಎಲ್ಎನ್(ಪೂರ್ವ) ಎಸ್ಆರ್(ಕೆಹೆಚ್)264/2007–08 ದಿನಾಂಕ 25/08/2010, ಎರಡನ್ನೂ ವಿಶೇಷ ಸಹಾಯಕ ಆಯುಕ್ತರು, ಬೆಂಗಳೂರು ಜಿಲ್ಲೆ, ಬೆಂಗಳೂರು ಇವರಿಂದ ನೀಡಲ್ಪಟ್ಟಿದ್ದು), ಮತ್ತು ಚಕ್ಕುಬಂದಿ : ಪೂರ್ವಕ್ಕೆ : ರಸ್ತೆ, ಪಶ್ಚಿಮಕ್ಕೆ : ಅದೇ ಆಸ್ತಿಯ ಉಳಿದ ಭಾಗ ಸರ್ವೆ ನಂ. 49/1ಬಿ, ಉತ್ತರಕ್ಕೆ : ಆಸ್ತಿಯ ಸರ್ವೆ ನಂ. 49/1ಬಿ ಇದರಲ್ಲಿ ಆರ್ಕಿಡ್ ವುಡ್ಸ್ ಪ್ರಾಜೆಕ್ಟ್ ನ್ನು ಅಭಿವೃದ್ಧಿ ಪಡಿಸಲಾಗಿದೆ, ದಕ್ಷಿಣಕ್ಕೆ : ಸರ್ವೆ ನಂ. 49/1ಬಿ ಯ ಉಳಿದ ಭಾಗದ ಆಸ್ತಿ. ಷೆಡ್ಯೂಲ್ "ಬಿ" ಆಸ್ತಿ : 4% ಭಾಗ ಮಾಡಲಾಗದ ಪಾಲು, ಹಕ್ಕು, ಟೈಟಲ್ ಮತ್ತು ಹಿತಾಸಕ್ತಿ ಷೆಡ್ಯೂಲ್ ಎ ಆಸ್ತಿಯಲ್ಲಿದ್ದು, ವಿಸ್ತೀರ್ಣ 2613.6 ಚದರ ಅಡಿಗಳ ಭಾಗ ಮಾಡಲಾಗದಷ್ಟು ಭಾಗವನ್ನು ಮಾಲೀಕರು/ವೆಂಡರ್ ರವರಿಗೆ ಈ ಡೀಡ್ ನ ಅಡಿ ಮಾರಾಟ ಮಾಡಲಾಗಿದೆ. ಷೆಡ್ಯೂಲ್ "ಸಿ" ಆಸ್ತಿ : ಆಸ್ತಿಯ ಎಲ್ಲ ಭಾಗಗಳು ಸೇರಿದಂತೆ, ಸಾಲು ಮನೆಗಳ ನಂ. 21, ವಿಸ್ತೀರ್ಣ ಸುಮಾರು 5476.5 ಚದರ ಅಡಿಗಳ ಸೂಪರ್ ಬಿಲ್ಟಪ್ ಪ್ರದೇಶ ಜೊತೆಗೆ 2613.6 ಚದರ ಅಡಿಗಳ ಭಾಗ ಮಾಡಲಾಗದ ಪಾಲು ಇರುವ ವಾಸಯೋಗ್ಯ ಅಪಾರ್ಟ್‌ಮೆಂಟ್ ನ್ನು "ಕೋರಿಂತ್" ನ್ನು ಬಿಬಿಎಂಪಿ ಖಾತಾ ನಂ.5, ಸರ್ವೆ ನಂ. 49/1ಬಿ, ಕೊತ್ತನೂರು ಗ್ರಾಮ, ಕೆ ಆರ್ ಪುರಂ ಹೋಬಳಿ, ಬೆಂಗಳೂರು ಪೂರ್ವ ತಾಲೂಕು ಇಲ್ಲಿ ನಾಲ್ಕು ಬೆಡ್‌ರೂಮ್‌ಗಳ ಅಪಾರ್ಟ್‌ಮೆಂಟ್ ಜೊತೆಗೆ ಆರ್‌ಸಿಸಿ ಮೇಲ್ಛಾವಣಿ, ಮಾರ್ಬಲ್ ನೆಲಹಾಸು, ತೇಗದ ಮರಗಳ ಬಾಗಿಲುಗಳು ಮತ್ತು ಅಲ್ಯುಮಿನಿಯಂ ಕಿಟಕಿಗಳು ಸೇರಿದಂತೆ, ತಳಮಹಡಿ, ನೆಲ ಮತ್ತು 2(ಎರಡು) ಮೇಲಿನ ಮಹಡಿಗಳನ್ನು ಷೆಡ್ಯೂಲ್ ಎ ಆಸ್ತಿಯಲ್ಲಿ ನಿರ್ಮಾಣ ಮಾಡಲಾಗಿದ್ದು, ಜೊತೆಗೆ ಟೆರೇಸ್ ಪ್ರದೇಶ ಇದಕ್ಕೆ ಹೊಂದಿಕೊಂಡಂತೆ ಇದ್ದು, ಇದರೊಂದಿಗೆ 2 (ಎರಡು) ಕಾರು ನಿಲುಗಡೆಗೆ ಸ್ಥಳಾವಕಾಶವನ್ನು ಸಂಪೂರ್ಣವಾಗಿ ಖರೀದಿದಾರರ ಉಪಯೋಗಕ್ಕೆಂದು ಸಾಲು ಮನೆಗಳ ತಳಮಹಡಿಯಲ್ಲಿದ್ದು, ಜೊತೆಗೆ ಸಮನಾಂತರ ಪಾಲು ಇರುವ ಸಾಮಾನ್ಯ ಪ್ರದೇಶಗಳಾದ ಪ್ಯಾಸೇಜ್‌ಗಳು, ಲಾಬಿಗಳು, ಲಿಫ್ಟ್, ಮೆಟ್ಟಿಲುಗಳು ಮತ್ತು ಇತರೆ ಸಾಮಾನ್ಯ ಉಪಯೋಗದ ಪ್ರದೇಶಗಳಿರುವಂತೆ ಯೋಜನೆಯನ್ನು ಅಭಿವೃದ್ಧಿಪಡಿಸಲಾಗಿದೆ.	ರೂ. 27,10,14,438.30 (ಇಪ್ಪತ್ತೇಳು ಕೋಟಿ ಹತ್ತು ಲಕ್ಷ ಹದಿನಾಲ್ಕು ಸಾವಿರದ ನಾನ್ನೂರ ಮೂವತ್ತೆಂಟು ರೂಪಾಯಿಗಳು ಮಾತ್ರ)	ರೂ. 5,00,00,000/– (ಐದು ಕೋಟಿ ರೂಪಾಯಿಗಳು ಮಾತ್ರ)	ರೂ. 50,00,000/ (ಐವತ್ತು ಲಕ್ಷ ರೂಪಾಯಿಗಳು ಮಾತ್ರ)

* ಸರ್ಫೇಸಿ ಕಾಯ್ದೆ, 2002 ರ ಅಡಿಯಲ್ಲಿ ಆಗಸ್ಟ್ 24, 2021 ರಂದು ನೀಡಿದ ತಗಾದೆ ಸೂಚನೆಯ ಪ್ರಕಾರ, ಆಗಸ್ಟ್ 1, 2021 ರಿಂದ ಬಾಕಿ ಮೊತ್ತದ ಜೊತೆಗೆ ಮುಂದುವರಿದ ಬಡ್ಡಿ, ವೆಚ್ಚ ಮತ್ತು ಖರ್ಚುಗಳು ಬಾಕಿ ಇದೆ.

ಪೂಕರ ಭದ್ರತಾದಾರರಿಗೆ ತಿಳಿದಿರುವಂತೆ, ಮೇಲ್ಕಂಡ ಭದ್ರತಾ ಆಸ್ತಿಗಳ ಮೇಲೆ ಭದ್ರತಾ ಸಾಲದಾತರ ಹೊರತಾಗಿ ಬೇರೆ ಯಾವುದೇ ತಿಳಿದಂತೆ ಪರಭಾರೆಗಳಿರುವುದಿಲ್ಲ. ಆಸಕ್ತ ಬಿಡ್ಡರ್‌ಗಳು ಬಿಡ್ ಸಲ್ಲಿಸುವ ಮೊದಲು ಭದ್ರತಾ ಆಸ್ತಿಯ ಬಗ್ಗೆ ತಮ್ಮದೇ ಆದ ಸೂಕ್ತ ಪರಿಶೀಲನೆ ನಡೆಸಲು ಸೂಚಿಸಲಾಗುತ್ತಿದೆ.

ಮಾರಾಟದ ವಿವರವಾದ ನಿಯಮಗಳು ಮತ್ತು ಷರತ್ತುಗಳು ಹಾಗೂ ಬಿಡ್ ದಾಖಲೆಗಳಿಗಾಗಿ, ದಯವಿಟ್ಟು ವೆಬ್‌ಸೈಟ್ ನೋಡಿ: https://www.jcfarc.com ಮತ್ತು/ಅಥವಾ https://www.bankeauctions.com ಗೆ ಭೇಟಿ ನೀಡಿ.

ಈ ಸೂಚನೆಯನ್ನು ಭದ್ರತಾ ಹಿತಾಸಕ್ತಿ (ಜಾರಿ) ನಿಯಮಗಳು, 2002 ರ ನಿಯಮ 8(6) ಅಡಿಯಲ್ಲಿ ಸಾಲಗಾರ / ಸಹ–ಸಾಲಗಾರ / ಜಾಮೀನುದಾರ / ಅಡಮಾನದಾರರಿಗೆ ನೀಡಿ ಮೂವತ್ತು ದಿನಗಳ ಸೂಚನೆಯೂ ಸಹ ಆಗಿದೆ.

ಯಾವುದೇ ವ್ಯತ್ಯಾಸ ಅಥವಾ ಭಿನ್ನಾಭಿಪ್ರಾಯದ ಸಂದರ್ಭದಲ್ಲಿ, ಇಂಗ್ಲಿಷ್‌ನಲ್ಲಿ ಪ್ರಕಟಿಸಲಾದ ಮಾರಾಟ ಸೂಚನೆಯನ್ನು ಅಂತಿಮವೆಂದು ಪರಿಗಣಿಸಲಾಗುವುದು.

ದಿನಾಂಕ: ಮೇ 27, 2026
ಸ್ಥಳ: ಬೆಂಗಳೂರು

ಸಹಿ/– ಅಧಿಕೃತ ಅಧಿಕಾರಿ
ಜೆ.ಸಿ. ಫ್ಲವರ್ಸ್ ಅಸೆಟ್ ರಿಕನ್‌ಸ್ಟ್ರಕ್ಷನ್ ಪ್ರೈ. ಲಿ.
(ತನ್ನ ಸಾಮರ್ಥ್ಯದಲ್ಲಿ ಜೆಸಿಎಫ್ ಯೆಸ್ ಟ್ರಸ್ಟ್ 2022–23/1 ರ ಟ್ರಸ್ಟೀ ಆಗಿ ಕಾರ್ಯನಿರ್ವಹಿಸುತ್ತಿದೆ)

ನಗರದಲ್ಲಿ ಇಂದು

ಡಾ.ಬಿ.ಆರ್. ಅಂಬೇಡ್ಕರ್ ಜನ್ಮದಿನಾಚರಣೆ: ಉದ್ಘಾಟನೆ: ಎನ್. ಚಲುವರಾಯಸ್ವಾಮಿ, ಅತಿಥಿಗಳು: ಕ್ಯಾಪ್ಟನ್ ಕೆ. ರಾಜೇಂದ್ರ, ವೈ.ಎಸ್. ಪಾಟೀಲ, ಉಪೇಂದ್ರ ಪ್ರತಾಪ್ ಸಿಂಗ್, ಸಿ.ಎಸ್. ಷಡಾಕ್ಷರಿ, ಜಿ.ಟಿ. ಪುತ್ರ, ಮೊಹಮ್ಮದ ಪರವೇಜ್ ಬಂಥನಾಳ, ವೆಂಕಟರಾಮರೆಡ್ಡಿ ಜೆ. ಪಾಟೀಲ್, ಎಸ್. ಶಂಭೂಗೌಡ, ಎನ್. ರಮೇಶ್, ಅಧ್ಯಕ್ಷತೆ: ಎಂ. ತಿರುಮಲೇಶ, ಆಯೋಜನೆ: ಕರ್ನಾಟಕ ರಾಜ್ಯ ಕೃಷಿ ಇಲಾಖೆ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದ ನೌಕರರ ಕ್ಷೇಮಾಭಿವೃದ್ಧಿ ಸಂಘ ಮತ್ತು ಕೃಷಿ ಪದವೀಧರರ ಅಧಿಕಾರಿಗಳ ಸಂಘ, ಸ್ಥಳ: ಸಂಗಮ ಸಭಾಂಗಣ, ಕೃಷಿ ಆಯುಕ್ತಾಲಯ, ಶೇಷಾದ್ರಿ ರಸ್ತೆ, ಬೆಳಿಗ್ಗೆ 10

'ರಾಷ್ಟ್ರೀಯ ಎಐ ಮತ್ತು ಡಿಜಿಟಲ್ ವಾಟರ್' ಶೃಂಗಸಭೆ: ಉದ್ಘಾಟನೆ: ಸಿದ್ದರಾಮಯ್ಯ, ಡಿ.ಕೆ.ಶಿವಕುಮಾರ್, ಅಧ್ಯಕ್ಷತೆ: ಬೈರತಿ ಸುರೇಶ್, ಉಪಸ್ಥಿತಿ: ಶಾಲಿನಿ ರಜನೀಶ್, ಗೌರವ್ ಗುಪ್ತ, ತುಷಾರ್ ಗಿರಿನಾಥ್, ಡಿ. ತಾರಾ, ಮಹೇಶ್ವರರಾವ್, ಡಾ.ವಿ.ರಾಮ್ ಪ್ರಸಾತ್ ಮನೋಹರ್, ಆಯೋಜನೆ: ಬೆಂಗಳೂರು ಜಲಮಂಡಳಿ, ಸ್ಥಳ: ಫೋರ್ ಸೀಸನ್ಸ್ ಹೋಟೆಲ್, ಮೇಖ್ರಿ ವೃತ್ತ, ಬೆಳಿಗ್ಗೆ 11

ಭಾರತ ಸರ್ಕಾರ
ಭಾರತ ಸರಕಾರ, ವಿತ್ತ ಸಚಿವಾಲಯ, ಹಣಕಾಸು ಸೇವೆಗಳ ವಿಭಾಗ

ಸಾಲ ವಸೂಲಾತಿ ನ್ಯಾಯಾಧಿಕರಣ–1, ಕರ್ನಾಟಕ

4ನೇ ಮಹಡಿ, ಟೆಲಿಫೋನ್ ಹೌಸ್ ಬಿಲ್ಡಿಂಗ್, ರಾಜಭವನ ರಸ್ತೆ, ಬೆಂಗಳೂರು - 560 001.

ಫಾರಂ ನಂ. 14 (ರೆಗ್ಯುಲೇಷನ್ 33(2))

ಡಿಮ್ಯಾಂಡ್ ನೋಟೀಸು

ರಿಕವರಿ ಆಫ್ ಡೆಟ್ಸ್ ಅಂಡ್ ಬ್ಯಾಂಕರಪ್ಸಿ ಆಕ್ಟ್ 1993ರ ಸೆಕ್ಷನ್ 25 ರಿಂದ 28ನ್ನು ಮತ್ತು ಇನ್‌ಕಂ ಟ್ಯಾಕ್ಸ್ ಆಕ್ಟ್ 1961ರ 2ನೇ ಷೆಡ್ಯೂಲಿನ ನಿಯಮ 2ರ ಅನ್ವಯ ನೋಟೀಸು. ತಿದ್ದುಪಡಿಯಾದಂತೆ

ಆರ್ ಸಿ ನಂ.280/2025

ಕರ್ನಾಟಕ ಗ್ರಾಮೀಣ ಬ್ಯಾಂಕ್ ವಿರುದ್ಧ ಆರ್. ಪ್ರದೀಪ್ ಸಿಂಗ್

ಇವರಿಗೆ: (ಸಿಹೆಚ್-1), **ಕರ್ನಾಟಕ ಗ್ರಾಮೀಣ ಬ್ಯಾಂಕ್,** ಬೆಳ್ಳಂದೂರು ಶಾಖೆ, ಹೊರ ವರ್ತುಲ ರಸ್ತೆ, ಬೆಳ್ಳಂದೂರು ಮುಖ್ಯ ರಸ್ತೆ, ಬೆಂಗಳೂರು – 560 103. ... **ಅರ್ಜಿದಾರರ ಬ್ಯಾಂಕ್/ಸರ್ಟಿಫಿಕೇಟ್ ಹೋಲ್ಡರ್ ವಿರುದ್ಧ**

(ಸಿಡಿ 1) : **ಶ್ರೀ ಆರ್. ಪ್ರದೀಪ್ ಸಿಂಗ್** S/o ಶ್ರೀ ರಾಜೇಂದ್ರ ಸಿಂಗ್, ನಂ. 12, ಅಯ್ಯಪ್ಪಸ್ವಾಮಿ ದೇವಸ್ಥಾನ ರಸ್ತೆ, ಶಾರದಾ ಶಾಲೆಯ ಎದುರು, ಕಾಡುಗೋಡಿ, ಬೆಂಗಳೂರು – 560 067.

(ಸಿಡಿ 2) : **ತುಳಸಿ ಬಾಯಿ** , W/o ಶ್ರೀ ರಾಜೇಂದ್ರ ಸಿಂಗ್, ನಂ. 12, ಅಯ್ಯಪ್ಪಸ್ವಾಮಿ ದೇವಸ್ಥಾನ ರಸ್ತೆ, ಶಾರದಾ ಶಾಲೆಯ ಎದುರು, ಕಾಡುಗೋಡಿ, ಬೆಂಗಳೂರು – 560 067.

(ಸಿಡಿ 3) : **ಆರ್. ಮೋಹನ್ ಸಿಂಗ್** S/o ಶ್ರೀ ರಾಜೇಂದ್ರ ಸಿಂಗ್, ನಂ. 12, ಅಯ್ಯಪ್ಪಸ್ವಾಮಿ ದೇವಸ್ಥಾನ ರಸ್ತೆ, ಶಾರದಾ ಶಾಲೆಯ ಎದುರು, ಕಾಡುಗೋಡಿ, ಬೆಂಗಳೂರು – 560 067.

(ಸಿಡಿ 4) : **ಶಿವರಾಮ್** S/o ಶ್ರೀ ಎಂ.ವಿ ರಾಜು ನಂ. 12, ಅಯ್ಯಪ್ಪಸ್ವಾಮಿ ದೇವಸ್ಥಾನ ರಸ್ತೆ, ಶಾರದಾ ಶಾಲೆಯ ದುರು, ಕಾಡುಗೋಡಿ, ಬೆಂಗಳೂರು – 560 067. ... **ಪ್ರತಿವಾದಿಗಳು/ಸರ್ಟಿಫಿಕೇಟ್ ಡೆಟರ್ಸ್**

ಸಿಹೆಚ್ ಹೆಸರು	ಬಡ್ಡಿ ವಿಧ/ ರೀತಿ	ಅನ್ವಯಿಸುವ ದಿನಾಂಕ	ಆದೇಶದ ದಿನಾಂಕ	ಬಡ್ಡಿ ದರ	ಖಾತೆಯ ಸ್ವರೂಪ	ಆರ್‌ಸಿ ಮೊತ್ತ ರೂ.
ಕರ್ನಾಟಕ ಗ್ರಾಮೀಣ ಬ್ಯಾಂಕ್	ಮಾಸಿಕ ವಿಶ್ರಾಂತ	11/09/2022	11/03/2024	11.50 % ವಾರ್ಷಿಕ ಮತ್ತು ವಾರ್ಷಿಕ 2% ದಂಡ ಬಡ್ಡಿ	-	2441188/-

ಗೌರವಾನ್ವಿತ ಪ್ರಿಸೈಡಿಂಗ್ ಆಫೀಸರ್, ಸಾಲ ವಸೂಲಾತಿ ನ್ಯಾಯಾಧಿಕಣ, ಬೆಂಗಳೂರು (ಡಿಆರ್‌ಟಿ–1) ಇವರು ಒ.ಎ. ನಂ. 1624/2022ರಲ್ಲಿ ಜಾರಿ ಮಾಡಿದ ರಿಕವರಿ ಸರ್ಟಿಫಿಕೇಟ್‌ನಂತೆ ರೂ. **2441188/–** (ರೂಪಾಯಿ ಇಪ್ಪತ್ತನಾಲ್ಕು ಲಕ್ಷ ನಲವತ್ತೊಂದು ಸಾವಿರದ ಒಂದು ನೂರ ಎಂಬತ್ತೆಂಟು ಮಾತ್ರ) ಜೊತೆಗೆ ದಿನಾಂಕ 11.09.2022 ರಿಂದ ಶೇ.11.50% ವಾರ್ಷಿ ಬಡ್ಡಿ ಮತ್ತು ಶೇ.2% ವಾರ್ಷಿಕ ದಂಡ ಬಡ್ಡಿ ಮತ್ತು ಮುಂದಿನ ಬಡ್ಡಿ ಮತ್ತು ವೆಚ್ಚ **ರೂ.27005/-** (ರೂಪಾಯಿ ಇಪ್ಪತ್ತೇಳು ಸಾವಿರದ ಐದು ಮಾತ್ರ) ನಿಮ್ಮಿಂದ (ಜಂಟಿಯಾಗಿ ಮತ್ತು ಪ್ರತ್ಯೇಕವಾಗಿ/ಪೂರ್ತಿಯಾಗಿ/ ಮಿತವಾಗಿ) ಬಾಕಿ ಇರುತ್ತದೆ. (2) ನೀವು ಸದರಿ ಮೊತ್ತವನ್ನು ಈ ನೋಟೀಸನ್ನು ನೀಡಿದ 15 ದಿನಗಳ ಒಳಗೆ ಪಾವತಿಸಬೇಕಾಗುತ್ತದೆ. ಇದಕ್ಕೆ ತಪ್ಪಿದಲ್ಲಿ, ರಿಕವರಿ ಆಫ್ ಡೆಟ್ಸ್ ಡ್ಯೂ ಬ್ಯಾಂಕ್ಸ್ ಅಂಡ್ ಫೈನಾನ್ಷಿಯಲ್ ಇನ್ಸಿಟಿಟ್ಯೂಷನ್ಸ್ ಆಕ್ಟ್, 1993ರ ನಿಯಮಗಳ ಅನ್ವಯ ಮೊತ್ತವನ್ನು ವಸೂಲಿ ಮಾಡಲು ಕ್ರಮಗಳನ್ನು ಕೈಗೊಳ್ಳಲಾಗುವುದು. (3) ನಿಮಗೆ ಈ ಮೂಲಕ ಸೂಚಿಸುವುದೇನೆಂದರೆ ಮುಂದಿನ ವಿಚಾರಣೆಯ ದಿನಾಂಕದಂದು ನಿಮ್ಮ ಸ್ವತ್ತುಗಳ ವಿವರಗಳನ್ನು ಅಫಿಡವಿಟ್ ಮೂಲಕ ಘೋಷಿಸಬೇಕೆಂದು ಆದೇಶ ನೀಡಲಾಗಿದೆ. (4) ನಿಮಗೆ ಈ ಮೂಲಕ ಆದೇಶಿಸುವುದೇನೆಂದರೆ ಮುಂದಿನ ಪ್ರಕ್ರಿಯೆಗಳಿಗಾಗಿ ಈ ನೋಟೀಸನ್ನು ನೀಡಿದ 15 ದಿನಗಳ ಒಳಗೆ ಕೆಳಸಹಿದಾರರ ಮುಂದೆ ಹಾಜರಾಗಬೇಕು.(5)ಮೇಲೆ ಹೇಳಲ್ಪಟ್ಟ ಮೊತ್ತವಲ್ಲದೆ ನೀವು ಹೆಚ್ಚುವರಿಯಾಗಿ ಮುಂದಿನದಕ್ಕೂ ಬಾಧ್ಯರಾಗುತ್ತೀರಿ :(ಎ)ಈ ನೋಟೀಸು ನೀಡಿದ ನಂತರದ ಪ್ರಕ್ರಿಯೆಯನ್ನು ಪ್ರಾರಂಭಿಸುವ ಅವಧಿಗೆ ಆದೇಶದ ಪ್ರಕಾರ ಕೊಡಬೇಕಾಗಿರುವಂತಹ ಬಡ್ಡಿ ಮೊತ್ತ. (ಬಿ) ಈ ನೋಟೀಸನ್ನು ಜಾರಿ ಮಾಡಲು ಮತ್ತು ವಾರಂಟ್‌ಗಳಿಗೆ ಮತ್ತು ಇತರ ಪ್ರಕ್ರಿಯೆಗಳಿಗೆ ಮತ್ತು ಇತರ ಎಲ್ಲಾ ನಡಾವಳಿಗಳಿಗೆ ಸಾಲವನ್ನು ವಸೂಲಿ ಮಾಡುವಲ್ಲಿ ತಗಲುವ ಎಲ್ಲ ಖರ್ಚು ಮತ್ತು ವೆಚ್ಚಗಳು.

ನನ್ನ ಕೈಯಿಂದ ಮತ್ತು ಈ ನ್ಯಾಯಾಧಿಕರಣದ ಮುದ್ರೆಯ ಅಡಿಯಲ್ಲಿ **23.10.2025 ರಂದು** ಕೊಡಲ್ಪಟ್ಟಿದೆ.

ಸಹಿ/-(ಪಿ. ಹೆಚ್. ಹೇಮಂತ್ ಕುಮಾರ್, ಐಆರ್‌ಎಸ್)
ವಸೂಲಾತಿ ಅಧಿಕಾರಿ–2

ಸುಗಮ ಸಂಗೀತ ಡಿಪ್ಲೊಮಾ

ಬೆಂಗಳೂರು: ಸುಗಮ ಸಂಗೀತದಲ್ಲಿ ಡಿಪ್ಲೊಮಾ ಮಾಡಲು ಬಯಸುವವರಿಂದ ಅರ್ಜಿ ಆಹ್ವಾನಿಸಲಾಗಿದೆ. ಮೈಸೂರಿನ ಡಾ. ಗಂಗೂಬಾಯಿ ಹಾನಗಲ್ ಸಂಗೀತ ಹಾಗೂ ಪ್ರದರ್ಶಕ ಕಲೆಗಳ ವಿಶ್ವವಿದ್ಯಾಲಯದ ಒಡಂಬಡಿಕೆಯಲ್ಲಿ ಸಂಗೀತ ಧಾಮದಲ್ಲಿ ತರಗತಿಗಳು ಜೂನ್ ಮೊದಲ ವಾರದಲ್ಲಿ ಆರಂಭವಾಗಲಿದೆ. ಶಾಲೆಗಳಲ್ಲಿ ಸಂಗೀತ ಶಿಕ್ಷಕರಾಗಲು ಈ ಹಿಂದೆ ಶಾಸ್ತ್ರಿಯ ಸಂಗೀತದಲ್ಲಿ ಸೀನಿಯರ್ ಪಾಸ್ ಪ್ರಮಾಣ ಪತ್ರ ಬೇಕಿತ್ತು. ಇನ್ನುಮುಂದೆ ಡಿಪ್ಲೊಮಾ ಪ್ರಮಾಣಪತ್ರ ಇದ್ದರೆ ಸಾಕು. ಈ ಬಾರಿ ಆನ್‌ಲೈನ್ ತರಗತಿಗಳ ವ್ಯವಸ್ಥೆ ಇರಲಿದೆ. **ಮಾಹಿತಿಗೆ ಮೊಬೈಲ್ ಸಂಖ್ಯೆ:** 9448139784/ 8217607875 ಸಂಪರ್ಕಿಸಬಹುದು.

ತರಬೇತಿ ಕಾರ್ಯಾಗಾರ

ಬೆಂಗಳೂರು: ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆಯಿಂದ 'ಉನ್ನತ ಬೌದ್ಧಿಕ ಆಸ್ತಿ ಹಕ್ಕುಗಳು' ಕುರಿತು ಜೂನ್ 16 ರಿಂದ 20 ರವರೆಗೆ ಕಾರ್ಯಾಗಾರವನ್ನು ಅಕಾಡೆಮಿಯ ಕಚೇರಿಯಲ್ಲಿ ಆಯೋಜಿಸಲಾಗಿದೆ. ವಿಜ್ಞಾನ ಪದವಿ, ಸ್ನಾತಕೋತ್ತರ ಪದವಿ , ಸಂಶೋಧನಾ ವಿದ್ಯಾರ್ಥಿಗಳು, ಉಪನ್ಯಾಸಕರು, ಪ್ರಾಧ್ಯಾಪಕರು, ವಿಜ್ಞಾನ ಆಸಕ್ತರು ಕೈಗಾರಿಕೋದ್ಯಮದ ಪ್ರತಿನಿಧಿಗಳು ಜೂನ್ 12ರೊಳಗೆ https:// forms.gle/iwHJD5CxnccCFW4u5 ವೆಬ್‌ಸೈಟ್‌ನಲ್ಲಿ ನೋಂದಣಿ ಮಾಡಿಕೊಳ್ಳಬೇಕು ಎಂದು ಪ್ರಕಟಣೆ ತಿಳಿಸಿದೆ. **ಮಾಹಿತಿಗೆ:** 080-2972 1550, 97430 84194, https:// kstacademy.inಗೆ ಭೇಟಿ ನೀಡಿ.

ಬೆಂಗಳೂರು ಘನತ್ಯಾಜ್ಯ ನಿರ್ವಹಣೆ ನಿಯಮಿತ

ಉಪ ಪ್ರಧಾನ ವ್ಯವಸ್ಥಾಪಕರ ಕಚೇರಿ –1, (ಬಿಎಸ್‌ಡಬ್ಲ್ಯೂಎಂಎಲ್) 1ನೇ ಮಹಡಿ, ಬಿಬಿಎಂಪಿ ಕಟ್ಟಡ, ತಿಮ್ಮಯ್ಯ ರಸ್ತೆ, ವಸಂತ ನಗರ, ಬೆಂಗಳೂರು –560052.

ಸಂಖ್ಯೆ: ಡಿಜಿಎಂ–1/ಬಿಎಸ್‌ಡಬ್ಲ್ಯೂಎಂಎಲ್/ಪಿಆರ್/344/2026–27 ದಿನಾಂಕ : 26.05.2026

ಕೋಟೇಷನ್ ಅಧಿಸೂಚನೆ

ಉಪ ಪ್ರಧಾನ ವ್ಯವಸ್ಥಾಪಕರು–1, ಈ ಕೆಳಗಿನ ಕೋಷ್ಟಕದಲ್ಲಿ ವಿವರಿಸಲಾದ ಕೆಲಸಕ್ಕೆ ಬಿಡ್ಡುದಾರರಿಂದ ಕೋಟೇಷನ್ ಸಲ್ಲಿಸಲು ಆಹ್ವಾನಿಸಿರುತ್ತಾರೆ.

ಕೋಟೇಷನ್ ಮೇಲೆ ತಿಳಿಸಲಾದ ಕಚೇರಿಗೆ ನಿಗದಿತ ದಿನಾಂಕ ಮತ್ತು ಸಮಯದೊಳಗೆ ಮುಚ್ಚಿದ ಲಕೋಟೆಯಲ್ಲಿ ಸಲ್ಲಿಸಬೇಕು.

Description of work

Transportation of Raw Fresh Leachate about 4.5 lakhs litres to farmers land (35 Km around), from Doddabidarakallu Wet Waste Processing Plant using appropriate vehicles. Including labours with necessary gears and safety equipment, machinery, lead, lift, toll charges, all taxes, GST (If applicable). As per the direction of engineer in charge of the Work

ಕಾರ್ಯಕ್ರಮಗಳ ವೇಳಾಪಟ್ಟಿ

1. ಕೋಟೇಷನ್ ಸಲ್ಲಿಕೆಯ ದಿನಾಂಕ : 27.05.2026 ರಿಂದ.
2. ಕೋಟೇಷನ್ ಸಲ್ಲಿಕೆಯ ಕೊನೆಯ ದಿನಾಂಕ: 5.06.2026 ಸಂಜೆ 5.30 ರ ಮೊದಲು.
3. ಕೋಟೇಷನ್ ತೆರೆಯುವ ದಿನಾಂಕ: 06.06.2026 ಬೆಳಿಗ್ಗೆ 11.00 ಗಂಟೆಯ ನಂತರ

ಸಹಿ/–
ಉಪ ಪ್ರಧಾನ ವ್ಯವಸ್ಥಾಪಕರು–1, ಬಿಎಸ್‌ಡಬ್ಲ್ಯೂಎಂಎಲ್

ವಾಸಾಸಂಇ/ವಾ.ಪ್ರ/832/ಶಿರಡಿ ಸಾಯಿ/2026–27

‘ಎಸ್‌ಐಆರ್ ಸಂವಿಧಾನ ವಿರೋಧಿ’

ಸಾಮಾಜಿಕ ಕಾರ್ಯಕರ್ತೆ ತೀಸ್ತಾ ಸೆಟಲ್ ವಾಡ್ ಆರೋಪ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಚುನಾವಣಾ ಆಯೋಗವು ನಡೆಸುತ್ತಿರುವ ‘ಎಸ್‌ಐಆರ್’ (ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆ) ಸಂವಿಧಾನ ವಿರೋಧಿ ಪ್ರಕ್ರಿಯೆ ಆಗಿದೆ ಮತ್ತು ಅನೇಕ ದೋಷಗಳಿಂದ ಕೂಡಿದೆ ಎಂದು ಸಾಮಾಜಿಕ ಕಾರ್ಯಕರ್ತೆ ತೀಸ್ತಾ ಸೆಟಲ್ ವಾಡ್ ಹೇಳಿದರು.

ಡಾ.ಎಚ್.ಎಸ್.ದೊರೆಸ್ವಾಮಿ ಸ್ಮಾರಕ ಪ್ರತಿಷ್ಠಾನ, ಡಾ.ಮನಮೋಹನ ಸಿಂಗ್ ಬೆಂಗಳೂರು ನಗರ ವಿಶ್ವವಿದ್ಯಾಲಯ ಮತ್ತು ಮಹಾತ್ಮ ಗಾಂಧಿ ಅಧ್ಯಯನ ಕೇಂದ್ರ, ಕರ್ನಾಟಕ ಗಾಂಧಿ ಸ್ಮಾರಕ ನಿಧಿ ಹಾಗೂ ಗೌರಿ ಮೀಡಿಯಾ ಟ್ರಸ್ಟ್ ಸಹಯೋಗದಲ್ಲಿ ಮಂಗಳವಾರ ಆಯೋಜಿಸಿದ್ದ ‘ಸ್ವಾತಂತ್ರ್ಯ ಸೇನಾನಿ ದಿ.ಎಚ್.ಎಸ್.ದೊರೆಸ್ವಾಮಿ ಅವರಿಗೆ ಕರ್ನಾಟಕ ಗೌರವಾರ್ಪಣೆ’ ಕಾರ್ಯಕ್ರಮದಲ್ಲಿ ಮಾತನಾಡಿದರು.

‘ಭಾರತೀಯರಲ್ಲದವರಿಗೆ ಮತದಾನ ಹಕ್ಕು ಇಲ್ಲ ಎಂಬುದು ಸರಿ. ಆದರೆ ನಾಗರಿಕತ್ವವನ್ನು ಪರಿಶೀಲಿಸುವ ಪ್ರಕ್ರಿಯೆಯನ್ನು ಇದರ ಜತೆ ಬೆಸೆಯುವುದು ಸರಿಯಲ್ಲ. ಮತದಾರರ ಪಟ್ಟಿ ಗ್ರಾಮ ಸಭೆ ಮತ್ತು ವಾರ್ಡ್ ಸಭೆಗಳಲ್ಲಿ ಸಾರ್ವಜನಿಕ ಪರಿಶೀಲನೆಗೆ ಒಳಗಾಗಬೇಕು’ ಎಂದರು.

‘ಕರ್ನಾಟಕದಲ್ಲಿ ಕಾಂಗ್ರೆಸ್ ಸರ್ಕಾರದ ಆಡಳಿತ ಅಚ್ಚರಿ ಉಂಟು ಮಾಡಿದೆ. ಪ್ಯಾಲೆಸ್ಟೀನ್ ಪರ ಹೋರಾಟಕ್ಕೆ ಅವಕಾಶ ನೀಡುತ್ತಿಲ್ಲ. ದ್ವೇಷ ಭಾಷಣಕ್ಕೆ

> **ಎಚ್.ಎಸ್. ದೊರೆಸ್ವಾಮಿ ಅವರ ಆಲೋಚನೆಗಳನ್ನು ಮುಂದಕ್ಕೆ ಕೊಂಡೊಯ್ಯುವ ಸಾಮಾಜಿಕ ಕಾರ್ಯಕರ್ತರಿಗೆ ‘ದೊರೆಸ್ವಾಮಿ ಪ್ರಶಸ್ತಿ’ ನೀಡಬೇಕು**
> **ಜಿಗ್ನೇಶ್ ಮೇವಾನಿ,** ಗುಜರಾತ್ ಶಾಸಕ

ಕುಮ್ಮಕ್ಕು ನೀಡುವ ಕಾರ್ಯಕ್ರಮಗಳು ನಡೆಯುತ್ತಿವೆ’ ಎಂದು ಬೇಸರ ವ್ಯಕ್ತಪಡಿಸಿದರು.

‘2023ರ ವಿಧಾನಸಭಾ ಚುನಾವಣೆ ವೇಳೆ ಮತಾಂತರ ನಿಷೇಧ ಕಾಯ್ದೆ ಹಾಗೂ ಜಾನುವಾರು ಹತ್ಯೆ ಪ್ರತಿಬಂಧಕ ಕಾಯ್ದೆ ಹಿಂಪಡೆಯಲಾಗುವುದು ಎಂದು ಕಾಂಗ್ರೆಸ್ ತನ್ನ ಪ್ರಣಾಳಿಕೆಯಲ್ಲಿ ಘೋಷಣೆ ಮಾಡಿತ್ತು. ಆದರೆ, ಅಧಿಕಾರಕ್ಕೆ ಬಂದು ಮೂರು ವರ್ಷ ಕಳೆದರೂ ಈ ಎರಡು ಕಾಯ್ದೆಗಳನ್ನು ಹಿಂಪಡೆಯುವಲ್ಲಿ ವಿಫಲವಾಗಿದೆ’ ಎಂದರು.

‘ಬಡವರು ಮತ್ತು ಶೋಷಿತರಿಗೆ ಸಾಮಾಜಿಕ ನ್ಯಾಯ ಒದಗಿಸುವ ಹೊಣೆಗಾರಿಕೆ ಕರ್ನಾಟಕ ಸರ್ಕಾರದ ಮೇಲಿದ್ದು, ಜನರ ನಿರೀಕ್ಷೆಯನ್ನು ಹುಸಿಗೊಳಿಸದೆ ತಕ್ಷಣ ಕಾರ್ಯೋನ್ಮುಖವಾಗಬೇಕು’ ಎಂದು ಮುಖ್ಯಮಂತ್ರಿ ಅವರನ್ನು ಒತ್ತಾಯಿಸಿದರು.

‘ಗಾಂಧಿವಾದಿಯಾಗಿದ್ದ ದೊರೆಸ್ವಾಮಿ ಅವರು ಸ್ವಾತಂತ್ರ್ಯ ಚಳವಳಿಯಲ್ಲಿ ಪಾಲ್ಗೊಂಡು ಜೈಲು ಸೇರಿದ್ದರು. ಇಳಿವಯಸ್ಸಿನಲ್ಲೂ ಕರ್ನಾಟಕದಲ್ಲಿ ನಡೆದ ಭೂ ವಂಚಿತರ ಹೋರಾಟ ನೆನಪಿದೆ. ಒಂದು ಲಕ್ಷ ಹೆಕ್ಟೇರ್ ಭೂಮಿ ಬಡವರಿಗೆ ಹಂಚಿಕೆಯಾಗಬೇಕು ಎಂದು ಆಗ್ರಹಿಸುತ್ತಿದ್ದರು’ ಎಂದರು.

ಗುಜರಾತ್‌ನ ಕಾಂಗ್ರೆಸ್ ಶಾಸಕ ಜಿಗ್ನೇಶ್ ಮೇವಾನಿ ಮಾತನಾಡಿ, ‘ಎಚ್.ಎಸ್.ದೊರೆಸ್ವಾಮಿ ಅವರ ಆಶಯಗಳನ್ನು ಜೀವಂತವಾಗಿಡಲು ಭೂಕಬಳಿಕೆ ವಿರುದ್ಧ ಹೋರಾಟಗಳನ್ನು ಮುಂದುವರಿಸಬೇಕು. ಎಲ್ಲರಿಗೂ ಕನಿಷ್ಠ ಸೌಲಭ್ಯಗಳನ್ನು ಒದಗಿಸಲು ಅವರ ಮಾರ್ಗದಲ್ಲಿಯೇ ಹೋರಾಟ ನಡೆಸಬೇಕಾಗಿದೆ’ ಎಂದು ತಿಳಿಸಿದರು.

ಗೌರಿ ಮೀಡಿಯಾ ಟ್ರಸ್ಟ್ ಅಧ್ಯಕ್ಷ ನಗರಗೆರೆ ರಮೇಶ್, ದೊರೆಸ್ವಾಮಿ ಅವರ ಜನಪರ ಅಶಯಗಳನ್ನು ಸಾಕಾರಗೊಳಿಸಲು ಜನಾಂದೋಲನವನ್ನು ಮುಂದುವರಿಸುವ ಅಗತ್ಯವಿದೆ ಎಂದು ಅಭಿಪ್ರಾಯಪಟ್ಟರು.

ಪ್ರಾಸ್ತಾವಿಕವಾಗಿ ಮಾತನಾಡಿದ ಪ್ರತಿಷ್ಠಾನದ ಅಧ್ಯಕ್ಷೆ ಇಂದಿರಾ ಕೃಷ್ಣಪ್ಪ, ಸರ್ಕಾರದ ಸವಲತ್ತು ಮತ್ತು ಮೇಲ್ಮನೆ ಸದಸ್ಯತ್ವದ ಆಹ್ವಾನ ತಿರಸ್ಕರಿಸಿ ಬಾಡಿಗೆ ಮನೆಯಲ್ಲೇ ಬದುಕು ಸಾಗಿಸಿದ ದೊರೆಸ್ವಾಮಿ ಅವರ ಪ್ರಬುದ್ಧ ಭಾರತ ನಿರ್ಮಾಣದ ಕನಸನ್ನು ನನಸಾಗಿಸಲು ಯುವ ಪೀಳಿಗೆ ಮುಂದಾಗಬೇಕು ಎಂದರು.

ಕುಲಪತಿ ಪ್ರೊ.ರಮೇಶ್.ಬಿ., ಮಹಾತ್ಮ ಗಾಂಧಿ ಅಧ್ಯಯನ ಕೇಂದ್ರದ ನಿರ್ದೇಶಕಿ ಪ್ರೊ.ಜ್ಯೋತಿ ವೆಂಕಟೇಶ್, ವಿತ್ತಾಧಿಕಾರಿ ಎಂ.ವಿ.ವಿಜಯಲಕ್ಷ್ಮಿ ಉಪಸ್ಥಿತರಿದ್ದರು. ರೈತ ನಾಯಕ ವೀರಸಂಗಯ್ಯ ನಿರೂಪಿಸಿದರು. ನಂತರ ದೊರೆಸ್ವಾಮಿ ಅವರ ಬದುಕು, ಸ್ವಾತಂತ್ರ್ಯ ಚಳವಳಿ ಕುರಿತು ಗೋಷ್ಠಿಗಳು ನಡೆದವು.

ಬೆಂಗಳೂರು ನಗರ ವಿಶ್ವವಿದ್ಯಾಲಯದಲ್ಲಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ದಿ. ಎಚ್.ಎಸ್. ದೊರೆಸ್ವಾಮಿ ಭಾವಚಿತ್ರಕ್ಕೆ ಗಣ್ಯರು ಪುಷ್ಪ ನಮನ ಸಲ್ಲಿಸಿದರು. ಪ್ರೊ.ಜ್ಯೋತಿ ವೆಂಕಟೇಶ್, ತೀಸ್ತಾ ಸೆಟಲ್‌ವಾಡ್, ಜೆ.ಎಂ. ವೀರಸಂಗಯ್ಯ, ಜಿಗ್ನೇಶ್ ಮೇವಾನಿ, ಇಂದಿರಾ ಕೃಷ್ಣಪ್ಪ, ನಗರಗೆರೆ ರಮೇಶ್, ಬಿ. ರಮೇಶ್ ಉಪಸ್ಥಿತರಿದ್ದರು — ಪ್ರಜಾವಾಣಿ ಚಿತ್ರ

ಕರ್ನಾಟಕ ರಾಜ್ಯ ಚೆಸ್ ಸಂಸ್ಥೆ ಆಶ್ರಯದಲ್ಲಿ ವಿನ್ಮೋರ್ ಅಕಾಡೆಮಿಯಲ್ಲಿ ಭಾನುವಾರ ಮುಕ್ತಾಯಗೊಂಡ ರಾಜ್ಯ 7 ವರ್ಷದೊಳಗಿನವರ ಚೆಸ್ ಟೂರ್ನಿಯ ವಿಜೇತರು ಅತಿಥಿಗಳೊಂದಿಗೆ. (ಎಡದಿಂದ) ಸೈಷನ್ ಸೂರ್ಯ ಸಿ. (ಬಾಲಕರ ವಿಭಾಗದಲ್ಲಿ ರನ್ನರ್ ಅಪ್), ನಿಮಲನ ಧರಣಿಪಥಿ (ಚಾಂಪಿಯನ್), ರಿಹಾನ್ವಿ ಮುನಗಾಲಾ (ಬಾಲಕಿಯರ ವಿಭಾಗದಲ್ಲಿ ಚಾಂಪಿಯನ್), ಧನಿಷಿಕಾ ಜೆ.ಗಣೇಶ್ (ರನ್ನರ್ ಅಪ್)

ಎಫ್‌ಕೆಸಿಸಿಐನಿಂದ ಎಂಎಸ್‌ಎಂಇ ಕಾನ್‌ಕ್ಲೇವ್

ಬೆಂಗಳೂರು: ಕರ್ನಾಟಕ ವಾಣಿಜ್ಯ ಮತ್ತು ಕೈಗಾರಿಕಾ ಮಹಾಸಂಸ್ಥೆಯು (ಎಫ್‌ಕೆಸಿಸಿಐ), ಪೀಣ್ಯ ಕೈಗಾರಿಕಾ ಸಂಘದ (ಪಿಐಎ) ಜೊತೆಗೂಡಿ ಶುಕ್ರವಾರದಿಂದ ಭಾನುವಾರದವರೆಗೆ ‘ಗ್ಲೋಬಲ್ ಎಂಎಸ್‌ಎಂಇ ಕಾನ್‌ಕ್ಲೇವ್ 2026’ ಆಯೋಜಿಸಿದೆ. ಇದು ನಗರದ ಅರಮನೆ ಮೈದಾನದ ತ್ರಿಪುರವಾಸಿನಿಯಲ್ಲಿ ನಡೆಯಲಿದೆ.

ಕೇಂದ್ರ ಸರ್ಕಾರದ ಸಣ್ಣ ಮತ್ತು ಮಧ್ಯಮ ಕೈಗಾರಿಕಾ ಸಚಿವಾಲಯ, ರಾಜ್ಯ ಸರ್ಕಾರದ ಸಣ್ಣ ಕೈಗಾರಿಕೆ ಇಲಾಖೆಯ ಬೆಂಬಲದೊಂದಿಗೆ ಇದನ್ನು ಆಯೋಜಿಸಲಾಗುತ್ತಿದೆ.

‘ಸಣ್ಣ ಕೈಗಾರಿಕಾ ವಲಯವು ಪರಸ್ಪರ ಸಂಪರ್ಕ ಸಾಧಿಸಲು, ಸಹಕಾರ ಬೆಳೆಸಿಕೊಳ್ಳಲು ಮತ್ತು ಹೊಸ ಅವಕಾಶಗಳನ್ನು ಅನ್ವೇಷಿಸಲು ಇದು ಸಹಕಾರಿ ಆಗಲಿದೆ. ದೇಶದಲ್ಲಿ 20 ಲಕ್ಷ ಸಣ್ಣ ಕೈಗಾರಿಕೆಗಳಿದ್ದು, 25 ಕೋಟಿಗೂ ಹೆಚ್ಚು ಜನ ಇವುಗಳ ಮೂಲಕ ಉದ್ಯೋಗ ಕಂಡುಕೊಂಡಿದ್ದಾರೆ. ಇಂತಹ ಕ್ಷೇತ್ರಕ್ಕೆ ಉತ್ತೇಜನ ನೀಡಿದರೆ, ದೇಶದ ಆರ್ಥಿಕತೆಗೆ ಮತ್ತಷ್ಟು ದೊಡ್ಡ ಕೊಡುಗೆ ಸಿಕ್ಕಂತಾಗುತ್ತದೆ’ ಎಂದು ಎಫ್‌ಕೆಸಿಸಿಐ ಅಧ್ಯಕ್ಷೆ ಉಮಾ ರೆಡ್ಡಿ ಹೇಳಿದ್ದಾರೆ.



ಫ್ರೆಂಚ್ ಓಪನ್‌ನಲ್ಲಿ ಎಳನೇ ಶ್ರೇಯಾಂಕಿತ ಆಟಗಾರ್ತಿಯನ್ನು ಬೆರಗುಗೊಳಿಸಿದ ಭಾರತೀಯ ಮೂಲದ ಆಟಗಾರ!

ಆಟೋದಲ್ಲಿ ಮಕ್ಕಳ ಶವ ಸಾಗಣೆ

ಮಾಲೂರು (ಕೋಲಾರ): ಇಲ್ಲಿನ ಕೊತ್ತೂರು ಗ್ರಾಮದಲ್ಲಿ ಸೋಮವಾರ ಕುಂಟೆಗೆ ಬಿದ್ದು ಮೃತರಾದ ಮಕ್ಕಳ ಶವಗಳನ್ನು ಆಟೊದಲ್ಲಿ ಸರ್ಕಾರಿ ಆಸ್ಪತ್ರೆಗೆ ಸಾಗಿಸಲಾಗಿದೆ. ಈ ದೃಶ್ಯಗಳು ಜಾಲತಾಣದಲ್ಲಿ ಹರಿದಾಡಿದ್ದು, ಆರೋಗ್ಯ ಇಲಾಖೆಯಲ್ಲಿ ಆಂಬುಲೆನ್ಸ್ ಇಲ್ಲವೇ ಎಂದು ನೆಟ್ಟಿಗರು ಪ್ರಶ್ನಿಸಿದ್ದಾರೆ.

aanvii HEARING Hear • Connect • Live
ಕಾಣದಷ್ಟು ಸಣ್ಣದು ಆದರೆ ಶಕ್ತಿಶಾಲಿ
Insio Charge&Go CIC IX

35 ಗಂಟೆಗಳವರೆಗೆ ಬ್ಯಾಟರಿ ರನ್ ಟೈಮ್
ಮನೆ ಭೇಟಿ ಲಭ್ಯವಿದೆ* | 1000 ದಿನಗಳ ಡ್ಯಾಮೇಜ್ ಪ್ರೊಟೆಕ್ಷನ್* | 4 ವರ್ಷಗಳ ವಾರಂಟಿ* | ಯಾವುದೇ ವೆಚ್ಚವಿಲ್ಲದ EMI*
ನಮ್ಮ ಸೇವೆಗಳು
- ಉಚಿತ ಶ್ರವಣ ಸಾಧನಗಳ ಪ್ರಯೋಗ*
- ರಿಪೇರಿ ಮತ್ತು ಸೇವೆಗಳು
- ಆಕ್ಸೆಸರೀಸ್
ಏಕೆ ನಮ್ಮನ್ನು ಆರಿಸಬೇಕು?
- 3,50,000+ ವಿಶ್ವಾಸಾರ್ಹ ಗ್ರಾಹಕರು
- ನಮ್ಮ ಆರೈಕೆಯಲ್ಲಿ 5,50,000+ ಕಿವಿಗಳು
- 87 ಕ್ಲಿನಿಕ್‌ಗಳು ಭಾರತದಾದ್ಯಂತ
ಆಧುನಿಕ ತಂತ್ರಜ್ಞಾನವುಳ್ಳ ಶ್ರವಣ ಸಾಧನಗಳು ಈಗ ಉತ್ತಮ ಬೆಲೆಯಲ್ಲಿ ಲಭ್ಯವಿದೆ*
ಉಚಿತ ಶ್ರವಣ ತಪಾಸಣೆ ಮತ್ತು ಟ್ರಯಲ್*
27th MAY - 8th JUNE
T&C Apply*
ಸ್ಕ್ಯಾನ್ ಮಾಡಿ ನಿಮ್ಮ ಅಪಾಯಿಂಟ್‌ಮೆಂಟ್ ಬುಕ್ ಮಾಡಿ!
92 9490 9490
ಪ್ರಾಥಮಿಕ ಸ್ಲಾಟ್‌ಗಳಿಗಾಗಿ ಈಗಲೇ ಕರೆ ಮಾಡಿ!
ಆನ್ವಿ ಹಿಯರಿಂಗ್ ಸಲ್ಯೂಷನ್ಸ್ ಪ್ರೈ ಲಿ
ಬನ್ನೇರುಘಟ್ಟ | ಬ್ರೂಕ್‌ಫೀಲ್ಡ್ ಐಟಿಪಿಎಲ್ | ಬಸವನಗುಡಿ | ಕನ್ನಿಂಗ್‌ಹ್ಯಾಮ್ ರಸ್ತೆ | ಸಿ ಬಿ ಐ ರಸ್ತೆ | ಎಲೆಕ್ಟ್ರಾನಿಕ್ ಸಿಟಿ | ಎಚ್ ಎಸ್ ಆರ್ ಲೇಔಟ್ | ಇಂದಿರಾನಗರ | ಜಯನಗರ | ಜೆ ಪಿ ನಗರ | ಕೋರಮಂಗಲ | ಕೆಂಗೇರಿ | ಕೆ ಆರ್ ಪುರಂ | ಮಾರತ್ತಹಳ್ಳಿ | ನಾಗರಭಾವಿ | ನಂದಿದುರ್ಗ ರಸ್ತೆ | ನ್ಯೂ ಬಿ ಇ ಎಲ್ ರಸ್ತೆ | ಪದ್ಮನಾಭನಗರ | ರಾಜರಾಜೇಶ್ವರಿ ನಗರ | ಸಹಕಾರನಗರ | ವಿಜಯನಗರ | ವಿದ್ಯಾರಣ್ಯಪುರ | ವಿವೇಕನಗರ | ಪದ್ಮನಾಭನಗರ | ಥಣಿಸಂದ್ರ | ವೈಟ್‌ಫೀಲ್ಡ್ | ಯಲಹಂಕ

‘ಕಾವೇರಿ ನೀರಿನೊಂದಿಗೆ ಚರಂಡಿ ನೀರು’

ಪ್ರಜಾವಾಣಿ ವಾರ್ತೆ

ರಾಜರಾಜೇಶ್ವರಿನಗರ: ‘ಕಾವೇರಿ ನೀರಿನ ಜತೆಗೆ ಚರಂಡಿ ನೀರು ಬರುತ್ತಿದೆ. ಹತ್ತು ನಿಮಿಷ ನೀರನ್ನು ಹೊರ ಚೆಲ್ಲಿ, ನಂತರ ನೀರು ಹಿಡಿಯಬೇಕು. ನೀರು ದುರ್ವಾಸನೆಯಿಂದ ಕೂಡಿರುತ್ತದೆ. ಶುದ್ಧ ನೀರು ಸರಬರಾಜು ಮಾಡಬೇಕು’ ಎಂದು ಗೃಹಿಣಿ ಸುನಂದ ಆಗ್ರಹಿಸಿದರು.

‘ವಾರಕ್ಕೊಮ್ಮೆ ಕಾವೇರಿ ನೀರು ಬರುತ್ತದೆ, ಮೇಲ್ಭಾಗದ ಮನೆಗಳಿಗೆ ನೀರು ಬರುವುದಿಲ್ಲ. ನೀರೇ ಬರುತ್ತಿಲ್ಲ, ಆದರೂ ಪ್ರತಿ ತಿಂಗಳು ಬಿಲ್ ಮಾತ್ರ ಬರುತ್ತದೆ’ ಎಂದು ದೊಡ್ಡಬಿದರಕಲ್ಲು ವಾರ್ಡ್‌ನ ಮುನೇಶ್ವರ ಬಡಾವಣೆ-ಮಾರಣ್ಣ ಬಡಾವಣೆ ನಿವಾಸಿಗಳು ಜಲಮಂಡಳಿ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು.

ಮುನೇಶ್ವರ ಬಡಾವಣೆ-ಮಾರಣ್ಣ ಬಡಾವಣೆ ಮಾರ್ಗವಾಗಿ ಹಾದು ಹೋಗುವ ರಾಜಕಾಲುವೆಯ ತಡೆಗೋಡೆ ಮತ್ತು ಸೇತುವೆ ನಿರ್ಮಾಣಕ್ಕೆ ₹7 ಕೋಟಿ ವೆಚ್ಚದ ಕಾಮಗಾರಿಗೆ ಶಾಸಕ ಎಸ್.ಟಿ. ಸೋಮಶೇಖರ್ ಅವರು ಭೂಮಿಪೂಜೆ ನೆರವೇರಿಸಿದ ಸಂದರ್ಭದಲ್ಲಿ ಸ್ಥಳೀಯರು ದೂರು ನೀಡಿದರು.

ಎಸ್.ಟಿ.ಸೋಮಶೇಖರ್ ಮಾತನಾಡಿ, ‘ಜಲಮಂಡಳಿ, ಜಿಬಿಎ ಎಂಜಿನಿಯರ್‌ಗಳು, ಬೆಸ್ಕಾಂ ಅಧಿಕಾರಿಗಳಿಗೆ ಎಚ್ಚರಿಕೆ ನೀಡಲಾಗುತ್ತದೆ. ವಾರಕ್ಕೆ ಎರಡು ದಿವಸ ಶುದ್ಧ ಕಾವೇರಿ ನೀರು ಬಿಡಬೇಕು. ಕಲುಷಿತ ನೀರು ಸೇರದಂತೆ ಕ್ರಮವಹಿಸಲಾಗುವುದು’ ಎಂದರು.

ಸಹಾಯಕ ಎಂಜಿನಿಯರ್ ಚಿಕ್ಕಗೂಳಿಗೌಡ ಸಮಜಾಯಿಷಿ ನೀಡಿ, ₹9 ಕೋಟಿ ಬಿಡುಗಡೆಯಾಗಿದ್ದು, ಎಲ್ಲ ಕಾಮಗಾರಿಗಳಿಗೆ ಚಾಲನೆ ನೀಡಲಾಗುವುದು. ಸಮಸ್ಯೆಗಳನ್ನು ಪರಿಹರಿಸಲಾಗುವುದು ಎಂದರು.

SBI
ಆವರಣ ಮತ್ತು ಸ್ವತ್ತು ವಿಭಾಗ,
ಭಾರತೀಯ ಸ್ಟೇಟ್ ಬ್ಯಾಂಕ್
ಭಾರತೀಯ ಸ್ಟೇಟ್ ಬ್ಯಾಂಕ್ ಸ್ಥಳೀಯ ಪ್ರಧಾನ ಕಚೇರಿ, ಬೆಂಗಳೂರು 2ನೇ ಮಹಡಿ, ಅನೆಕ್ಸ್ ಕಟ್ಟಡ, #65, ಸಂತ ಮಾರ್ಕರ್ ರಸ್ತೆ, ಅಶೋಕ ನಗರ, ಬೆಂಗಳೂರು–560001
ಬೆಂಗಳೂರು ವೃತ್ತದಲ್ಲಿ ವಿದ್ಯುತ್ ಸುರಕ್ಷತಾ ಲೆಕ್ಕ ಪರಿಶೋಧಕರ ಎಂಪ್ಯಾನೆಲ್ಮೆಂಟ್
ಕರ್ನಾಟಕ ರಾಜ್ಯದಲ್ಲಿನ ಎಸ್‌ಬಿಐ ಬೆಂಗಳೂರು ವೃತ್ತದ ಶಾಖೆಗಳು / ಆಡಳಿತ ಕಚೇರಿಗಳು / ಕಟ್ಟಡಗಳ ವಿದ್ಯುತ್ ಸುರಕ್ಷತಾ ಲೆಕ್ಕ ಪರಿಶೋಧನೆ ನಡೆಸಲು ಈ ಕೆಳಗಿನ ವ್ಯಕ್ತಿಗಳು / ಸಂಸ್ಥೆಗಳಿಂದ ಎಂಪ್ಯಾನೆಲ್ಮೆಂಟ್‌ಗಾಗಿ ಅರ್ಜಿ / EOI ಗಳನ್ನು ಆಹ್ವಾನಿಸಲಾಗಿದೆ. (1) **ಲೆಕ್ಕ ಪರಿಶೋಧಕರು:** ಅನುಭವ ಹೊಂದಿರುವವರು / ಡೊಮೇನ್ ತಜ್ಞರು – ಪ್ರತಿಷ್ಠಿತ ವ್ಯಕ್ತಿಗಳು / ಲೆಕ್ಕ ಪರಿಶೋಧನೆ ಸಂಸ್ಥೆಗಳು, ಶಾಖೆಗಳು / ಕಚೇರಿಗಳು / ಕಟ್ಟಡಗಳ ವಿದ್ಯುತ್ ಸುರಕ್ಷತಾ ಲೆಕ್ಕ ಪರಿಶೋಧನೆಯನ್ನು ಕೈಗೊಳ್ಳಲು ಎಂಪ್ಯಾನೆಲ್ಮೆಂಟ್. ಹೆಚ್ಚಿನ ವಿವರಗಳು ಮತ್ತು ಇತರ ಅವಶ್ಯಕತೆಗಳು, ನಿಯಮಗಳು ಮತ್ತು ಷರತ್ತುಗಳು, ಎಂಪ್ಯಾನೆಲ್ಮೆಂಟ್ ನ ನಮೂನೆ, ಇತ್ಯಾದಿಗಳು, ಬ್ಯಾಂಕಿನ **ವೆಬ್‌ಸೈಟ್ : www.sbi.co.in** ನಲ್ಲಿ **"SBI in the News"** → **“Procurement News"** ನ ಅಡಿಯಲ್ಲಿ ಲಭ್ಯವಿದೆ. ನಿಗದಿತ ನಮೂನೆಯಲ್ಲಿ ಅರ್ಜಿ / EOI ಯನ್ನು ಸ್ವೀಕರಿಸುವ ಕೊನೆಯ ದಿನಾಂಕ 17.06.2026 ರಂದು ಮಧ್ಯಾಹ್ನ 3.00 ಗಂಟೆ.
ಬೆಂಗಳೂರು, ದಿನಾಂಕ: 27.05.2026 — ಸಹಿ/–ಆವರಣ ಮತ್ತು ಸ್ವತ್ತು ವಿಭಾಗ

SUDARSHAN PIPES & FITTINGS
23 YEARS OF TRUST & INNOVATION | ISO 9001:2015
u-PVC UGD Solid Core/u-PVC UGD Foam Core/uPVC/ O-PVC/Column Pipe/Casing Pipe
HDPE/DWC/PLB Duct/MDPE/Power Duct/Electro Fusion Fittings/Spigot Fittings

www.sudarshanpipes.com | Bengaluru, Karnataka. | For Dealership +91 97311 00553
WE SUPPLY TO: KUIDFC | AMRUT 2.0 Atal Mission for Rejuvenation and Urban Transformation | APCRDA
hdpe@sudarshanpipes.com
projects@sudarshanpipes.com
+91 96066 76865
+91 97423 50063

CMR UNIVERSITY
Private University Estd in Karnataka State by Act No. 45 of 2013
BENGALURU | RECOGNISED BY UGC
A GRADE ACCREDITED BY NAAC
Make Your Own Way
APPLY NOW!
ADMISSIONS OPEN FOR AY 2026-27
3 Future-Ready Campuses | 9 Prestigious Schools | 70+ Industry-Ready Programmes | 200+ World-Class Recruiters | 500+ Faculty Members | 20000+ Alumni Worldwide

Design bold, lead change
SOD | SCHOOL OF DESIGN
PROGRAMMES OFFERED
B.Des.
- Communication Design
- Product Design
- Fashion Design
- Interior Design
B.Sc.
- Sound Engineering
- Visual Effects & Animation

Build a future in architecture
SOA | SCHOOL OF ARCHITECTURE
PROGRAMME OFFERED
B.Arch. | Bachelor of Architecture
Approved by Council of Architecture (COA)
The SOA Advantage
- Maker Centred Approach
- Fostering Sustainability
- Immersive Learning Environment
- Integration of Softwares
- Regenerative Design Thinking
- Industry Institute Associations
- Real to Virtual Experiences

Shape the future with technology
SOET | SCHOOL OF ENGINEERING & TECHNOLOGY
PROGRAMMES OFFERED
B.Tech.
- Computer Science & Engineering
- Computer Science & Engineering (Artificial Intelligence & Machine Learning)
- Computer Science & Engineering (Data Science)
- Computer Engineering* *With specialisation in Artificial Intelligence & Machine Learning
- Computer Science & Technology* *With specialisation in Artificial Intelligence & Machine Learning/Internet of Things
- Information Technology
- Electronics & Communication Engineering
- Artificial Intelligence & Data Science#
M.Tech.
- Computer Science & Engineering
- Artificial Intelligence

CET codes • B.Tech. - E257 • B.Arch. - E245 | COMEDK codes • B.Tech. - E187 • B.Arch. - E187(A)
Subject to government approval
Semester-wise payment option available | Education loan (EMI option*) | Hostel facility for boys & girls | Transport facility available
*T&C apply
Best University in South India for Research & Placement by Centre of Education Growth and Research (CEGR)
Ranked #69 among Top 175 Engineering Institutes in India Source: Times Ranking Survey 2025
We honour JEE, COMEDK, CUET, KCET and other state/national-level tests. **Direct admission for CUET students.**
Providing opportunities to get scholarships worth **₹12 crores*** and special fee concessions* in the B.Tech. programme for students with **70%** or above marks in the 12th grade.
CET Rank-based scholarships* for B.Tech. up to rank **30,000** and for B.Arch. up to rank **400**
OUR TOP RECRUITERS: Capgemini | opentext | htc | ICICI Prudential | Deloitte | Radisson | Standard Chartered | eurofins | Tech Mahindra | ORACLE | accenture | Arvind | BOSCH | carelon | Federal Bank | and many more..
HURRY! LIMITED SEATS AVAILABLE AT SPECIAL CONCESSIONAL FEE
ADMISSIONS HELPLINE +91 93429 00666
admissions@cmr.edu.in | www.cmr.edu.in
Lakeside Campus: Off Hennur-Bagalur Main Road, Chagalahatti, Bengaluru – 562 149
City Campus: #2, 3rd Cross, 6th A Main, HRBR Layout, Bengaluru – 560 043
OMBR Campus: #5, Bhuvanagiri, OMBR Layout, Bengaluru – 560 043

100ಕ್ಕೂ ಹೆಚ್ಚು ಪ್ರಕರಣ ದಾಖಲಾಗಿದ್ದ ಆರೋಪಿ ಸೆರೆ

ಒಡಿಶಾ ಪ್ರದೇಶ ಕಾಂಗ್ರೆಸ್ ಸಮಿತಿ ಮಾಜಿ ಅಧ್ಯಕ್ಷರ ಮನೆಯಲ್ಲೂ ಕೃತ್ಯ ಎಸಗಿದ್ದ ಆರೋಪಿ

ಪ್ರಜಾವಾಣಿ ವಾರ್ತೆ

ಆರೋಪಿಗಳಿಂದ ಜಪ್ತಿ ಮಾಡಿಕೊಂಡ ಆಭರಣ

ಸತೀಶ್ ಬಾಬು

ನರೇಂದರ್

ಸುನಿಲ್ ಕುಮಾರ್

ಬೆಂಗಳೂರು: ದೇಶದಾದ್ಯಂತ ನೂರಕ್ಕೂ ಹೆಚ್ಚು ಪ್ರಕರಣಗಳು ದಾಖಲಾಗಿದ್ದ ಆರೋಪಿಯನ್ನು ಪಶ್ಚಿಮ ಬಂಧಿಸುವಲ್ಲಿ ವೈಟ್‌ಫೀಲ್ಡ್ ಠಾಣೆಯ ಪೊಲೀಸರು ಯಶಸ್ವಿಯಾಗಿದ್ದಾರೆ.

ಆಂಧ್ರ ಪ್ರದೇಶದ ಸುನೀಲ್ ಕುಮಾರ್, ಸತೀಶ್ ಬಾಬು ಅಲಿಯಾಸ್ 'ಸ್ಪೈಡರ್' ಸತೀಶ್, ನರೇಂದರ್ ಸೇರಿ ಐವರನ್ನು ಬಂಧಿಸಿ ಅವರಿಂದ ₹1.16 ಕೋಟಿ ಮೌಲ್ಯದ 584 ಗ್ರಾಂ ಚಿನ್ನಾಭರಣ, ಒಂದು ಕಾರು, ಒಂದು ಕೈಗಡಿಯಾರ, ₹9.85 ಲಕ್ಷ ನಗದು ಜಪ್ತಿ ಮಾಡಲಾಗಿದೆ ಎಂದು ಪೊಲೀಸರು ಹೇಳಿದರು.

ಮನೆ ಹಾಗೂ ಆಭರಣ ಮಳಿಗೆಯಲ್ಲಿ ಚಿನ್ನಾಭರಣ ಕಳ್ಳತನ ಮಾಡಿದ ಪ್ರಕರಣದ ಸಂಬಂಧ ವೈಟ್‌ಫೀಲ್ಡ್ ಪೊಲೀಸ್ ಠಾಣೆಯಲ್ಲಿ ಮಾರ್ಚ್ 14 ಹಾಗೂ ಮೇ 16ರಂದು ಎರಡು ಪ್ರತ್ಯೇಕ ಪ್ರಕರಣಗಳು ದಾಖಲಾಗಿದ್ದವು. ಆ ಪ್ರಕರಣಗಳನ್ನು ಆಧರಿಸಿ, ತನಿಖೆ ನಡೆಸಿದಾಗ ಆರೋಪಿಗಳು ವಿವಿಧ ರಾಜ್ಯಗಳಲ್ಲಿ ಕಳ್ಳತನ ಮಾಡಿ ಪರಾರಿ ಆಗುತ್ತಿರುವುದು ಪತ್ತೆ ಆಯಿತು ಎಂದು ಪೊಲೀಸರು ಹೇಳಿದರು.

ಬಂಧಿತರ ಪೈಕಿ ಸತೀಶ್ ಬಾಬು ಅಲಿಯಾಸ್ 'ಸ್ಪೈಡರ್' ಸತೀಶ್ ವಿರುದ್ಧ ಒಡಿಶಾ, ಕೇರಳ, ತಮಿಳುನಾಡು ಸೇರಿ ದೇಶದ ವಿವಿಧ ಠಾಣೆಗಳಲ್ಲಿ ನೂರಕ್ಕೂ ಹೆಚ್ಚು ಪ್ರಕರಣಗಳು ದಾಖಲಾಗಿವೆ. ಒಡಿಶಾ ಪ್ರದೇಶ ಕಾಂಗ್ರೆಸ್ ಸಮಿತಿ ಮಾಜಿ ಅಧ್ಯಕ್ಷ ನಿರಂಜನ್ ಪಟ್ನಾಯಕ್ ಅವರ ಮನೆಯಲ್ಲೂ ಸತೀಶ್ ಕಳ್ಳತನ ಮಾಡಿದ್ದ. ಮುಖಕ್ಕೆ ಮಾಸ್ಕ್ ಧರಿಸಿಕೊಂಡು ಮನೆಗೆ ನುಗ್ಗಿ ಕೃತ್ಯ ಎಸಗುತ್ತಿದ್ದ ಎಂದು ಮೂಲಗಳು ಹೇಳಿವೆ.

ಕರ್ನಾಟಕದಲ್ಲಿ ಮೊದಲ ಬಾರಿಗೆ ಕಳ್ಳತನ ಮಾಡಿದ ಆರೋಪಿಗಳು ವೈಟ್‌ಫೀಲ್ಡ್ ಠಾಣೆಯ ಪೊಲೀಸರಿಗೆ ಸಿಕ್ಕಿಬಿದ್ದಿದ್ದಾರೆ. ಸ್ನೇಹಾ ಕಾರಿನಲ್ಲಿ ಬಂದು ಕಳ್ಳತನ ಮಾಡಿ ಆರೋಪಿಗಳು ಪರಾರಿ ಆಗುತ್ತಿದ್ದರು. ಪ್ರತಿಷ್ಠಿತ ಮನೆಗಳನ್ನೇ ಗುರಿಯಾಗಿಸಿ ಆರೋಪಿಗಳು ಕಳ್ಳತನ ಮಾಡುತ್ತಿದ್ದರು ಎಂದು ಮೂಲಗಳು ಹೇಳಿವೆ.

'ಪ್ರತಿಷ್ಠಿತ ವಿಲ್ಲಾ ಪತ್ತೆ ಮಾಡುತ್ತಿದ್ದರು. ಐಷಾರಾಮಿ ವಿಲ್ಲಾ ಎಂಬುದು ಕಂಡುಬಂದ ತಕ್ಷಣವೇ ಸ್ನೇಹಾ ಕಾರಿನಲ್ಲಿ ಬಂದು ಕಳ್ಳತನ ಮಾಡಿ ಪರಾರಿ ಆಗುತ್ತಿದ್ದರು. ಅಲ್ಲದೇ ಸತೀಶ್‌ಗೆ ಕಟ್ಟಡದಿಂದ ಕಟ್ಟಡಕ್ಕೆ ಜಿಗಿಯುವ ಕೌಶಲವಿತ್ತು. ಹೀಗೆ ಕಟ್ಟಡದಿಂದ ಕಟ್ಟಡಕ್ಕೆ ಜಿಗಿದು ತಪ್ಪಿಸಿಕೊಂಡು ಪರಾರಿ ಆಗುತ್ತಿದ್ದ. ಸಾಕ್ಷ್ಯಾಧಾರಗಳ ಕೊರತೆಯಿಂದ ಜೈಲಿನಿಂದ ಬಿಡುಗಡೆಯಾಗಿ ಮತ್ತೆ ಕೃತ್ಯ ಎಸಗುತ್ತಿದ್ದ' ಎಂದು ಪೊಲೀಸರು ಹೇಳಿದರು.

ಲಾಕರ್ ಹೊತ್ತೊಯ್ದ ಆರೋಪಿಗಳು

ಕಾಶಿಯಾತ್ರೆಗೆ ಹೋಗಿದ್ದವರ ಮನೆಯಲ್ಲಿ ಕಳ್ಳತನ ಮಾಡಿದ್ದ ಮೂವರು ಆರೋಪಿಗಳನ್ನು ಬ್ಯಾಡರಹಳ್ಳಿ ಠಾಣೆ ಪೊಲೀಸರು ಬಂಧಿಸಿದ್ದಾರೆ. ಗಂಗಾಧರ್, ಬಸವ ಮತ್ತು ಕಿರಣ್ ಬಂಧಿತರು.

ಮಾರ್ಚ್ 26ರಂದು ಮನೆಯ ಮಾಲೀಕರು ಕಾಶಿ ಯಾತ್ರೆಗೆ ತೆರಳಿದ್ದರು. ಅದನ್ನು ಗಮನಿಸಿದ್ದ ಕಳ್ಳರು ಮನೆಗೆ ನುಗ್ಗಿದ್ದರು. ಲಾಕರ್ ಒಡೆಯಲು ಯತ್ನಿಸಿದ್ದರು. ಅದು ಸಾಧ್ಯವಾಗದಿರುವುದಾಗ ಲಾಕರ್ ಹೊತ್ತೊಯ್ದಿದ್ದರು.

ಬಂಧಿತರಿಂದ ₹70 ಲಕ್ಷ ಮೌಲ್ಯದ ಬಂಗಾರ, ₹1.43 ಲಕ್ಷ ನಗದು, 750 ಗ್ರಾಂ ಬೆಳ್ಳಿ ಸಾಮಗ್ರಿ ವಶಕ್ಕೆ ಪಡೆಯಲಾಗಿದೆ ಎಂದು ಪೊಲೀಸರು ಹೇಳಿದರು.

ಸಂಬಳ ನೀಡಿಲ್ಲವೆಂದು ಚಿನ್ನದ ಗಟ್ಟಿ ಕಳ್ಳತನ

ಬೆಂಗಳೂರು: ನಗರ್ತಪೇಟೆ ಮುಖ್ಯರಸ್ತೆಯ ಗೋಲ್ಡ್ ಪ್ರೈವೆಟ್ ಲಿಮಿಟೆಡ್‌ಗೆ ಸೇರಿದ ಮಳಿಗೆಯಲ್ಲಿ ಚಿನ್ನ ಹಾಗೂ ಬೆಳ್ಳಿ ಸಾಮಗ್ರಿ ಕಳ್ಳತನ ಮಾಡಿದ್ದ ಒಂಬತ್ತು ಕೆಲಸಗಾರರನ್ನು ಹಲಸೂರು ಗೇಟ್ ಠಾಣೆ ಪೊಲೀಸರು ಬಂಧಿಸಿದ್ದಾರೆ.

ಪಶ್ಚಿಮ ಬಂಗಾಳದ ಶೇಖ್ ಮೀರಾಜುಲ್ ಇಸ್ಲಾಂ(27), ಗೋಲಮ್ ನಬಿ ಮಲ್ಲಿಕ್ (20), ಎಸ್.ಕೆ.ಮುಸ್ತಾಕ್ ಅಲಿ (22), ರಮಜಾನ್ ಮಿದ್ಯಾ (21), ಎಸ್.ಕೆ. ಮಹಬೂಬ್ ರೆಹಮಾನ್ (19), ಎಸ್.ಕೆ.ಲಿಲನ್ ಅಲಿ (29), ಆಸಿಫ್ ಅಲಿ (20), ಅಫೀಕ್ ಮೊಹಮ್ಮದ್ (19) ಹಾಗೂ ಬಿಸ್ವಜಿತ್ ಪೌಲಿಯಾ (40) ಬಂಧಿತರು.

ಬಂಧಿತರಿಂದ 618 ಗ್ರಾಂ ಚಿನ್ನದ ಗಟ್ಟಿ ಹಾಗೂ ಆಭರಣ ಜಪ್ತಿ ಮಾಡಲಾಗಿದೆ ಎಂದು ಪೊಲೀಸರು ಹೇಳಿದರು.

ಗೋಲ್ಡ್ ಪ್ರೈವೆಟ್ ಲಿಮಿಟೆಡ್‌ಗೆ ಸೇರಿದ ಮಳಿಗೆಯಲ್ಲಿ ಆರೋಪಿಗಳು ಕಳೆದ ಆರು ತಿಂಗಳಿಂದ ಕೆಲಸ ಮಾಡುತ್ತಿದ್ದರು. ಮೇ 11ರಂದು ಆಭರಣಗಳನ್ನು ಕಳ್ಳತನ ಮಾಡಿಕೊಂಡು ಪರಾರಿ ಆಗಿದ್ದರು. ಕಂಪನಿಯ ಮಾಲೀಕರು ನೀಡಿದ ದೂರಿನ ಮೇರೆಗೆ ಕಾರ್ಯಾಚರಣೆ ನಡೆಸಿದ ಪೊಲೀಸರು ಆರೋಪಿಗಳನ್ನು ಬಂಧಿಸಿದ್ದಾರೆ ಎಂದು ಮೂಲಗಳು ಹೇಳಿವೆ.

ಬಂಧಿತರಿಂದ ವಶಕ್ಕೆ ಪಡೆದ ಚಿನ್ನಾಭರಣ

ಆಭರಣವನ್ನು ಕಳ್ಳತನ ಮಾಡಿದ ಬಳಿಕ ಆರೋಪಿಗಳು, ಬೆಂಗಳೂರಿನಿಂದ ಪಶ್ಚಿಮ ಬಂಗಾಳಕ್ಕೆ ರೈಲಿನಲ್ಲಿ ಹೋಗಿದ್ದರು. ಖಚಿತ ಮಾಹಿತಿ ಆಧರಿಸಿ ಪಶ್ಚಿಮ ಬಂಗಾಳದ ರೈಲು ನಿಲ್ದಾಣದಲ್ಲಿ ಕಾರ್ಯಾಚರಣೆ ನಡೆಸಿ, ಆರೋಪಿಗಳನ್ನು ಬಂಧಿಸಲಾಗಿದೆ ಎಂದು ಪೊಲೀಸರು ಹೇಳಿದರು.

'ಬಂಧಿತರನ್ನು ಕಸ್ಟಡಿಗೆ ಪಡೆದು ವಿಚಾರಣೆ ನಡೆಸಲಾಗುತ್ತಿದೆ. ಮಾಲೀಕರು ಸಂಬಳ ನೀಡಿಲ್ಲ ಎನ್ನುವ ಕಾರಣಕ್ಕೆ ಕಳ್ಳತನ ಮಾಡಿರುವುದಾಗಿ ಆರೋಪಿಗಳು ತಪ್ಪೊಪ್ಪಿಕೊಂಡಿದ್ದಾರೆ' ಎಂದು ಮೂಲಗಳು ಹೇಳಿವೆ.

ಅಪರಾಧ ಸುದ್ದಿ

ಆಟೊ ಚಾಲಕನ ಕೊಲೆ: ಸ್ನೇಹಿತನ ಸೆರೆ

ಬೆಂಗಳೂರು: ಹಣಕಾಸು ವಿಚಾರಕ್ಕೆ ನಡೆದ ಗಲಾಟೆಯಲ್ಲಿ ತಾವರೆಕೆರೆಯ ಉದಯ ಲೇಔಟ್‌ನ ಎರಡನೇ ಹಂತದ ನಿವಾಸಿ, ಆಟೊ ಚಾಲಕ ಎನ್.ರಕ್ಷಿತ್ ಅವರನ್ನು ಕೊಲೆ ಮಾಡಿ ಮೃತದೇಹವನ್ನು ಹೂತುಹಾಕಿ ಪರಾರಿಯಾಗಿದ್ದ ಆರೋಪಿಯನ್ನು ಕುಂಬಳಗೋಡು ಠಾಣೆಯ ಪೊಲೀಸರು ಬಂಧಿಸಿದ್ದಾರೆ.

ಕಂದೇಪುರದ ನಿವಾಸಿ ಮೋಹಿನ್ ಪಾಷಾ ಬಂಧಿತ. ಮತ್ತೊಬ್ಬ ಆರೋಪಿ ಹಸನ್ ಬಂಧನಕ್ಕೆ ಶೋಧ ಕಾರ್ಯ ನಡೆಸಲಾಗುತ್ತಿದೆ ಎಂದು ಪೊಲೀಸರು ಹೇಳಿದರು.

ರಕ್ಷಿತ್ ಅವರ ತಾಯಿ ಪುಷ್ಪಾ ಅವರು ನೀಡಿದ ದೂರಿನ ಮೇಲೆ ಮೋಹಿನ್ ಪಾಷಾ ಹಾಗೂ ಹಸನ್ ವಿರುದ್ಧ ಪ್ರಕರಣ ದಾಖಲು ಮಾಡಿಕೊಂಡು ತನಿಖೆ ನಡೆಸಲಾಗುತ್ತಿದೆ ಎಂದು ಪೊಲೀಸರು ಹೇಳಿದರು.

ರಕ್ಷಿತ್ ಹಾಗೂ ಮೋಹಿನ್ ಪಾಷಾ ಸ್ನೇಹಿತರು.

ಮೋಹಿನ್ ಪಾಷಾ

ಎನ್.ರಕ್ಷಿತ್

ರಕ್ಷಿತ್ ಅವರಿಂದ ಮೋಹಿನ್ ಪಾಷಾ ಸಾಲ ಪಡೆದುಕೊಂಡಿದ್ದ. ಸಾಲ ವಾಪಸ್ ನೀಡುವಂತೆ ಕೇಳಿದ್ದಕ್ಕೆ ಇಬ್ಬರ ಮಧ್ಯೆ ಗಲಾಟೆ ನಡೆದಿತ್ತು. ಭಾನುವಾರ ಸಂಜೆ ಮೋಹಿನ್ ಪಾಷಾ ಮನೆಯ ಬಳಿ ಹೋಗಿದ್ದಾಗ ಇಬ್ಬರ ಮಧ್ಯೆ ಗಲಾಟೆ ನಡೆದಿತ್ತು. ಆರೋಪಿಗಳಾದ ಮೋಹಿನ್ ಪಾಷಾ ಹಾಗೂ ಹಸನ್ ದೊಣ್ಣೆಯಿಂದ ರಕ್ಷಿತ್ ಮೇಲೆ ಹಲ್ಲೆ ನಡೆಸಿ ಕೊಲೆ ಮಾಡಿದ್ದರು. ಮೃತದೇಹವನ್ನು ರಾಮಸಂದ್ರದ ಖಾಲಿ ಪ್ರದೇಶದಲ್ಲಿ ಗುಂಡಿ ತೆಗೆದು ಹೂತುಹಾಕಿ ಪರಾರಿ ಆಗಿದ್ದರು ಎಂದು ಪೊಲೀಸರು ಹೇಳಿದರು.

ಸಿಸಿಬಿ ಪೊಲೀಸರು ಜಪ್ತಿ ಮಾಡಿಕೊಂಡ ಮಾದಕ ವಸ್ತುವನ್ನು ನಗರ ಪೊಲೀಸ್ ಕಮಿಷನರ್ ಸೀಮಾಂತ್ ಕುಮಾರ್ ಸಿಂಗ್ ಪರಿಶೀಲಿಸಿದರು

'ಸ್ನ್ಯಾಕ್ಸ್ ಬಾಕ್ಸ್'ನಲ್ಲಿ ಹೈಡ್ರೊ ಗಾಂಜಾ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಿಸಿಬಿಯ ಮಾದಕ ವಸ್ತು ನಿಗ್ರಹ ದಳ ಹಾಗೂ ಜೀವನ್ ಬಿಮಾ ನಗರ ಠಾಣೆಯ ಪೊಲೀಸರು ಕಾರ್ಯಾಚರಣೆ ನಡೆಸಿ, ₹2.40 ಕೋಟಿ ಮೌಲ್ಯದ ಡ್ರಗ್ಸ್ ಜಪ್ತಿ ಮಾಡಿಕೊಳ್ಳುವಲ್ಲಿ ಯಶಸ್ವಿ ಆಗಿದ್ದಾರೆ.

ನಾಲ್ವರು ಡ್ರಗ್ ಪೆಡ್ಲರ್‌ಗಳನ್ನು ಬಂಧಿಸಿರುವ ಪೊಲೀಸರು, 3 ಕೆ.ಜಿ 312 ಗ್ರಾಂ ಹೈಡ್ರೊ ಗಾಂಜಾ, 27 ಗ್ರಾಮ ಎಂಡಿಎಂಎ, ಒಂದು ಕೆ.ಜಿ 272 ಗ್ರಾಂ ಗಾಂಜಾ, ಕೃತ್ಯಕ್ಕೆ ಬಳಸಿದ ಒಂದು ಕಾರು ವಶಕ್ಕೆ ಪಡೆದಿದ್ದಾರೆ.

ಚಾಮರಾಜಪೇಟೆಯಲ್ಲಿ ಇರುವ ವಿದೇಶಿ ಅಂಚೆ ಕಚೇರಿಗೆ ಪಾರ್ಸೆಲ್ ಮೂಲಕ ಅಮೆರಿಕ ಮತ್ತು ಥಾಯ್ಲೆಂಡ್‌ನಿಂದ ಬಂದಿದ್ದ ಮಾದಕ ವಸ್ತುವನ್ನು ಸಿಸಿಬಿ ಅಧಿಕಾರಿಗಳು ವಶಪಡಿಸಿಕೊಂಡಿದ್ದಾರೆ.

'ಸ್ನ್ಯಾಕ್ಸ್ ಬಾಕ್ಸ್'ನಲ್ಲಿ 3 ಕೆ.ಜಿ 312 ಗ್ರಾಂ ಹೈಡ್ರೊ ಗಾಂಜಾವನ್ನು ತುಂಬಿ ಪಾರ್ಸೆಲ್ ಕಳುಹಿಸಲಾಗಿತ್ತು. ಖಚಿತ ಮಾಹಿತಿ ಆಧರಿಸಿ ಕಾರ್ಯಾಚರಣೆ ನಡೆಸಿ ಮೂರು ಬಾಕ್ಸ್‌ನಲ್ಲಿದ್ದ ಹೈಡ್ರೊ ಗಾಂಜಾವನ್ನು ಜಪ್ತಿ ಮಾಡಲಾಗಿದೆ. ಇದರ ಮೌಲ್ಯ ₹1.16 ಕೋಟಿ ಎಂದು ಅಂದಾಜಿಸಲಾಗಿದೆ.

ವಿದೇಶಿ ಅಂಚೆ ಕಚೇರಿಯಲ್ಲಿದ್ದ ಕೆಲವು ಪಾರ್ಸೆಲ್‌ಗಳ ಕುರಿತು ಅನುಮಾನಗೊಂಡ ಅಂಚೆ ಕಚೇರಿ ಸಿಬ್ಬಂದಿ ಸಿಸಿಬಿ ಪೊಲೀಸರಿಗೆ ಮಾಹಿತಿ ನೀಡಿದ್ದರು. ಶ್ವಾನದಳದೊಂದಿಗೆ ಸ್ಥಳಕ್ಕೆ ಧಾವಿಸಿದ ಸಿಸಿಬಿ ಮಾದಕ ವಸ್ತು ನಿಗ್ರಹ ದಳದ ಅಧಿಕಾರಿಗಳು ಪಾರ್ಸೆಲ್ ತೆರೆದು ಪರಿಶೀಲಿಸಿದಾಗ, ಅದರಲ್ಲಿ ಹೈಡ್ರೊ ಗಾಂಜಾ ಪತ್ತೆ ಆಗಿತ್ತು.

'ಈ ಪ್ರಕರಣದಲ್ಲಿ ಇಬ್ಬರನ್ನು ವಶಕ್ಕೆ ಪಡೆಯಲಾಗಿದೆ. ವಿದೇಶದಿಂದ ಸ್ನ್ಯಾಕ್ಸ್ ಬಾಕ್ಸ್‌ನಲ್ಲಿ ಗಾಂಜಾವನ್ನು ಪೂರೈಸಿದ ವ್ಯಕ್ತಿಗಳ ಬಂಧನಕ್ಕೆ ಕಾರ್ಯಾಚರಣೆ ನಡೆಸಲಾಗುತ್ತಿದೆ. ಕೆಂಪೇಗೌಡ ನಗರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ' ಎಂದು ಪೊಲೀಸರು ಹೇಳಿದರು.

ಇಬ್ಬರ ಬಂಧನ: ಜೀವನ್ ಬಿಮಾ ನಗರ ಠಾಣಾ ವ್ಯಾಪ್ತಿಯ ಟನಲ್ ರಸ್ತೆಯಲ್ಲಿ ಕೇರಳ ನೋಂದಣಿ ಸಂಖ್ಯೆಯ ಕಾರಿನಲ್ಲಿ ಮಾದಕ ವಸ್ತುಗಳನ್ನು ಮಾರಾಟ ಮಾಡುತ್ತಿದ್ದ ಇಬ್ಬರನ್ನು ಬಂಧಿಸಲಾಗಿದೆ.

ಆರೋಪಿಗಳಿಂದ 27 ಗ್ರಾಂ ಎಂಡಿಎಂಎ, ಒಂದು ಕೆ.ಜಿ 272 ಗ್ರಾಂ ಗಾಂಜಾ, ಒಂದು ಕಾರು ಜಪ್ತಿ ಮಾಡಲಾಗಿದೆ ಎಂದು ಪೊಲೀಸರು ಹೇಳಿದರು.

ರಾಜರಾಜೇಶ್ವರಿ ನಗರ ಠಾಣೆ ಪೊಲೀಸರ ಕಾರ್ಯಾಚರಣೆ

ಸ್ನೇಹಿತೆಯ ಆಭರಣ ಕದ್ದ ದಂಪತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸ್ನೇಹಿತೆ ಕೊಟ್ಟಿದ್ದ ಆಭರಣಗಳನ್ನು ಕಳವು ಮಾಡಿ ಅಡಮಾನ ಇರಿಸಿದ್ದ ದಂಪತಿಯನ್ನು ರಾಜರಾಜೇಶ್ವರಿ ನಗರ ಠಾಣೆ ಪೊಲೀಸರು ಬಂಧಿಸಿದ್ದಾರೆ.

ಬಿಇಎಂಎಲ್ ಲೇಔಟ್ ನಿವಾಸಿ ಶರ್ಮಿಳಾ(50) ಮತ್ತು ಅವರ ಪತಿ ಗಣೇಶ್(54) ಬಂಧಿತರು.

ಪದ್ಮಜಾ ರಾವ್ ಎಂಬವರು ಕೊಟ್ಟ ಚಿನ್ನಾಭರಣಗಳನ್ನು ಆರೋಪಿಗಳು ಕಳವು ಮಾಡಿ ದುರುಪಯೋಗ ಪಡಿಸಿಕೊಂಡಿದ್ದರು. ಬನಶಂಕರಿ ನಿವಾಸಿ ಪದ್ಮಜಾ ರಾವ್ ನೀಡಿದ ದೂರಿನ ಮೇಲೆ ಪ್ರಕರಣ ದಾಖಲಿಸಿಕೊಂಡು ಆರೋಪಿಗಳನ್ನು ಬಂಧಿಸಲಾಗಿದೆ ಎಂದು ಪೊಲೀಸರು ಹೇಳಿದರು.

ಪದ್ಮಜಾ ರಾವ್‌ಗೆ ಮದುವೆಯಾಗಿದ್ದು, ಪುತ್ರಿ ಕೂಡ ಇದ್ದಾರೆ. ಆದರೆ, ಕೌಟುಂಬಿಕ ಕಾರಣಕ್ಕೆ ಪತಿ ಮತ್ತು ಪುತ್ರಿ ದೂರವಾಗಿದ್ದಾರೆ. ಹೀಗಾಗಿ, ತನ್ನ ಆತ್ಮೀಯ ಸ್ನೇಹಿತೆ ಶರ್ಮಿಳಾ ಮನೆಯಲ್ಲಿ ಎಂಟು ವರ್ಷಗಳಿಂದ ಪದ್ಮಜಾ ರಾವ್ ವಾಸವಾಗಿದ್ದರು. ಈ ಮಧ್ಯೆ ಆರೋಪಿಗಳು ಪದ್ಮಜಾ ರಾವ್ ಬಳಿ ಇರುವ ಹಣ ಮತ್ತು ಚಿನ್ನಾಭರಣಗಳ ಮೇಲೆ ಆಸೆ ಪಟ್ಟು ಹೋಟೆಲ್ ಉದ್ಯಮ ನಡೆಸಲು ಹಣದ ಸಹಾಯ ಮಾಡುವಂತೆ ಕೇಳಿಕೊಂಡಿದ್ದರು. ಆದರೆ, ಪದ್ಮಜಾ ರಾವ್ ಅವರು ಕೊಟ್ಟಿರಲಿಲ್ಲ. ಅದರಿಂದ ಬೇಸರಗೊಂಡಿದ್ದ ಆರೋಪಿಗಳು ಸಂಚು ರೂಪಿಸಿ ಕೃತ್ಯ ಎಸಗಿದ್ದಾರೆ ಎಂದು ಪೊಲೀಸರು ಹೇಳಿದರು.

ಆರೋಪಿ ದಂಪತಿಯಿಂದ ಜಪ್ತಿ ಮಾಡಿದ ಚಿನ್ನಾಭರಣ

ಶರ್ಮಿಳಾ



ಗಣೇಶ್

ಬ್ಯಾಂಕ್‌ನ ಲಾಕರ್‌ವೊಂದರಲ್ಲಿ ಇರಿಸಿದ್ದ ಚಿನ್ನಾಭರಣ ಮತ್ತು ₹49.50 ಲಕ್ಷವನ್ನು ಪದ್ಮಜಾ ರಾವ್ ಅವರು ಬಿಡಿಸಿ ಸ್ನೇಹಿತೆ ಶರ್ಮಿಳಾ ಮನೆಯ ಬೀರುವಿನಲ್ಲಿ ಇರಿಸಿದ್ದರು. ಕೆಲವು ದಿನಗಳ ಹಿಂದೆ ಲಾಕರ್ ತೆರೆದು ಪರಿಶೀಲಿಸಿದಾಗ ಆಭರಣ ಮತ್ತು ನಗದು ನಾಪತ್ತೆ ಆಗಿತ್ತು. ಬಳಿಕ ಸ್ನೇಹಿತೆಗೆ ಕೇಳಿದಾಗ 'ಹಣದ ಅವಶ್ಯಕತೆ ಇದ್ದು, ಅದಕ್ಕಾಗಿ ಜ್ಯುವೆಲ್ಲರಿ ಮಳಿಗೆಯಲ್ಲಿ ಅಡಮಾನ ಇರಿಸಿದ್ದೇವೆ. ವಾಪಸ್ ಕೊಡುವುದಿಲ್ಲ' ಎಂದು ಬೆದರಿಕೆ ಹಾಕಿದ್ದರು. ಅದಾದ ಮೇಲೆ ಪದ್ಮಜಾ ರಾವ್ ಅವರು ಸ್ನೇಹಿತೆಯ ಮನೆ ತೊರೆದು ಬನಶಂಕರಿಯಲ್ಲಿ ಅಪಾರ್ಟ್‌ಮೆಂಟ್‌ವೊಂದರಲ್ಲಿ ವಾಸವಾಗಿದ್ದರು. ಬಳಿಕ ಠಾಣೆಗೆ ದೂರು ನೀಡಿದ್ದಾರೆ ಎಂದು ಪೊಲೀಸರು ಹೇಳಿದರು.

ಹೋಟೆಲ್ ತೆರೆಯಲು ಸಿದ್ಧತೆ

ಪದ್ಮಜಾ ರಾವ್ ಅವರ ಚಿನ್ನಾಭರಣ ಮತ್ತು ನಗದು ಬಳಸಿಕೊಂಡು ಗೋವಾದಲ್ಲಿ ಹೋಟೆಲ್ ಉದ್ಯಮ ಆರಂಭಿಸಲು ಆರೋಪಿಗಳು ಸಿದ್ಧತೆ ನಡೆಸಿದ್ದರು ಎಂಬುದು ಗೊತ್ತಾಗಿದೆ ಎಂದು ಪೊಲೀಸರು ಮಾಹಿತಿ ನೀಡಿದರು.

ರನ್‌ವೇ ಕಡೆ ಸಾಗುತ್ತಿದ್ದ ಇಂಡಿಗೊ ವಿಮಾನದಲ್ಲಿ ಹೊಗೆ

ಪ್ರಜಾವಾಣಿ ವಾರ್ತೆ

ದೇವನಹಳ್ಳಿ: ಕೆಂಪೇಗೌಡ ಅಂತರ ರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಮಂಗಳವಾರ ಸಂಜೆ ಚೆನ್ನೈಗೆ ತೆರಳ ಬೇಕಿದ್ದ ಇಂಡಿಗೊ ವಿಮಾನದಲ್ಲಿ ಹೊಗೆ ಕಾಣಿಸಿಕೊಂಡ ಕಾರಣ 230ಕ್ಕೂ ಹೆಚ್ಚು ಪ್ರಯಾಣಿಕರು ಮತ್ತು ಸಿಬ್ಬಂದಿಯನ್ನು ತುರ್ತಾಗಿ ರಕ್ಷಿಸಲಾಯಿತು.

ಇಂಡಿಗೊ ಸಂಸ್ಥೆಗೆ ಸೇರಿದ 6E 6017 ಸಂಖ್ಯೆಯ ವಿಮಾನ ಬೆಂಗಳೂರಿನಿಂದ ಚೆನ್ನೈಗೆ ಹೊರಡಲು ಸಿದ್ಧವಾಗಿತ್ತು. ವಿಮಾನ ರನ್‌ವೇ ಕಡೆಗೆ ಚಲಿಸುತ್ತಿದ್ದ ವೇಳೆ ಹೊಗೆ ಕಾಣಿಸಿಕೊಂಡಿದೆ. ಇದನ್ನು ಗಮನಿಸಿದ ಸಿಬ್ಬಂದಿ ತಕ್ಷಣವೇ ಎಚ್ಚೆತ್ತುಕೊಂಡು ವಿಮಾನವನ್ನು ನಿಲ್ಲಿಸಿ, ಮುನ್ನೆಚ್ಚರಿಕೆ ಕ್ರಮವಾಗಿ ಎಲ್ಲ ಪ್ರಯಾಣಿಕರು ಹಾಗೂ ಸಿಬ್ಬಂದಿಯನ್ನು ತುರ್ತು ನಿರ್ಗಮನ ಮಾರ್ಗಗಳ ಮೂಲಕ ನಿರ್ಗಮಿಸುವಂತೆ ಸೂಚಿಸಲಾಯಿತು.

ಘಟನೆಯಿಂದ ಕೆಲಕಾಲ ಆತಂಕದ ವಾತಾವರಣ ನಿರ್ಮಾಣವಾದರೂ, ಯಾವುದೇ ಅನಾಹುತ ಸಂಭವಿಸಿಲ್ಲ. ಯಾರಿಗೂ ಗಾಯಗಳಾಗಿಲ್ಲ ಎಂದು ವಿಮಾನ ನಿಲ್ದಾಣದ ಮೂಲಗಳು ಸ್ಪಷ್ಟಪಡಿಸಿವೆ.

ಹೊರಬಂದ ಪ್ರಯಾಣಿಕರನ್ನು ವಿಮಾನ ನಿಲ್ದಾಣದ ಟರ್ಮಿನಲ್‌ಗೆ ಕರೆದೊಯ್ಯಲಾಯಿತು. ಅಲ್ಲಿಯೇ ಅಗತ್ಯ ನೆರವು ಹಾಗೂ ಮಾಹಿತಿ ಒದಗಿಸಲಾಯಿತು.

ಘಟನೆ ನಂತರ ಇಂಡಿಗೊ ಸಂಸ್ಥೆಯು ಪ್ರಯಾಣಿಕರ ಪ್ರಯಾಣ ವ್ಯತ್ಯಯವಾಗದಂತೆ ಪರ್ಯಾಯ ವಿಮಾನದ ವ್ಯವಸ್ಥೆ ಮಾಡಿತು. ಬಳಿಕ ಅದೇ ಮಾರ್ಗದಲ್ಲಿ ಮತ್ತೊಂದು ವಿಮಾನವನ್ನು ಕಾರ್ಯಾಚರಣೆಗೆ ಬಳಸಲಾಯಿತು.

ವಿಮಾನದಲ್ಲಿ ಹೊಗೆ ಕಾಣಿಸಿಕೊಳ್ಳಲು ತಾಂತ್ರಿಕ ದೋಷ ಕಾರಣವೇ ಅಥವಾ ಬೇರೆ ಯಾವುದೇ ಸಮಸ್ಯೆಯೇ ಎಂಬುದು ಇನ್ನೂ ಸ್ಪಷ್ಟವಾಗಿಲ್ಲ. ವಿಮಾನವನ್ನು ತಾಂತ್ರಿಕ ತಪಾಸಣೆಗೆ ಒಳಪಡಿಸಲಾಗಿದೆ. ವಿಮಾನ ನಿಲ್ದಾಣ ಅಧಿಕಾರಿಗಳು ಹಾಗೂ ಇಂಡಿಗೊ ತಾಂತ್ರಿಕ ತಂಡ ಘಟನೆ ಕುರಿತು ತನಿಖೆ ಆರಂಭಿಸಿದೆ. ಈ ಘಟನೆ ಹೊರತುಪಡಿಸಿ ವಿಮಾನಗಳ ಸಂಚಾರದಲ್ಲಿ ವ್ಯತ್ಯಯ ಉಂಟಾಗಿಲ್ಲ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

17 ಪ್ರಕರಣ ದಾಖಲು, 23 ಮಂದಿ ಸೆರೆ

ಬೆಂಗಳೂರು: ಐಪಿಎಲ್ ಟಿ–20 ಕ್ರಿಕೆಟ್ ಪಂದ್ಯಾವಳಿ ವೇಳೆ ಬೆಟ್ಟಿಂಗ್‌ನಲ್ಲಿ ತೊಡಗಿದ್ದ 23 ಮಂದಿಯನ್ನು ಬಂಧಿಸಿ ಅವರ ವಿರುದ್ಧ 17 ಪ್ರಕರಣ ದಾಖಲು ಮಾಡಲಾಗಿದೆ.

ಸಿಸಿಬಿ ಪೊಲೀಸ್ ಠಾಣೆಯಲ್ಲಿ 9 ಪ್ರಕರಣಗಳು ದಾಖಲಾಗಿವೆ. ಉಳಿದ ಪ್ರಕರಣಗಳು ಬೇರೆ ಬೇರೆ ಠಾಣೆಗಳಲ್ಲಿ ದಾಖಲಾಗಿವೆ. ಆರೋಪಿಗಳಿಂದ ₹1.10 ಲಕ್ಷ ಮೌಲ್ಯದ ಏಳು ಮೊಬೈಲ್‌ಗಳು, ₹1.06 ಲಕ್ಷ ನಗದು ಹಾಗೂ ₹13.37 ಕೋಟಿ ಮೌಲ್ಯದ ಚಿಪ್ಸ್ ವಶಕ್ಕೆ ಪಡೆಯಲಾಗಿದೆ ಎಂದು ಮೂಲಗಳು ಹೇಳಿವೆ.

ಮುಂಬೈನ ರೇಡಿಯೊ ಜಾಕಿ ಆತ್ಮಹತ್ಯೆ

ಪ್ರಜಾವಾಣಿ ವಾರ್ತೆ



ಮನೀಷಾ ಪ್ರಸಾದ್

ಬೆಂಗಳೂರು: ರೇಡಿಯೊ ಜಾಕಿಯಾಗಿ ಕೆಲಸ ಮಾಡುತ್ತಿದ್ದ ಮಹಿಳೆಯೊಬ್ಬರು ನೇಣು ಹಾಕಿಕೊಂಡು ಆತ್ಮಹತ್ಯೆ ಮಾಡಿಕೊಂಡಿರುವ ಘಟನೆ ಅಮೃತಹಳ್ಳಿ ಠಾಣೆ ವ್ಯಾಪ್ತಿಯಲ್ಲಿ ನಡೆದಿದೆ.

ಮುಂಬೈನ ಮನೀಷಾ ಪ್ರಸಾದ್ (48) ಆತ್ಮಹತ್ಯೆ ಮಾಡಿಕೊಂಡವರು.

ಮೇ 23ರಂದು ಮಾನ್ಯತಾ ಟೆಕ್ ಪಾರ್ಕ್ ಆವರಣದ ಅಪಾರ್ಟ್‌ಮೆಂಟ್‌ನ ಫ್ಲ್ಯಾಟ್‌ನಲ್ಲಿ ಘಟನೆ ನಡೆದಿದೆ. ಮನೀಷಾ ಪ್ರಸಾದ್ ಅವರ ಪ್ರಿಯಕರ ಹರ್ಷವರ್ಧನ್ ಸಿಂಗ್ ಬನ್ಸಾಲ್ ವಿರುದ್ಧ ಪ್ರಕರಣ ದಾಖಲಾಗಿದೆ ಎಂದು ಪೊಲೀಸರು ಹೇಳಿದರು.

ಮುಂಬೈನಲ್ಲಿ ರೇಡಿಯೊ ಜಾಕಿಯಾಗಿದ್ದ ಮನೀಷಾ, ಕೌಟುಂಬಿಕ ವಿಚಾರಕ್ಕೆ 2024ರಲ್ಲಿ ಪತಿಯಿಂದ ವಿಚ್ಛೇದನ ಪಡೆದಿದ್ದರು. ನಂತರ, ಕಳೆದ ಏಪ್ರಿಲ್‌ನಲ್ಲಿ ನಗರಕ್ಕೆ ಆಗಮಿಸಿದ್ದರು. ಮಾನ್ಯತಾ ಟೆಕ್ ಪಾರ್ಕ್ ಬಳಿ ಹೊಸದಾಗಿ ಫ್ಲ್ಯಾಟ್ ಖರೀದಿಸಿ ಒಂಟಿಯಾಗಿ ವಾಸಿಸುತ್ತಿದ್ದರು. ಸಂಬಂಧಿಕರು ಕರೆ ಮಾಡಿದರೂ ಸ್ವೀಕರಿಸದ ಹಿನ್ನೆಲೆಯಲ್ಲಿ ಮನೆಗೆ ಬಂದು ನೋಡಿದಾಗ ಆತ್ಮಹತ್ಯೆ ಮಾಡಿಕೊಂಡಿರುವುದು ಗೊತ್ತಾಗಿದೆ ಎಂದು ಪೊಲೀಸರು ಹೇಳಿದರು.

ಪತಿಯಿಂದ ವಿಚ್ಛೇದನ ಪಡೆದುಕೊಂಡ ಬಳಿಕ ಮುಂಬೈನಲ್ಲಿ ಖಾಸಗಿ ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದ ಹಿಮಾಚಲ ಪ್ರದೇಶದ ಹರ್ಷವರ್ಧನ್ ಸಿಂಗ್ ಅವರನ್ನು ಪ್ರೀತಿಸುತ್ತಿದ್ದರು. ಬಳಿಕ ಇಬ್ಬರೂ ಸಹ ಜೀವನ ನಡೆಸುತ್ತಿದ್ದರು. ಆದರೆ, ಕಿರುಕುಳ ಹಾಗೂ ಹಿಂಸೆ ತಾಳಲಾರದೆ ಮನೀಷಾ ಕೆಲವು ದಿನಗಳ ಹಿಂದಷ್ಟೇ ನಗರಕ್ಕೆ ಬಂದು ಮಾನ್ಯತಾ ಟೆಕ್ ಪಾರ್ಕ್ ಆವರಣದಲ್ಲಿರುವ ಅಪಾರ್ಟ್‌ಮೆಂಟ್‌ನಲ್ಲಿ ಫ್ಲ್ಯಾಟ್ ಖರೀದಿಸಿದ್ದರು ಎಂದು ಮೂಲಗಳು ಹೇಳಿವೆ.

ಆತ್ಮಹತ್ಯೆಗೂ ಮುನ್ನ ಮನೀಷಾ ಅವರು ಮೂರು ಪುಟಗಳ ಮರಣಪತ್ರ ಬರೆದಿಟ್ಟಿದ್ದಾರೆ. ಅದರಲ್ಲಿ ತಮ್ಮ ಸಾವಿಗೆ ಹಿಮಾಚಲ ಪ್ರದೇಶದ ಹರ್ಷವರ್ಧನ್ ಸಿಂಗ್ ಬನ್ಸಾಲ್ ಕಾರಣ ಎಂದು ಉಲ್ಲೇಖಿಸಿದ್ದಾರೆ. ಘಟನಾ ಸ್ಥಳಕ್ಕೆ ಭೇಟಿ ನೀಡಿದ ಅಮೃತಹಳ್ಳಿ ಠಾಣೆ ಪೊಲೀಸರು ಪರಿಶೀಲಿಸಿ, ಮರಣ ಪತ್ರ ಹಾಗೂ ಮನೀಷಾ ಅವರ ಮೊಬೈಲ್ ವಶಕ್ಕೆ ಪಡೆದುಕೊಂಡಿದ್ದಾರೆ ಎಂದು ಮೂಲಗಳು ಹೇಳಿವೆ. ಅಮೃತಹಳ್ಳಿ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಕಾಂಪೌಂಡ್ ಕುಸಿದು ಕಾರ್ಮಿಕ ಸಾವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಚಿಕ್ಕಬಾಣಸವಾಡಿಯಲ್ಲಿ ನಿರ್ಮಾಣ ಹಂತದ ಅಪಾರ್ಟ್‌ಮೆಂಟ್ ಕಟ್ಟಡದ ಕಾಂಪೌಂಡ್ ಕುಸಿದು ಕಾರ್ಮಿಕರೊಬ್ಬರು ಮೃತಪಟ್ಟಿದ್ದು, ಮತ್ತೊಬ್ಬರು ಗಾಯಗೊಂಡಿದ್ದಾರೆ.

ರಾಯಚೂರು ಜಿಲ್ಲೆಯ ಪಂಚಮುಖಿ ಗ್ರಾಮದ ಭೀಮೇಶ್ (17) ಮೃತಪಟ್ಟವರು. ಗುಂಜಾಳ ಗ್ರಾಮದ ದೂಲಯ್ಯ (32) ಗಾಯಗೊಂಡಿದ್ದಾರೆ. ಅವರು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಸೋಮವಾರ ಮಧ್ಯಾಹ್ನ ಈ ಘಟನೆ ನಡೆದಿದೆ ಎಂದು ಪೊಲೀಸರು ತಿಳಿಸಿದರು.

ಕಾಂಪೌಂಡ್ ಬಳಿ ಸಂಗ್ರಹವಾಗಿದ್ದ ಮಳೆನೀರು ಮತ್ತು ಮಣ್ಣಿನ ತೆರವು ಕಾರ್ಯದಲ್ಲಿ ಆರು ಕಾರ್ಮಿಕರು ಮಗ್ನರಾಗಿದ್ದರು. ಮಧ್ಯಾಹ್ನ 2ರ ಸುಮಾರಿಗೆ, ಕಾಂಪೌಂಡ್ ಇದ್ದಕ್ಕಿದ್ದಂತೆಯೇ ಕಾರ್ಮಿಕರ ಮೇಲೆ ಕುಸಿದು ಬಿದ್ದಿದೆ. ನಾಲ್ವರು ಸ್ಥಳದಿಂದ ಓಡಿಹೋಗಿ ಪಾರಾಗಿದ್ದಾರೆ. ಇಬ್ಬರು ಅವಶೇಷಗಳಡಿ ಸಿಲುಕಿದ್ದರು. ಭೀಮೇಶ್ ಹೊರಕ್ಕೆ ಬರಲು ಸಾಧ್ಯವಾಗದೇ ಗಂಭೀರವಾಗಿ ಗಾಯಗೊಂಡಿದ್ದರು. ಅವಶೇಷಗಳನ್ನು ತೆರವುಗೊಳಿಸಿ, ಆಸ್ಪತ್ರೆಗೆ ದಾಖಲು ಮಾಡಲಾಯಿತು. ಅಲ್ಲಿ ಭೀಮೇಶ್ ಮೃತಪಟ್ಟರು ಎಂದು ಮೂಲಗಳು ಹೇಳಿವೆ.

ಕಳಪೆ ಕಾಮಗಾರಿ ಹಾಗೂ ಕಟ್ಟಡ ಮಾಲೀಕರ ನಿರ್ಲಕ್ಷ್ಯವೇ ದುರಂತಕ್ಕೆ ಕಾರಣವಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ. ಕಟ್ಟಡದ ಮಾಲೀಕರ ವಿರುದ್ಧ ಬಾಣಸವಾಡಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ

email: classifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

CONNECT ಕ್ಲಾಸಿಫೈಡ್ಸ್

PUBLIC NOTICE

ಸಾರ್ವಜನಿಕ ಪ್ರಕಟಣೆ
ಈ ಮೂಲಕ ಸಾರ್ವಜನಿಕರಿಗೆ ತಿಳಿಸಲಾಗುತ್ತದೆ: ನನ್ನ ಕಕ್ಷಿದಾರರಾದ ಶ್ರೀ ಮಹೇಶ್ ಬಿ. ಪಟೇಲ್, S/o ಬಿ.ಬಿ. ಪಟೇಲ್, ನಿವಾಸ: ನಂ. 2, ಎ.ಎ. ರಸ್ತೆ, ಬಸವನಗುಡಿ, ಬೆಂಗಳೂರು – 560 004, ಇವರು ಅಬ್ಬೂರು ಗ್ರಾಮ, ಕಸಾಬಾ ಹೋಬಳಿ, ಚನ್ನಪಟ್ಟಣ ತಾಲ್ಲೂಕಿನ ವ್ಯಾಪ್ತಿಯ ಸರ್ವೆ ಸಂಖ್ಯೆ 300/* ರ ಕೃಷಿ ಜಮೀನಿನ (ಅಳತೆ 38 ಗುಂಟಾ) ಸಂಪೂರ್ಣ ಹಕ್ಕುದಾರರಾಗಿದ್ದು, 2008 ರಲ್ಲಿ ನೋಂದಾಯಿತ ಮಾರಾಟ ಪತ್ರದ ಮೂಲಕ (Reg. No. CAN-1-00808/2008-09) ಪಡೆದುಕೊಂಡಿದ್ದಾರೆ. ಸೇತುಮಾಧವರಾವ್ ಅವರಿಂದ ದ್ಯಾವರಸೇಗೌಡ ಅವರ ಪರವಾಗಿ ಮಾಡಲಾದ ಹಿಂದಿನ ಮೂಲ ಮಾರಾಟ ಪತ್ರ ಕಳೆದು ಹೋಗಿದೆ. ಈ ಸಂಬಂಧ ದೂರು ದಾಖಲಿಸಲಾಗಿದೆ (No. 2211725/2026, ದಿನಾಂಕ 20.05.2026). ಸಾರ್ವಜನಿಕರು ಮೇಲ್ಕಂಡ ಕಳೆದುಹೋದ ದಾಖಲೆ ಆಧಾರದ ಮೇಲೆ ಯಾವುದೇ ವ್ಯವಹಾರ ನಡೆಸಬಾರದೆಂದು ಎಚ್ಚರಿಕೆ ನೀಡಲಾಗುತ್ತದೆ. ಈ ಕುರಿತು ಯಾರಿಗಾದರೂ ಹಕ್ಕು ಅಥವಾ ಮಾಹಿತಿ ಇದ್ದಲ್ಲಿ, 7 ದಿನಗಳೊಳಗೆ ಕೆಳಕಂಡ ವ್ಯಕ್ತಿಗೆ ಲಿಖಿತವಾಗಿ ತಿಳಿಸಬೇಕು.
ಮಾರ್ತೇಶ ಜಿ.ಎಸ್., ವಕೀಲರು
#70, 2ನೇ ಮೇನ್ ರಸ್ತೆ, ಕೆ.ಆರ್. ಗಾರ್ಡನ್, ಮುರ್ಗೇಶಪಾಳ್ಯ, ಬೆಂಗಳೂರು – 560017
ದೂರವಾಣಿ: 98862 64750
ಬೆಂಗಳೂರು ದಿ: 26–05–2026

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
Advertisement Manager
The Printers (Mysore) Pvt. Ltd.
Bengaluru

JOB OPPORTUNITIES

General

WANTED
A Leading Layouts Real Estate developer is looking for 100% Experienced / Retired / Senior / Independent capacity &100% Dedicated
1) Revenue/Liaison
2) Civil Advocate
full time candidates for Bangalore office. Good salary will be given.
Please Mail detailed resume to
developersdirector@gmail.com

WANTED FOR TSS Private Ltd. 1. ACCOUNTS EXECUTIVE- 2 yrs + exp. 2. MARKETING EXECUTIVE (with motorcycle)- 1- 2 yrs exp. Company based in Indiranagar. Whatsapp/ Call: 9845694772/ 9845293771. Mail: biswas@thumpserve.com

Teachers/ Professors

TEACHERS PRE-PRIMARY PRIMARY ALL SUBJECTS PT TEACHERS ADMIN ACCOUNTS L.R CAMBRIDGE SCHOOL WILSON GARDEN- 9663355532

POORNAPRAJNA EDUCATION CENTRE, INDIRANAGAR
(Promoted & Managed by Udupi Shree Adamaru Matha Education Council)
CA Site No. 48, New Thippasandra, HAL 3rd Stage, Bengaluru -75
CBSE Affiliated school, Affiliation No.831617
CBSE affiliated school Invites application for the following posts:
HINDI TEACHER
BA/ MA in Hindi with B.Ed/ M.Ed- Min 1 year experience
PRIMARY ASSISTANT TEACHER
Any Degree with Min 1 year experience
PRE-PRIMARY MAIN TEACHER
Any Degree with D.Ed/ NTT
PRE-PRIMARY ASSISTANT TEACHER
PUC with D.Ed/ NTT (Graduates Preferred)
Apply immediately to Hon. Secretary
Email: contact.indiranagar@ppec.edu.in
last date 4th June 2026, Thursday

GURUKULA INTERNATIONAL SCHOOL Requires English, Science and Computer Teachers for Primary. 7829338292 Near Magadi Road Metro Station, Bangalore-560023

WANTED EXPERIENCED science teacher for high school in Electronic City. For more details contact: 8197984094/ 7406532264

URGENTLY REQUIRED experienced TEACHERS for High School Social, Computer and Pre-primary teacher for MOTHER MARY ENGLISH SCHOOL, Thippasandra Bangalore. Contact: 080-25281661, 8762038545

WANTED ACADEMIC Head, Clerk, PT, Yoga Teachers and Teachers for Kindergarten, Primary/High School, JP.Nagar, Call-9845042249

REQUIRED: TEACHER'S for Nursery, Primary & High school for SRI_ANNAPURNA VIDYAANIKETAN, Opposite PES_University Veerabhadranagar, BSK 3rd_stage, Bangalore-85. Call-7348894111

WANTED TRAINED EXPERIENCED HIGH SCHOOL TEACHERS FOR PHYSICAL EDUCATION K.R.L.S. ENGLISH HIGH SCHOOL, Domlur-Layout, Bangalore-71. Mobile:9513777730 krlsschools@gmail.com

Hotel

UNCLE'S KITCHEN, Near BTM wanted Immediately RESTAURANT MANAGER, MARKETING EXECUTIVES, Work from Home EXECUTIVES. Very Good Salary. Call: 99000-54468

REAL ESTATE SELLING

House

Mysore

NEW 53 Square unfurnished House urgent Sale at Nanjangud Owner going aboard Call: 91646 73276

BUILDERS ESSENTIAL

Water Proofing

LEAKAGE... LEAKAGE... Old/New Building, Sump, Bathroom, Wallcrack, Skylight, Terrace Waterproofing done by New Technology- 9880916988

PERSONAL

Change of Name

CHANGE OF NAME
I, POORNIMA B S, D/o H.N Padmavathamma and W/o Manoj Kumar A, aged 29 years old, R/a #95, Mathru Krupa, 3rd Cross, Telecom Layout, K P Agrahara, Vijayanagar, Bengaluru-560023, have changed my name to **S. POORNAA MANOJ** vide affidavit dated 25.05.2026 sworn before notary Deepa. M., Bangalore.

I, PRAFULLA VADIRAJA RAO R/o, #56/2, ASHIRWAD, Reservoir Street, Basavanagudi, Bengaluru-04 have changed my name as PRAFULLA Vide affidavit dated 25/05/2026 before Notary Jayappa. A, Bangalore

USED SCHOOL FURNITURE FOR SALE
GOOD QUALITY GREAT VALUE
WELL MAINTAINED • DURABLE • READY TO USE
IDEAL FOR SCHOOLS, COLLEGES AND NGO-RUN INSTITUTIONS

Good Condition | Affordable Price | Immediate Sale | Sturdy and Durable
+91 87541 02045
ravisankar.c@kumarans.org
SRI KUMARAN CHILDREN'S HOME EDUCATIONAL COUNCIL
Tata Silk Farm, Basavanagudi, Bangalore 560 004.

I, ZAFERULLA KHAN S/o. Amanulla Khan Aged 63 years resident of #802, Near Someshwara Temple, Kote, Kolar- 563101. I have changed my name to ZAFRULLA KHAN vide affidavit dated 20.05.2026 before Notary Venkataswamy Kolar. Henceforth I shall be called as ZAFRULLA KHAN only.

EDUCATION
To Place your Classified Ads Contact:
9845114560

Lost

DOCUMENT LOST
I, **Gopinath K,** residing at No. 634, 4th C Main, OMBR Layout, Banasawadi, Bengaluru-560043, have lost my **Original Post Diploma in Computer Engineering Marks Card & Certificate bearing register No.682, issued by the Dept. of Technical Education, Bengaluru in the year 1987.** If found please contact: **8951765890**

DOCUMENT LOST
I, **Nathuram Khatri,** residing at #13, 3rd Floor, 20th Cross, R T Street, Bengaluru - 560053, have lost my **Original Sale Deed Document No./ Identification: 2230.** While in transit. If found please contact: **9739933994**

DH Classifieds More value, more impact ಪ್ರಜಾವಾಣಿ
RECRUITMENT
BOOK YOUR JOB ADS IN DECCAN HERALD ALL KARNATAKA + PRAJAVANI BENGALURU CITY
CLASSIFIED DISPLAY
@ 550/-* PER SQCM
SINGLE / DOUBLE / MULTIPLE COLUMN
*Conditions apply
www.dhclassifieds.com
BOOK NOW
For more details contact:
9845114560
9886213331

20 ದಿನ– 'ಕೈ' ಮೂರು ಪ್ರಮುಖ ನಿರ್ಧಾರ

ಕರ್ನಾಟಕದ ನಾಯಕತ್ವ ಬಿಕ್ಕಟ್ಟು: ಆರು ತಿಂಗಳ ಸೊಲ್ಲಿನ ನಂತರದ ಬೆಳವಣಿಗೆ

ಪ್ರಜಾವಾಣಿ ವಾರ್ತೆ

ನವದೆಹಲಿ: ಕಳೆದ 20 ದಿನಗಳಲ್ಲಿ ತಮಿಳುನಾಡು, ಕೇರಳಂ ಹಾಗೂ ಕರ್ನಾಟಕದ ವಿಷಯದಲ್ಲಿ ಹೈಕಮಾಂಡ್ ನಿರ್ಧಾರ ತೆಗೆದುಕೊಂಡು ತಾನು ದುರ್ಬಲ ಅಲ್ಲ ಎಂಬ ಸಂದೇಶ ರವಾನಿಸಿದೆ.

ಮಧ್ಯ ಪ್ರದೇಶ, ರಾಜಸ್ಥಾನ, ಛತ್ತೀಸಗಢ ರಾಜ್ಯಗಳಲ್ಲಿ ನಾಯಕತ್ವ ಬಿಕ್ಕಟ್ಟು ಬಿಗಡಾಯಿಸಿದ್ದಾಗ ಹೈಕಮಾಂಡ್ ಸ್ಪಷ್ಟ ತೀರ್ಮಾನ ತೆಗೆದುಕೊಂಡಿರಲಿಲ್ಲ. ರಾಜ್ಯ ನಾಯಕರ ಕಚ್ಚಾಟದ ಪರಿಣಾಮವಾಗಿ ಮಧ್ಯ ಪ್ರದೇಶದಲ್ಲಿ ಸರ್ಕಾರ ಪತನಗೊಂಡಿತ್ತು. 2023ರಲ್ಲಿ ನಡೆದ ಚುನಾವಣೆಯಲ್ಲಿ ರಾಜಸ್ಥಾನ ಹಾಗೂ ಛತ್ತೀಸಗಢದಲ್ಲಿ ಪಕ್ಷ ಅಧಿಕಾರ ಕಳೆದುಕೊಂಡಿತ್ತು.

ಕರ್ನಾಟಕ ರಾಜ್ಯದ ನಾಯಕತ್ವ ಬಿಕ್ಕಟ್ಟು ಬಗೆಹರಿಸುವಂತೆ ಮುಖ್ಯಮಂತ್ರಿ ಹಾಗೂ ಉಪ ಮುಖ್ಯಮಂತ್ರಿ ಬಣದ ನಾಯಕರು ಕಳೆದ ಆರು ತಿಂಗಳಿಂದ ಹೈಕಮಾಂಡ್‌ಗೆ ದುಂಬಾಲು ಬಿದ್ದಿದ್ದರು. ಈ ಬಗ್ಗೆ ರಾಹುಲ್ ಅಂತಿಮ ತೀರ್ಮಾನ ತೆಗೆದುಕೊಳ್ಳಲಿದ್ದಾರೆ ಎಂದಷ್ಟೇ ಖರ್ಗೆ ಅವರು ರಾಜ್ಯದ ನಾಯಕರಿಗೆ ತಿಳಿಸಿದ್ದರು. ಆದರೆ, ಪಂಚ ರಾಜ್ಯಗಳ ಚುನಾವಣೆ ಮುಗಿಯುವವರೆಗೆ ರಾಜ್ಯ ನಾಯಕರ ಅಹವಾಲನ್ನು ರಾಹುಲ್ ಆಲಿಸಿರಲಿಲ್ಲ. ಭೇಟಿಗೂ ಅವಕಾಶ ನೀಡದೆ ಅಂತರ ಕಾಯ್ದುಕೊಂಡಿದ್ದರು. ಆದರೆ, ಪಂಚ ರಾಜ್ಯದ ಚುನಾವಣೆ ಬಳಿಕ ಹೈಕಮಾಂಡ್ ಫೀನಿಕ್ಸ್‌ನಂತೆ ಮೇಲೆದ್ದಿದೆ.

ತಮಿಳುನಾಡಿನಲ್ಲಿ ಟಿವಿಕೆ ಜತೆಗೆ ಚುನಾವಣಾ ಪೂರ್ವ ಮೈತ್ರಿ ಮಾಡಿಕೊಳ್ಳಲು ರಾಹುಲ್ ಗಾಂಧಿ ಹಾಗೂ ಇತರ ನಾಯಕರು ಉತ್ಸುಕತೆ ತೋರಿದ್ದರು. ಆದರೆ, ಖರ್ಗೆ, ರಾಜ್ಯಸಭಾ ಸದಸ್ಯ ಪಿ.ಚಿದಂಬರಂ ಮತ್ತಿತರ ನಾಯಕರು ಒಪ್ಪಿರಲಿಲ್ಲ. ಡಿಎಂಕೆ ಜತೆ ಮೈತ್ರಿ ಮುಂದುವರಿಸಿತ್ತು. ಆದರೆ, ಮೈತ್ರಿಕೂಟಕ್ಕೆ ಹೀನಾಯ ಸೋಲಾಗಿತ್ತು. ಚುನಾವಣಾ ಫಲಿತಾಂಶ ಬಂದ ಕೂಡಲೇ ಟಿವಿಕೆ ಜತೆಗೆ ಮೈತ್ರಿ ಮಾಡಿಕೊಳ್ಳಲು ಪಕ್ಷ ತೀರ್ಮಾನಿಸಿತು. ಅದು ಸಹ ಒಂದೇ ದಿನದಲ್ಲಿ. ಪಕ್ಷವು ತಮಿಳುನಾಡಿನಲ್ಲಿ 59 ವರ್ಷಗಳ ನಂತರ ಸರ್ಕಾರದ ಭಾಗವಾಗಲು ಟಿವಿಕೆ ಜೊತೆ ಕೈಜೋಡಿಸಿತು.

ಕೇರಳಂ ಮುಖ್ಯಮಂತ್ರಿ ಸ್ಥಾನಕ್ಕೆ ವಿ.ಡಿ.ಸತೀಶನ್, ರಮೇಶ ಚೆನ್ನಿತ್ತಾಲ ಹಾಗೂ ಪಕ್ಷದ ಪ್ರಧಾನ ಕಾರ್ಯದರ್ಶಿ ಕೆ.ಸಿ.ವೇಣುಗೋಪಾಲ್ ಪ್ರಬಲ ಆಕಾಂಕ್ಷಿಗಳಾಗಿದ್ದರು. ವೇಣುಗೋಪಾಲ್ ಮುಖ್ಯಮಂತ್ರಿಯಾಗಬೇಕು ಎಂದು ಹಲವು ಶಾಸಕರು ಅಭಿಪ್ರಾಯ ವ್ಯಕ್ತಪಡಿಸಿದ್ದರು. ಸಂಕಷ್ಟದ ಕಾಲದಲ್ಲಿ ಪಕ್ಷ ಸಂಘಟಿಸಿದ್ದ ವಿ.ಡಿ.ಸತೀಶನ್ ಅವರನ್ನು ಮುಖ್ಯಮಂತ್ರಿಯನ್ನಾಗಿ ಮಾಡಬೇಕೆಂದು ಮೈತ್ರಿ ಕೂಟದ ನಾಯಕರು ಪಟ್ಟು ಹಿಡಿದಿದ್ದರು. ಹೀಗಾಗಿ, ಕಗ್ಗಂಟು ಬಗೆಹರಿದಿರಲಿಲ್ಲ. ಅದಾದ ನಂತರ ವೇಣುಗೋಪಾಲ್ ಅವರನ್ನು ರಾಹುಲ್ ಮನವೊಲಿಸಿದ್ದರು.

ಈ ಬಿಕ್ಕಟ್ಟು ಬಗೆಹರಿದ ಬೆನ್ನಲ್ಲೇ, ಕರ್ನಾಟಕದ ನಾಯಕತ್ವ ಗೊಂದಲ ಬಗೆಹರಿಸಲು ಪಕ್ಷ ತೀರ್ಮಾನಿಸಿತ್ತು. ಖರ್ಗೆ, ವೇಣುಗೋಪಾಲ್ ಹಾಗೂ ಪಕ್ಷದ ರಾಜ್ಯ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೆವಾಲಾ ಜತೆಗೆ ಭಾನುವಾರ ಸಭೆ ನಡೆಸಿದ್ದ ರಾಹುಲ್ ಅವರು ಅಭಿಪ್ರಾಯ ಸಂಗ್ರಹಿಸಿದ್ದರು. ವೇಣುಗೋಪಾಲ್ ಅವರು ಸಿದ್ದರಾಮಯ್ಯ ಅವರಿಗೆ ಕರೆ ಮಾಡಿ ಮಂಗಳವಾರ ದೆಹಲಿಗೆ ಬರುವಂತೆ ಬುಲಾವ್ ನೀಡಿದ್ದರು. ಮಂಗಳವಾರ ಸರಣಿ ಸಭೆಗಳನ್ನು ನಡೆಸಿದ ರಾಹುಲ್ ಅವರು ಸಿದ್ದರಾಮಯ್ಯ ಅವರ ಮನವೊಲಿಸುವಲ್ಲಿ ಯಶಸ್ವಿಯಾದರು ಎಂದು ಮೂಲಗಳು ತಿಳಿಸಿವೆ.

ಕೆಪಿಸಿಸಿ ಅಧ್ಯಕ್ಷ ಗಾದಿಗೆ ಸತೀಶ ಜಾರಕಿಹೊಳಿ?

ನವದೆಹಲಿ: ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ಮುಖ್ಯಮಂತ್ರಿಯಾದರೆ ಲೋಕೋಪಯೋಗಿ ಸಚಿವ ಸತೀಶ ಜಾರಕಿಹೊಳಿ ಅವರು ಕೆಪಿಸಿಸಿ ಅಧ್ಯಕ್ಷರಾಗುವ ಸಾಧ್ಯತೆ ಇದೆ.

ಶಿವಕುಮಾರ್ ಅವರು ಲೋಕಸಭಾ ಚುನಾವಣೆಯ ವರೆಗೆ ಕೆಪಿಸಿಸಿ ಅಧ್ಯಕ್ಷರಾಗಿ ಮುಂದುವರಿಯಲಿದ್ದಾರೆ ಎಂದು ಹೈಕಮಾಂಡ್ 2023ರಲ್ಲಿ ಸರ್ಕಾರ ರಚನೆಯ ಸಂದರ್ಭದಲ್ಲಿ ತಿಳಿಸಿತ್ತು. ಲೋಕಸಭಾ ಚುನಾವಣೆಯ ಬಳಿಕ ಶಿವಕುಮಾರ್ ಅವರನ್ನು ಅಧ್ಯಕ್ಷ ಗಾದಿಯಿಂದ ಇಳಿಸಲು ಸಿದ್ದರಾಮಯ್ಯ ಬಣ ಪ್ರಯತ್ನ ನಡೆಸಿತ್ತು. ಅಧಿಕಾರ ಹಸ್ತಾಂತರದ ಗೊಂದಲ ಇತ್ಯರ್ಥವಾಗುವ ವರೆಗೆ ಕೆಪಿಸಿಸಿ ಅಧ್ಯಕ್ಷ ಸ್ಥಾನ ಬಿಟ್ಟುಕೊಡುವುದಿಲ್ಲ ಎಂದು ಶಿವಕುಮಾರ್ ಸ್ಪಷ್ಟಪಡಿಸಿದ್ದರು.

ಇನ್ನೊಂದೆಡೆ, ಜಾರಕಿಹೊಳಿ ಅವರು ಕೆಪಿಸಿಸಿ ಅಧ್ಯಕ್ಷ ಸ್ಥಾನಕ್ಕಾಗಿ ಲಾಬಿ ನಡೆಸಿದ್ದರು. ಅಧ್ಯಕ್ಷ ಸ್ಥಾನ ನೀಡಿದರೆ ಸಚಿವ ಸ್ಥಾನ ತ್ಯಾಗ ಮಾಡುವುದಾಗಿ ಹೈಕಮಾಂಡ್‌ಗೆ ತಿಳಿಸಿದ್ದರು. 2028ಕ್ಕೆ ಮುಖ್ಯಮಂತ್ರಿ ಸ್ಥಾನದ ಆಕಾಂಕ್ಷಿ ಎಂದು ಹಲವು ಸಲ ಹೇಳಿಕೆ ನೀಡಿದ್ದರು.

ಮೂರು ಅಥವಾ ಡಿಸಿಎಂ?: ಮೂರು ಅಥವಾ ನಾಲ್ಕು ಡಿಸಿಎಂ ಹುದ್ದೆಗಳನ್ನು ಸೃಷ್ಟಿಸುವ ಸಂಭವ ಇದೆ. ಲಿಂಗಾಯತ, ಮುಸ್ಲಿಂ, ದಲಿತ ಹಾಗೂ ಹಿಂದುಳಿದ ಸಮುದಾಯಕ್ಕೆ ಆದ್ಯತೆ ನೀಡುವ ಸಾಧ್ಯತೆ ಇದೆ. ಸಿದ್ದರಾಮಯ್ಯ ತ್ಯಾಗಕ್ಕೆ ಪ್ರತಿಯಾಗಿ ವಿಧಾನ ಪರಿಷತ್ ಸದಸ್ಯ ಯತೀಂದ್ರ ಸಿದ್ದರಾಮಯ್ಯ ಅವರಿಗೆ ಸಚಿವ ಸ್ಥಾನ ನೀಡುವುದಾಗಿ ಹೈಕಮಾಂಡ್ ಭರವಸೆ ನೀಡಿದೆ ಎಂದು ಮೂಲಗಳು ತಿಳಿಸಿವೆ.

ರಾಜ್ಯಸಭೆಗೆ ಯಾರು?: ರಾಜ್ಯಸಭೆ ಚುನಾವಣೆಗೆ ಮೂವರು ಅಭ್ಯರ್ಥಿಗಳ ಹೆಸರನ್ನು ಬಹುತೇಕ ಅಖೈರುಗೊಳಿಸಲಾಗಿದೆ. ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಪುನರಾಯ್ಕೆಯಾಗಲಿದ್ದಾರೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಹೆಸರೂ ಕೇಳಿಬಂದಿದೆ. ವಿಧಾನ ಪರಿಷತ್ ಸದಸ್ಯ ಬಿ.ಕೆ. ಹರಿಪ್ರಸಾದ್, ಮಾಜಿ ಶಾಸಕಿ ಅಂಜಲಿ ನಿಂಬಾಳಕರ ಹೆಸರು ಮುಂಚೂಣಿಯಲ್ಲಿದೆ. ಮೂರನೇ ಅಭ್ಯರ್ಥಿಯಾಗಿ ಅನ್ಯ ರಾಜ್ಯದವರಿಗೆ ಮಣೆ ಹಾಕಲು ಹೈಕಮಾಂಡ್ ಮುಂದಾಗಿದೆ.

ವಿಧಾನ ಪರಿಷತ್ ಆಕಾಂಕ್ಷಿಗಳಿಂದ ಲಾಬಿ

ವಿಧಾನ ಪರಿಷತ್ ಚುನಾವಣಾ ವೇಳಾಪಟ್ಟಿ ಪ್ರಕಟಗೊಂಡ ಕೂಡಲೇ ಟಿಕೆಟ್ ಆಕಾಂಕ್ಷಿಗಳು ರಾಷ್ಟ್ರ ರಾಜಧಾನಿಯಲ್ಲಿ ಲಾಬಿ ನಡೆಸಿದರು.

ಮುಖಂಡರಾದ ಎ.ಎನ್.ನಟರಾಜ ಗೌಡ, ಶಾಕಿರ್ ಸನದಿ, ಬಾಲಭವನದ ಅಧ್ಯಕ್ಷ ಬಿ.ಆರ್. ನಾಯ್ಡು ಮತ್ತಿತರರು ಎಐಸಿಸಿ ಕಾರ್ಯದರ್ಶಿ ಅಭಿಷೇಕ್ ದತ್ ಅವರನ್ನು ಭೇಟಿ ಮಾಡಿ ಮನವಿ ಸಲ್ಲಿಸಿದರು. ಎಐಸಿಸಿ ಎಸ್‌ಸಿ ವಿಭಾಗದ ರಾಷ್ಟ್ರೀಯ ಸಂಯೋಜಕ ಆನಂದ್ ಕುಮಾರ್ ಅವರು ಮಲ್ಲಿಕಾರ್ಜುನ ಖರ್ಗೆ ಅವರನ್ನು ಭೇಟಿ ಮಾಡಿ ಪಕ್ಷ ಸಂಘಟನೆ, ಮಹಾರಾಷ್ಟ್ರದಲ್ಲಿ ಉಸ್ತುವಾರಿಯಾಗಿ ಕೈಗೊಂಡ ಕ್ರಮಗಳ ಕುರಿತು ವರದಿ ಸಲ್ಲಿಸಿದರು. ವಿಧಾನ ಪರಿಷತ್‌ಗೆ ತಮ್ಮನ್ನು ಪರಿಗಣಿಸುವಂತೆ ವಿನಂತಿಸಿದರು. ಮಹಿಳಾ ಮುಖಂಡರ ನಿಯೋಗವು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಅವರಿಗೆ ಮನವಿ ಸಲ್ಲಿಸಿತು.

ಎ.ಐ ಶ್ರೇಷ್ಠತಾ ಕೇಂದ್ರಗಳ ಕಾರ್ಯಾಗಾರ

ಈ ತಂತ್ರಜ್ಞಾನದ ಮೂಲಕ ಸಾರ್ವಜನಿಕ ಸೇವೆಯ ವಿತರಣೆ, ಆಡಳಿತಾತ್ಮಕ ಪ್ರತಿಕ್ರಿಯೆ ಮತ್ತು ಒಳಗೊಳ್ಳುವಿಕೆಯನ್ನು ಸುಧಾರಿಸಬೇಕಾಗಿದೆ

ಎಐ ಸಕ್ರಿಯ ಆಡಳಿತ ರಾಜ್ಯವಾಗಿ ಕರ್ನಾಟಕ: ಶಾಲಿನಿ ರಜನೀಶ್

ಬೆಂಗಳೂರು: 'ಕರ್ನಾಟಕವನ್ನು ಎಐ (ಕೃತಕ ಬುದ್ಧಿಮತ್ತೆ) ತಂತ್ರಜ್ಞಾನದ ಹಬ್ ಮಾತ್ರವಲ್ಲ, ಎಐನ ಸಕ್ರಿಯ ಆಡಳಿತ ರಾಜ್ಯವನ್ನಾಗಿ ರೂಪಿಸುವುದು ನಮ್ಮ ಉದ್ದೇಶ' ಎಂದು ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್ ಹೇಳಿದರು. ಇ-ಆಡಳಿತವು ಮಂಗಳವಾರ ಹಮ್ಮಿಕೊಂಡಿದ್ದ ಕೃತಕ ಬುದ್ಧಿಮತ್ತೆ ಶ್ರೇಷ್ಠತಾ ಕೇಂದ್ರಗಳ ಕಾರ್ಯಾಗಾರ ಉದ್ಘಾಟಿಸಿ ಅವರು ಮಾತನಾಡಿದರು.

ಎಐ ಅನ್ನುವುದು ಕೇವಲ ತಂತ್ರಜ್ಞಾನದ ಚರ್ಚೆಯಲ್ಲ. ನಂಬಿಕೆ, ಜವಾಬ್ದಾರಿ, ಪಾರದರ್ಶಕತೆ ಮತ್ತು ನಾಗರಿಕರ ಮೇಲಿನ ಪ್ರಭಾವದ ಕುರಿತಾಗಿದೆ. ಈ ತಂತ್ರಜ್ಞಾನದ ಮೂಲಕ ಸಾರ್ವಜನಿಕ ಸೇವೆಯ ವಿತರಣೆ, ಆಡಳಿತಾತ್ಮಕ ಪ್ರತಿಕ್ರಿಯೆ ಮತ್ತು ಒಳಗೊಳ್ಳುವಿಕೆಯನ್ನು ಸುಧಾರಿಸಬೇಕಾಗಿದೆ ಎಂದರು.

ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆಯ (ಇ-ಆಡಳಿತ) ಪ್ರಧಾನ ಕಾರ್ಯದರ್ಶಿ ಪಂಕಜ್ ಕುಮಾರ್ ಪಾಂಡೆ ಮಾತನಾಡಿ, ಇ-ಆಡಳಿತ ಪರಿಸರ ವ್ಯವಸ್ಥೆಯ ವಿಭಾಗಗಳಾದ ಇ-ಆಡಳಿತ ಕೇಂದ್ರ, ಸ್ಮಾರ್ಟ್ ಗವರ್ನೆನ್ಸ್ ಕೇಂದ್ರ, ಕರ್ನಾಟಕ ರಾಜ್ಯ ರಿಮೋಟ್ ಸೆನ್ಸಿಂಗ್ ಅಪ್ಲಿಕೇಶನ್ ಕೇಂದ್ರ ಮತ್ತು ನಾಗರಿಕ ಸೇವೆಗಳ ಎಲೆಕ್ಟ್ರಾನಿಕ್ಸ್ ವಿತರಣೆ ನಿರ್ದೇಶನಾಲಯ ಸಮನ್ವಯದಿಂದ ಕಾರ್ಯನಿರ್ವಹಿಸುತ್ತಿವೆ ಎಂದರು.

ಮರು ಬಳಕೆ ಮಾಡಬಹುದಾದ ಎಐ ಸೇವೆಗಳು ಮತ್ತು ಬಹುಭಾಷಾ ಇಂಟರ್‌ಫೇಸ್‌ಗಳನ್ನು ಬೆಂಬಲಿಸಲು ಕರ್ನಾಟಕ ಎಐ ಸ್ಟಾಕ್ ಅನ್ನು ಅಭಿವೃದ್ಧಿಪಡಿಸಲಾಗುತ್ತಿದೆ. ಕರ್ನಾಟಕದ ಶಕ್ತಿ ಕೇವಲ ತಂತ್ರಜ್ಞಾನ ಸೃಷ್ಟಿಯಲ್ಲಷ್ಟೇ ಅಲ್ಲ, ಅದನ್ನು ಜನ ಸಾಮಾನ್ಯರ ಒಳಿತಿಗಾಗಿ ಅನ್ವಯಿಸುವುದರಲ್ಲಿದೆ ಎಂದು ಹೇಳಿದರು.

ಐಟಿ-ಬಿಟಿ ಇಲಾಖೆ ಕಾರ್ಯದರ್ಶಿ ಎನ್.ಮಂಜುಳಾ ಮಾತನಾಡಿ, 'ಕರ್ನಾಟಕದಲ್ಲಿ ವಿವಿಧ ಉದಯೋನ್ಮುಖ ತಂತ್ರಜ್ಞಾನ ಕ್ಷೇತ್ರಗಳಲ್ಲಿ 20 ಕ್ಕೂ ಹೆಚ್ಚು ಸೆಂಟರ್ ಆಫ್ ಎಕ್ಸಲೆನ್ಸ್ ಕಾರ್ಯನಿರ್ವಹಿಸುತ್ತಿವೆ. ಅವುಗಳಲ್ಲಿ ಮೂರು ಎಐಗೆ ಮೀಸಲಾಗಿವೆ' ಎಂದರು.

ಈ ಕಾರ್ಯಾಗಾರದಲ್ಲಿ ಆಂಧ್ರ ಪ್ರದೇಶ, ಕೇರಳ ಮತ್ತು ಮಹಾರಾಷ್ಟ್ರ ರಾಜ್ಯಗಳ ಪ್ರತಿನಿಧಿಗಳು ಮತ್ತು ಇಂಡಿಯಾ ಎಐ ಮಿಷನ್ ಅಧಿಕಾರಿಗಳು ಭಾಗವಹಿಸಿ, ಎಐ ಅಳವಡಿಕೆ ಮತ್ತು ಆಡಳಿತದಲ್ಲಿನ ನಾವೀನ್ಯಗಳ ಕುರಿತು ತಮ್ಮ ರಾಜ್ಯಗಳ ದೂರದೃಷ್ಟಿ ಮತ್ತು ಕಾರ್ಯತಂತ್ರಗಳನ್ನು ಹಂಚಿಕೊಂಡರು.

ಹಾಕಿ: ಗೋಲುಗಳ ಮಳೆಗರೆದ ಡಿವೈಇಎಸ್

ಬೆಂಗಳೂರು: ಶಿಲ್ಪ ಎಂ. ಕಣಜನವರ್ ಅವರು ಗಳಿಸಿದ ಏಳು ಗೋಲುಗಳ ನೆರವಿನಿಂದ ಡಿವೈಇಎಸ್ ಧಾರವಾಡ ತಂಡವು ಇಲ್ಲಿ ನಡೆಯುತ್ತಿರುವ 'ಹಾಕಿ ಕರ್ನಾಟಕ' ರಾಜ್ಯ 16 ವರ್ಷದೊಳಗಿನ ಬಾಲಕಿಯರ ಟೂರ್ನಿಯಲ್ಲಿ ಮಂಗಳವಾರ 16–0ಯಿಂದ ಕೆಜಿಎಫ್‌ನ ಎವರ್‌ಗ್ರೀನ್ ಸ್ಪೋರ್ಟ್ಸ್ ಅಕಾಡೆಮಿ ವಿರುದ್ಧ ಏಕಪಕ್ಷೀಯ ಗೆಲುವು ಸಾಧಿಸಿತು.

ಶಾಂತಿನಗರದ ಫೀಲ್ಡ್ ಮಾರ್ಷಲ್ ಕೆ.ಎಂ.ಕಾರ್ಯಪ್ಪ ಕ್ರೀಡಾಂಗಣದಲ್ಲಿ ನಡೆದ ಪಂದ್ಯದಲ್ಲಿ ಡಿವೈಇಎಸ್ ತಂಡವು ಆರಂಭದಿಂದಲೇ ಗೋಲುಗಳ ಮಳೆಗರೆಯಿತು. ಶಿಲ್ಪ (6ನೇ, 13ನೇ, 22ನೇ, 35ನೇ, 36ನೇ, 38ನೇ ಹಾಗೂ 39ನೇ ನಿ.) ಪಾರಮ್ಯ ಮೆರೆದರೆ, ಪ್ರೀತಿ ಎಸ್. ನೀಲರಡ್ಡಿ (2ನೇ, 3ನೇ ಹಾಗೂ 10ನೇ ನಿ.) 'ಹ್ಯಾಟ್ರಿಕ್' ಸಾಧಿಸಿದರು.

ಶ್ರಾವಣಿ ಎಂ. ಚವಾಣ್ (15ನೇ ಹಾಗೂ 20ನೇ ನಿ.) ಮತ್ತು ಸಂಜನಾ ಹುಗ್ಗೆಣ್ಣವರ್ (28ನೇ ಹಾಗೂ 37ನೇ ನಿ.) ತಲಾ ಎರಡು ಗೋಲು ಹೊಡೆದರು. ಸೌಮ್ಯ ಎಂ. ಹಿತ್ತಲಮನಿ (25ನೇ ನಿ.) ಮತ್ತು ಸುಕನ್ಯಾ ಎಂ. ಜಕ್ಕಣ್ಣವರ್ (29ನೇ ನಿ.) ತಲಾ ಒಂದು ಗೋಲು ಗಳಿಸಿದರು.

ಉತ್ತರ ನಗರ ಪಾಲಿಕೆ: ಶ್ವಾನಗಳಿಗೆ ಹಿಂಸೆ ನೀಡುವುದು, ವಿಷ ಹಾಕುವುದು ಶಿಕ್ಷಾರ್ಹ ಅಪರಾಧ

ಬೀದಿ ನಾಯಿಗೆ ಆಹಾರ: ಮಾರ್ಗಸೂಚಿ ಜಾರಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೀದಿ ನಾಯಿಗಳಿಗೆ ಆಹಾರ ನೀಡುವ ಕುರಿತ ಮಾರ್ಗಸೂಚಿಯನ್ನು ಜಾರಿಗೊಳಿಸಲಾಗಿದೆ ಎಂದು ಉತ್ತರ ನಗರ ಪಾಲಿಕೆ ಆಯುಕ್ತ ಪೊಮ್ಮಲ ಸುನೀಲ್‌ಕುಮಾರ್ ತಿಳಿಸಿದರು.

ಸುಪ್ರೀಂ ಕೋರ್ಟ್ ಆದೇಶಗಳು ಸೇರಿದಂತೆ ಕಾಯ್ದೆಯಲ್ಲಿನ ನಿಯಮಗಳ ಅನ್ವಯ ಸಾರ್ವಜನಿಕ ಆರೋಗ್ಯ, ಸುರಕ್ಷತೆ ಹಾಗೂ ಪ್ರಾಣಿ ಕಲ್ಯಾಣದ ಸಮತೋಲನ ಕಾಪಾಡಲು ಮಾರ್ಗಸೂಚಿ ಸಿದ್ಧಪಡಿಸಲಾಗಿದೆ. ನಗರ ಪ್ರದೇಶಗಳಲ್ಲಿ ಬೀದಿ ನಾಯಿಗಳಿಗೆ ಆಹಾರ ನೀಡುವುದು ಸಂಪೂರ್ಣ ನಿಷೇಧಿತವಲ್ಲ. ಆದರೆ, ಆಹಾರ ನೀಡುವ ಪ್ರಕ್ರಿಯೆಯಿಂದ ಸಾರ್ವಜನಿಕರಿಗೆ ತೊಂದರೆ, ಅಸ್ವಚ್ಛತೆ, ವಾಹನ ಸಂಚಾರಕ್ಕೆ ಅಡಚಣೆ ಹಾಗೂ ಮಕ್ಕಳ ಮತ್ತು ಹಿರಿಯ ನಾಗರಿಕರ ಸುರಕ್ಷತೆಗೆ ಧಕ್ಕೆಯಾಗಬಾರದು ಎಂಬುದು ನ್ಯಾಯಾಲಯಗಳ ಸ್ಪಷ್ಟ ನಿರ್ದೇಶನವಾಗಿದೆ ಎಂದರು.

ಈ ಹಿನ್ನೆಲೆಯಲ್ಲಿ ಬೀದಿ ನಾಯಿಗಳಿಗೆ ಆಹಾರ ನೀಡಲು ಆಸಕ್ತಿ ಹೊಂದಿರುವ ಪ್ರಾಣಿಪ್ರಿಯರು, ಸ್ವಯಂಸೇವಕರು, ಸಂಘ ಸಂಸ್ಥೆಗಳು ಹಾಗೂ ಸೇವಾದಾರರು ಸಾರ್ವಜನಿಕ ರಸ್ತೆ, ಪಾದಚಾರಿ ಮಾರ್ಗ, ಬಸ್ ನಿಲ್ದಾಣ, ಮಾರುಕಟ್ಟೆ ಪ್ರದೇಶ, ಶಾಲೆ, ಕಾಲೇಜು, ಆಸ್ಪತ್ರೆ, ಅಂಗನವಾಡಿ, ಧಾರ್ಮಿಕ ಸ್ಥಳಗಳು, ಸ್ಪೋರ್ಟ್ಸ್ ಕ್ಲಬ್, ಕ್ರೀಡಾಂಗಣ, ಮಕ್ಕಳ ಆಟದ ಮೈದಾನ ಸೇರಿದಂತೆ ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ಓಡಾಡುವ ಪ್ರದೇಶಗಳಲ್ಲಿ ಆಹಾರ ನೀಡಬಾರದು ಎಂದು ಸೂಚಿಸಲಾಗಿದೆ.

ಸಾರ್ವಜನಿಕ ಹಿತಾಸಕ್ತಿ, ಮಕ್ಕಳ ಹಾಗೂ ಹಿರಿಯ ನಾಗರಿಕರ ಸುರಕ್ಷತೆ, ಸ್ವಚ್ಛತೆ ಮತ್ತು ಆರೋಗ್ಯದ ಮಾನದಂಡಗಳು, ವಾಹನ ಸಂಚಾರದ ಮೇಲೆ ಪರಿಣಾಮ, ಸ್ಥಳೀಯ ನಿವಾಸಿಗಳ ಅಭಿಪ್ರಾಯ, ನಾಯಿಗಳ ವರ್ತನೆ ಹಾಗೂ ಸಾರ್ವಜನಿಕ ಶಾಂತಿ ಮತ್ತು ಸುವ್ಯವಸ್ಥೆ ಮೊದಲಾದ ಅಂಶಗಳನ್ನು ಪರಿಗಣಿಸಿ ಅಧಿಕೃತ 'ಆಹಾರ ತಾಣ'ಗಳಿಗೆ ಅನುಮೋದನೆ ನೀಡಲಾಗುವುದು ಎಂದು ತಿಳಿಸಲಾಗಿದೆ.

ಉತ್ತರ ನಗರ ಪಾಲಿಕೆ ವತಿಯಿಂದ ಪ್ರಾಣಿ ಜನನ ನಿಯಂತ್ರಣ (ಎಬಿಸಿ), ಆ್ಯಂಟಿ ರೇಬಿಸ್ ವ್ಯಾಕ್ಸಿನೇಷನ್ (ಎಆರ್‌ವಿ) ಹಾಗೂ ಮಾಸ್ ಡಾಗ್ ವ್ಯಾಕ್ಸಿನೇಷನ್ (ಎಂಡಿವಿ) ಕಾರ್ಯಕ್ರಮಗಳನ್ನು ಹಂತ ಹಂತವಾಗಿ ಪರಿಣಾಮಕಾರಿಯಾಗಿ ಜಾರಿಗೊಳಿಸಲಾಗುತ್ತಿದೆ. ಬೀದಿ ನಾಯಿಗಳ ಸಂಖ್ಯೆಯನ್ನು ವೈಜ್ಞಾನಿಕವಾಗಿ ನಿಯಂತ್ರಿಸುವುದು ಹಾಗೂ ರೇಬಿಸ್ ತಡೆಗಟ್ಟುವುದು ಪಾಲಿಕೆಯ ಪ್ರಮುಖ ಉದ್ದೇಶವಾಗಿದೆ ಎಂದರು.

ಮಾನವೀಯತೆಗೆ ಕರೆ: ನಗರ ಪಾಲಿಕೆ ವ್ಯಾಪ್ತಿಯಲ್ಲಿನ ಸಾರ್ವಜನಿಕರು ಬೀದಿ ನಾಯಿಗಳೊಂದಿಗೆ ಸಹಬಾಳ್ವೆ ಮತ್ತು ಮಾನವೀಯತೆಯನ್ನು ತೋರಬೇಕು. ನಾಯಿಗಳಿಗೆ ಹಿಂಸೆ ನೀಡುವುದು, ವಿಷ ಹಾಕುವುದು ಅಥವಾ ಕಾನೂನುಬಾಹಿರವಾಗಿ ಸ್ಥಳಾಂತರಿಸುವುದು ಶಿಕ್ಷಾರ್ಹ ಅಪರಾಧವಾಗಿರುತ್ತದೆ. ಅದೇ ರೀತಿ ಸಾರ್ವಜನಿಕರಿಗೆ ತೊಂದರೆ ಉಂಟುಮಾಡುವ ರೀತಿಯಲ್ಲಿ ಅನಧಿಕೃತವಾಗಿ ಆಹಾರ ನೀಡುವುದನ್ನು ನಿಷೇಧಿಸಲಾಗಿದೆ.

ನಗರದಲ್ಲಿ ಸಾರ್ವಜನಿಕ ಆರೋಗ್ಯ, ಸುರಕ್ಷತೆ ಹಾಗೂ ಪ್ರಾಣಿ ಕಲ್ಯಾಣವನ್ನು ಸಮನ್ವಯಗೊಳಿಸುವ ನಿಟ್ಟಿನಲ್ಲಿ ಎಲ್ಲ ನಾಗರಿಕರು, ನಿವಾಸಿ ಸಂಘಗಳು, ಪ್ರಾಣಿ ಪ್ರೇಮಿಗಳು ಹಾಗೂ ಸಾರ್ವಜನಿಕರು ನಗರ ಪಾಲಿಕೆಯೊಂದಿಗೆ ಸಹಕರಿಸುವಂತೆ ಆಯುಕ್ತರು ಮನವಿ ಮಾಡಿದರು.

ಆಹಾರ ನೀಡಲು ನಿಯಮಗಳು

- ಅನುಮೋದಿತ ಸ್ಥಳಗಳಲ್ಲಿ ಆಹಾರ ನೀಡುವವರು ನಿಗದಿತ ಸಮಯದಲ್ಲಿ ಮಾತ್ರ ನೀಡಬೇಕು
- ಆಹಾರ ನೀಡಿದ ಬಳಿಕ ಉಳಿದ ಆಹಾರ, ಪ್ಲಾಸ್ಟಿಕ್ ಹಾಗೂ ತ್ಯಾಜ್ಯವನ್ನು ತೆರವುಗೊಳಿಸಿ ಸ್ಥಳವನ್ನು ಸ್ವಚ್ಛವಾಗಿರಿಸಬೇಕು
- ಸಾರ್ವಜನಿಕ ರಸ್ತೆ ಹಾಗೂ ಪಾದಚಾರಿ ಮಾರ್ಗಗಳಲ್ಲಿ ಆಹಾರ ನೀಡಬಾರದು
- ನಾಯಿಗಳು ಗುಂಪುಗೂಡಿ ಸಾರ್ವಜನಿಕರಿಗೆ ಭಯ ಅಥವಾ ತೊಂದರೆ ಉಂಟುಮಾಡದಂತೆ ನೋಡಿಕೊಳ್ಳಬೇಕು
- ಶಾಲಾ ಸಮಯ, ಆಸ್ಪತ್ರೆ ಪ್ರದೇಶ ಹಾಗೂ ಹೆಚ್ಚಿನ ಜನಸಂಚಾರ ಇರುವ ವೇಳೆಯಲ್ಲಿ ಆಹಾರ ನೀಡುವುದನ್ನು ತಪ್ಪಿಸಬೇಕು
- ಸಾರ್ವಜನಿಕರು ನಾಯಿಗಳ ಮೇಲೆ ಕ್ರೌರ್ಯ ತೋರಬಾರದು ಹಾಗೂ ಆಹಾರ ನೀಡುವವರು ಸಾರ್ವಜನಿಕರೊಂದಿಗೆ ವಾಗ್ವಾದಕ್ಕೆ ಇಳಿಯಬಾರದು
- ನಗರ ಪಾಲಿಕೆ, ಪೊಲೀಸ್ ಇಲಾಖೆಯ ಸೂಚನೆಗಳನ್ನು ಪಾಲಿಸಬೇಕು

ಮಾನಸಿಕ ಕಿರುಕುಳ: ವಿದ್ಯಾರ್ಥಿನಿಯರ ಪ್ರತಿಭಟನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ಮಹಾರಾಣಿ ಕ್ಲಸ್ಟರ್ ವಿಶ್ವವಿದ್ಯಾಲಯದ ಮಹಿಳಾ ಸಿಬ್ಬಂದಿ ಮತ್ತು ವಿದ್ಯಾರ್ಥಿನಿಯರ ಮೇಲೆ ಆಗುತ್ತಿರುವ ಮಾನಸಿಕ ಕಿರುಕುಳವನ್ನು ಖಂಡಿಸಿ ವಿಶ್ವವಿದ್ಯಾಲಯದ ವಿದ್ಯಾರ್ಥಿನಿಯರ ಕ್ಷೇಮಾಭಿವೃದ್ಧಿ ಒಕ್ಕೂಟ ಹಾಗೂ ರಾಷ್ಟ್ರೀಯ ಅಂಬೇಡ್ಕರ್ ಸೇನೆ ವತಿಯಿಂದ ಸ್ವಾತಂತ್ರ್ಯ ಉದ್ಯಾನದಲ್ಲಿ ಪ್ರತಿಭಟನೆ ನಡೆಸಲಾಯಿತು.

ಮಾನಸಿಕ ಕಿರುಕುಳ ನೀಡುತ್ತಿರುವ ವಿಶ್ವವಿದ್ಯಾಲಯದ ಹಣಕಾಸು ಅಧಿಕಾರಿ ಎಂ.ಎಸ್. ಚೇತನ್ ಕುಮಾರ್ ಅವರನ್ನು ಅಮಾನತುಗೊಳಿಸುವಂತೆ ವಿದ್ಯಾರ್ಥಿನಿಯರು ಹಾಗೂ ಅತಿಥಿ ಉಪನ್ಯಾಸಕರು ಆಗ್ರಹಿಸಿದರು.

'ಅತಿಥಿ ಉಪನ್ಯಾಸಕಿಯರ ವೈಯಕ್ತಿಕ ವಿಚಾರಗಳ ಬಗ್ಗೆ ಮಾತನಾಡಿ ಮಾನಸಿಕವಾಗಿ ಹಿಂಸಿಸುವುದು, ಮೂರು ತಿಂಗಳಿಂದಲೂ ಸಂಬಳ ನೀಡದೆ ಸತಾಯಿಸುವುದು, ಸಮಸ್ಯೆ ಕೇಳಲು ಹೋದ ಉಪನ್ಯಾಸಕಿ ಹಾಗೂ ವಿದ್ಯಾರ್ಥಿನಿಯರಿಗೆ ದೂರು ನೀಡಿ ಬಂಧಿಸುವಂತೆ ಮಾಡುತ್ತೇನೆ ಎಂದು ಅಧಿಕಾರಿ ಹೆದರಿಸುತ್ತಿದ್ದಾರೆ' ಎಂದು ಪ್ರತಿಭಟನಕಾರರು ಆರೋಪಿಸಿದರು.

'ಮಹಿಳಾ ಆಯೋಗ ಮತ್ತು ಕುಲಪತಿಗೆ ದೂರು ನೀಡಿದ್ದರೂ ಯಾವುದೇ ಕ್ರಮ ಕೈಗೊಂಡಿಲ್ಲ. ಈಗಲಾದರೂ ಸರ್ಕಾರ ಹಾಗೂ ರಾಜ್ಯಪಾಲರು ಮಧ್ಯ ಪ್ರವೇಶಿಸಿ ಸಮಸ್ಯೆ ಇತ್ಯರ್ಥಪಡಿಸಬೇಕು' ಎಂದು ರಾಷ್ಟ್ರೀಯ ಅಂಬೇಡ್ಕರ್ ಸೇನೆ ಅಧ್ಯಕ್ಷ ಅರ್ಜುನ್ ಗೋಪಾಲಯ್ಯ ಆಗ್ರಹಿಸಿದ್ದಾರೆ.

ಬೆಂಗಳೂರಿಗೆ ಭೇಟಿ ನೀಡಿದ್ದ ಭಾರತೀಯ ಜನತಾ ಪಕ್ಷದ ರಾಷ್ಟ್ರೀಯ ಅಧ್ಯಕ್ಷ ನಿತಿನ್ ನವೀನ್ ಅವರಿಗೆ ದಾಸರಹಳ್ಳಿ ವಿಧಾನಸಭಾ ಕ್ಷೇತ್ರದ ಬಿಜೆಪಿ ಮುಖಂಡ ಬಿ.ಎಸ್. ಅನಿಲ್ ಕುಮಾರ್ ಅವರು ಶಾಲು ಹೊದಿಸಿ ಗೌರವಿಸಿದರು

ಬಿಹಾರ: ಸರ್ಕಾರಿ ನೌಕರರಿಗೆ ಪ್ರವಾಸ ಕಡ್ಡಾಯ

ಪಟ್ನಾ: ಬಿಹಾರದ ಎಲ್ಲ ಸರ್ಕಾರಿ ನೌಕರರು ತಮ್ಮ ಕುಟುಂಬದೊಂದಿಗೆ ಪ್ರತಿ ಮೂರು ತಿಂಗಳಿಗೊಮ್ಮೆ ರಾಜ್ಯದಲ್ಲಿರುವ ಪ್ರವಾಸಿ ಸ್ಥಳಗಳಿಗೆ ಭೇಟಿ ನೀಡಬೇಕು ಮತ್ತು ಅವುಗಳನ್ನು ಹೇಗೆ ಪ್ರಚುರಪಡಿಸುವುದು ಎಂಬ ಬಗ್ಗೆ ವರದಿ ನೀಡಬೇಕು ಎಂದು ಬಿಹಾರ ಸರ್ಕಾರ ನಿರ್ದೇಶನ ನೀಡಿದೆ.

ಬಿಹಾರದ ಪ್ರವಾಸಿ ತಾಣಗಳು ಮತ್ತು ಅಲ್ಲಿನ ಮೂಲಸೌಕರ್ಯಗಳ ಅಭಿವೃದ್ಧಿಯ ದೃಷ್ಟಿಯಿಂದ ಸರ್ಕಾರ ಈ ಕ್ರಮ ಕೈಗೊಂಡಿದೆ.

'ಸಂಶೋಧನೆಗಳು ನವೋದ್ಯಮವಾಗಿ ತಲುಪಲಿ'

ಕೃಷಿ ನವೋದ್ಯಮಗಳ ಸಮಾವೇಶದಲ್ಲಿ ಕೃಷಿ ಸಚಿವ ಎನ್. ಚಲುವರಾಯಸ್ವಾಮಿ ಅಭಿಮತ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕೃಷಿ ವಿಶ್ವವಿದ್ಯಾಲಯಗಳಲ್ಲಿ ನಡೆಯುವ ಸಂಶೋಧನೆಗಳು ಕೇವಲ ಪ್ರಯೋಗಾಲಯಗಳಿಗೆ ಸೀಮಿತವಾಗದೇ, ನವೋದ್ಯಮಗಳ ಮೂಲಕ ರೈತರ ಜಮೀನುಗಳಿಗೆ ತಲುಪಬೇಕು' ಎಂದು ಕೃಷಿ ಸಚಿವ ಎನ್. ಚಲುವರಾಯಸ್ವಾಮಿ ತಿಳಿಸಿದರು.

ಬೆಂಗಳೂರು ಕೃಷಿ ವಿಶ್ವವಿದ್ಯಾಲಯದ ಅಗ್ರಿ ಇನೊವೇಷನ್ ಸೆಂಟರ್ ಮಂಗಳವಾರ ಆಯೋಜಿಸಿದ್ದ ಕೃಷಿ ನವೋದ್ಯಮಗಳ ಸಮಾವೇಶ 2.0 ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

'ವಿಶ್ವವಿದ್ಯಾಲಯಗಳ ಸಂಶೋಧನಾ ಫಲಿತಾಂಶಗಳನ್ನು ಆಧರಿಸಿ ಯುವಕರು ಕೃಷಿ ನವೋದ್ಯಮಗಳನ್ನು ಆರಂಭಿಸಬೇಕು. ಇದು ಕೃಷಿ ಉತ್ಪನ್ನಗಳ ಮೌಲ್ಯವರ್ಧನೆ, ಸಂಸ್ಕರಣೆ, ಪ್ಯಾಕೇಜಿಂಗ್, ಬ್ರ್ಯಾಂಡಿಂಗ್ ಹಾಗೂ ಮಾರುಕಟ್ಟೆ ವ್ಯವಸ್ಥೆಯಲ್ಲಿ ಹೊಸ ಕ್ರಾಂತಿ ಮಾಡಲು ಸಾಧ್ಯವಾಗಲಿದೆ. ಇದರ ಮೂಲಕ ಕೃಷಿ ಉತ್ಪನ್ನಗಳಿಗೆ ಹೆಚ್ಚಿನ ಮೌಲ್ಯ ದೊರೆಯುವುದರ ಜತೆಗೆ ರೈತರ ಆದಾಯವೂ ಹೆಚ್ಚಾಗಲಿದೆ' ಎಂದು ತಿಳಿಸಿದರು.

'ಕೃಷಿ ಕ್ಷೇತ್ರದಲ್ಲಿ ತಂತ್ರಜ್ಞಾನ, ಸಂಶೋಧನೆ ಹಾಗೂ ನವೀನ ಆವಿಷ್ಕಾರಗಳ ಮೂಲಕ ರೈತರ ಜೀವನಮಟ್ಟ ಸುಧಾರಿಸಲು ಹೆಚ್ಚು ಅವಕಾಶಗಳಿವೆ. ದೇಶದಲ್ಲಿ ಎರಡು ಲಕ್ಷಕ್ಕೂ ಹೆಚ್ಚು ನವೋದ್ಯಮಗಳಿದ್ದರೆ, ರಾಜ್ಯದಲ್ಲಿ 7 ಸಾವಿರದಿಂದ 8 ಸಾವಿರಕ್ಕೂ ಹೆಚ್ಚು ನವೋದ್ಯಮಗಳನ್ನು ಸ್ಥಾಪಿಸಲಾಗಿದೆ. ನಮ್ಮ ರಾಜ್ಯ ನವೋದ್ಯಮಗಳ ಕೇಂದ್ರವಾಗಿ ಹೊರಹೊಮ್ಮಿದೆ' ಎಂದರು.

'ಇಂದಿನ ಯುವಕರು ಉದ್ಯೋಗಕ್ಕಾಗಿ ಅಲೆದಾಡುವ ಬದಲು ಉದ್ಯೋಗ ನೀಡುವ ಉದ್ಯಮಿಗಳಾಗಬೇಕು. ನಮ್ಮ ಸರ್ಕಾರ ಕೃಷಿಯನ್ನು ಕೇವಲ ಬದುಕಿನ ಮಾರ್ಗವಾಗಿ ನೋಡುವುದಿಲ್ಲ. ಅದನ್ನು ಲಾಭದಾಯಕ ಉದ್ಯಮವನ್ನಾಗಿ ರೂಪಿಸುವ ಉದ್ದೇಶವಿದೆ. ಡಿಜಿಟಲ್ ಕೃಷಿ, ಡ್ರೋನ್ ತಂತ್ರಜ್ಞಾನ, ಡೇಟಾ ಆಧಾರಿತ ಬೆಳೆ ನಿರ್ವಹಣೆ, ಮೌಲ್ಯವರ್ಧನೆ ಮತ್ತು ನೇರ ಮಾರುಕಟ್ಟೆ ವ್ಯವಸ್ಥೆಗಳಿಗೆ ನಮ್ಮ ಸರ್ಕಾರ ಹೆಚ್ಚು ಪ್ರೋತ್ಸಾಹ ನೀಡುತ್ತಿದೆ' ಎಂದು ಹೇಳಿದರು.

'ಇಂದು ಕೃಷಿ ಕ್ಷೇತ್ರವು ಅನೇಕ ಸವಾಲುಗಳನ್ನು ಎದುರಿಸುತ್ತಿದೆ. ಹವಾಮಾನ ವೈಪರೀತ್ಯ, ಉತ್ಪಾದನಾ ವೆಚ್ಚದ ಏರಿಕೆ, ಮಾರುಕಟ್ಟೆ ಅಸ್ಥಿರತೆ ಮತ್ತು ಕಾರ್ಮಿಕರ ಸಮಸ್ಯೆಗಳು ರೈತನ ಬದುಕನ್ನು ಸಂಕಷ್ಟಕ್ಕೆ ತಳ್ಳಿವೆ. ಈ ಸವಾಲುಗಳಿಗೆ ಉತ್ತರ ಕೊಡುವ ಶಕ್ತಿ ಇಂದಿನ ತಂತ್ರಜ್ಞಾನ ಮತ್ತು ಕೃಷಿ ನವೋದ್ಯಮಗಳಿಗಿದೆ' ಎಂದರು.

ಸಮಾವೇಶದಲ್ಲಿ ಕೃಷಿ ನವೋದ್ಯಮಗಳಿಗೆ ಸಂಬಂಧಿಸಿದ 50ಕ್ಕೂ ಹೆಚ್ಚು ಮಳಿಗೆಗಳನ್ನು ಸ್ಥಾಪಿಸಲಾಗಿತ್ತು. ಆಸಕ್ತ ರೈತರು, ವಿದ್ಯಾರ್ಥಿಗಳು ಮಳಿಗೆಗಳಿಗೆ ಭೇಟಿ ನೀಡಿ ಮಾಹಿತಿ ಪಡೆದುಕೊಂಡರು.

ಕಾರ್ಯಕ್ರಮದಲ್ಲಿ ಕೃಷಿ ಇಲಾಖೆ ಕಾರ್ಯದರ್ಶಿ ಕ್ಯಾಪ್ಟನ್ ಕೆ. ರಾಜೇಂದ್ರ, ವಿಶ್ವವಿದ್ಯಾಲಯದ ಕುಲಪತಿ ಎಸ್.ವಿ. ಸುರೇಶ, ಕುಲಸಚಿವ ಮಧುಸೂದನ್ ಉಪಸ್ಥಿತರಿದ್ದರು.

ಸಮಾವೇಶದಲ್ಲಿ ಪ್ರದರ್ಶನಕ್ಕೆ ಇಟ್ಟಿದ್ದ ಮಲ್ಲಿಗೆ ಕೊಯ್ಲು ಮಾಡುವ ರೋಬೊ ಅನ್ನು ಎನ್. ಚಲುವರಾಯಸ್ವಾಮಿ ವೀಕ್ಷಿಸಿದರು. ಎಸ್.ವಿ. ಸುರೇಶ, ಕೆ. ರಾಜೇಂದ್ರ ಉಪಸ್ಥಿತರಿದ್ದರು ಪ್ರಜಾವಾಣಿ ಚಿತ್ರ

'ನವೀನ ಆವಿಷ್ಕಾರಗಳಿಗೆ ಉತ್ತೇಜನ'

'ರಾಜ್ಯ ಸರ್ಕಾರವು ಕೃಷಿ ಕ್ಷೇತ್ರದಲ್ಲಿನ ನವೀನ ಆವಿಷ್ಕಾರಗಳಿಗೆ ಉತ್ತೇಜನ ನೀಡಲು ವಿಶೇಷ ಯೋಜನೆಗಳು, ಇನ್‌ಕ್ಯುಬೇಷನ್ ಕೇಂದ್ರಗಳು, ಆರ್ಥಿಕ ನೆರವು ಹಾಗೂ ತಾಂತ್ರಿಕ ಮಾರ್ಗದರ್ಶನ ಒದಗಿಸುತ್ತದೆ. ಕೃಷಿ ವಿ.ವಿಗಳು, ಸಂಶೋಧನಾ ಸಂಸ್ಥೆಗಳು ಮತ್ತು ಖಾಸಗಿ ವಲಯಗಳು ಒಟ್ಟಾಗಿ ಕಾರ್ಯನಿರ್ವಹಿಸಿದರೆ ಕರ್ನಾಟಕವನ್ನು ದೇಶದ ಅಗ್ರ ಅಗ್ರಿ–ಇನೊವೇಷನ್ ಕೇಂದ್ರವನ್ನಾಗಿ ರೂಪಿಸಬಹುದು' ಎಂದು ಎನ್. ಚಲುವರಾಯಸ್ವಾಮಿ ತಿಳಿಸಿದರು.

ಮಲ್ಲಿಗೆ ಕೊಯ್ಲು ಮಾಡುವ ರೋಬೊ

ಕೃಷಿ ನವೋದ್ಯಮಗಳ ಸಮಾವೇಶದಲ್ಲಿ ಮಲ್ಲಿಗೆ ಕೊಯ್ಲು ಮಾಡುವ ರೋಬೊ ಸಾರ್ವಜನಿಕರು, ವಿದ್ಯಾರ್ಥಿಗಳು ಹಾಗೂ ರೈತರ ಗಮನ ಸೆಳೆಯಿತು. 'ಈ ರೋಬೊ ಅನ್ನು ಕೊಪ್ಪಳ ಜಿಲ್ಲೆಯ ಮುನಿರಾಬಾದ್‌ನ ಕಾರ್ಪ್ ಸೆಕ್ಯೂರ್ ಅಗ್ರಿ ಟೆಕ್ ಕಂಪನಿ ಅಭಿವೃದ್ಧಿಪಡಿಸಿದ್ದು, 2027ರ ಜನವರಿ ವೇಳೆಗೆ ಈ ರೊಬೊಟ್ ಕಾರ್ಯಾರಂಭ ಮಾಡುವ ಸಾಧ್ಯತೆ ಇದೆ. ಇದು ಗಂಟೆಗೆ 2 ಕೆ.ಜಿಗೂ ಹೆಚ್ಚು ಮಲ್ಲಿಗೆ ಹೂವುಗಳನ್ನು ಕೊಯ್ಲು ಮಾಡುತ್ತದೆ. ಕಾರ್ಮಿಕರ ಕೊರತೆ ಹಾಗೂ ರೈತರ ಸಮಯವನ್ನು ಉಳಿತಾಯ ಮಾಡಲಿದೆ' ಎಂದು ಕಂಪನಿಯ ಹರೀಶ್ ಮಾಹಿತಿ ನೀಡಿದರು.

ವಾರಸುದಾರರಿಲ್ಲದ ವಾಹನ: ಜಾಗ ಅಂತಿಮಕ್ಕೆ ಸೂಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಐದು ನಗರ ಪಾಲಿಕೆಗಳಲ್ಲಿ ಟೋಯಿಂಗ್ ಮಾಡುವ ವಾರಸುದಾರರಿಲ್ಲದ ವಾಹನಗಳ ನಿಲುಗಡೆಗೆ ಪಾಲಿಕೆವಾರು ಸ್ಥಳಗಳನ್ನು ಅಂತಿಮಗೊಳಿಸುವಂತೆ ಆಡಳಿತಾಧಿಕಾರಿ ಮಹೇಶ್ವರ್ ರಾವ್ ಅವರು ಅಧಿಕಾರಿಗಳಿಗೆ ಸೂಚಿಸಿದರು.

ವಿವಿಧ ಇಲಾಖೆಗಳೊಂದಿಗೆ ಮಂಗಳವಾರ ನಡೆದ ಸಮನ್ವಯ ಸಭೆಯಲ್ಲಿ ಮಾತನಾಡಿದ ಅವರು, ಟೋಯಿಂಗ್ ಮಾಡಿದ ವಾಹನಗಳನ್ನು ನಿಲುಗಡೆ ಮಾಡುವ ಸಲುವಾಗಿ ಉತ್ತರ ನಗರ ಪಾಲಿಕೆಯಲ್ಲಿ ಈಗಾಗಲೇ ಸ್ಥಳವನ್ನು ಗುರುತಿಸಲಾಗಿದೆ. ಕೇಂದ್ರ ಮತ್ತು ದಕ್ಷಿಣ ನಗರ ಪಾಲಿಕೆಗಳಲ್ಲಿ ಸ್ಥಳ ಗುರುತಿಸುವ ಕಾರ್ಯ ಬಹುತೇಕ ಪೂರ್ಣಗೊಂಡಿದ್ದು, ಪೂರ್ವ ಹಾಗೂ ಪಶ್ಚಿಮ ನಗರ ಪಾಲಿಕೆಗಳಲ್ಲಿಯೂ ತ್ವರಿತವಾಗಿ ಸ್ಥಳಗಳನ್ನು ಗುರುತಿಸುವಂತೆ ಸೂಚನೆ ನೀಡಿದರು.

ಅರ್ಕಾವತಿ ಬಡಾವಣೆಗೆ ಹೊಂದಿಕೊಂಡಿರುವ ಜಕ್ಕೂರು ಕೆರೆಯ ಪಕ್ಕದಲ್ಲಿರುವ ಸಂಪಿಗೆಹಳ್ಳಿ ಮುಖ್ಯರಸ್ತೆ ವಿಸ್ತರಣೆಗೆ ಸಂಬಂಧಿಸಿದಂತೆ ಬಿಡಿಎ ಹಾಗೂ ಉತ್ತರ ನಗರ ಪಾಲಿಕೆಯ ಅಧಿಕಾರಿಗಳು ಜಂಟಿಯಾಗಿ ಸಮೀಕ್ಷೆ ನಡೆಸಿ ವಾರದೊಳಗೆ ಸಮೀಕ್ಷಾ ವರದಿ ಸಲ್ಲಿಸುವಂತೆ ನಿರ್ದೇಶನ ನೀಡಿದರು.

ನಾಗವಾರ ರಸ್ತೆ, ಟ್ಯಾನರಿ ರಸ್ತೆ, ಲೋವರ್ ಅಗರ ರಸ್ತೆ, ತಿಮ್ಮಯ್ಯ ರಸ್ತೆ, ನೇತಾಜಿ ರಸ್ತೆ, ಸುಲ್ತಾನ್‌ಪಾಳ್ಯ ರಸ್ತೆ ಹಾಗೂ ನಾಗರಬಾವಿ ಮುಖ್ಯ ರಸ್ತೆಗಳಲ್ಲಿ ವೈಟ್ ಟಾಪಿಂಗ್ ಕಾಮಗಾರಿ ಆರಂಭಿಸಬೇಕಿದೆ. ಆದರೆ, ಇದಕ್ಕೆ ಮುನ್ನ ಜಲಮಂಡಳಿ ವತಿಯಿಂದ ಕೈಗೆತ್ತಿಕೊಂಡಿರುವ ಪೈಪ್‌ಲೈನ್ ಕಾಮಗಾರಿಯನ್ನು ತ್ವರಿತವಾಗಿ ಪೂರ್ಣಗೊಳಿಸುವಂತೆ ಸೂಚನೆ ನೀಡಿದರು.

ನಗರದಲ್ಲಿ 20 ಅಗ್ನಿಶಾಮಕ ಠಾಣೆಗಳು ಕಾರ್ಯನಿರ್ವಹಿಸಲಿದ್ದು, ಮಳೆಗಾಲ ಆರಂಭವಾಗುತ್ತಿರುವ ಹಿನ್ನೆಲೆಯಲ್ಲಿ ಆಯಾ ನಗರ ಪಾಲಿಕೆಗಳ ವ್ಯಾಪ್ತಿಯಲ್ಲಿರುವ ಅಗ್ನಿಶಾಮಕ ಠಾಣೆಗಳೊಂದಿಗೆ ನಿರಂತರ ಸಂಪರ್ಕದಲ್ಲಿರಬೇಕು. ಅಗ್ನಿಶಾಮಕ ಠಾಣೆಗಳಲ್ಲಿ ಅಗತ್ಯ ಸಿದ್ಧತೆಗಳನ್ನು ಮಾಡಿಕೊಂಡಿದ್ದು, ಪಾಲಿಕೆಗಳೊಂದಿಗೆ ಸಮನ್ವಯ ಸಾಧಿಸಿ ಕಾರ್ಯನಿರ್ವಹಿಸುವಂತೆ ತಿಳಿಸಿದರು.

ಸ್ವಚ್ಛವಾಗಿಡಲು ಸೂಚನೆ: ಶಿವಾನಂದ ವೃತ್ತದ ಸಮೀಪದ ಮಾದವನಗರ ರೈಲ್ವೆ ಕೆಳಸೇತುವೆ ಬಳಿ ಪರಿಶೀಲನೆ ನಡೆಸಿದ ವೇಳೆ, ಮಳೆನೀರು ಹರಿವಿಗಾಗಿ ಅಳವಡಿಸಲಾಗಿರುವ ಗ್ರೇಟಿಂಗ್‌ಗಳನ್ನು ಸ್ವಚ್ಛವಾಗಿಡುವಂತೆ ಮಹೇಶ್ವರ್ ರಾವ್ ಸೂಚಿಸಿದರು.

ಡಾ. ರಾಜ್‌ಕುಮಾರ್ ರಸ್ತೆಯಲ್ಲಿ ನವರಂಗ್‌ನಿಂದ ಸ್ಟಾರ್ ಬಜಾರ್ ಸಿಗ್ನಲ್‌ವರೆಗೆ 1.8 ಕಿ.ಮೀ. ಉದ್ದದ ವೈಟ್ ಟಾಪಿಂಗ್ ಕಾಮಗಾರಿಯನ್ನು ಒಂದು ಬದಿಯಲ್ಲಿ ಜುಲೈ ಅಂತ್ಯದೊಳಗೆ ಪೂರ್ಣಗೊಳಿಸಿ ವಾಹನ ಸಂಚಾರಕ್ಕೆ ಮುಕ್ತಗೊಳಿಸಬೇಕು. ನಂತರ ಮತ್ತೊಂದು ಬದಿಯ ಕಾಮಗಾರಿಯನ್ನು ಕೈಗೆತ್ತಿಕೊಂಡು ಅಕ್ಟೋಬರ್ ಅಂತ್ಯದೊಳಗೆ ಸಂಪೂರ್ಣ ಕಾಮಗಾರಿಯನ್ನು ಪೂರ್ಣಗೊಳಿಸುವಂತೆ ಅಧಿಕಾರಿಗಳಿಗೆ ಸೂಚನೆ ನೀಡಿದರು.

ಓಕಳಿಪುರ ಕಾರಿಡಾರ್ ಶೀಘ್ರ ಪೂರ್ಣ

ಓಕಳಿಪುರ ಅಷ್ಟಪಥ ಕಾರಿಡಾರ್‌ನ ಚೆನ್ನೈ ರೈಲು ಹಳಿಯ ಕೆಳಭಾಗದಲ್ಲಿ ಬಾಕಿ ಇರುವ ಕಾಮಗಾರಿಗಳನ್ನು 25 ದಿನಗಳಲ್ಲಿ ಪೂರ್ಣಗೊಳಿಸುವಂತೆ ಜಿಬಿಎ ಮುಖ್ಯ ಆಯುಕ್ತ ಮಹೇಶ್ವರ್ ರಾವ್ ಅವರು ಅಧಿಕಾರಿಗಳಿಗೆ ಸೂಚನೆ ನೀಡಿದರು. ಕೇಂದ್ರ ಹಾಗೂ ಪಶ್ಚಿಮ ನಗರ ಪಾಲಿಕೆ ವ್ಯಾಪ್ತಿಯ ವಿವಿಧ ಅಭಿವೃದ್ಧಿ ಕಾಮಗಾರಿಗಳ ಸ್ಥಳಗಳಿಗೆ ಭೇಟಿ ನೀಡಿ ಪರಿಶೀಲನೆ ನಡೆಸಿದ ಬಳಿಕ ಅವರು ಮಾತನಾಡಿದರು.

ಚೆನ್ನೈ ರೈಲ್ವೆ ಹಳಿ ಕೆಳಭಾಗದಲ್ಲಿ ರೈಲ್ವೆ ಇಲಾಖೆ ವತಿಯಿಂದ ಈಗಾಗಲೇ ಎರಡು ಬಾಕ್ಸ್ ಪುಶಿಂಗ್ ಕಾರ್ಯಗಳು ಪೂರ್ಣಗೊಂಡಿವೆ. ಈ ಸಂಬಂಧ, ಮೆಜೆಸ್ಟಿಕ್‌ನಿಂದ ರಾಜಾಜಿನಗರದ ಕಡೆಗೆ ತೆರಳುವ ಮಾರ್ಗದ ಒಂದು ಬಾಕ್ಸ್ ಭಾಗದಲ್ಲಿ ವಾಹನಗಳ ಸಂಚಾರಕ್ಕಾಗಿ ಸಂಪರ್ಕ ರಸ್ತೆ ನಿರ್ಮಾಣ ಕಾರ್ಯವನ್ನು 25 ದಿನಗಳಲ್ಲಿ ಪೂರ್ಣಗೊಳಿಸುವಂತೆ ಅಧಿಕಾರಿಗಳಿಗೆ ತಿಳಿಸಿದರು.

ಮೈಸೂರು ರೇಸ್

ಮದರ್ಸ್ ಗ್ರೇಸ್ ಗೆಲ್ಲುವ ನಿರೀಕ್ಷೆ

ಸೀಸನ್ ಓಪನರ್ ಟ್ರೋಫಿ ಬುಧವಾರದ ಮೈಸೂರು ರೇಸ್‌ಗಳ ಪ್ರಧಾನ ಆಕರ್ಷಣೆಯಾಗಿದ್ದು, ಮದರ್ಸ್ ಗ್ರೇಸ್ ಗೆಲ್ಲುವ ನಿರೀಕ್ಷೆಯಿದೆ. ಮಧ್ಯಾಹ್ನ 1:30ಕ್ಕೆ ಪ್ರಾರಂಭವಾಗಲಿರುವ ದಿನದ ಎಂಟು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿವೆ:

1ನೇ ರೇಸ್: ದಕ್ಷ 4, ಅನುಷ್ಟುಭ 3, ಸೂಪರ್ ಸೆಕ್ಸಿ 6

2ನೇ ರೇಸ್: ಕ್ಲೌಡಿ ಹಿಲ್ಸ್ 2, ನ್ಯಾಚುರಲ್ ಒನ್ 7, ಟೂ ಹಾಟ್ ಟು ಟಚ್ 3

3ನೇ ರೇಸ್: ಹಬಿಬ್ಟಿ 2, ಜಸ್ಟ್ ಬ್ಲೂಸ್ 11, ಸ್ಕೌಟ್ 3

4ನೇ ರೇಸ್: ಚೀಫ್ ಅಡ್ಮಿರಲ್ 4, ಸಿಲ್ವರ್ ಕ್ವೆಸ್ಟ್ 3, ಸೀಕ್ರೆಟ್ ಶ್ಯಾಡೊ 9

5ನೇ ರೇಸ್: ಗೋಲ್ಡ್ ರೈಡ್ 4, ಸಿಯೋಲ್‌ಫಾರ್ ಬುಲೆಟ್ 2, ಮ್ಯಾಜಿಕಲ್ ಬೇ 7

6ನೇ ರೇಸ್: ಮದರ್ಸ್ ಗ್ರೇಸ್ 7, ರೈಝ್ ಎಗೈನ್ 2, ಕಾನ್ಫಿಡೆಂಟ್ ಗೇಮ್ 3

7ನೇ ರೇಸ್: ಬಾಲ್‌ಗೌನಿ 5, ಸ್ವಾಗತಂ 3, ಮಿರಾಕ್ಯುಲಸ್ ಗರ್ಲ್ 1

8ನೇ ರೇಸ್: ಸ್ಟ್ರಾಆರ್ಡಿನೇರಿಯೊ 10, ಮೆಟ್‌ಜಿಂಗರ್ 2, ದಿ ಗೋಲ್ಡನ್ ಸನ್‌ರೈಸ್ 1

ಉತ್ತಮ ಬೆಟ್: ಗೋಲ್ಡ್ ರೈಡ್

ಜಾಕ್‌ಪಾಟ್‌ಗೆ	1ನೇ ಟ್ರಿಬಲ್	2ನೇ ಟ್ರಿಬಲ್	3ನೇ ಟ್ರಿಬಲ್
4,5,6,7,8	1,2,3	3,4,5	6,7,8

ಗೀತಂ ವಿ.ವಿ ಯುಜಿ–ಪಿಜಿಗೆ ಪ್ರವೇಶ ಆರಂಭ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಗೀತಂ ಡೀಮ್ಡ್ ವಿಶ್ವವಿದ್ಯಾಲಯವು 2026–27ನೇ ಶೈಕ್ಷಣಿಕ ಸಾಲಿಗೆ ವಿವಿಧ ಪದವಿ (ಯುಜಿ) ಹಾಗೂ ಸ್ನಾತಕೋತ್ತರ ಪದವಿ (ಪಿಜಿ) ಕೋರ್ಸ್‌ಗಳಿಗೆ ಪ್ರವೇಶ ಪ್ರಕ್ರಿಯೆ ಆರಂಭಿಸಿದೆ.

ಮಂಗಳವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ವಿವಿ ಬೆಂಗಳೂರು ಕ್ಯಾಂಪಸ್‌ನ ಸಹ ಕುಲಪತಿ ಬಸವರಾಜ ಜಿ.ಕಟಗೇರಿ, 'ಪ್ರಸಕ್ತ ಸಾಲಿನ ಪ್ರವೇಶಾತಿಯಲ್ಲಿ ವಿದ್ಯಾರ್ಥಿಗಳಿಗೆ ಹಲವು ವಿಶೇಷ ಸವಲತ್ತುಗಳನ್ನು ಕಲ್ಪಿಸಲಾಗಿದೆ. ಪ್ರತಿಭಾವಂತ ವಿದ್ಯಾರ್ಥಿಗಳನ್ನು ಪ್ರೋತ್ಸಾಹಿಸಲಾಗುತ್ತದೆ. ವಿದ್ಯಾರ್ಥಿಗಳು ದ್ವಿತೀಯ ಪಿಯುಸಿಯಲ್ಲಿ ಗಳಿಸಿದ ಅಂಕಗಳ ಆಧಾರದ ಮೇಲೆ ನೇರವಾಗಿ ಪದವಿ ಕೋರ್ಸ್‌ಗಳಿಗೆ ಪ್ರವೇಶಾತಿ ಪಡೆಯಬಹುದು. ಉತ್ತಮ ಅಂಕ ಪಡೆದ ವಿದ್ಯಾರ್ಥಿಗಳಿಗೆ ವಿಶೇಷ ವಿದ್ಯಾರ್ಥಿವೇತನ ಘೋಷಿಸಲಾಗಿದೆ. ಸ್ನಾತಕೋತ್ತರ ಕೋರ್ಸ್‌ಗಳಿಗೆ ಸೇರಬಯಸುವ ಅಭ್ಯರ್ಥಿಗಳಿಗೆ ಅವರ ಪದವಿ ಅಂಕಗಳ ಆಧಾರದ ಮೇಲೆ ಪ್ರವೇಶಾತಿ ಕಲ್ಪಿಸಲಾಗುತ್ತದೆ' ಎಂದರು.

'ಅರ್ಜಿ ಸಲ್ಲಿಸಲು ಜೂನ್ 12 ಕೊನೆಯ ದಿನವಾಗಿದ್ದು, ಜೂನ್ 14ರಂದು ಗ್ಯಾಟ್ ಪ್ರವೇಶ ಪರೀಕ್ಷೆ ನಡೆಯಲಿದೆ. ಪ್ರವೇಶಾತಿ ಬಯಸುವ ಮತ್ತು ಅರ್ಹತೆ ಹೊಂದಿರುವ ವಿದ್ಯಾರ್ಥಿಗಳು ಗೀತಂ ವಿಶ್ವವಿದ್ಯಾಲಯದ ಅಧಿಕೃತ ಜಾಲತಾಣದ ಮೂಲಕ ಅರ್ಜಿ ಸಲ್ಲಿಸಬೇಕು.

ಗೀತಂ ಪ್ರವೇಶ ಪರೀಕ್ಷೆಯು (ಗ್ಯಾಟ್) ರಾಷ್ಟ್ರ ಮಟ್ಟದ ಪರೀಕ್ಷೆಯಾಗಿದ್ದು, ಗೀತಂ ತನ್ನ ವಿವಿಧ ಕ್ಯಾಂಪಸ್‌ಗಳ ಪ್ರವೇಶಾತಿಗೆ ಈ ಪರೀಕ್ಷೆ ನಡೆಸಲಿದೆ' ಎಂದು ಹೇಳಿದರು.

'ಈ ಪರೀಕ್ಷೆಯನ್ನು ಆನ್‌ಲೈನ್ ಮೂಲಕ ನಡೆಸಲಾಗುತ್ತದೆ. ದೇಶದಾದ್ಯಂತ ವಿದ್ಯಾರ್ಥಿಗಳು ಈ ಪರೀಕ್ಷೆ ಬರೆಯಲು ಅರ್ಹರಾಗಿರುತ್ತಾರೆ. ಜೆಇಇ, ಸಿಯುಇಟಿ, ಕ್ಯಾಟ್ ಅಥವಾ ಇತರೆ ಮಾನ್ಯತೆ ಪಡೆದ ರಾಷ್ಟ್ರೀಯ ಮತ್ತು ರಾಜ್ಯ ಮಟ್ಟದ ಪ್ರವೇಶ ಪರೀಕ್ಷೆಗಳಲ್ಲಿ ಹೆಚ್ಚಿನ ಅಂಕ ಪಡೆದ ಅಭ್ಯರ್ಥಿಗಳು ಗ್ಯಾಟ್ ಪರೀಕ್ಷೆಗೆ ಹಾಜರಾಗದೆ ನೇರವಾಗಿ ಅರ್ಜಿ ಸಲ್ಲಿಸಲು ಅರ್ಹರಾಗಿರುತ್ತಾರೆ' ಎಂದು ವಿವರಿಸಿದರು.



ಪ್ರತಿಯೊಂದು ಕುರ್ಚಿಯನ್ನು ಅದಕ್ಕೆಂದೇ ರೂಪಿಸಿದ ಚೌಕಟ್ಟಿನೊಳಗೆ ಬೆಳೆಸಲಾಗುತ್ತದೆ. ಅವು ನಿರ್ದಿಷ್ಟ ಆಕಾರ ಪಡೆಯುತ್ತಿದ್ದಂತೆಯೇ ಕವಲುಗಳನ್ನು ಜೋಡಿಸಲಾಗುತ್ತದೆ. ಹೀಗೆ ಆರೇಳು ವರ್ಷಗಳು ಬೆಳೆದ ನಂತರ ಮೊಳೆ, ಅಂಟು ಇಲ್ಲದ ಕುರ್ಚಿ ರೂಪುಗೊಳ್ಳುತ್ತದೆ.

ಪೂರ್ತಿ ಬೆಳೆದ ಕುರ್ಚಿಗಳನ್ನು ಇಡಿಯಾಗಿ ಕತ್ತರಿಸಿ ತೆಗೆದು ಒಂದು ವರ್ಷದ ಕಾಲ ಎಚ್ಚರಿಕೆಯಿಂದ ಒಣಗಿಸಲಾಗುತ್ತದೆ. ಅವಶ್ಯವಿದ್ದರೆ ಬಣ್ಣ, ವಾರ್ನಿಷು ಸೇರಿಸಬಹುದು.

ಅಂತಿಮವಾಗಿ ಕುರ್ಚಿಯ ಮೊನಚಾದ ಹಾಗೂ ಒರಟು ಅಂಚುಗಳನ್ನು ಉಜ್ಜಿ, ನಯಗೊಳಿಸಿ, ನಿರ್ದಿಷ್ಟ ಜ್ಯಾಮಿತಿಯೊಳಗೆ ಸುಂದರ ರೂಪ ನೀಡಲಾಗುತ್ತದೆ.

ಕುರ್ಚಿಗಳ ಕಾಡು!

ಮರದಿಂದ ಪೀಠೋಪಕರಣಗಳನ್ನು ಕೆತ್ತುವ ಬದಲಿಗೆ, ಮರಗಳನ್ನೇ ಪೀಠೋಪಕರಣಗಳ ರೂಪದಲ್ಲಿ ಬೆಳೆಸಬಹುದು.

• ಕೊಳ್ಳೇಗಾಲ ಶರ್ಮ

ನಿಮ್ಮ ಮನೆಯಲ್ಲಿ ಇರುವ ಪೀಠೋಪಕರಣಗಳು ಪ್ಲಾಸ್ಟಿಕ್ಕಿನವೋ? ಮರದವೋ? ಮರದವಾದರೆ ಎಷ್ಟು ಕಾಡನ್ನು ಕಡಿದೆವು - ಎನ್ನುವ ಅಳುಕು ಇರಬಹುದು. ಪ್ಲಾಸ್ಟಿಕ್ಕು ಅಥವಾ ಲೋಹದ್ದಾದರೆ, ಪರಿಸರಕ್ಕೆ ಹಾನಿ ಮಾಡುತ್ತಿದ್ದೇವಲ್ಲ ಎನ್ನುವ ಕಾಳಜಿಯೂ ಕಾಡುತ್ತಿರಬಹುದು. ಇವೆರಡನ್ನೂ ದೂರವಿಡುವ ಕಥೆ ಇಲ್ಲಿದೆ. ಇಂಗ್ಲೆಂಡಿನ ದಂಪತಿಯೊಂದು ಕಾಡು ಕಡಿದು, ಪೀಠೋಪಕರಣಗಳನ್ನು ಮಾಡುವ ಬದಲಿಗೆ, ನೇರವಾಗಿ ಪೀಠೋಪಕರಣಗಳ ಕಾಡನ್ನೇ ಬೆಳೆಯಲು ಹೊರಟಿದ್ದಾರೆ.

ಪೀಠೋಪಕರಣಗಳನ್ನು ಬೆಳೆಯುವುದೇ? ಹೌದು. ಇಂಗ್ಲೆಂಡಿನ ಡರ್ಬಿಶೈರ್ ಪ್ರಾಂತ್ಯದಲ್ಲಿರುವ 'ಫುಲ್ ಗ್ರೋನ್' ಎನ್ನುವ ಕಂಪನಿಯು ಮರದಲ್ಲಿ ಮಾಡಿದ ಪೀಠೋಪಕರಣಗಳನ್ನು ಒದಗಿಸುತ್ತಿದೆ. ವಿಶೇಷ ಎಂದರೆ ಕಂಪೆನಿ ಮಾರುವ ಕುರ್ಚಿ, ಮೇಜುಗಳು ಅಪ್ಪಟ ಮರದ ರಚನೆಗಳು. ಕೊಡಗು, ಚಿಕ್ಕಮಗಳೂರಿನ ಕಾಫಿ ತೋಟಗಳಲ್ಲಿ ಮುರಿದು ಬಿದ್ದ ಗಂಟು ಗಂಟಾದ ಕಾಫಿ ಬೊಡ್ಡೆಗಳನ್ನು ಉಜ್ಜಿ, ತಿದ್ದಿ, ಹೂದಾನಿಯನ್ನು ಇಡುವ ಮೇಜೋ, ಅಲಂಕಾರಿಕ ಗೊಂಬೆಯನ್ನಾಗಿಯೋ ಮಾಡುವುದನ್ನು ನೋಡಿರುವವರಿಗೆ, ಕೊಂಡಿರುವವರು ಇದರಲ್ಲೇನು ವಿಶೇಷ ಎನ್ನಬಹುದು. ವಿಶೇಷ ಇದೆ. ಫುಲ್ ಗ್ರೋನ್ ಕಂಪೆನಿ ಮಾರುವ ಕುರ್ಚಿ, ಮೇಜುಗಳನ್ನು ಯಾವುದೇ ಬಡಗಿಯೂ ತಯಾರಿಸುವುದಿಲ್ಲ. ಉಳಿ, ಚಾಣ ಬಳಸುವುದಿಲ್ಲ. ಮೊಳೆಗಳ ಸದ್ದೂ ಇರುವುದಿಲ್ಲ. ಕೇವಲ ರೆಂಬೆ, ಕೊಂಬೆಗಳನ್ನು ಬೇಕಾದ ಆಕಾರಕ್ಕೆ ಬೆಳೆಯುವಂತೆ ಬಾಗಿಸಿ, ತಿದ್ದಿ, ರೂಪು ಕೊಟ್ಟು ಪಡೆದ ಪೀಠೋಪಕರಣಗಳು. ಇವು. ನೇರವಾಗಿ ಮರದಿಂದ ಕತ್ತರಿಸಿ, ಒಣಗಿಸಿ, ಒಂದಿಷ್ಟು ಉಜ್ಜಿ ನಯವಾಗಿಸಿ, ಹೊಳಪು ನೀಡಿದರೆ ಕುರ್ಚಿ ಸಿದ್ಧ. ಸಂಪೂರ್ಣ ನೈಸರ್ಗಿಕ ಕುರ್ಚಿ ರೆಡಿ.

ಫುಲ್ ಗ್ರೋನ್ ಕಂಪೆನಿಯ ರೂವಾರಿಗಳಾದ ಗೇವಿನ್ ಮನ್ರೋ ಮತ್ತು ಅಲೀಸ್ ಮನ್ರೊ. ಡರ್ಬಿಶೈರ್ ಸಮೀಪದಲ್ಲಿ ಪೀಕ್ ಡಿಸ್ಟ್ರಿಕ್ಸ್ ಎನ್ನುವೆಡೆ ಎರಡೂವರೆ ಎಕರೆ ಜಮೀನಿನ ಒಡೆಯರು. ಈ ಜಮೀನಿನಲ್ಲಿ ಬೆಳೆಯುವ ಮರಗಳೆಲ್ಲವೂ ಕುರ್ಚಿ, ಮೇಜು, ತೂಗುದೀಪಗಳ ಆಕಾರದಲ್ಲಿವೆ. ಕಲೆ, ವಿಜ್ಞಾನ, ತಾಳ್ಮೆ ಹಾಗೂ ಕೌಶಲದಿಂದ ಮೂರು ಸಾವಿರಕ್ಕೂ ಹೆಚ್ಚು ಮರಗಳನ್ನು ಹೀಗೆ ವಿವಿಧ ಪೀಠೋಪಕರಣಗಳನ್ನಾಗಿ ತಿದ್ದಿ, ಬೆಳೆಸುತ್ತಿದ್ದಾರೆ.

ಕುರ್ಚಿ, ತೂಗುದೀಪಗಳನ್ನು ಬೆಳೆಸಲು ಫುಲ್ ಗ್ರೋನ್ ಸಾಮಾನ್ಯವಾಗಿ ಪೀಠೋಪಕರಣಗಳಿಗೆ ಬಳಸುವ ಓಕ್, ವಿಲ್ಲೋ ಹಾಗೂ ಆಶ್ ಎನ್ನುವ ಇಂಗ್ಲೆಂಡಿನಲ್ಲಿ ಪೀಠೋಪಕರಣಗಳಿಗೆ ಬಳಸುವ ಮೃದುಮರಗಳನ್ನು ಬಳಸುತ್ತಾರೆ. ಮೊಳಕೆಯಲ್ಲಿ ಬಗ್ಗದ್ದು, ದೊಡ್ಡದಾದ ಮೇಲೆ ಬಗ್ಗೀತೇ ಎನ್ನುವ ತತ್ವ ಇವರಿಗೆ ಮೂಲಮಂತ್ರ. ಈ ಮರಗಳು ಸಸಿಯಾಗಿರುವಾಗಲೇ, ಅವುಗಳಿಗೆ ಬೇಕಾದ ಆಕಾರದ ಚೌಕಟ್ಟನ್ನು ಒದಗಿಸುತ್ತಾರೆ. ಈ ಚೌಕಟ್ಟನ್ನೂ ಪ್ಲಾಸ್ಟಿಕ್ ತ್ಯಾಜ್ಯದಿಂದ ರೂಪಿಸಿರುತ್ತಾರೆ. ಈ ಚೌಕಟ್ಟಿನೊಳಗೆ ಬಂಧಿತವಾದ ರೆಂಬೆಕೊಂಬೆಗಳು ಅದೇ ಆಕಾರದಲ್ಲಿ ಬೆಳೆಯಲು ಆರಂಭಿಸುತ್ತವೆ. ಸುಪ್ರಸಿದ್ಧ ಬೋನ್ಸಾಯಿ ತಂತ್ರದಲ್ಲಿ ಮಾಡುವಂತೆಯೇ, ಅಲ್ಲೊಂದಿಷ್ಟು, ಇಲ್ಲೊಂದಿಷ್ಟು ರೆಂಬೆ, ಕೊಂಬೆಗಳನ್ನು ತರಿದು, ಅಕ್ಕ ಪಕ್ಕದಲ್ಲಿರುವ ರೆಂಬೆಗಳನ್ನು ಕೂಡಿಸಿ ಕಸಿ ಮಾಡುತ್ತಾರೆ. ಹೀಗೆ ಜೋಡಿಸಿದ ರೆಂಬೆ ಕೊಂಬೆಗಳು ಒಟ್ಟಾಗಿ ಗಟ್ಟಿಯಾದ ಮೇಲ್ಮೈಯನ್ನು ಒದಗಿಸುತ್ತವೆ. ಕುರ್ಚಿಹೀಗೆ ಬೆಳೆಯತೊಡಗುತ್ತದೆ.

ಕುರ್ಚಿ ಬೆಳೆದ ನಂತರ ಅದನ್ನು ಕತ್ತರಿಸಿ, ಒಣಗಿಸಿ, ನಯಗೊಳಿಸಿ ಮಾರಾಟ ಮಾಡುವುದಷ್ಟೆ ಕೆಲಸ. ಆದರೆ ಹೀಗೆ ಒಂದೊಂದು ಕುರ್ಚಿಯನ್ನು ಬೆಳೆಯಲೂ ಆರೇಳು ವರ್ಷಗಳ ಕಾಲ ಬೇಕು ಎನ್ನುತ್ತಾರೆ, ಗೇವಿನ್. ಗೇವಿನ್ನನಿಗೆ ಪೀಠೋಪಕರಣಗಳನ್ನು ಬೆಳೆಯುವ ಐಡಿಯಾ ಬಂದಿದ್ದೂ ಒಂದು ಕಥೆಯೇ.

ಚಿಕ್ಕಂದಿನಿಂದಲೇ ಗೇವಿನ್ನನಿಗೆ ಬೊನ್ಸಾಯಿ ಕಲೆಯ ಬಗೆ ಆಸಕ್ತಿ ಇತ್ತು. ಮರಗಳನ್ನು ಪುಟ್ಟದಾಗಿಸಿ ಬೆಳೆಸುವಂತೆಯೇ, ಅವಕ್ಕೆ ಬೇಕಿದ್ದ ಆಕಾರ ನೀಡಲು ಸಾಧ್ಯವೇ ಎಂದೂ ಯೋಚಿಸುತ್ತಿದ್ದ. ಈ ಯೋಚನೆಗೆ ಇಂಬುಕೊಟ್ಟದ್ದು ಅವನ ಕಾಯಿಲೆ. ಗೇವಿನ್ನನಿಗೆ ಹುಟ್ಟಾ ಬಂದ ಕಾಯಿಲೆ ಯಿಂದಾಗಿ ಆತನ ಬೆನ್ನುಮೂಳೆಗಳು ಬೆಸೆದುಕೊಳ್ಳುತ್ತಿದ್ದುವು. ದೇಹದ ಆಕಾರ ಅಷ್ಟಾವಕ್ರವಾಗುತ್ತಿತ್ತು. ಹೀಗಾಗಿ ಆತ ಹಲವು ಬಾರಿ ಶಸ್ತ್ರಕ್ರಿಯೆಗೆ ಒಳಗಾದ. ಪ್ರತಿ ಬಾರಿಯೂ ಮೂಳೆಗಳನ್ನು ನಿರ್ದಿಷ್ಟ ಆಕಾರದಲ್ಲಿ ಬೆಳೆಯಲು ಲೋಹದ ಚೌಕಟ್ಟನ್ನು ಧರಿಸಬೇಕಾಗುತ್ತಿತ್ತು. ಅನಂತರ ಈತ ಶಿಲ್ಪಕಲೆಯನ್ನು ಕಲಿತ. ಆ ಸಂದರ್ಭದಲ್ಲಿ ಕೈಗೆ ಸಿಕ್ಕ ವಸ್ತುಗಳಿಂದಲೇ ಪೀಠೋಪಕರಣಗಳನ್ನು ವಿನ್ಯಾಸ ಮಾಡುವ ಸವಾಲು ಮುಂದಾಗಿತ್ತು. ಇವೆಲ್ಲವೂ ಒಟ್ಟಾಗಿ, ಮರಗಳನ್ನೇ ನೇರವಾಗಿ ತಿದ್ದಿ, ಬೆಳೆಸಬಹುದಲ್ಲ ಎಂಬ ವಿಚಿತ್ರ ಕಲ್ಪನೆಗೆ ಮೂಲವಾದುವಂತೆ.

ಗಿಡ, ಮರಗಳ ಬೆಳವಣಿಗೆಯ ಅರಿವು. ಕಸಿ ತಂತ್ರಜ್ಞಾನದ ಕೌಶಲ. ಕಲಾವಿದನ ಕಲ್ಪನೆಗಳನ್ನು ಒಟ್ಟುಗೂಡಿಸಿ ಹೀಗೊಂದು ಪ್ರಯತ್ನಕ್ಕೆ ಈತ ಮುಂದಾದ. ಇಪ್ಪತ್ತು ವರ್ಷಗಳ ಪರಿಶ್ರಮದ ನಂತರ ಹಲವು ಮರಗಳನ್ನು ಹೀಗೆ ಬೆಳೆಸುವುದರಲ್ಲಿ ಸಫಲನಾದ. ಮಡದಿಯ ಜೊತೆಗೂಡಿ ಫುಲ್‌ಗ್ರೋನ್ ಕಂಪೆನಿಯನ್ನು ಸ್ಥಾಪಿಸಿದ. ಕಂಪೆನಿ ಸ್ಥಾಪನೆಯಾದ ಆರು ವರ್ಷಗಳ ನಂತರ ಮೊತ್ತಮೊದಲ ಕಾಡಿನಲ್ಲಿ ಬೆಳೆದ ಕುರ್ಚಿ ಮಾರಾಟವಾಯಿತು. ಇದೀಗ ಕುರ್ಚಿಗಳನ್ನಷ್ಟೆ ಅಲ್ಲ, ಸ್ಟೂಲು, ತೂಗುದೀಪಗಳು, ಮೇಜು ಮೊದಲಾದ ಪೀಠೋಪಕರಣಗಳನ್ನೂ ವಿನ್ಯಾಸ ಮಾಡಿ ಬೆಳೆಸುತ್ತಿದ್ದಾರೆ.

ಹಾಂ. ಒಂದು ಸಮಸ್ಯೆ ಇದೆ. ಅಂಗಡಿಗೆ ಹೋಗಿ, ನಾಲ್ಕೈದು ಬಗೆಯನ್ನು ನೋಡಿ, ಖರೀದಿ ಮಾಡುವಂತೆ ಈ ಕುರ್ಚಿಗಳನ್ನು ಮಾಡಲು ಆಗುವುದಿಲ್ಲ. ಮುಂದಾಗಿಯೇ ಎಂತಹ ಕುರ್ಚಿ ಬೇಕು ಎಂದು ಆರ್ಡರು ಕೊಡಬೇಕು. ಕನಿಷ್ಠ ಎಂದರೆ ಆರೇಳು ವರ್ಷ, ಕುರ್ಚಿ ಬೆಳೆಯುವವರೆಗೆ ಕಾಯಬೇಕು. ಅನಂತರ ಮನೆಗೆ ಕೊಂಡು ತರಬೇಕು. ಬೆಳೆಯುವವರಿಗೂ ಕೊಳ್ಳುವವರಿಗೂ ತಾಳ್ಮೆ ಇದ್ದರಷ್ಟೆ ಈ ಕಾಡಿನ ಕುರ್ಚಿಗಳು ದೊರಕಿಯಾವು.

ಈ ಇಪ್ಪತ್ತು ವರ್ಷಗಳಲ್ಲಿ ಫುಲ್ ಗ್ರೋನ್ ಕೆಲವು ನೂರು ಕುರ್ಚಿಗಳನ್ನು ಮಾರಿರಬಹುದು. ಅವನ್ನು ಪೀಠೋಪಕರಣವಾಗಿ ಬಳಸುವುದಕ್ಕಿಂತಲೂ ಕೊಂಡವರು ಕಲಾಕೃತಿಯಂತೆ ಬಳಸಿಕೊಂಡಿದ್ದೇ ಹೆಚ್ಚು. ಫುಲ್‌ಗ್ರೋನ್ ಮಾರಾಟ ಮಾಡಿರುವ ಬಹುತೇಕ ಕುರ್ಚಿ, ಪೀಠೋಪಕರಣಗಳು ವಿಶ್ವದ ಅತ್ಯಂತ ಪ್ರಸಿದ್ಧ ಮ್ಯೂಸಿಯಮ್ಮುಗಳಲ್ಲಿ ಕಲಾಕೃತಿಯಾಗಿ ಪ್ರದರ್ಶನಕ್ಕೆ ಇವೆ. ಈ ಕುರ್ಚಿಗಳನ್ನು ಬೆಳೆಯುವ ಆಸಕ್ತಿ ಇರುವವರು ಅಥವಾ ಆ ಬಗ್ಗೆ ತಿಳಿದುಕೊಳ್ಳುವವರನ್ನು ಗೇವಿನ್, ಅಲಿಸರ ತೋಟಕ್ಕೆ ಭೇಟಿ ನೀಡಬಹುದು. ವಿವಿಧ ಸ್ಥಿತಿಯಲ್ಲಿ ಬೆಳೆಯುತ್ತಿರುವ ಕುರ್ಚಿ–ಮರಗಳನ್ನು ನೋಡಬಹುದು. ಇನ್ನೂರು ಪೌಂಡು ಹಣ ಕೊಟ್ಟು ಪೀಠೋಪಕರಣಗಳ ಈ ಕಾಡನ್ನು ನೋಡಲು ಹೋಗುವವರೇ ಫುಲ್ ಗ್ರೋನ್ ಕಂಪನಿಗೆ ಆದಾಯ. ತಮ್ಮ ತೋಟದಲ್ಲಿ ಇಂತಹ ಮರಗಳನ್ನು ಬೆಳೆಯಲು ಆಸೆ ಇರುವವರಿಗೆ ಗೇವಿನ್-ಅಲೀಸ್ ಕಂಪನಿ ನೆರವಾಗುತ್ತದೆಯಂತೆ.

ನಮ್ಮೂರಿನ, ತೇಗ, ಮತ್ತಿ, ಗಂಧದ ಮರಗಳನ್ನೂ ಹೀಗೆ ತಿದ್ದಿ ಬೆಳೆಸುವಂತಾದರೆ ಎಷ್ಟು ಚೆನ್ನ ಅಲ್ಲವೇ! ❖

ಫೋನ್ ನಂಬರ್ ಸೇವ್ ಮಾಡಿಕೊಳ್ಳುವ ಮೊದಲು ಎಚ್ಚರ!

• ಕೃಷ್ಣ ಭಟ್

ಹತ್ತು ಸಂಖ್ಯೆಯ ಫೋನ್ ನಂಬರ್ ನಮ್ಮ ಎಷ್ಟೆಲ್ಲ ಮಾಹಿತಿಯನ್ನು ಹಂಚುತ್ತದೆ ಎಂಬ ಕಲ್ಪನೆಯೂ ನಮಗೆ ಬಹುತೇಕ ಸಮಯದಲ್ಲಿ ಇರುವುದಿಲ್ಲ!

ಕೊರಿಯರ್‌ನವನೋ, ಯಾವುದೋ ಒಂದು ಸಣ್ಣ ರಿಪೇರಿ ಕೆಲಸದವನೋ ಅಥವಾ ಯಾವುದೋ ಸಣ್ಣದೊಂದು ಮಾತಿಗಾಗಿ ನಾವು ಯಾವುದೋ ವ್ಯಕ್ತಿಯ ಫೋನ್ ನಂಬರ್ ಸೇವ್ ಮಾಡಿಕೊಳ್ಳುತ್ತೇವೆ. ನಮ್ಮ ಫೋನ್ ನಂಬರ್ ಅನ್ನು ಆ ವ್ಯಕ್ತಿಯೂ ಸೇವ್ ಮಾಡಿಕೊಳ್ಳುತ್ತಾನೆ. ಆ ಫೋನ್ ನಂಬರ್ ಸೇವ್ ಮಾಡಿದ ಕ್ಷಣದಿಂದಲೇ ನಾವು ಎಷ್ಟೆಲ್ಲ ಮಾಹಿತಿಯನ್ನು ನಾವು ಹಂಚುತ್ತಿರುತ್ತೇವೆ ಎಂಬ ಅರಿವೂ ನಮಗೆ ಇರುವುದೇ ಇಲ್ಲ!

ನಮ್ಮ ಬಗ್ಗೆ ಎಲ್ಲ ಮಾಹಿತಿ ತಿಳಿದುಕೊಳ್ಳುವುದಕ್ಕೆ ನಮ್ಮ ವಾಟ್ಸ್‌ಆ್ಯಪ್ ಸ್ಟೇಟಸ್ ಸಾಕು!

ಬಹುತೇಕರಿಗೆ ಬೆಳಿಗ್ಗೆ ವಾಕಿಂಗ್‌ಗೆ ಹೋದಾಗ ತೆಗೆದುಕೊಂಡ ಸೆಲ್ಫೀ ಇಂದ ಹಿಡಿದು, ಒಂದು ವಾರ ಬಿಟ್ಟು ಸಿಕ್ಕಿದ ಪಕ್ಕದ ಮನೆ ವ್ಯಕ್ತಿಯ ಜೊತೆಗೆ ತೆಗೆಸಿಕೊಂಡ ಸೆಲ್ಫೀ, ಪ್ರವಾಸಕ್ಕೆ ಹೊರಟರಂತೂ ಹೋಗಿ ಬರುವವರೆಗೆ ಪ್ರತಿ ಕ್ಷಣದ ಫೋಟೊ, ಯಾರದ್ದೋ ಮೇಲೆ ಸಿಟ್ಟಾದರೆ ಅವರಿಗೆ 'ತಾಗಿಸುವ' ಹಾಗೆ ಹಾಕುವ ಕೊಟೇಷನ್‌ಗಳು... ಹೀಗೆ ನಮ್ಮ ವಾಟ್ಸ್‌ಆ್ಯಪ್ ಸ್ಟೇಟಸ್ ಅನ್ನೋದು ವೈಯಕ್ತಿಕ ಬದುಕನ್ನು ಸಾರ್ವಜನಿಕ ಬದುಕನ್ನಾಗಿಸುವ ರಹದಾರಿ!

ಆದರೆ, ಇವು ನಮ್ಮ ವಲಯದಲ್ಲಿ ನಮ್ಮ ಇಮೇಜ್ ಬೆಳೆಸುವುದಕ್ಕೆ ಎಷ್ಟು ಉಪಕಾರಿಯೋ, ಅಷ್ಟೇ ಪ್ರಮಾಣದಲ್ಲಿ ನಮ್ಮ ವೈಯಕ್ತಿಕ ಬದುಕಿನ ಬುಡ ಅಲ್ಲಾಡಿಸುವುದಕ್ಕೆ ಅಪಕಾರಿಯೂ ಹೌದು! ನಾವು ನಮ್ಮ ವಿಳಾಸ, ನಮ್ಮ ಮನೆಯ ಲೊಕೇಷನ್, ಸಿಟ್ಟು, ಬೇಸರ, ಖುಷಿ, ಅಸಹನೆ, ಪ್ರೀತಿ, ವಿಶೇಷ ಕ್ಷಣಗಳು... ಇವೆಲ್ಲವನ್ನೂ ಆಫ್‌ಲೈನ್‌ನಲ್ಲಿ ಆಯ್ದ ವ್ಯಕ್ತಿಗಳ ಜೊತೆಗಷ್ಟೇ ಹಂಚಿಕೊಳ್ಳುತ್ತಿರುತ್ತೇವೆ.

ಆದರೆ, ಅದು ಆನ್‌ಲೈನ್‌ಗೂ ಅನ್ವಯ ಆಗಬೇಕು ಅನ್ನೋದನ್ನ ನಾವು ಮರೆಯುತ್ತೇವೆ.

ಈ ಹಿಂದೆ ವಾಟ್ಸ್‌ಆ್ಯಪ್ ಸ್ಟೇಟಸ್ ನೋಡಿಕೊಂಡು, ಮನೆಯ ಜನರು ಟ್ರಿಪ್‌ಗೆ ಹೋಗಿದ್ದಾರೆ ಅನ್ನೋದನ್ನ ಅರಿತು ಮನೆಗೆ ನುಗ್ಗಿ ಕಳ್ಳತನ ಮಾಡಿರುವ ಪ್ರಕರಣಗಳೆಲ್ಲ ಬೇಕಾದಷ್ಟಾಗಿವೆ. ಆದರೆ, ಅದಕ್ಕಿಂತ ದೊಡ್ಡ ಆತಂಕದ ಸಂಗತಿಯೆಂದರೆ, ನಾವು ನಮ್ಮ ಭಾವನಾತ್ಮಕ ಸಂಗತಿಗಳನ್ನು ಬೇಡದವರ ಜೊತೆಗೂ ಹಂಚಿಕೊಳ್ಳುತ್ತಿರುವುದು! ಇಲ್ಲಿ ಯಾರು ಬೇಕಾದರೂ ನಮ್ಮ ಭಾವನೆಗಳ ಜೊತೆಗೆ ಆಟವಾಡುವುದಕ್ಕೆ ನಾವೇ ಅವಕಾಶ ಮಾಡಿಕೊಡುತ್ತಿರುತ್ತೇವೆ.

ಒಂದು ರಿಪೇರಿಗೆ ಯಾರೋ ಒಬ್ಬ ಎಲೆಕ್ಟ್ರಿಷಿಯನ್ ಅನ್ನು ಕರೆಸುತ್ತೇವೆ. ಆತನಿಗೆ ಫೋನ್ ಮಾಡುವಾಗ ನಾವು ಅವನ ಫೋನ್ ನಂಬರ್ ಸೇವ್ ಮಾಡಿಕೊಳ್ಳುತ್ತೇವೆ. ನಾವು ಫೋನ್ ಮಾಡಿದ ನಂತರ ಅವನೂ ನಮ್ಮ ಫೋನ್ ನಂಬರ್ ಸೇವ್ ಮಾಡಿಟ್ಟುಕೊಳ್ಳುತ್ತಾನೆ. ಆಮೇಲೆ, ಆತನನ್ನು ನಾವು ಕರೆಸುವುದು ಬರಿ ಎಲೆಕ್ಟ್ರಿಕಲ್ ಕೆಲಸಕ್ಕೆ ಅಷ್ಟೇ... ಅವನ ಬಳಿ ನಾವು ಬೇರೆ ವಿಷಯವನ್ನೇನೂ ಮಾತನಾಡುವುದಿಲ್ಲ. ಮಾತನಾಡಿದರೂ, ಅದಕ್ಕೊಂದು ಅಳತೆ, ಮಾಪನ ಇರುತ್ತದೆ. ಅದನ್ನು ಹಿಡಿದುಕೊಂಡೇ ಎಷ್ಟು ಬೇಕೋ ಅಷ್ಟನ್ನೇ ಹೇಳುತ್ತೇವೆ.

ಆದರೆ, ನಾವು ಶೇರ್ ಮಾಡಿಕೊಂಡ ಫೋನ್ ನಂಬರ್ ಇದೆಯಲ್ಲ... ಅದು ವಾಟ್ಸ್‌ಆ್ಯಪ್‌ಗೆ ಕನೆಕ್ಟ್ ಆಗುತ್ತದೆ. ವಾಟ್ಸ್‌ಆ್ಯಪ್‌ನಲ್ಲಿ ನಾವು ಹಾಕಿದ ಸ್ಟೇಟಸ್ ಅವನಿಗೆ, ಅವನು ಹಾಕಿದ ಸ್ಟೇಟಸ್ ನಮಗೆ ಕಾಣಿಸುತ್ತಿರುತ್ತದೆ. ಫೋನ್ ನಂಬರ್ ಇದ್ದ ತಕ್ಷಣ ನಮ್ಮ ಫೇಸ್‌ಬುಕ್, ಇನ್‌ಸ್ಟಾಗ್ರಾಂನಲ್ಲಿ ನಾವು ಹಾಕಿದ ಪಬ್ಲಿಕ್ ಪೋಸ್ಟ್‌ಗಳೆಲ್ಲ ಪರಸ್ಪರರಿಗೂ ಕಾಣಿಸುತ್ತಿರುತ್ತವೆ.

ಇದಕ್ಕೆ ಪರಿಹಾರ ಎರಡೇ!

ಒಂದೋ ನಮ್ಮ ಸ್ಟೇಟಸ್ ತೋರಿಸಿಕೊಳ್ಳುವ ಚಟವನ್ನು ಬಿಡಬೇಕು ಅಥವಾ ಯಾರಿಗೆ ನಮ್ಮ ಸ್ಟೇಟಸ್ ತೋರಿಸಬೇಕು ಎಂಬುದನ್ನು ನಾವೇ ನಿರ್ಧರಿಸಬೇಕು! ಮೊದಲನೆಯದು ಮೇಲ್ನೋಟಕ್ಕೆ ಸುಲಭ ಅನ್ನಿಸಿದರೂ, ಈ ಕಾಲದಲ್ಲಿ ಬಹುತೇಕರಿಗೆ ಆಚರಣೆ ಕಷ್ಟ! ಆದರೆ, ಎರಡನೆಯದು ಮೇಲ್ನೋಟಕ್ಕೆ ಅಸಾಧ್ಯ ಅನ್ನಿಸಿದರೂ, ಸ್ವಲ್ಪ ಎಚ್ಚರ, ಪ್ರಜ್ಞೆ ಮತ್ತು ಜಾಣತನ ಬಳಸಿದರೆ ಅನುಷ್ಠಾನ ಸುಲಭ!

ಅದು ಹೇಗೆಂದರೆ, ನಾವು ಯಾವುದೇ ವ್ಯಕ್ತಿಯ ಫೋನ್ ನಂಬರ್ ಸೇವ್ ಮಾಡಿಕೊಳ್ಳುವ ಮುನ್ನ ಎರಡು ಬಾರಿ ಯೋಚನೆ ಮಾಡಬೇಕು. ಈ ವ್ಯಕ್ತಿಯ ಫೋನ್ ನಂಬರ್ ನಮಗೆ ಮತ್ತೊಮ್ಮೆ ಕಾಂಟ್ಯಾಕ್ಟ್ ಮಾಡುವುದಕ್ಕೆ ಬೇಕಾಗುತ್ತದೆಯೇ? ಅದನ್ನು ಸೇವ್ ಮಾಡಿಟ್ಟುಕೊಳ್ಳಬೇಕೆ? ಸೇವ್ ಮಾಡಿಕೊಳ್ಳಲೇಬೇಕು ಎನ್ನುವುದಾದರೆ ಸೇವ್ ಮಾಡಿ.

'ಕೊರಿಯರ್‌ನವನು ದಾರಿ ಗೊತ್ತಾಗ್ತಾ ಇಲ್ಲ ಸರ್, ನಿಮ್ಮ ಮನೆ ಲೊಕೇಷನ್ ಕಳಿಸಿ' ಅನ್ನುತ್ತಾನೆ. ಅವನಿಗೆ ನಾವೇ ಲೊಕೇಷನ್ ಕಳಿಸಬೇಕು ಎಂದಾದರೆ, ಫೋನ್ ನಂಬರ್ ಸೇವ್ ಮಾಡಿಕೊಂಡು, ವಾಟ್ಸ್‌ಆ್ಯಪ್‌ಗೆ ಹೋಗಿ, ಅವನಿಗೆ ಲೊಕೇಷನ್ ಕಳಿಸಬೇಕಾಗುತ್ತದೆ. ಹಾಗೆ ಮಾಡದೇ, ಅವನ ಬಳಿಯೇ, 'ಆಯ್ತು, ವಾಟ್ಸ್‌ಆ್ಯಪ್‌ನಲ್ಲಿ ಹಾಯ್ ಅಂತ ಕಳಿಸು' ಎಂದು ಅಂದುಬಿಡಿ. ಅಲ್ಲಿಗೆ, ಅವನು ನಿಮಗೆ ಹಾಯ್ ಎಂದು ಕಳಿಸಿದರೆ, ನೀವು ಅವನ ಕಾಂಟ್ಯಾಕ್ಟ್ ನಂಬರ್ ಸೇವ್ ಮಾಡುವ ಅಗತ್ಯವ ಬೀಳುವುದಿಲ್ಲ. ಸೀದಾ, ಅವನಿಗೆ ರಿಪ್ಲೈ ಮಾಡಿ ಲೊಕೇಷನ್ ಕಳಿಸಬಹುದು. ಒಂದು ವೇಳೆ, ಹಾಗಿದ್ದೂ... ನೀವೇ ಲೊಕೇಷನ್ ಕಳಿಸುವ ಅಥವಾ ಮತ್ತಿನ್ನೇನೋ ಕಳಿಸುವ ಅಗತ್ಯ ಬಿದ್ದಲ್ಲಿ, ಅವನ ಫೋನ್ ನಂಬರ್ ಕಾಪಿ ಮಾಡಿಕೊಂಡು ಟ್ರೂಕಾಲರ್‌ಗೆ ಹೋಗಿ, ಅಲ್ಲಿ ಆ ವ್ಯಕ್ತಿಯ ಫೋನ್ ನಂಬರ್ ಹಾಕಿ ಸರ್ಚ್ ಮಾಡಿ, ಅಲ್ಲಿ ಅವನ ಪ್ರೊಫೈಲ್ ಕೆಳಗಡೆ ವಾಟ್ಸ್‌ಆ್ಯಪ್ ಲಿಂಕ್ ಕೂಡ ಇರುತ್ತದೆ. ಅದರ ಮೇಲೆ ಒತ್ತಿದರೆ, ಸೀದಾ ಅವನ ಚಾಟ್ ಬಾಕ್ಸ್ ಓಪನ್ ಆಗುತ್ತದೆ. ಅಲ್ಲಿಗೆ, ನೀವು ಅವನ ಫೋನ್ ನಂಬರ್ ಸೇವ್ ಮಾಡುವ ಅಗತ್ಯ ಬೀಳುವುದಿಲ್ಲ!

ಆಗ ನಮ್ಮ ವಾಟ್ಸ್‌ಆ್ಯಪ್‌ನಲ್ಲಿ ಪರಸ್ಪರರ ಮಾಹಿತಿ ಸ್ಟೇಟಸ್ ಮೂಲಕ ತಿಳಿಯುವುದಿಲ್ಲ. ಜೊತೆಗೆ, ಇತರ ಅಪ್ಲಿಕೇಷನ್‌ಗಳೂ ಕೂಡ ನಮ್ಮ ಕಾಂಟ್ಯಾಕ್ಟ್ ಲಿಸ್ಟ್ ಮಾತ್ರ ಓದುವುದರಿಂದ ಈ ಸೇವ್ ಮಾಡಿಲ್ಲದ ಫೋನ್ ನಂಬರ್ ಜೊತೆಗೆ ನಾವು ಮಾಡಿರುವ ಯಾವ ಸಂವಹನವೂ ಡಿಜಿಟಲ್ ಸಂಬಂಧವನ್ನು ಬೆಸೆಯುವುದಿಲ್ಲ. ಇದೂ ಅಲ್ಲದೆ, ಇನ್ನೊಂದು ಆಯ್ಕೆಯೂ ವಾಟ್ಸ್‌ಆ್ಯಪ್‌ನಲ್ಲಿದೆ. ನಾವು ಸ್ಟೇಟಸ್ ಹಾಕುವಾಗಲೇ ಆ ಸ್ಟೇಟಸ್ ಯಾರಿಗೆ ಕಾಣಿಸುವಂತಿರಬಹುದು ಎಂದು ಎಕ್ಸ್‌ಕ್ಲೂಶನ್ ಲಿಸ್ಟ್ ಮಾಡಬಹುದು ಅಥವಾ ಯಾರಿಗೆ ಮಾತ್ರ ಕಾಣಿಸಬೇಕು ಅಂತಲೂ ಕಾಂಟ್ಯಾಕ್ಟ್‌ಗಳನ್ನು ಸೆಲೆಕ್ಟ್ ಮಾಡಬಹುದು. ಇವೆರಡೂ ಫೀಚರ್‌ಗಳು ನಮಗೆ ಬೇಡದವರನ್ನು ದೂರವಿಡುವುದಿಲ್ಲ. ನಮಗೆ ಯಾರದ್ದೋ ಮೇಲೆ ಸಿಟ್ಟಿದ್ದು, ಅವರು ನಮ್ಮ ಸ್ಟೇಟಸ್ ನೋಡಬಾರದು ಎಂದಾದರೆ ಅವರನ್ನು ಹೊರಗಿಟ್ಟು ಸ್ಟೇಟಸ್ ಹಾಕಬಹುದಷ್ಟೇ! ಆದರೆ, ನಮಗೆ ಗೊತ್ತಿಲ್ಲದೇ ಅಥವಾ ಪ್ರಜ್ಞೆಯಿಲ್ಲದೇ ನಮ್ಮ ಕಾಂಟ್ಯಾಕ್ಟ್ ಲಿಸ್ಟ್‌ನಲ್ಲಿ ಬಂದು ಕೂತಿರುವವರನ್ನು ಈ ಫೀಚರ್‌ನಿಂದ ಹೊರಹಾಕುವುದಕ್ಕೆ ಆಗುವುದಿಲ್ಲ. ಹೀಗಾಗಿ, ಇದಕ್ಕೆ ಅತ್ಯುತ್ತಮ ಪರಿಹಾರ ಅಂದರೆ, ಕಾಂಟ್ಯಾಕ್ಟ್ ಸೇವ್ ಮಾಡುವಾಗಲೇ ಬೇಕಾದ ಎಚ್ಚರ ವಹಿಸುವುದು! ಅಂದ ಹಾಗೆ, ನೀವು ಎಷ್ಟೇ ಆತ್ಮೀಯವಾಗಿ ಮಾತನಾಡಿದರೂ, ಆ ಕಡೆ ಮಾತನಾಡಿದವನು ನಿಮ್ಮ ಬಳಿ 'ವಾಟ್ಸ್‌ಆ್ಯಪ್‌ನಲ್ಲಿ ಹಾಯ್ ಅಂತ ಕಳಿಸು...' ಅಂದರೆ, ಅವ ನಿಮ್ಮನ್ನು ಎಷ್ಟು ನಂಬಿದ್ದಾನೆ ಅಂತಲೂ ಇದರಿಂದ ಅರ್ಥ ಮಾಡಿಕೊಳ್ಳಬಹುದು! ❖

ಎಸ್ಸೆಸ್ಸೆಲ್ಸಿ ಪರೀಕ್ಷೆ ದಿಕ್ಸೂಚಿ — ವಿಜ್ಞಾನ

ಎಸ್ಸೆಸ್ಸೆಲ್ಸಿ-ಪಿಯುಸಿ ಪರೀಕ್ಷೆ ದಿಕ್ಸೂಚಿ

ರಾಸಾಯನಿಕ ಕ್ರಿಯೆಗಳು ಮತ್ತು ಸಮೀಕರಣ

7) ಕಂದು ಬಣ್ಣದ ವಸ್ತು x ಅನ್ನು ಕಾಯಿಸಿದಾಗ ಅದರ ಮೇಲ್ಮೈ ಕಪ್ಪಾಗುವುದರೊಂದಿಗೆ y ಉತ್ಪತ್ತಿಯಾಗುವುದು ಬಿಸಿಯಾಗಿರುವ x ವಸ್ತುವಿನ ಮೇಲೆ ಹೈಡ್ರೋಜನ್ ಅನಿಲ ಹಾಯಿಸಿದಾಗ ಪುನಃ ಕಂದು ಬಣ್ಣದ x ವಸ್ತುವಾಗುವುದು.

ಅ) x ಮತ್ತು y ವಸ್ತುಗಳು ಯಾವುವು?

ಬ) ಇದು ಯಾವ ಬಗೆಯ ರಾಸಾಯನಿಕ ಕ್ರಿಯೆ ಆಗಿದೆ?

ಕ) ಈ ರಾಸಾಯನಿಕ ಕ್ರಿಯೆಯ ಸರಿದೂಗಿದ ಸಮೀಕರಣ ಬರೆಯಿರಿ

ಉತ್ತರ:– ಅ) x ವಸ್ತು:– ತಾಮ್ರ

y ವಸ್ತು : ತಾಮ್ರದ ಆಕ್ಸೈಡ್

ಬ) ತಾಮ್ರವನ್ನು ಕಾಯಿಸಿದಾಗ ಕಪ್ಪು ತಾಮ್ರದ ಆಕ್ಸೈಡ್ ಉಂಟಾಗುವುದು ಉತ್ಕರ್ಷಣ ಕ್ರಿಯೆ

ತಾಮ್ರದ ಆಕ್ಸೈಡ್‌ಗೆ ಹೈಡ್ರೋಜನ್ ಹಾಯಿಸಿದಾಗ ಪುನಃ ತಾಮ್ರ ಉಂಟಾಗುವುದು ರೆಡಾಕ್ಸ್ ಕ್ರಿಯೆ ಅಥವಾ ಉತ್ಕರ್ಷಣ–ಅಪಕರ್ಷಣ ಕ್ರಿಯೆ.

ಕ) ಈ ರಾಸಾಯನಿಕ ಕ್ರಿಯೆಯ ಸರಿದೂಗಿದ ಸಮೀಕರಣ

$$Cu + O_2 \longrightarrow 2CuO$$
$$CuO + H_2 \longrightarrow Cu + H_2O$$

8) ಮೆಗ್ನೀಸಿಯಮ್ ಲೋಹದಿಂದ ಮೆಗ್ನೀಸಿಯಂ ಆಕ್ಸೈಡ್ ಉಂಟಾಗುವುದನ್ನು ಹೇಗೆ ತೋರಿಸುವಿರಿ?

ಉತ್ತರ:– ಮರಳು ಕಾಗದದಿಂದ ಉಷ್ಣ ಸ್ವಚ್ಛಗೊಳಿಸಿರುವ ಒಂದು ಮೆಗ್ನೀಸಿಯಂ ಪಟ್ಟಿಯನ್ನು ತೆಗೆದುಕೊಳ್ಳಿ, ಅದನ್ನು ಇಕ್ಕಳದ ಸಹಾಯದಿಂದ ಒಂದು ತುದಿಯಲ್ಲಿ ಹಿಡಿದುಕೊಳ್ಳಿ, ಇನ್ನೊಂದು ತುದಿಯನ್ನು ಮದ್ಯಸಾರ ದೀಪದ ಜ್ವಾಲೆಯಲ್ಲಿ ಕಾಯಿಸಿ ಮೆಗ್ನೀಸಿಯಂ ಪಟ್ಟಿಯು ಪ್ರಕಾಶಮಾನವಾದ ಬಿಳಿ ಜ್ವಾಲೆಯೊಂದಿಗೆ ಉರಿದು ಬೆಳ್ಳನೆಯ ಬೂದಿಯನ್ನು ಕೊಡುತ್ತದೆ. ಇಲ್ಲಿ ಉತ್ಪತ್ತಿಯಾದ ಈ ಬೆಳ್ಳನೆಯ ಬೂದಿಯೇ ಮೆಗ್ನೀಷಿಯಂ ಆಕ್ಸೈಡ್, ಈ ಕ್ರಿಯೆಯಲ್ಲಿ ಮೆಗ್ನೀಷಿಯಂ ಲೋಹವು ಆಕ್ಸಿಜನ್ ಜೊತೆ ಸಹವರ್ತಿಸಿ ಮೆಗ್ನೀಸಿಯಮ ಆಕ್ಸೈಡ್ ಉಂಟು ಮಾಡುತ್ತದೆ.

9) ಸೀಸದ ನೈಟ್ರೇಟ್ ದ್ರಾವಣ ಮತ್ತು ಪೊಟ್ಯಾಸಿಯಂ ಆಯೋಡೈಡ್ ನಡುವೆ ಉಂಟಾಗುವ ರಾಸಾಯನಿಕ ಕ್ರಿಯೆಯನ್ನು ವಿವರಿಸಿ

ಉತ್ತರ:– ಒಂದು ಪ್ರನಾಳದಲ್ಲಿ ಸ್ವಲ್ಪ ಸೀಸದ ನೈಟ್ರೇಟ್ ದ್ರಾವಣ ತೆಗೆದುಕೊಳ್ಳಿ ಅದಕ್ಕೆ ಸ್ವಲ್ಪ ಪೊಟ್ಯಸಿಯಂ ಆಯೋಡೈಡ್ ಸೇರಿಸಿ ಚೆನ್ನಾಗಿ ಕುಲುಕಿ ಈಗ ಘನ ಸ್ಥಿತಿಯಲ್ಲಿರುವ ಹಳದಿ ಬಣ್ಣದ ಒಂದು ಹೊಸ ಸಂಯುಕ್ತ ಉಂಟಾಗುವುದು ಕಂಡುಬರುತ್ತದೆ, ಈ ಸಂಯುಕ್ತದ ಹೆಸರು ಸೀಸದ ಅಯೋಡೈಡ್, ಈ ಕ್ರಿಯೆಯಲ್ಲಿ ಪೊಟಾಸಿಯಂ ನೈಟ್ರೇಟ್ ಎಂಬ ಇನ್ನೊಂದು ಸಂಯುಕ್ತವೂ ಉಂಟಾಗುತ್ತದೆ, ಇದು ದ್ರಾವಣದಲ್ಲಿ ವಿಲೀನಗೊಂಡಿರುತ್ತದೆ, ಸೀಸದ ನೈಟ್ರೇಟ್ ದ್ರಾವಣ ಮತ್ತು ಪೊಟ್ಯಾಸಿಯಂ ಅಯೊಡೈಡ್‌ಗಳ ನಡುವೆ ಉಂಟಾಗುವುದು ಒಂದು ರಾಸಾಯನಿಕ ಕ್ರಿಯೆ, ಈ ಕ್ರಿಯೆಯಲ್ಲಿ ಹೊಸ ಪದಾರ್ಥಗಳು ಉತ್ಪತ್ತಿಯಾಗುತ್ತದೆ.

10) ರಾಸಾಯನಿಕ ಬದಲಾವಣೆ ಎಂದರೇನು? ಉದಾಹರಣೆ ಕೊಡಿ

ಉತ್ತರ:– ಯಾವುದೇ ರಾಸಾಯನಿಕ ಪದಾರ್ಥ ಇಲ್ಲವೇ ಪದಾರ್ಥಗಳಲ್ಲಿ ಉಂಟಾಗುವ ಬದಲಾವಣೆಯಿಂದ ಒಂದು ಅಥವಾ ಹೆಚ್ಚು ಹೊಸ ರಾಸಾಯನಿಕ ಪದಾರ್ಥಗಳನ್ನು ಉತ್ಪತ್ತಿ ಮಾಡುವ ಕ್ರಿಯೆಗೆ ರಾಸಾಯನಿಕ ಬದಲಾವಣೆ ಎನ್ನುತ್ತಾರೆ. ಉದಾ:– ಇಂಧನ ದಹನ, ಕಬ್ಬಿಣ ತುಕ್ಕು ಹಿಡಿಯುವುದು

11) ರಾಸಾಯನಿಕ ಕ್ರಿಯೆ ನಡೆದಾಗ ಗಮನಿಸಬಹುದಾದ ವೀಕ್ಷಣೆಗಳ ಪಟ್ಟಿ ಮಾಡಿ.

ಉತ್ತರ:– ರಾಸಾಯನಿಕ್ರಿಯೆ ನಡೆದಾಗ ಈ ಕೆಳಗಿನ ಬದಲಾವಣೆ ಕಾಣಬಹುದು

1) ಪದಾರ್ಥಗಳ ಸ್ಥಿತಿ ಬದಲಾವಣೆ
2) ಪದಾರ್ಥಗಳ ಬಣ್ಣ ಬದಲಾವಣೆ
3) ಅನಿಲ ಬಿಡುಗಡೆ
4) ತಾಪದಲ್ಲಿ ಬದಲಾವಣೆ

12) ರಾಸಾಯನಿಕ ಕ್ರಿಯೆಗೆ ಸಂಬಂಧಿಸಿದಂತೆ ಪ್ರತಿವರ್ತಕಗಳು ಮತ್ತು ಉತ್ಪನ್ನಗಳು ಎಂದರೇನು?

ಉತ್ತರ:– ಒಂದು ರಾಸಾಯನಿಕ ಕ್ರಿಯೆಯಲ್ಲಿ ಪಾಲ್ಗೊಳ್ಳುವ ಪದಾರ್ಥಗಳಿಗೆ ಪ್ರತಿವರ್ತಕಗಳು ಎಂದು ಹೆಸರು, ಒಂದು ರಾಸಾಯನಿಕ ಕ್ರಿಯೆಯಲ್ಲಿ ಉಂಟಾಗುವ ಹೊಸಪದಾರ್ಥಗಳಿಗೆ ಉತ್ಪನ್ನ ಎನ್ನುವರು

13) ರಾಸಾಯನಿಕ ಸಮೀಕರಣ ಎಂದರೇನು?

ಉತ್ತರ:– ಸಂಕೇತಗಳು ಮತ್ತು ಸೂತ್ರಗಳನ್ನು ಉಪಯೋಗಿಸಿಕೊಂಡು ಒಂದು ರಾಸಾಯನಿಕ ಕ್ರಿಯೆಯನ್ನು ಪ್ರತಿನಿಧಿಸುವುದಕ್ಕೆ ರಾಸಾಯನಿಕ ಸಮೀಕರಣ ಎನ್ನುವರು.

14) ರಾಸಾಯನಿಕ ಸಮೀಕರಣದಲ್ಲಿ ಬಾಣದ ಗುರುತು ಏನನ್ನು ಸೂಚಿಸುತ್ತದೆ?

ಉತ್ತರ:– ರಾಸಾಯನಿಕ ಸಮೀಕರಣದಲ್ಲಿರುವ ಬಾಣದ ಗುರುತು ರಾಸಾಯನಿಕ ಕ್ರಿಯೆ ಜರಗುವ ದಿಕ್ಕನ್ನು ಸೂಚಿಸುತ್ತದೆ.

15) ಸಮೀಕರಣಗಳನ್ನು ಸರಿದೂಗಿಸುವ ಪ್ರಕ್ರಿಯೆಯನ್ನು ಒಳಗೊಂಡ ಹಂತಗಳನ್ನು ಬರೆಯಿರಿ

ಉತ್ತರ:–ಸಮೀಕರಣಗಳನ್ನು ಸರಿದೂಗಿಸುವ ಪ್ರಕ್ರಿಯೆಗಳ ಹಂತಗಳು ಹೀಗಿವೆ:–

ಹಂತ 1 :– ರಾಸಾಯನಿಕ ಕ್ರಿಯೆಯು ಪ್ರತಿವರ್ತಕಗಳು ಮತ್ತು ಉತ್ಪನ್ನಗಳು ಯಾವುವು ಎಂಬುದನ್ನು ಮೊದಲು ತಿಳಿದುಕೊಂಡು ಆ ರಾಸಾಯನಿಕ ಕ್ರಿಯೆಗೆ ಪದ ಸಮೀಕರಣವನ್ನು ಬರೆಯಬೇಕು. ಪ್ರತಿವರ್ತಕಗಳನ್ನು ಬಾಣದ ಗುರುತಿನ ಎಡಗಡೆಯೂ ಉತ್ಪನ್ನಗಳನ್ನು ಬಾಣದ ಗುರುತಿನ ಬಲಗಡೆ ಬರೆಯಬೇಕು

ಹಂತ–2:– ಈ ಹಂತದಲ್ಲಿ ರಾಸಾಯನಿಕ ಕ್ರಿಯೆಯ ಕಚ್ಚಾ ಸಮೀಕರಣ ಬರೆಯಲಾಗುತ್ತದೆ. ಇಲ್ಲಿ ಪ್ರತಿಪ್ರವರ್ತಕ ಮತ್ತು ಉತ್ಪನ್ನಗಳ ರಾಸಾಯನಿಕ ಸೂತ್ರ/ಸಂಕೇತಗಳನ್ನು ಉಪಯೋಗಿಸಿ ಸಮೀಕರಣಗಳನ್ನು ಬರೆಯಲಾಗುತ್ತದೆ. ಈ ಹಂತದಲ್ಲಿ ಸಮೀಕರಣವು ಸರಿದೂಗಿಸಿರುವುದಿಲ್ಲ

ಹಂತ 3 :– ಸಾಮಾನ್ಯವಾಗಿ ಗರಿಷ್ಟ ಸಂಖ್ಯೆಯ ಪರಮಾಣುಗಳನ್ನು ಹೊಂದಿರುವ ಸಂಯುಕ್ತದಿಂದ ಸರಿದೂಗಿಸುವಿಕೆಯನ್ನು ಪ್ರಾರಂಭಿಸಲಾಗುತ್ತದೆ. ಹಾಂ! ಪರಮಾಣುಗಳ ಸಂಖ್ಯೆಯನ್ನು ಸರಿದೂಗಿಸಲು ಸಂಯುಕ್ತಗಳ ಅಥವಾ ಧಾತುಗಳ ಅಣುಸೂತ್ರವನ್ನು ಬದಲಾಯಿಸುವಂತೆ ಇಲ್ಲ.

ಹಂತ 4:– ಸಮೀಕರಣದ ಎಡಭಾದಲ್ಲಿರುವ ಪ್ರತಿವರ್ತಕ ಮತ್ತು ಬಲಭಾಗದಲ್ಲಿರುವ ಉತ್ಪನ್ನದ ಪ್ರತಿಯೊಂದು ಪರಮಾಣುವಿನ ಸಂಖ್ಯೆಯನ್ನು ಪ್ರತ್ಯೇಕವಾಗಿ ಪಟ್ಟಿ ಮಾಡಿಕೊಳ್ಳಲಾಗುವುದು

ಹಂತ 5:– ಅತ್ಯಧಿಕ ಪರಮಾಣುಗಳುಳ್ಳ ಸಂಯುಕ್ತದಿಂದ ಸರಿದೂಗಿಸುವ ಕ್ರಿಯೆಯನ್ನು ಆರಂಭಿಸಲಾಗುತ್ತದೆ. ಸಾಮಾನ್ಯವಾಗಿ ಸರಿದೂಗಿಸದೇ ಇರುವ ಮೂರನೇ ಧಾತುವನ್ನು ಆರಿಸಿಕೊಂಡು ಸರಿದೂಗಿಸಲಾಗುತ್ತದೆ.

ಹಂತ–6:– ಅಂತಿಮವಾಗಿ ಸರಿದೂಗಿಸಿದ ಸಮೀಕರಣದ ನಿಖರತೆಯನ್ನು ಪರೀಕ್ಷಿಸಲು ಸಮೀಕರಣದ 2 ಬದಿಯಲ್ಲಿರುವ ಧಾತುಗಳ ಪರಮಾಣುಗಳನ್ನು ಲೆಕ್ಕ ಮಾಡಲಾಗುತ್ತದೆ.

ಹಂತ 7:– ಭೌತ ಸ್ಥಿತಿಗಳ ಸಂಕೇತಗಳನ್ನು ಬರೆಯುವುದು

(ಮುಂದುವರಿಯುವುದು)

ಪಿಯುಸಿ ಪರೀಕ್ಷೆ ದಿಕ್ಸೂಚಿ — CHEMISTRY

Types of Solutions

Problems:-

9. Calculate the osmotic pressure of 8 % sucrose solution at 293 K. ($R = 8.314 JK^{-1} mol^{-1}$)

Soln:- The osmotic pressure is given by,

$$\pi = \frac{RTw}{MV}$$

Given that – w = 8g, M = 342 g;

$(C_{12}H_{22}O_{11}$ – mol. mass is 342)

Soln:- (.........Contd)

$$V = 100\,cm^3 \;(\because 8\%\ \text{solution})$$
$$= 100 \times 10^{-6}\,m^3,\ T = 298\,K$$
$$\therefore \pi = \frac{8.314 \times 293 \times 8}{342\,(100 \times 10^{-6})}$$
$$= 569825\ Pa$$
$$= 569.825\ kPa$$

10. If 15g of urea is dissolved in 90g of water, find (a) the relative lowering of vapour pressure of the solution.

(b) the vapour pressure of the solution if the vapour pressure of pure water at that temperature is 3000 Pa.

Ans:- According to Raoult's law, the relative lowering of vapour pressure is given by,

$$\frac{P^0 - P}{P^0} = \frac{n_2}{n_1 + n_2}$$

(a) Number of moles $= \dfrac{\text{mass}}{\text{molecular mass}}$

$\therefore n_2$ the number of moles of urea

$$= \frac{15}{60} = 0.25$$

and n_1 the number of moles of the solvent water is $= \dfrac{90}{18} = 5$

$$\therefore \frac{P^0 - P}{P^0} = \frac{0.25}{5 + 0.25} = 0.04762$$

$\therefore$ the relative lowering of the vapour pressure is 0.04762.

(b) $P^0 = 3000\ Pa$ (given)

$$P^0 - P = 0.04762 \times P^0$$
$$= 0.04762 \times 3000$$
$$= 142.8\ Pa$$
$$\therefore P = P^0 - 142.8 = 3000 - 142.8$$
$$= 2857.14\ Pa$$

$\therefore$ Vapour pressure of the solution

$$= 2857.14\ Pa$$

11. State the Van't Hoff's theory of dilute solutions

Ans:- The Van't Hoff's theory of dilute solutions states that – The osmotic pressure of a dilute solution is equal to the pressure which the solute would exert if it can be converted into a gas at the same temperature occupying the same volume as that of the solution.

12. What is meant by a semipermeable membrane? Give examples.

Ans:- A membrane which allows only the solvent molecules to pass through it but not he solute particles is called a semipermeable membrane

Eg: Plant membranes, animal membranes like pig's bladder skin and artificial membranes like cupric ferrocyanide deposited on a porous wall etc.,

13. Mention some of the differences between the ideal and non ideal solutions.

Ans:- Some of the differences between the ideal and non ideal solutions are –

Ideal solutions	*Non - ideal solutions*
1. The intermolecular interactions between the components of the solution are similar to those in the pure components.	The intermolecular interactions between the components of the solution are different from those found in the pure components.
2. There is no volume change during mixing. ($\Delta V = 0$)	Volume of the solution is either more or less than the total volume of the components mixed.
3. The enthalpy of mixing is zero ($\Delta H = 0$), that is no heat is evolved or absorbed when a solution is prepared.	The enthalpy of mixing is not zero ($\Delta H \neq 0$), that is heat is either evolved or absorbed during mixing of the compounds.
4. Obey's Raoult's law of solution.	Does not obey Raoult's law of solution. It shows either positive or negative deviation.

14. Components of a binary mixture of two liquids A and B were being separated by distillation. After some time, separation of components stopped and composition of vapour phase became same as that of liquid phase. Both the components started coming in the distillate. Explain why this happened.

Ans:- When the composition of a binary mixture of two liquids A and B in the liquid state and in the vapour phase is the same, the mixture is known as azeotropic mixture. In any azeotropic mixture, the components cannot be separated any more.

15. Explain why on addition of 1 mole of NaCl to 1 litre of water, the boiling point of water increases, while addition of 1 mole of methyl alcohol to one litre of water decreases its boiling point

Ans:- Sodium chloride (NaCl) is a non-volatile solute. When added to water taken in a beaker, the solute occupies some surface area. As a result, the vapour pressure decreases and the boiling point of solution increases. On the other hand, methyl alcohol is more volatile than water. The addition of methyl alcohol to water increases the total vapour pressure of the solution. The boiling point of the solution decreases.

ಎಸ್ಸೆಸ್ಸೆಲ್ಸಿ ಗಣಿತ ವಿಷಯದ ಇಂಗ್ಲಿಷ್ ಮಾಧ್ಯಮದ ಪ್ರಶ್ನೋತ್ತರಕ್ಕಾಗಿ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಮಾಹಿತಿ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರ

ಕೊಪ್ಪಳ: 9 ಕಾರ್ಖಾನೆಗಳಿಗೆ ನೋಟಿಸ್

ಮಾಲಿನ್ಯ ನಿಯಂತ್ರಣ ಮಂಡಳಿಯ ನಿಯಮ ಉಲ್ಲಂಘಿಸಿದ ಆರೋಪ

• ಪ್ರಮೋದ ಕುಲಕರ್ಣಿ

ಕೊಪ್ಪಳ: ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ಜೊತೆಗಿನ ಸಮ್ಮತಿ ಪತ್ರದಲ್ಲಿನ ನಿಯಮಗಳ ಉಲ್ಲಂಘನೆ ಕುರಿತು 9 ಕಾರ್ಖಾನೆಗಳಿಗೆ ಮಂಡಳಿಯು ಪ್ರಸ್ತಾವಿತ ನಿರ್ದೇಶನಗಳ ಸೂಚನೆ (ಎನ್‌ಪಿಡಿ) ನೋಟಿಸ್ ನೀಡಿದೆ.

ಹಿರೇಬಗನಾಳದ ಮೆ.ತನುಶ್ ಇಸ್ಪಾತ್ ಪ್ರೈವೆಟ್ ಲಿಮಿಟೆಡ್ ಯುನಿಟ್-1 (ಶರವಣ ಅಲಾಯ್ ಸ್ಟೀಲ್ ಪ್ರೈವೆಟ್ ಲಿಮಿಟೆಡ್), ಯುನಿಟ್-2 (ಹರೇಕೃಷ್ಣಾ ಮೆಟಾಲಿಕ್ ಸ್ಟೀಲ್ ಪ್ರೈವೆಟ್ ಲಿಮಿಟೆಡ್), ಧ್ರುವದೇಶ್ ಮೆಟಾ ಸ್ಟೀಲ್ ಪ್ರೈವೆಟ್ ಲಿಮಿಟೆಡ್, ಚಿಕ್ಕಬಗನಾಳದ ಬಾಬಾ ಅಖಿಲಾ ಸಾಯಿಜ್ಯೋತಿ ಇಂಡಸ್ಟ್ರೀಸ್, ಕುಣಿಕೇರಿಯ ಏಎಲ್‌ಸಿಸ್ ಐರನ್ ಮತ್ತು ಸ್ಟೀಲ್, ಭದ್ರಶ್ರೀ ಸ್ಟೀಲ್ ಮತ್ತು ಪವರ್ ಲಿಮಿಟೆಡ್, ಹಾಲವರ್ತಿಯ ಮೆ.ಪಿ. ಬಾಲಸುಬ್ಬಶೆಟ್ಟಿ ಅಂಡ್ ಸನ್ಸ್, ಎಸ್.ಕೆ. ಸ್ಟೀಲ್ಸ್ ಟೆಕ್ ಪ್ರೈವೆಟ್ ಲಿಮಿಟೆಡ್ ಮತ್ತು ಕೆರೆಹಳ್ಳಿಯ ಕೊಪ್ಪಳ ಸ್ಟೀಲ್ಸ್ ಪ್ರೈವೆಟ್ ಲಿಮಿಟೆಡ್ ಕಂಪನಿಗಳಿಗೆ ಎನ್‌ಪಿಡಿ ನೀಡಲಾಗಿದೆ.

> ಪರಿಸರ ಮಾಲಿನ್ಯ ನಿಯಂತ್ರಣ ಮಂಡಳಿ ನಿರ್ದೇಶನದ ಅನ್ವಯ ಈಗ ಒಂಬತ್ತು ಕಾರ್ಖಾನೆಗಳಿಗೆ ಎನ್‌ಪಿಡಿ ಜಾರಿ ಮಾಡಲಾಗಿದೆ. ಮಂಡಳಿ ಮುಂದಿನ ತೀರ್ಮಾನ ಕೈಗೊಳ್ಳಬೇಕಿದೆ
> ಡಾ.ಸುರೇಶ ಇಟ್ನಾಳ
> ಜಿಲ್ಲಾಧಿಕಾರಿ

'ಈ ಕಾರ್ಖಾನೆಗಳು ಅನುಪಾಲನಾ ವರದಿ ಸಲ್ಲಿಸಿದ ನಂತರ ಪರಿಸರ ಮಾಲಿನ್ಯ ನಿಯಂತ್ರಣ ಮಂಡಳಿಯಿಂದ ಮತ್ತೆ ಪರಿಶೀಲನೆ ನಡೆಸಿ ಅಗತ್ಯ ಕ್ರಮ ವಹಿಸಲಾಗುವುದು. ಈ ವಿಷಯಕ್ಕೆ ಸಂಬಂಧಿಸಿ ಜಿಲ್ಲಾಡಳಿತ ವತಿಯಿಂದಲೂ ಕ್ರಮಗಳನ್ನು ಕೈಗೊಳ್ಳಲಾಗಿದೆ' ಎಂದು ಜಿಲ್ಲಾಧಿಕಾರಿ ಡಾ. ಸುರೇಶ ಇಟ್ನಾಳ ಅವರು ಸರ್ಕಾರಕ್ಕೆ ವರದಿ ಸಲ್ಲಿಸಿದ್ದಾರೆ.

ಮಂಡಳಿಯ ಸೂಚನೆ ಮೇರೆಗೆ ಜಿಲ್ಲಾಡಳಿತ ಮೇ 21ರಂದು ಎರಡು ಕಾರ್ಖಾನೆಗಳಿಗೆ ಬೀಗಮುದ್ರೆ ಹಾಕಿದ್ದು, ಇನ್ನುಳಿದ ಮೂರು ಕಾರ್ಖಾನೆಗಳಿಗೆ ಬೀಗಮುದ್ರೆ ಒತ್ತುವ (ಕ್ಲೋಸರ್) ನೋಟಿಸ್ ಜಾರಿ ಮಾಡಿದೆ. ಇದಕ್ಕೆ ಸಮ್ಮತಿ ಲಭಿಸಿದ ಬಳಿಕ ಮುಂದಿನ ಕ್ರಮ ವಹಿಸುವುದಾಗಿ ಜಿಲ್ಲಾಡಳಿತ ತಿಳಿಸಿದೆ.

ಮಾಲಿನ್ಯಕಾರಕ ಕಾರ್ಖಾನೆಗಳನ್ನು ಬಂದ್ ಮಾಡಬೇಕು, ಕಾರ್ಖಾನೆಗಳ ವಿಸ್ತರಣೆಗೆ ಅವಕಾಶ ನೀಡಬಾರದು ಎಂದು ಆಗ್ರಹಪಡಿಸಿ ಜಿಲ್ಲಾ ಬಚಾವೊ ಆಂದೋಲನ ಸಮಿತಿ, ಕೊಪ್ಪಳ ಪರಿಸರ ಹಿತರಕ್ಷಣಾ ವೇದಿಕೆ 208 ದಿನಗಳಿಂದ ಧರಣಿ ನಡೆಸುತ್ತಿದೆ.

ಕಾರ್ಖಾನೆಯಿಂದ ಉಂಟಾಗುವ ವಾಯುಮಾಲಿನ್ಯ

ಗಮನ ಸೆಳೆದ ಪ್ರಜಾವಾಣಿ, ಡೆಕ್ಕನ್ ಹೆರಾಲ್ಡ್ ವರದಿಗಳು

ಕಾರ್ಖಾನೆಗಳಿಂದ ಮಾಲಿನ್ಯ ಹಾಗೂ ಹೊಸದಾಗಿ ವಿಸ್ತರಣೆಯಾದರೆ ಜನರಿಗೆ ಅದರಿಂದಾಗುವ ಸಮಸ್ಯೆಗಳ ಬಗ್ಗೆ 'ಪ್ರಜಾವಾಣಿ' ಹಾಗೂ 'ಡೆಕ್ಕನ್ ಹೆರಾಲ್ಡ್' ದಿನಪತ್ರಿಕೆಗಳು ನಿರಂತರವಾಗಿ ವರದಿಗಳನ್ನು ಪ್ರಕಟಿಸಿದ್ದವು.

ಈ ಸಮಸ್ಯೆಯ ಕುರಿತು ಡೆಕ್ಕನ್ ಹೆರಾಲ್ಡ್‌ನಲ್ಲಿ ಮೇ 17ರಂದು ಪ್ರಕಟವಾಗಿದ್ದ ವರದಿ ಆಧರಿಸಿ, ಮುಖ್ಯಮಂತ್ರಿಗಳ ವಿಶೇಷ ಕರ್ತವ್ಯಾಧಿಕಾರಿಗಳು ವರದಿ ಸಲ್ಲಿಸುವಂತೆ ಕೊಪ್ಪಳ ಜಿಲ್ಲಾಡಳಿತಕ್ಕೆ ಸೂಚಿಸಿದ್ದರು. ಅದರಂತೆ ಜಿಲ್ಲಾಧಿಕಾರಿ ಸರ್ಕಾರಕ್ಕೆ ವರದಿ ಸಲ್ಲಿಸಿದ್ದಾರೆ.

ಧಾರವಾಡಕ್ಕೆ ಪ್ರತ್ಯೇಕ ಪಾಲಿಕೆ ಷರತ್ತುಬದ್ಧ ಅನುಮೋದನೆ

ಧಾರವಾಡ: ಹುಬ್ಬಳ್ಳಿ–ಧಾರವಾಡ ಮಹಾನಗರ ಪಾಲಿಕೆ ವಿಭಜಿಸಿ ಧಾರವಾಡಕ್ಕೆ ಪ್ರತ್ಯೇಕ ಮಹಾನಗರ ಪಾಲಿಕೆ ರಚಿಸುವ ಪ್ರಸ್ತಾವಕ್ಕೆ ರಾಜ್ಯಪಾಲರು ಮಂಗಳವಾರ ಷರತ್ತುಬದ್ಧ ಅನುಮೋದನೆ ನೀಡಿದ್ದಾರೆ.

ಹಾಲಿ ಪಾಲಿಕೆ ಸದಸ್ಯರ ಅವಧಿ ಐದು ವರ್ಷ ಪೂರ್ಣಗೊಂಡ ನಂತರ ವಿಭಜನೆ ಜಾರಿಯಾಗಬೇಕು. 2026 ಜನವರಿ 1ರಿಂದ 2027 ಮಾರ್ಚ್ 31ರವರೆಗೆ ಆಡಳಿತ ಘಟಕಗಳ ಗಡಿ ಬದಲಾಯಿಸುವಂತಿಲ್ಲ ಎಂಬ ಜನಗಣತಿ ನಿರ್ದೇಶನಾಲಯದ ಸೂಚನೆಯನ್ನು ಪಾಲಿಸಬೇಕು, ಜನಗಣತಿ ಕಾರ್ಯಾಚರಣೆ ಮುಗಿದ ನಂತರ ಅಧಿಸೂಚನೆ ಅನುಷ್ಠಾನಗೊಳಿಸಬೇಕು ಎಂಬ ನಿಬಂಧನೆ ಹಾಕಿದ್ದಾರೆ.

'ವಿಭಜನೆ ನಂತರದ ಎರಡೂ ಪಾಲಿಕೆಗಳಿಗೆ ಆರ್ಥಿಕ ನೆರವು ಮತ್ತು ಆದಾಯ ಹಂಚಿಕೆಗೆ ರಾಜ್ಯ ಸರ್ಕಾರವು ಅಗತ್ಯ ಕ್ರಮ ಕೈಗೊಳ್ಳಬೇಕು' ಎಂದು ಸಲಹೆ ನೀಡಿದ್ದಾರೆ. ಪ್ರಸ್ತಾವವನ್ನು ರಾಜ್ಯ ಸರ್ಕಾರಕ್ಕೆ ಹಿಂತಿರುಗಿಸಿದ್ದಾರೆ.

ಮುಂದುವರಿದ ಹೋರಾಟ: ಈ ಮಧ್ಯೆ ಇಲ್ಲಿ ಅನಿರ್ದಿಷ್ಟಾವಧಿ ಧರಣಿ ಮುಂದುವರೆದಿದೆ. ಪ್ರತಿಭಟನಕಾರರು ಬಟ್ಟೆಯ ಮೇಲೆ ರಕ್ತದಲ್ಲಿ, 'ಮಹಾನಗರ ಪಾಲಿಕೆ ಆಗಲೇಬೇಕು' ಎಂದು ಬರೆದು ಪ್ರತಿಭಟನೆ ನಡೆಸಿದರು.

ಬಿಜೆಪಿ ಬೆಂಬಲ: ಧಾರವಾಡ ಪ್ರತ್ಯೇಕ ಪಾಲಿಕೆ ರಚನೆ ವಿಷಯದಲ್ಲಿ ಆಕ್ಷೇಪಿಸಿದ್ದ ಬಿಜೆಪಿಯವರು ಮಂಗಳವಾರ, ಹೋರಾಟಕ್ಕೆ ಬೆಂಬಲ ವ್ಯಕ್ತಪಡಿಸಿದರು.

ಧಾರವಾಡದಲ್ಲಿ ಮಂಗಳವಾರ ಪ್ರತ್ಯೇಕ ಮಹಾನಗರ ಪಾಲಿಕೆ ಹೋರಾಟ ವೇದಿಕೆಯಲ್ಲಿ ಕಾಂಗ್ರೆಸ್ ಮತ್ತು ಬಿಜೆಪಿ ಕಾರ್ಯಕರ್ತರ ನಡುವೆ ವಾಗ್ವಾದ ನಡೆಯಿತು

ಹಟ್ಟಿ ಚಿನ್ನದ ಗಣಿ ಕಂಪನಿ ನಿಯಮಿತ
(ಕರ್ನಾಟಕ ಸರ್ಕಾರದ ಒಂದು ಉದ್ಯಮ)
ಹಟ್ಟಿ – 584 115, ಲಿಂಗಸುಗೂರು–ತಾ., ರಾಯಚೂರು ಜಿಲ್ಲೆ, ಕರ್ನಾಟಕ.
ದೂರವಾಣಿ: 08537-275041,
CIN No. U85110KA1947SGC001321

ಕಾನೂನು ಸಲಹೆಗಾರ (Legal Consultant) ನೇಮಕಾತಿ

ಹಟ್ಟಿ ಚಿನ್ನದ ಗಣಿ ಕಂಪನಿ ನಿಯಮಿತವು ಕರ್ನಾಟಕ ಸರ್ಕಾರದ ಸೌಮ್ಯಕ್ಕೊಳಪಟ್ಟ ಉದ್ದಿಮೆಯಾಗಿದ್ದು, ಕಂಪನಿಯಲ್ಲಿ ಕಾನೂನು ಸಲಹೆಗಾರರಾಗಿ ಗುತ್ತಿಗೆ ಆಧಾರದ ಮೇಲೆ ಕಾರ್ಯನಿರ್ವಹಿಸಲು ಅರ್ಹರಿರುವ ನಿವೃತ್ತ ನ್ಯಾಯಾಧೀಶರ ನೇಮಕಾತಿಗೆ ಸಂಬಂಧಿಸಿದಂತೆ, ಅರ್ಹತೆ ಮತ್ತು ಇನ್ನಿತರ ವಿವರಗಳಿಗಾಗಿ ಹಟ್ಟಿ ಚಿನ್ನದ ಗಣಿ ಕಂಪನಿ ನಿಯಮಿತದ ವೆಬ್‌ಸೈಟ್ : **https://huttigold.karnataka.gov.in**ನ್ನು ವೀಕ್ಷಿಸಿ, ನಿವೃತ್ತ ನ್ಯಾಯಾಧೀಶರು **ದಿನಾಂಕ 01.06.2026 ರಂದು** ನೇರ ಸಂದರ್ಶನಕ್ಕೆ ಆಡಳಿತ ಕಛೇರಿ, ಹಟ್ಟಿ ಚಿನ್ನದ ಗಣಿ ಕಂಪನಿ ನಿಯಮಿತ ಹಟ್ಟಿ –584115 ತಾಲ್ಲೂಕು: ಲಿಂಗಸುಗೂರು, ಜಿಲ್ಲಾ: ರಾಯಚೂರು ಹಾಜರಾಗಲು ಈ ಮೂಲಕ ತಿಳಿಸಲಾಗಿದೆ.

ಸಹಿ/–ಕಾರ್ಯನಿರ್ವಾಹಕ ನಿರ್ದೇಶಕರು

ಭಾರತದ ಅತಿ ಹೆಚ್ಚು ಚಿನ್ನದ ಉತ್ಪಾದಕರು

ಕರ್ನಾಟಕ ನೀರಾವರಿ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಉದ್ಯಮ)
ಕಾರ್ಯಪಾಲಕ ಇಂಜಿನಿಯರ್‌ರವರ ಕಛೇರಿ, ಕನೀನಿನಿ, ನಂ.5, ಭದ್ರಾ ನಾಲಾ ವಿಭಾಗ, ದಾವಣಗೆರೆ. ಫೋ: 08192–264669
ಇ–ಮೇಲ್: eebcddvg@yahoo.co.in
ಸಂ:ಕಾಇಂ/ಕನೀನಿನಿ/ಭನಾವಿ.5/ದಾ/ಪಿ.ಬಿ.4/4701 ಭದ್ರಾ/2026–27/347
ದಿನಾಂಕ: 25.05.2026

ಟೆಂಡರ್ ಪ್ರಕಟಣೆ

ಉಲ್ಲೇಖ:– **No: EE/ KNNL/ BCD-5/DVG/PB3/2700ಭದ್ರಾ/CALL-2/ 2026-27/344 Dt:25.05.2026,**
No: EE/ KNNL/ BCD-5/DVG/PB3/4701ಭದ್ರಾ/2026-27/345 Date:25.05.2026
No: EE/ KNNL/ BCD-5/DVG/PB4/4701ಭದ್ರಾ/ CALL-3/ 2026-27/346 Date:25.05.2026

ವ್ಯವಸ್ಥಾಪಕ ನಿರ್ದೇಶಕರು, ಕ.ನೀ.ನಿ.ನಿ, ಬೆಂಗಳೂರು ಇವರ ಪರವಾಗಿ ಕಾರ್ಯಪಾಲಕ ಇಂಜಿನಿಯರ್, ಕ.ನೀ.ನಿ.ನಿ, ನಂ.5 ಭದ್ರಾ ನಾಲಾ ವಿಭಾಗ, ದಾವಣಗೆರೆ ರವರು, ಉಲ್ಲೇಖಿತ ಟೆಂಡರ್ ಪ್ರಕಟಣೆಗಳಲ್ಲಿ ಲೆ.ಶಿ 2700 ಭದ್ರಾ ಅಡಿಯಲ್ಲಿನ ಮಾನವ ಸಂಪನ್ಮೂಲ ಸರಬರಾಜು ಮಾಡುವ ಕಾಮಗಾರಿಗಳಿಗೆ ಮತ್ತು 4701 ಭದ್ರಾ ಅಡಿಯಲ್ಲಿನ ಕಾಮಗಾರಿಗಳಿಗೆ, KW-6, KW-1, KW-2, KW-3 ಮತ್ತು KW-4ಗಳಲ್ಲಿ ಏಕ/ದ್ವಿ ಲಕೋಟೆ ಪದ್ಧತಿಯಡಿ ಕೆಪಿಪಿಪಿ–ಪೋರ್ಟಲ್ ಮುಖಾಂತರ ಟೆಂಡರ್‌ಗಳನ್ನು ಅಹ್ವಾನಿಸಿದ್ದು, ಟೆಂಡರ್‌ಗೆಟ್ಟ ಮೊತ್ತ 13.51 ರಿಂದ 421.37 ಲಕ್ಷಗಳವರೆಗೆ ಇರುತ್ತದೆ. ಅರ್ಹ ಗುತ್ತಿಗೆದಾರರಿಂದ ಶೇಕಡಾವಾರು ಟೆಂಡರ್‌ಗಳನ್ನು ಕೆಪಿಪಿಪಿ–ಪೋರ್ಟಲ್ ವೆಬ್‌ಸೈಟ್ (https://kppp.karnataka.gov.in) ಮುಖಾಂತರವೇ ದಿನಾಂಕ: 25.05.2026 ರಿಂದ ಡೌನಲೋಡ್ ಮಾಡಿಕೊಂಡು ದಿನಾಂಕ: 02.06.2026 ರ ಸಂಜೆ 5.00 ಘಂಟೆವರೆಗೆ ಟೆಂಡರ್‌ಗಳನ್ನು ಸಲ್ಲಿಸಬಹುದಾಗಿರುತ್ತದೆ. ಟೆಂಡರ್ ಕುರಿತು ಸ್ಪಷ್ಟೀಕರಣಕ್ಕೆ ದಿನಾಂಕ: 29.05.2026 ರಂದು 4.00 ಘಂಟೆವರೆಗೆ, ಪ್ರಿ ಬಿಡ್ ಸಭೆ ದಿನಾಂಕ: 29.05.2026 ರಂದು ಬೆಳ್ಳಿಗ್ಗೆ 11.00 ಘಂಟೆಗೆ ಈ ಕೆಳಗೆ ಸಹಿ ಮಾಡಿದ ಕಛೇರಿಯಲ್ಲಿ ನೆರವೇರಿಸಲಾಗುವುದು ಮತ್ತು ತಾಂತ್ರಿಕ/ಆರ್ಥಿಕ ಬಿಡ್‌ನ್ನು ತೆರೆಯುವ ದಿನಾಂಕ: 03.06.2026 ರಂದು ಸಂಜೆ 5.10 ಘಂಟೆಗೆ ತೆರೆಯಲಾಗುವುದು. ಒಟ್ಟು ಕಾಮಗಾರಿ ಸಂಖ್ಯೆ :– 22 ಸಂಖ್ಯೆಗಳು

ಯಾವುದೇ ಕಾರಣ ನೀಡದೆ ಟೆಂಡರ್‌ಗಳನ್ನು ಮುಂದೂಡುವ, ಅಂಗೀಕರೀಸುವ ಅಥವಾ ತಿರಸ್ಕರಿಸುವ ಹಕ್ಕನ್ನು ಕೆಳಗೆ ಸಹಿ ಮಾಡಿರುವ ಅಧಿಕಾರಿಗಳು ಕಾಯ್ದಿರಿಸಿಕೊಂಡಿರುತ್ತಾರೆ. ಹೆಚ್ಚಿನ ಮಾಹಿತಿಗಾಗಿ ಕೆಪಿಪಿಪಿ–ಪೋರ್ಟಲ್ ಅಥವಾ ಕಛೇರಿ ವೇಳೆಯಲ್ಲಿ ಕೆಳಗೆ ಸಹಿ ಮಾಡಿದವರ ಕಛೇರಿಯನ್ನು ಸಂಪರ್ಕಿಸಬಹುದಾಗಿರುತ್ತದೆ.

ವಾಸಾಇ/ಡಿವಿಜಿ/101/ ಕೆಎಸ್‌ಎಂಸಿಎ/2026–27
ಸಹಿ/– ಕಾರ್ಯಪಾಲಕ ಇಂಜಿನಿಯರ್, ಕನೀನಿನಿ ನಂ.5 ಭದ್ರಾ ನಾಲಾ ವಿಭಾಗ, ದಾವಣಗೆರೆ.

ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ
ಮುಖ್ಯ ಅಭಿಯಂತರವರ ಕಾರ್ಯಾಲಯ,
ಸರ್.ಎಂ. ವಿಶ್ವೇಶ್ವರಯ್ಯ ರಸ್ತೆ, ಧಾರವಾಡ–580001
ಕಛೇರಿ : 0836–2447090, ಇ–ಮೇಲ್ : kwbcen@gmail.com

ಅಲ್ಪಾವಧಿ ಟೆಂಡರ್ ಪ್ರಕಟಣೆ (ಎಲೆಕ್ಟ್ರಾನಿಕ್ KPP ಪೋರ್ಟಲ್ ಮುಖಾಂತರ ಮಾತ್ರ)

ಈ ಕೆಳಗಿನ ಕಾಮಗಾರಿಗಳಿಗೆ ತಾಂತ್ರಿಕ ಮತ್ತು ಆರ್ಥಿಕ ಅರ್ಹತಾ ಅಗತ್ಯತೆಗಳನ್ನು ತೃಪ್ತಿಕರವಾಗಿ ಅರ್ಹರಿರುವ ಸಂಸ್ಥೆ/ಗುತ್ತಿಗೆದಾರರಿಂದ KPP ಪೋರ್ಟಲ್ (https://kppp.karnataka.gov.in) ಮೂಲಕ (ದ್ವಿ–ಟೆಂಡರ್ ದಾಖಲೆ ಪದ್ದತಿಯಲ್ಲಿ) ಅಲ್ಪಾವಧಿ ಟೆಂಡರ್ ಆಹ್ವಾನಿಸಲಾಗಿದೆ.

ಈ ಕಚೇರಿ ಟೆಂಡರ್ ಪ್ರಕಟಣೆ ಸಂಖ್ಯೆ:194 ದಿನಾಂಕ : 26–05–2026. 1) DBOT ಮಾದರಿ ಅಡಿಯಲ್ಲಿ ಶಿಗ್ಗಾಂವ ಪಟ್ಟಣಕ್ಕೆ ಕುಡಿಯುವ ನೀರು ಸರಬರಾಜು ವ್ಯವಸ್ಥೆಗಾಗಿ ನಾಗನೂರ ಕೆರೆ ಸುಧಾರಣೆ ಹಾಗೂ ಇತರೆ ಕಾಮಗಾರಿಗಳು. (ಇಡುಗಂಟು ಟೆಂಡರ್–ವೇರಿಯೇಷನ್ ಇರುವುದಿಲ್ಲಾ). INDENT No.KUWSDB/2026-27/WS/WORK_INDENT511.

ಈ ಕಚೇರಿ ಟೆಂಡರ್ ಪ್ರಕಟಣೆ ಸಂಖ್ಯೆ:195 ದಿನಾಂಕ : 26–05–2026. 2) DBOT ಮಾದರಿ ಅಡಿಯಲ್ಲಿ ಸವಣೂರು ಪಟ್ಟಣಕ್ಕೆ ಕುಡಿಯುವ ನೀರು ಸರಬರಾಜು ವ್ಯವಸ್ಥೆಗಾಗಿ ಮೋತಿ ತಲಾಬ ಕೆರೆ ಸುಧಾರಣೆ ಹಾಗೂ ಇತರೆ ಕಾಮಗಾರಿಗಳು. (ಇಡುಗಂಟು ಟೆಂಡರ್–ವೇರಿಯೇಷನ್ ಇರುವುದಿಲ್ಲಾ). INDENT No.KUWSDB/2026-27/WS/WORK_INDENT512.

ಈ ಕಚೇರಿ ಟೆಂಡರ್ ಪ್ರಕಟಣೆ ಸಂಖ್ಯೆ:196 ದಿನಾಂಕ : 26–05–2026. 3) DBOT ಮಾದರಿ ಅಡಿಯಲ್ಲಿ ಬಂಕಾಪುರ ಪಟ್ಟಣಕ್ಕೆ ಕುಡಿಯುವ ನೀರು ಸರಬರಾಜು ವ್ಯವಸ್ಥೆಗಾಗಿ ತೆವರಮಳ್ಳಿಹಳ್ಳಿ ಕೆರೆ ಸುಧಾರಣೆ ಹಾಗೂ ಇತರೆ ಕಾಮಗಾರಿಗಳು. (ಇಡುಗಂಟು ಟೆಂಡರ್–ವೇರಿಯೇಷನ್ ಇರುವುದಿಲ್ಲಾ). INDENT No.KUWSDB/2026-27/WS/WORK_INDENT513. ಹೆಚ್ಚಿನ ವಿವರಗಳಿಗಾಗಿ KPP ಪೋರ್ಟಲ್‌ನಲ್ಲಿ ನೋಡುವುದು ಅಥವಾ ಮುಖ್ಯ ಅಭಿಯಂತರು, ಕನನೀಸ ಮತ್ತು ಒಚ ಮಂಡಳಿ, ಧಾರವಾಡ ಕಚೇರಿಯನ್ನು ಸಂಪರ್ಕಿಸಬಹುದು.

ಸಹಿ/– ಮುಖ್ಯ ಅಭಿಯಂತರು,
ವಾಸಾಸಂಇ/ಧಾರವಾಡ/ಕೆಎಸ್‌ಎಂಸಿಎ/230/2026–27 ಕನನೀಸ ಮತ್ತು ಒಚ ಮಂಡಳಿ, ಧಾರವಾಡ

ಸರ್ಕಾರಿ ಆಸ್ತಿಗೆ ಅಕ್ರಮ ಇ–ಖಾತೆ ಕಂದಾಯ ನಿರೀಕ್ಷಕ ಅಮಾನತು

ಮೈಸೂರು: ಭೂಮಾಫಿಯಾ ಜೊತೆ ಶಾಮೀಲಾಗಿ ಸರ್ಕಾರಿ ಆಸ್ತಿಯನ್ನು ಖಾಸಗಿಯವರಿಗೆ ಅಕ್ರಮವಾಗಿ ಇ-ಖಾತೆ ಮಾಡಿಕೊಟ್ಟ ಆರೋಪದ ಮೇಲೆ ಜಿಲ್ಲೆಯ ರಮ್ಮನಹಳ್ಳಿ ಪಟ್ಟಣ ಪಂಚಾಯಿತಿಯ ಪ್ರಥಮ ದರ್ಜೆ ಕಂದಾಯ ನಿರೀಕ್ಷಕ ಎನ್. ಮಂಜುನಾಥ್ ಅವರನ್ನು ಸೇವೆಯಿಂದ ಅಮಾನತುಗೊಳಿಸಲಾಗಿದೆ.

ಪೌರಾಡಳಿತ ನಿರ್ದೇಶನಾಲಯ ಸೋಮವಾರ ಈ ಕುರಿತು ಆದೇಶ ಹೊರಡಿಸಿದ್ದು, ಅವರನ್ನು ಹಾಸನ ಮಹಾನಗರ ಪಾಲಿಕೆಯಲ್ಲಿ ಖಾಲಿ ಇರುವ ಎಫ್‌ಡಿಎ ಹುದ್ದೆಗೆ ವರ್ಗಾಯಿಸಲಾಗಿದೆ.

ಮತ್ತೊಬ್ಬ ಆರೋಪಿ, ಪಟ್ಟಣ ಪಂಚಾಯಿತಿ ಮುಖ್ಯಾಧಿಕಾರಿ ಕೆ.ಎಸ್. ಮಹೇಶ್, ಕೆಎಂಎಎಸ್ ಮುಖ್ಯಾಧಿಕಾರಿ ಶ್ರೇಣಿ-1 ಹುದ್ದೆಯಲ್ಲಿದ್ದು, ಅವರ ಮೇಲೆ ಕ್ರಮಕ್ಕಾಗಿ ನಗರಾಭಿವೃದ್ಧಿ ಇಲಾಖೆಗೆ ಶಿಫಾರಸು ಮಾಡಲಾಗಿದೆ.

ಸರ್ಕಾರಿ ಆಸ್ತಿಯಾದ ಪಂಚಾಯಿತಿ ವ್ಯಾಪ್ತಿಯ ಸರ್ವೆ ನಂ. 259/5ರ ಮೂಲ ದಾಖಲೆಗಳನ್ನು ಪರಿಶೀಲಿಸದೆ, ಖಾಸಗಿಯವರಿಗೆ ಇ-ಆಸ್ತಿ ಸೃಜಿಸಲಾಗಿತ್ತು. ನಂತರ ಅಧಿಕಾರ ವ್ಯಾಪ್ತಿ ಮೀರಿ, ಏಕಾಏಕಿ ಆ ಖಾತೆಗಳನ್ನು ರದ್ದುಪಡಿಸಿ ತಹಶೀಲ್ದಾರರಿಗೆ ವರದಿ ನೀಡಿರುವುದು ತನಿಖೆಯಲ್ಲಿ ಬಹಿರಂಗಗೊಂಡಿದೆ.

ಸಾರ್ವಜನಿಕರ ದೂರುಗಳ ಕಾರಣಕ್ಕೆ ಜಿಲ್ಲಾಧಿಕಾರಿ ಲಕ್ಷ್ಮೀಕಾಂತ ರೆಡ್ಡಿ ಮಹಾನಗರಪಾಲಿಕೆಯ ಉಪ ಆಯುಕ್ತರ (ಕಂದಾಯ) ನೇತೃತ್ವದಲ್ಲಿ ತನಿಖಾ ತಂಡ ರಚಿಸಿದ್ದರು. ತನಿಖಾಧಿಕಾರಿ ಸೋಮಶೇಖರ್ ನೀಡಿದ ಪ್ರಾಥಮಿಕ ವರದಿಯಲ್ಲಿ ಭ್ರಷ್ಟಾಚಾರ ಮೇಲ್ನೋಟಕ್ಕೆ ದೃಢಪಟ್ಟಿತ್ತು. ವರದಿ ಆಧರಿಸಿ ಜಿಲ್ಲಾಧಿಕಾರಿಯು ಮೇ 21ರಂದು ಶಿಸ್ತುಕ್ರಮಕ್ಕೆ ಶಿಫಾರಸು ಮಾಡಿದ್ದರು.

ಬೆಂಗಳೂರು ಗ್ರಾಮಾಂತರ ಜಿಲ್ಲಾ ಪಂಚಾಯತ್
ಕಾರ್ಯಪಾಲಕ ಅಭಿಯಂತರವರ ಕಛೇರಿ, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಬೆಂಗಳೂರು ಗ್ರಾಮಾಂತರ, ಆನಂದರಾವ್ ವೃತ್ತ, ಬೆಂಗಳೂರು–560009.
ಸಂ: ಕಾಪಾಅ/ಪಂರಾಇಂವಿ/ಬೆಂಗ್ರಾಂ/ಟೆಂ.ಸಂ–03/ತಾಂಶಾ/2026–27/180 ದಿನಾಂಕ: 22/05/2026

ಅಲ್ಪಾವಧಿ ಟೆಂಡರ್ ಪ್ರಕಟಣೆ ಸಂ: 03/2026–27
(ಕೆ.ಪಿ.ಪಿ ಪೋರ್ಟಲ್ ಮುಖಾಂತರ)

ಕರ್ನಾಟಕ ರಾಜ್ಯದ ರಾಜ್ಯಪಾಲರ ಪರವಾಗಿ ಐಟಂವಾರು ಟೆಂಡರ್‌ನ್ನು ಮೂರನೇ ದರ್ಜೆ ಮೇಲ್ಪಟ್ಟ ಗುತ್ತಿಗೆದಾರರಿಂದ ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಸನ್ಮಾನ್ಯ ಮುಖ್ಯಮಂತ್ರಿಯವರ ಮೂಲಸೌಕರ್ಯ ಅಭಿವೃದ್ಧಿ ಯೋಜನೆ **(CMIDP)** ಯಡಿ ಅನುಮೋದನೆಗೊಂಡಿರುವ ಕಾಮಗಾರಿಗಳಿಗೆ **(RDPR/2025-26/RD/WORK_INDENT 23341/Calll-3, RDPR/2025-26/RD/WORK_INDENT 23342/Call-3, RDPR/ 2025-26/RD/WORK_INDENT23343/Call-3)** ಕಾರ್ಯಪಾಲಕ ಅಭಿಯಂತರರು, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಬೆಂಗಳೂರು ಗ್ರಾಮಾಂತರ ಇವರು ಅಲ್ಪಾವಧಿ ಟೆಂಡರ್ ಆಹ್ವಾನಿಸಿರುತ್ತಾರೆ. ಸದರಿ ಕಾಮಗಾರಿಗಳಿಗೆ ಭರ್ತಿಮಾಡಿದ ಟೆಂಡರ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 02/06/2026 ಸಂಜೆ 5.00 ಗಂಟೆಯವರೆಗೆ. ನಿಗಧಿಪಡಿಸಲಾಗಿರುತ್ತದೆ. ಹೆಚ್ಚಿನ ಮಾಹಿತಿಗಾಗಿ ಕಛೇರಿ ವೇಳೆಯಲ್ಲಿ ಈ ಕಛೇರಿಯನ್ನು ಸಂಪರ್ಕಿಸಬಹುದಾಗಿರುತ್ತದೆ. ಹಾಗೂ ಟೆಂಡರ್ ವಿವರಗಳನ್ನು **https://kppp.karnataka.gov.in** ವೆಬ್‌ಸೈಟ್ ನಲ್ಲಿ ಪಡೆಯಬಹುದಾಗಿರುತ್ತದೆ.

ಸಹಿ/– ಕಾರ್ಯಪಾಲಕ ಅಭಿಯಂತರರು,
ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ,
ಬೆಂಗಳೂರು ಗ್ರಾಮಾಂತರ, ಬೆಂಗಳೂರು
DIPR/CP/SMCL/825/2026-27

ಸುದ್ದಿ ವೈವಿಧ್ಯಕ್ಕೆ prajavani.netಗೆ ಭೇಟಿ ಮಾಡಿ

ವಸೂಲಿ ಪ್ರಕ್ರಿಯೆ ವಿಳಂಬ: ಕಂಪನಿಗೆ ₹15 ಸಾವಿರ ದಂಡ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬ್ಯಾಂಕ್‌ನಿಂದ ಪಡೆದ ಸಾಲ ಮರು ಪಾವತಿ ಮಾಡದೆ, ವಸೂಲಿ ಪ್ರಕ್ರಿಯೆ ವಿಳಂಬಗೊಳಿಸಲು ಪದೇ ಪದೇ ನ್ಯಾಯಾಲಯದ ಮೊರೆ ಹೋಗುತ್ತಿದ್ದ ಕಂಪನಿಯೊಂದರ ನಡೆಗೆ ತೀವ್ರ ಅಸಮಾಧಾನ ವ್ಯಕ್ತಪಡಿಸಿರುವ ಹೈಕೋರ್ಟ್, ₹15 ಸಾವಿರ ದಂಡ ವಿಧಿಸಿ ಅರ್ಜಿ ವಜಾಗೊಳಿಸಿದೆ.

ಬಾಗಲಕೋಟೆ ಜಿಲ್ಲೆಯ ಬೀಳಗಿ ತಾಲ್ಲೂಕಿನ ಸಿದ್ದಾಪುರದ ಸಂಗಪ್ಪ ಕುಂಬಾರ ಪ್ರೈವೇಟ್ ಲಿಮಿಟೆಡ್ ಕಂಪನಿ ನಿರ್ದೇಶಕ ಹುಚ್ಚಪ್ಪ ಎಸ್. ಕುಂಬಾರ ಸಲ್ಲಿಸಿದ್ದ ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ರವಿ ವಿ. ಹೊಸಮನಿ ಅವರಿದ್ದ ರಜಾಕಾಲದ ಧಾರವಾಡ ನ್ಯಾಯಪೀಠ ಈ ಕುರಿತಂತೆ ಆದೇಶಿಸಿದೆ.

'ಸಾಲಗಾರರು ಬ್ಯಾಂಕ್ ವಸೂಲಾತಿ ಪ್ರಕ್ರಿಯೆಯನ್ನು ವಿಳಂಬಗೊಳಿಸಲು ನಡೆಸಿದ ಪ್ರಯತ್ನ ಇದು ಎಂಬುದು ನಿಚ್ಚಳವಾಗಿದೆ. ಇಂತಹ ಅರ್ಜಿಗಳು ಕಾನೂನು ಬದ್ಧವಾಗಿ ಊರ್ಜಿತವಾಗುವುದಿಲ್ಲ ಮತ್ತು ಅರ್ಜಿದಾರರ ಮೇಲೆ ಯಾವುದೇ ಸಹಾನುಭೂತಿ ತೋರಲು ಸಾಧ್ಯವಿಲ್ಲ' ಎಂಬ ಅಭಿಪ್ರಾಯ ವ್ಯಕ್ತಪಡಿಸಿರುವ ನ್ಯಾಯಪೀಠ, ಅರ್ಜಿ ವಜಾಗೊಳಿಸಿ, ಅರ್ಜಿದಾರರಿಗೆ ₹15 ಸಾವಿರ ದಂಡ ವಿಧಿಸಿದೆ.

ದಂಡದ ಮೊತ್ತವನ್ನು ಧಾರವಾಡ ಹೈಕೋರ್ಟ್ ಪೀಠದ ಕರ್ನಾಟಕ ಹೈಕೋರ್ಟ್ ಕಾನೂನು ಸೇವೆಗಳ ಪ್ರಾಧಿಕಾರಕ್ಕೆ ಪಾವತಿಸುವಂತೆ ನಿರ್ದೇಶಿಸಿದೆ.

ಮಡಿಕೇರಿಯಲ್ಲಿ ಇಂಧನಕ್ಕೆ ಅಭಾವ

ಪೆಟ್ರೋಲ್ ಬಂಕ್ ಎದುರು 'ನೋ ಸ್ಟಾಕ್' ಫಲಕ ಪ್ರದರ್ಶಿಸಲಾಗಿತ್ತು

ಪ್ರಜಾವಾಣಿ ವಾರ್ತೆ

ಮಡಿಕೇರಿ: ನಗರದ ಮೂರು ಪೆಟ್ರೋಲ್ ಬಂಕ್‌ಗಳಲ್ಲಿ ಮಂಗಳವಾರ ಇಂಧನ ಅಭಾವ ಉಂಟಾಗಿ ವಾಹನ ಸವಾರರು ಪರದಾಡಿದರು. ದಕ್ಷಿಣ ಕೊಡಗಿನ ಕುಟ್ಟ, ಶ್ರೀಮಂಗಲದ ಕೆಲವೆಡೆಯೂ ಇಂಧನ ಖಾಲಿಯಾಗಿತ್ತು.

ಎಲ್ಲೆಡೆ ಏಕಕಾಲಕ್ಕೆ ಅಭಾವ ಏರ್ಪಟ್ಟಿದ್ದರಿಂದ, ಸಮೀಪದಲ್ಲಿ ಎಲ್ಲಿಯೂ ಪೆಟ್ರೋಲ್ ಬಂಕ್ ಇಲ್ಲದೇ ಅತಂತ್ರ ಪರಿಸ್ಥಿತಿ ನಿರ್ಮಾಣವಾಗಿತ್ತು.

'ಜಿಲ್ಲೆಯಲ್ಲಿ 75 ಪೆಟ್ರೋಲ್ ಬಂಕ್‌ಗಳಿವೆ. ಬಿಪಿಸಿಎಲ್ ಕಂಪನಿಯಿಂದ ಪೂರೈಕೆ ತಡವಾಗಿದ್ದರಿಂದ ಕೆಲಹೊತ್ತು ಅಭಾವ ಉಂಟಾಗಿತ್ತು' ಎಂದು ಆಹಾರ ಇಲಾಖೆಯ ಉಪನಿರ್ದೇಶಕ ಭೀಮರಾಯ ಪ್ರತಿಕ್ರಿಯಿಸಿದರು.

ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆ
ಉಗ್ರಾಣ ಮತ್ತು ಖರೀದಿ ಇಲಾಖೆ, ಕೇಂದ್ರ ಕಛೇರಿ, ಶಾಂತಿನಗರ, ಬೆಂಗಳೂರು – 27.
ಸಂಖ್ಯೆ: ಬೆಂಮಸಾಸಂಸ್ಥೆ/ಕೇಕ/ಉ&ಖನಿ/ಟೆಂಡರ್/06/2026–27 ದಿನಾಂಕ: 26.05.2026

ಟೆಂಡರ್ ಆಹ್ವಾನ ಪ್ರಕಟಣೆ

ಬೆ.ಮ.ಸಾ.ಸಂಸ್ಥೆಗೆ ಈ ಕೆಳಗೆ ನಮೂದಿಸಿರುವ ಬಿಡಿಭಾಗಗಳನ್ನು/ಸೇವೆಗಳನ್ನು ಪಡೆಯಲು KPP Portal ನ ಮೂಲಕ ಟೆಂಡರನ್ನು ಆಹ್ವಾನಿಸಿದ್ದು, ಆಸಕ್ತರು ಟೆಂಡರ್‌ನಲ್ಲಿ ಭಾಗವಹಿಸಬಹುದಾಗಿದೆ.

ಕ್ರ ಸಂ	ಟೆಂಡರ್ ಸಂಖ್ಯೆ	ಟೆಂಡರ್ ವಿವರ	ಕೆಪಿಪಿಪಿ ಮೂಲಕ ಬಿಡ್ ಸಲ್ಲಿಸಲು ಕೊನೆ ದಿನಾಂಕ
		ಅಲ್ಪಾವಧಿ ಟೆಂಡರ್	
1	BMTC/2026-27/SE1287	ಸಮಗ್ರ ಸ್ಮಾರ್ಟ್ ಟಿಕೆಟ್ಟಿಂಗ್ ಸಲ್ಯೂಷನ್ ಯೋಜನೆಗೆ ಮೇಲ್ವಿಚಾರಣೆ ಸಲಹೆಗಾರರ ಆಯ್ಕೆ ಮಾಡುವ ಬಗ್ಗೆ.	08.06.2026, 17:00 ಗಂಟೆಗೆ
		ನಿಯಮಿತ ಟೆಂಡರ್	
2	BMTC/2026-27/IND0294	ಕ್ಲಚ್ ಮತ್ತು ಕ್ಲಚ್ ಭಾಗಗಳ ಖರೀದಿ ಬಗ್ಗೆ.	29.06.2026, 17:00 ಗಂಟೆಗೆ
3	BMTC/2026-27/IND0295	ಬಾಲ್ ಮತ್ತು ರೋಲರ್ ಬೇರಿಂಗ್‌ಗಳ ಖರೀದಿ ಬಗ್ಗೆ.	15.06.2026, 17:00 ಗಂಟೆಗೆ
4	BMTC/2026-27/IND0296	ಬಸ್‌ಗಳಿಗೆ ಸೂಕ್ತವಾದ ವಿಂಡೋ ಫ್ಲಾಕ್ ನೈಲಾನ್ ಇಪಿಡಿಎಂ ರಬ್ಬರ್ ಚಾನಲ್ ಖರೀದಿ ಬಗ್ಗೆ.	15.06.2026, 17:00 ಗಂಟೆಗೆ
5	BMTC/2026-27/IND0297	ಪ್ರಥಮ ಚಿಕಿತ್ಸಾ ಔಷಧಿಗಳನ್ನು ಮತ್ತು ಔಷಧೀಯ ಕಿಟ್‌ನೊಂದಿಗೆ ಪ್ರಥಮ ಚಿಕಿತ್ಸಾ ಪೆಟ್ಟಿಗೆಯ ಖರೀದಿ ಬಗ್ಗೆ.	15.06.2026, 17:00 ಗಂಟೆಗೆ
6	BMTC/2026-27/IND0298	ಮೆಟಲ್ ಪೇಸ್ಟ್ ಮತ್ತು ಅರಾಲ್ಡೈಟ್ ಖರೀದಿ ಬಗ್ಗೆ.	15.06.2026, 17:00 ಗಂಟೆಗೆ
7	BMTC/2026-27/SE1270	ಬಿಎಂಟಿಸಿ ವಡ್ಡರಹಳ್ಳಿಯ ತರಬೇತಿ ಕೇಂದ್ರದಲ್ಲಿ ಕ್ಯಾಂಟೀನ್ ನಿರ್ವಹಣೆಗಾಗಿ ಏಜೆನ್ಸಿಯನ್ನು ನೇಮಿಸಿಕೊಳ್ಳುವ ಬಗ್ಗೆ.	15.06.2026, 17:00 ಗಂಟೆಗೆ
8	BMTC/2026-27/IND0299	LED ರೂಫ್ ಲ್ಯಾಂಪ್ ಖರೀದಿ ಬಗ್ಗೆ.	15.06.2026, 17:00 ಗಂಟೆಗೆ
9	BMTC/2026-27/IND0300	ಪೀಠೋಪಕರಣಗಳ ಖರೀದಿ ಬಗ್ಗೆ.	15.06.2026, 17:00 ಗಂಟೆಗೆ
10	BMTC/2026-27/IND0301	ವಿವಿಧ ರೀತಿಯ ಕನ್ನಡಿಗಳ ಖರೀದಿ ಬಗ್ಗೆ. (ರೇರ್ ವ್ಯೂ ಮಿರರ್‌ಗಳು)	15.06.2026, 17:00 ಗಂಟೆಗೆ

ಈ ಮೇಲಿನ ಟೆಂಡರ್‌ಗಳಿಗೆ ಸಂಬಂಧಿಸಿದ ವಿವರಗಳನ್ನು **https://kppp.karnataka.gov.in** ನಿಂದ ಪಡೆಯಬಹುದು. ಮುಂದುವರೆದು, ಸಾಮಗ್ರಿಗಳ ತಾಂತ್ರಿಕ ವಿವರಗಳು, ವ್ಯಾಪ್ತಿ ಇತರೆ ನಿಯಮ ಮತ್ತು ನಿಬಂಧನೆಗಳಲ್ಲಿ ಹಾಗೂ ಮೇಲ್ಕಂಡ ದಿನಾಂಕದಲ್ಲಿ ಯಾವುದೇ ಸೇರ್ಪಡೆ / ತಿದ್ದುಪಡಿ ಇದ್ದಲ್ಲಿ KPP–ಪೋರ್ಟಲ್‌ನಲ್ಲಿ ಮಾತ್ರ ಪ್ರಕಟಗೊಳಿಸಲಾಗುವುದು.

ಸೂಚನೆ: ಆಸಕ್ತಿಯುಳ್ಳ ಬಿಡ್ಡುದಾರರು KPP–ಪೋರ್ಟಲ್‌ನಲ್ಲಿ ನೋಂದಣಿ ಹೊಂದಿರಬೇಕು. ಹೆಚ್ಚಿನ ವಿವರಗಳನ್ನು ಸದರಿ ಕಛೇರಿ ಅಥವಾ KPP–ಪೋರ್ಟಲ್ ವೆಬ್‌ಸೈಟ್ **https://kppp.karnataka.gov.in** ನಲ್ಲಿ ಪಡೆಯಬಹುದಾಗಿರುತ್ತದೆ.

ಸಹಿ/– ಉಗ್ರಾಣ ಮತ್ತು ಖರೀದಿ ನಿಯಂತ್ರಕರು (ಟೆಂಡರ್ ಕರೆಯುವ ಪ್ರಾಧಿಕಾರಿ)

ಕರ್ನಾಟಕ ಸರ್ಕಾರ – ಜಿಲ್ಲಾ ಪಂಚಾಯತ್ ಶಿವಮೊಗ್ಗ
ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ,
ಕಾರ್ಯಪಾಲಕ ಇಂಜಿನಿಯರ್‌ರವರ ಕಛೇರಿ, ಸಾಗರ
ನಂ.ಕಾಇಂ/ಪಂರಾಇಂ/ವಿಸ್ತಾ/ಶಿ.ಸೊ.ಹೊ/KW–1,2&3/ಎಇ/ಜೆಇ/2026–27/534 ದಿ: 25.05.2026

ಟೆಂಡರ್ ಪ್ರಕಟಣೆ ("ಕೆ.ಪಿ.ಪಿ.ಪಿ" ಮೂಲಕ)

ಕರ್ನಾಟಕ ರಾಜ್ಯಪಾಲರ ಪರವಾಗಿ ಕಾರ್ಯಪಾಲಕ ಇಂಜಿನಿಯರ್ ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ ಸಾಗರ ಇವರು KW-1,2&3 (Standard Tender Document) ನಿಬಂಧನೆಗೊಳಪಟ್ಟಂತೆ ಲೋಕೋಪಯೋಗಿ ಇಲಾಖೆಯಲ್ಲಿ ನೋಂದಾಯಿತ ಅರ್ಹ ಹಾಗೂ ಕೆ.ಪಿ.ಪಿ.ಪಿ ಸಂಸ್ಥೆಯಲ್ಲಿ ನೋಂದಾಯಿಸಲ್ಪಟ್ಟ ಗುತ್ತಿಗೆದಾರರಿಂದ ಈ ವಿಭಾಗ ವ್ಯಾಪ್ತಿಯಲ್ಲಿ ಬರುವ 2023–24 ನೇ ಸಾಲಿನ 5054 ಎಸ್.ಸಿ.ಪಿ/ಟಿ.ಎಸ್.ಪಿ, 2025–26 ನೇ ಸಾಲಿನ ಎಸ್.ಸಿ.ಪಿ/ಟಿ.ಎಸ್.ಪಿ ಯೋಜನೆ, 2025–26 ನೇ ಸಾಲಿನ ಎಂ.ಜಿ.ಎನ್.ಆರ್.ಇ.ಜಿ.ಎ ಮತ್ತು ಐಸಿಡಿಎಸ್ ಒಗ್ಗೂಡಿಸುವಿಕೆ ಯೋಜನೆ, 2025–26 ನೇ ಸಾಲಿನ ಪಿ.ಎಂ.ಶ್ರೀ, 2022–23 ನೇ ಸಾಲಿನ 4702 ಕೆರೆಗಳ ಸಮಗ್ರ ಅಭಿವೃದ್ಧಿ, 2025–26 ನೇ ಸಾಲಿನ ಎಂಪಿ ಲ್ಯಾಡ್, 2025–26ನೇ ಸಾಲಿನ ಮುಖ್ಯ ಮಂತ್ರಿಯವರ ಮೂಲ ಸೌಕರ್ಯ ಅಭಿವೃದ್ಧಿ ಯೋಜನೆ (ಸಿ.ಎಂ.ಐ.ಡಿ.ಪಿ.), 2024–25 ನೇ ಸಾಲಿನ 5054 ಮಳೆ ಪರಿಹಾರ ಯೋಜನೆ. ಅಡಿಯಲ್ಲಿನ ಕಾಮಗಾರಿಗಳಿಗೆ ಐಟಂವಾರು ಇ–ಟೆಂಡರ್ ಆಹ್ವಾನಿಸಲಾಗಿದೆ.

1) ಟೆಂಡರ್ ಫಾರಂ ಡೌನ್‌ಲೋಡ್ ಮಾಡಿಕೊಳ್ಳುವ ದಿನಾಂಕ: 25.05.2026 ರಿಂದ 08.06.2026 ರವರೆಗೆ 2) ಟೆಂಡರ್ ಫಾರಂ ಸಲ್ಲಿಸಲು ಕೊನೆಯ ದಿನಾಂಕ: 08.06.2026 ಸಮಯ 16:00:00 3) ಬಿಡ್ ತೆರೆಯುವ ದಿನಾಂಕ: 09.06.2026 ಸಮಯ 16:01:00.

1. General Works: 26740, 26748, 26751, 26636, 24227/CALL-3 **2.** Category II-A Works: 26747 **3.** Category I Works: 26750 **4.** SC Category Works: 26749, 26746, 22268/CALL-2 **5.** ST Category Works: 26841

ಕೆ.ಪಿ.ಪಿ.ಪಿ ವೆಬ್‌ಸೈಟ್ ಟೆಂಡರಿನ ವಿವರಗಳನ್ನು, ಈ ಕಛೇರಿಯ ಕಾರ್ಯನಿರ್ವಾಹಕ ಇಂಜಿನಿಯರ್ ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಸಾಗರ ಇವರ ಕಛೇರಿಯನ್ನು ಸಂಪರ್ಕಿಸುವುದು ಮತ್ತು ಕೆ.ಪಿ.ಪಿ.ಪಿ ವೆಬ್ ಸೈಟ್ (www.kppp.karnataka.gov.in) ನಲ್ಲಿ ನೋಡಬಹುದು ಹಾಗೂ ಡೌನ್‌ಲೋಡ್ ಮಾಡಿಕೊಳ್ಳಬಹುದು. ಹೆಚ್ಚಿನ ಮಾಹಿತಿಗಾಗಿ ಈ ಕಛೇರಿಯ ದೂರವಾಣಿ ಸಂಖ್ಯೆ: 08183–226064 ಗೆ ಕಛೇರಿ ವೇಳೆಯಲ್ಲಿ ವಿಷಯ ನಿರ್ವಾಹಕರಿಂದ ಪಡೆಯಬಹುದು ಅಥವಾ helpdesk ದೂರವಾಣಿ ಸಂಖ್ಯೆ: 080–25501216, 25501227 ಇವರನ್ನು ಸಂಪರ್ಕಿಸುವುದು.

ಸಹಿ/– ಕಾರ್ಯಪಾಲಕ ಇಂಜಿನಿಯರ್, ಪಂ.ರಾ.ಇಂ.ವಿಭಾಗ, ಸಾಗರ,
ವಾ.ಸಾ.ಸಂ.ಇ/ಕೆಎಸ್‌ಎಂಸಿಎ/26–27/115/05/285

THE FEDERAL BANK LIMITED
Regd. Office: Aluva, Kerala.
ZONAL OFFICE: 2nd Floor, Halcyon Complex, No.9, St Marks Road, Bangalore-560 001.
e-mail:bgrr-cpc@federalbank.co.in Ph:080-22074610/24/25

PUBLIC NOTICE FOR AUCTION OF GOLD 26/05/2026

NOTICE is hereby given to the general public and in particular to the borrowers that the borrowers have failed to repay the gold loans mentioned below and redeem the gold jewellery pledged within the stipulated time in spite of several reminders. Borrowers are hereby required to remit the entire dues together with applicable interest, costs and other charges due to the Bank under the respective gold loan accounts on or before 20.06.2026 and redeem the gold jewellery, failing which the Bank will be constrained to auction the gold jewellery pledged, without further notice/intimation to the borrowers. (*In cases where the Borrower is deceased, the obligations under the loan shall apply to the legal heirs of the Borrower). This notice is issued without prejudice to the other legal rights and remedies available to the Federal Bank Ltd.
The details of defaulted gold loan accounts with total outstanding as on 30.04.2026 are as follows:

Br. Hosapete: Elevated Ground Floor, D.no 486, PID No 4-2-5-79C, Venkateshwara Automobiles Road, 2nd Division, 4th ward , Patel Nagar, Hosapete-583 201 Ph. 6304554526 / 9844364438 :-

Borrower's name	Loan Account No.	Total outstanding
Govinda Raj	23726900000830	527681

Bangalore 26-05-2026 Senior Vice President & Zonal Head

ಕರ್ನಾಟಕ ಗೃಹ ಮಂಡಳಿ
3, 4ನೇ ಮಹಡಿ, ಕಾವೇರಿ ಭವನ, ಕೆ.ಜಿ. ರಸ್ತೆ, ಬೆಂಗಳೂರು–560 009.
Karnataka Housing Board
Building communities
ಸಂಖ್ಯೆ: ಕಗೃಮಂ/ಕಾ/ಹಂಚಿಕೆ/ಸೂರ್ಯನಗರ4ನೇ ಹಂತ/2026–27 ದಿನಾಂಕ: 25–05–2026

ಸಾರ್ವಜನಿಕ ಪ್ರಕಟಣೆ

ಕರ್ನಾಟಕ ಗೃಹ ಮಂಡಳಿ ವತಿಯಿಂದ ಬೆಂಗಳೂರು ನಗರ ಜಿಲ್ಲೆ ಆನೇಕಲ್ ತಾಲ್ಲೂಕು, ಕೋನಸಂದ್ರ, ಬೊಮ್ಮಂಡಹಳ್ಳಿ, ಕಾಡುಜಕ್ಕನಹಳ್ಳಿ, ಇಂಡ್ಲವಾಡಿ, ಬಗ್ಗನದೊಡ್ಡಿ ಗ್ರಾಮಗಳ ವಿವಿಧ ಸರ್ವೆ ನಂಬರ್ ಜಮೀನುಗಳಲ್ಲಿ ವಸತಿ ಬಡಾವಣೆ ಅಭಿವೃದ್ಧಿಪಡಿಸಲು ದಿನಾಂಕ: 14–12–2019 ರಂದು ಬೇಡಿಕೆ ಸಮೀಕ್ಷೆಯಡಿ ಪ್ರಕಟಣೆ ನೀಡಿ ನೋಂದಣಿ ಶುಲ್ಕ ಹಾಗೂ ಆರಂಭಿಕ ಠೇವಣಿಯೊಂದಿಗೆ ಅರ್ಜಿ ಸಲ್ಲಿಸಲು ತಿಳಿಸಲಾಗಿತ್ತು. ಅದರಂತೆ ಸದರಿ ಪ್ರಕಟಣೆಯನುಸಾರ ಅರ್ಜಿ ಸಲ್ಲಿಸಿರುವ ಅರ್ಹ ಅರ್ಜಿದಾರರಿಗೆ ದಿನಾಂಕ: 23.05.2026 ರಂದು ನಡೆದ ಇ–ಲಾಟರಿಯಲ್ಲಿ ನಿವೇಶನಗಳನ್ನು ಹಂಚಿಕೆ ಮಾಡಲಾಗಿದೆ. ಇ–ಲಾಟರಿಯಲ್ಲಿ ಹಂಚಿಕೆಯಾಗದ ಅರ್ಹ ಅರ್ಜಿದಾರರು ಆರಂಭಿಕ ಠೇವಣಿಯನ್ನು ಮರುಪಾವತಿ ಪಡೆಯದೆ ಮಂಡಳಿಯಲ್ಲಿಯೇ ಉಳಿಸಿಕೊಂಡಲ್ಲಿ ಅಂತಹ ಅರ್ಜಿದಾರರನ್ನು ಸದರಿ ಬಡಾವಣೆಯಲ್ಲಿ ಮುಂದಿನ ಸುತ್ತಿನಲ್ಲಿ ಲಭ್ಯವಾಗುವ ನಿವೇಶನಗಳ ಹಂಚಿಕೆಗೆ ಪರಿಗಣಿಸಲಾಗುವುದು ಹಾಗೂ ಇದಕ್ಕೆ ಇಚ್ಛಿಸದ ಅರ್ಜಿದಾರರು ಕೋರಿಕೆ ಪತ್ರಗಳನ್ನು ಸಲ್ಲಿಸಿ ಆರಂಭಿಕ ಠೇವಣಿಯನ್ನು ಮರುಪಾವತಿ ಪಡೆಯಬಹುದಾಗಿದೆ.

ಹೆಚ್ಚಿನ ಮಾಹಿತಿಗಾಗಿ ಮೊಬೈಲ್ ಸಂಖ್ಯೆ, 7892908417, 9513801127ರಲ್ಲಿ ಸಂಪರ್ಕಿಸಬಹುದು.

ಸಹಿ/– ಗೃಹ ಆಯುಕ್ತರು
ಕರ್ನಾಟಕ ಗೃಹ ಮಂಡಳಿ, ಬೆಂಗಳೂರು
ವಾಸಾಸಂಇ/ವಾಪ್ರ/823/ಎಂಎಎ/2026–27

ಕೆ.ಎಂ.ಎಫ್ ಕರ್ನಾಟಕ ಸಹಕಾರ ಹಾಲು ಉತ್ಪಾದಕರ ಮಹಾಮಂಡಳ ನಿಯಮಿತ
ಕಹಾಮ ಸಂಕೀರ್ಣ, ಡಾ: ಎಮ್.ಹೆಚ್. ಮರೀಗೌಡ ರಸ್ತೆ, ಬೆಂಗಳೂರು – 560 029
ಫೋನ್: 25536567/26096832/910/922 ಫ್ಯಾಕ್ಸ್: 080–25536105 ಇಮೇಲ್: purchase@kmf.coop

ಟೆಂಡರ್ ಪ್ರಕಟಣೆ

ಕರ್ನಾಟಕ ಹಾಲು ಮಹಾಮಂಡಳ ಬೆಂಗಳೂರು ಕಹಾಮ ವಿವಿಧ ಒಕ್ಕೂಟ/ಘಟಕಗಳಿಗೆ ಅವಶ್ಯವಿರುವ ಹಾಲು ಮೊಸರು ಫಿಲ್ಮ್‌ಗಳ ವಾರ್ಷಿಕ ಅವಧಿಗೆ ಖರೀದಿಸಲು ಅರ್ಹ ಟೆಂಡರ್‌ದಾರರಿಂದ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ.

Sl. No.	Description	Kgs.	EMD (in Lakhs)
Zone-I	IFT No: KMF/PUR/CPC/e-Proc./Re-Tender-920/2026 Date: 26.05.2026 Supply of LDPE & LLDPE Opaque multi-coloured printed pouch film for packing different variants of milk for Bamul & Mother Dairy	3200000	67.00
Zone-II	IFT No: KMF/PUR/CPC/e-Proc./Re-Tender-921/2026 Date: 26.05.2026 Supply of LDPE & LLDPE Opaque multi-coloured printed pouch film for packing different variants of milk for Komul, Tumul & Shimul	2011000	42.00
Zone-III	IFT No: KMF/PUR/CPC/e-Proc./Re-Tender-922/2026 Date: 26.05.2026 Supply of LDPE & LLDPE Opaque multi-coloured printed pouch film for packing different variants of milk for Manmul, Mymul, Chamul & Hamul	2324000	48.50
Zone-IV	IFT No: KMF/PUR/CPC/e-Proc./Re-Tender-923/2026 Date: 26.05.2026 Supply of LDPE & LLDPE Opaque multi-coloured printed pouch film for packing different variants of milk for Dkmul, Bemul, Damul, Rbkmul, HAVMUL, Bimul, Gumul & DDIL	1630000	34.00

1) Pre-Bid Meeting : 12.06.2026 at 03.00 PM. 2) Last date for submission of Tender on or before 23.06.2026 up to 03.00 PM. 3) Date of opening of Technical tender : 24.06.2026 on at 03.00 PM. 4) Date for opening of Commercial tender: After Technical Evaluation.

ಟೆಂಡರ್ ದಾಖಲೆಗಳನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಿಂದ ಡೌನ್‌ಲೋಡ್ ಮಾಡಬಹುದು. ಯಾವುದೇ Addendum/Corrigendum ಹೊರಡಿಸಿದಲ್ಲಿ, ಅದು ಕೇವಲ KPPP ವೆಬ್‌ಸೈಟ್ https://kppp.karnataka.gov.in ನಲ್ಲಿ ಮಾತ್ರ ಲಭ್ಯವಾಗುತ್ತದೆ.

ಕರ್ನಾಟಕ ಸಹಕಾರ ಹಾಲು ಮಹಾಮಂಡಳಿ ಪರವಾಗಿ
ಸಹಿ/– ನಿರ್ದೇಶಕರು (ಖರೀದಿ)

ಕರ್ನಾಟಕ ಸರ್ಕಾರ
ಜಿಲ್ಲಾ ಪಂಚಾಯತ್, ಬಳ್ಳಾರಿ.
ಕಾರ್ಯನಿರ್ವಾಹಕ ಅಭಿಯಂತರವರ ಕಛೇರಿ,
ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಬಳ್ಳಾರಿ.
ಸಂ: ಕಾನಿಇಂ/ಪಂ.ರಾ.ಇಂ.ವಿ/ಬ/ಎಇ–1 /ವಿ.ಲೆ.ಶೀ /ಟೆಂಡರು /2026–27/245
ದಿನಾಂಕ 25–05–2026

ಅಲ್ಪಾವಧಿ ಟೆಂಡರು ಪ್ರಕಟಣೆ(ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಮಾತ್ರ)

ಕರ್ನಾಟಕ ರಾಜ್ಯಪಾಲರ ಪರವಾಗಿ ಪಂಚಾಯತ್‌ರಾಜ್ ಇಂಜಿನಿಯರಿಂಗ್ ಇಲಾಖೆಯಲ್ಲಿ ನೊಂದಾಯಿತ ಅರ್ಹ ಗುತ್ತಿಗೆದಾರರಿಂದ ಪಂ.ರಾ.ಇಂ. ವಿಭಾಗ, ಬಳ್ಳಾರಿ ವ್ಯಾಪ್ತಿಯ 2025–26 ನೇ ಸಾಲಿನ ಕೆ.ಕೆ.ಆರ್.ಡಿ.ಪಿ ಯೋಜನೆ ಮತ್ತು 2024–25 ನೇ ಸಾಲಿನ 5054 ಮಳೆ ಪರಿಹಾರ ಕಾರ್ಯಕ್ರಮ ಯೋಜನೆ ಒಟ್ಟು 02 ಕಾಮಗಾರಿಗಳಿಗೆ ಇ–ಪ್ರೊಕ್ಯೂರ್‌ಮೆಂಟ್ (ಕೆ.ಪಿ.ಪಿ.ಪಿ. ಪೋರ್ಟಲ್) ಮುಖಾಂತರ ಐಟಂವಾರು ದರಗಳಲ್ಲಿ ಟೆಂಡರು ಅಹ್ವಾನಿಸಿದೆ.

ಕಾಮಗಾರಿಗಳ ಇಂಡೆಂಟ್ ಸಂಖ್ಯೆ–
1.RDPR/2025-26/RD/WORK_INDENT22526/CALL-2
2.RDPR/2026-27/BD/WORK_INDENT26295/CALL-2

ಟೆಂಡರ್ ನಮೂನೆಗಳನ್ನು **https://kppp.karnataka.gov.in** ಅಂತರ್ಜಾಲದಲ್ಲಿ **ದಿನಾಂಕ 25–05–2026** ರಿಂದ **ದಿನಾಂಕ 01–06–2026** ರಂದು **ಸಂಜೆ 4.30** ಗಂಟೆವರೆಗೆ ಡೌನ್ ಲೋಡ್ ಮಾಡಿಕೊಂಡು ಅವಶ್ಯ ಮಾಹಿತಿ ಹಾಗೂ ನಿಗಧಿತ ಇ.ಎಂ.ಡಿ. ಯೊಂದಿಗೆ **ದಿನಾಂಕ: 01–06–2026 ರ 16.30** ಗಂಟೆಯವರೆಗೆ ಸ್ವೀಕರಿಸಲಾಗುವುದು. ಕಾಮಗಾರಿಯ ತಾಂತ್ರಿಕ ಬಿಡ್‌ನ್ನು ಆನ್ ಲೈನ್‌ನಲ್ಲಿ **ದಿನಾಂಕ: 02–06–2026 ರಂದು 17.30** ಗಂಟೆಗೆ ತೆರೆಯಲಾಗುವುದು. ಈ ಕುರಿತು ತಿದ್ದುಪಡಿಗಳೇನಾದರೂ ಇದ್ದಲ್ಲಿ ತಿದ್ದುಪಡಿಯನ್ನು **(https://kppp.karnataka.gov.in)** ವೆಬ್ ಸೈಟ್‌ನಲ್ಲಿ ಮಾತ್ರ ಪ್ರಕಟಿಸಲಾಗುವುದು. ಟೆಂಡರನ್ನು ಯಾವುದೇ ಕಾರಣ ನೀಡದೇ ತಿರಸ್ಕರಿಸುವ ಹಕ್ಕನ್ನು ಕಾಯ್ದಿರಿಸಲಾಗಿದೆ. ಹೆಚ್ಚಿನ ವಿವರಗಳನ್ನು ಈ ಕಛೇರಿ ವೇಳೆಯಲ್ಲಿ ಖುದ್ದಾಗಿ ಪಡೆಯಬಹುದಾಗಿರುತ್ತದೆ. ಕಛೇರಿ ದೂರವಾಣಿ ಸಂಖ್ಯೆ 08392–266173.

ಸಹಿ/– ಕಾರ್ಯನಿರ್ವಾಹಕ ಅಭಿಯಂತರರು, ಪಂ.ರಾ.ಇಂ. ವಿಭಾಗ, ಬಳ್ಳಾರಿ.
ವಾ.ಸಾ.ಸಂ.ಇ/ಬಳ್ಳಾರಿ/2026–27/ಕೆಎಸ್‌ಎಂಸಿಎ/ಆರ್.ಓ.ಸಂಖ್ಯೆ/176

ಕರ್ನಾಟಕ ಸರಕಾರ
ಕಾರ್ಯನಿರ್ವಾಹಕ ಅಭಿಯಂತರು, ಲೋಕೋಪಯೋಗಿ ಇಲಾಖೆ, ಬೆಳಗಾವಿ ವಿಭಾಗ, ಬೆಳಗಾವಿ.
ಸಂಖ್ಯೆ: ಲೋ.ಇ./ಬೆವಿ/ತಾಂಶಾ/ಗುತ್ತಿಗೆ/2026–27/1198 ದಿನಾಂಕ:26.05.2026

–:ಟೆಂಡರ ಅಧಿಸೂಚನೆ (ಕೆ.ಪಿ.ಪಿ.ಪಿ.ನಲ್ಲಿ):–

ಕಾರ್ಯನಿರ್ವಾಹಕ ಅಭಿಯಂತರರು, ಲೋಕೋಪಯೋಗಿ ಇಲಾಖೆ ಬೆಳಗಾವಿ ವಿಭಾಗ, ಬೆಳಗಾವಿ ಅಡಿಯಲ್ಲಿ ಐಟಂವಾರು ಗುತ್ತಿಗೆಗಳನ್ನು ನೋಂದಾಯಿತ ಅರ್ಹ ಗುತ್ತಿಗೆದಾರರಿಂದ ಸ್ಟಾಂಡರ್ಡ ಟೆಂಡರ ಡಾಕ್ಯೂಮೆಂಟ್ ಕೆ.ಡಬ್ಲ್ಯೂ– 1,2,3 & 4 ರಲ್ಲಿ ಲೆಕ್ಕ ಶೀರ್ಷಿಕೆ: 2025–26 ನೇ ಸಾಲಿನ 5054–ಜಿಲ್ಲಾ ಮುಖ್ಯ ರಸ್ತೆಗಳ ಸುಧಾರಣೆ, 2059–ವಿವಿಧ ಇಲಾಖಾ ಕಟ್ಟಡಗಳ ದುರಸ್ತಿ/ನಿರ್ವಹಣೆ, 5054–ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ ನಿಯಮಿತ ಬಂಡವಾಳ ವೆಚ್ಚ, 3054 ಜಿಲ್ಲಾ ಮುಖ್ಯ ರಸ್ತೆ ನಿರ್ವಹಣೆ, 3054 ರಾಜ್ಯ ಹೆದ್ದಾರಿ ಸೇತುವೆ ನಿರ್ವಹಣೆ, 5054– ರಾಜ್ಯ ಹೆದ್ದಾರಿ ರಸ್ತೆಗಳು ಸುಧಾರಣೆ, 4059–ಮುಖ್ಯ ಮಂತ್ರಿ ಮೂಲಸೌಕರ್ಯ ಬಂಡವಾಳ ವೆಚ್ಚ, 4059–ಎಸ್.ಸಿ/ಟಿ.ಎಸ್.ಪಿ, 4059 ಇಲಾಖಾ ಕಟ್ಟಡಗಳು, 8443–ಠೇವಣಿ ವಂತಿಕೆ ಅಡಿಯಲ್ಲಿ ಸೇರಿ ಒಟ್ಟು 28 ಕಾಮಗಾರಿಗಳಿಗೆ ಗುತ್ತಿಗೆಯನ್ನು ಕರೆಯಲಾಗಿದ್ದು ಕನಿಷ್ಠ ಹಾಗೂ ಗರಿಷ್ಠ ಗುತ್ತಿಗೆಗೆ ಇಟ್ಟ ಅಂದಾಜು ಮೊತ್ತವು ಅನುಕ್ರಮವಾಗಿ ರೂ. 11.66 ಲಕ್ಷಗಳು ಹಾಗೂ ರೂ. 395.48 ಲಕ್ಷಗಳು ಇದ್ದು, ಮುಂಗಡ ಠೇವಣಿ ಮೊತ್ತವು ಕನಿಷ್ಠ ಹಾಗೂ ಗರಿಷ್ಠ ಅನುಕ್ರಮವಾಗಿ ರೂ. 11,700/– ಹಾಗೂ ರೂ. 5,93,300 ಇರುತ್ತದೆ. ಭಾಗ–1:ಟೆಂಡರ ಸ್ವೀಕರಿಸುವ ದಿನಾಂಕ 05.06.2026 ರ ಸಂಜೆ 4.30 ಘಂಟೆಯರೆಗೆ, ಟೆಂಡರ ತಾಂತ್ರಿಕ ಬಿಡ್‌ನ್ನು ತೆರೆಯುವ ದಿನಾಂಕ 06.06.2026 ರ ಸಂಜೆ 4.45 ಘಂಟೆ ನಂತರ ಟೆಂಡರ ಆರ್ಥಿಕ ಬಿಡ್‌ನ್ನು ತೆರೆಯುವ ದಿನಾಂಕ 08.06.2026 ಬೆಳಿಗ್ಗೆ 11.00 ಘಂಟೆಗೆ ಭಾಗ–2:ಟೆಂಡರ ಸ್ವೀಕರಿಸುವ ದಿನಾಂಕ 12.06.2026 ರ ಸಂಜೆ 4.30 ಘಂಟೆಯರೆಗೆ, ಟೆಂಡರ ತಾಂತ್ರಿಕ ಬಿಡ್‌ನ್ನು ತೆರೆಯುವ ದಿನಾಂಕ 15.06.2026 ರ ಸಂಜೆ 4.45 ಘಂಟೆ ನಂತರ, ಆರ್ಥಿಕ ಬಿಡ್‌ನ್ನು ತೆರೆಯುವ ದಿನಾಂಕ 16.06.2026 ಬೆಳಿಗ್ಗೆ 11.00 ಘಂಟೆಗೆ ಭಾಗ–3: ಟೆಂಡರ ಸ್ವೀಕರಿಸುವ ದಿನಾಂಕ 16.06.2026 ರ ಸಂಜೆ 4.30 ಘಂಟೆಯರೆಗೆ, ಟೆಂಡರ ತಾಂತ್ರಿಕ ಬಿಡ್‌ನ್ನು ತೆರೆಯುವ ದಿನಾಂಕ 17.06.2026 ರ ಸಂಜೆ 4.45 ಘಂಟೆ ನಂತರ ಆರ್ಥಿಕ ಬಿಡ್‌ನ್ನು ತೆರೆಯುವ ದಿನಾಂಕ 18.06.2026 ಬೆಳಿಗ್ಗೆ 11.00 ಘಂಟೆಗೆ. ಹೆಚ್ಚಿನ ಮಾಹಿತಿ ಬೇಕಾದಲ್ಲಿ ಗುತ್ತಿಗೆದಾರರು ಅಂತರ್ ಜಾಲದ ಮೂಲಕ ವೆಬ್‌ಸೈಟ್ ವಿಳಾಸ www.kppp.karnataka.gov.in ರಲ್ಲಿ ದಿನಾಂಕ: 26.05.2026 ರ ನಂತರ ಪಡೆಯಬಹುದು.

ಕಾರ್ಯನಿರ್ವಾಹಕ ಅಭಿಯಂತರರು,
ಲೋಕೋಪಯೋಗಿ ಇಲಾಖೆ ಬೆಳಗಾವಿ ವಿಭಾಗ, ಬೆಳಗಾವಿ.
DIPR/BGM/RO-NO-313/KSMCA/2026-27

ವಿದ್ಯುತ್ ವಿತರಣೆ ‘ಖಾಸಗಿ’ಗೆ ಹೊಣೆ

ಪರವಾನಗಿ ಕೋರಿ ದಿ ಟಾಟಾ ಪವರ್ ಕಂಪನಿ ಲಿಮಿಟೆಡ್‌ನಿಂದ ಅರ್ಜಿ • ದರ ನಿಗದಿ ಅಧಿಕಾರ ಕೆಇಆರ್‌ಸಿಗೆ

• ಎ.ಎಂ.ಸುರೇಶ

ಎಲ್ಲೆಲ್ಲಿ ಖಾಸಗೀಕರಣ	
ಬೆಸ್ಕಾಂ	ಚಿಕ್ಕಬಳ್ಳಾಪುರ, ಕೋಲಾರ, ಬೆಂಗಳೂರು ಗ್ರಾಮಾಂತರ, ಬೆಂಗಳೂರು ದಕ್ಷಿಣ (ರಾಮನಗರ), ತುಮಕೂರು, ಚಿತ್ರದುರ್ಗ
ಹೆಸ್ಕಾಂ	ಬೆಳಗಾವಿ, ಉತ್ತರ ಕನ್ನಡ, ಧಾರವಾಡ
ಜೆಸ್ಕಾಂ	ಬಳ್ಳಾರಿ, ರಾಯಚೂರು, ಕಲಬುರಗಿ, ಯಾದಗಿರಿ
ಚೆಸ್ಕಾಂ	ಮೈಸೂರು, ಚಾಮರಾಜನಗರ, ಹಾಸನ
ಮೆಸ್ಕಾಂ	ಶಿವಮೊಗ್ಗ, ದಕ್ಷಿಣ ಕನ್ನಡ, ಉಡುಪಿ

ಬೆಂಗಳೂರು: ರಾಜ್ಯದಲ್ಲಿನ ಕೆಲವು ಜಿಲ್ಲೆಗಳಲ್ಲಿ ವಿದ್ಯುತ್ ವಿತರಣೆಯ ಜವಾಬ್ದಾರಿಯನ್ನು ದಿ ಟಾಟಾ ಪವರ್ ಕಂಪನಿ ಲಿಮಿಟೆಡ್‌ಗೆ ವಹಿಸುವ ತಯಾರಿ ನಡೆದಿದೆ. ಆದರೆ, ವಿದ್ಯುತ್ ದರ ನಿಗದಿಯ ಹೊಣೆ ಕರ್ನಾಟಕ ವಿದ್ಯುತ್ ನಿಯಂತ್ರಣ ಆಯೋಗಕ್ಕೆ (ಕೆಇಆರ್‌ಸಿ) ಇರಲಿದೆ.

‘ವಿದ್ಯುತ್ ಕಾಯ್ದೆ–2003ರ ಸೆಕ್ಷನ್ 14 ಮತ್ತು 15ರ ಅಡಿ ವಿತರಣಾ ವ್ಯವಸ್ಥೆಯನ್ನು ಖಾಸಗಿಯವರಿಗೆ ವಹಿಸಲು ಅವಕಾಶ ಇದೆ. ಅದಕ್ಕೆ ಅನುಗುಣವಾಗಿ ಟಾಟಾ ಕಂಪನಿಯು 19 ಜಿಲ್ಲೆಗಳಲ್ಲಿನ ವಿತರಣಾ ಜವಾಬ್ದಾರಿಯನ್ನು ತಮಗೆ ವಹಿಸುವಂತೆ ಕೋರಿ ಕೆಇಆರ್‌ಸಿಗೆ ಅರ್ಜಿ ಸಲ್ಲಿಸಿದೆ. ಆಯೋಗ ಇದಕ್ಕೆ ಒಪ್ಪಿದರೂ, ಗ್ರಾಹಕರ ಮೇಲೆ ಯಾವುದೇ ಪರಿಣಾಮ ಬೀರುವುದಿಲ್ಲ’ ಎಂದು ಮೂಲಗಳು ತಿಳಿಸಿವೆ.

ಆಯೋಗವು ಅನುಮತಿ ನೀಡಿದರೆ, ಕೆಪಿಟಿಸಿಎಲ್‌ನ ವಿತರಣಾ ಜಾಲವನ್ನು ಬಳಸಿಕೊಂಡು ಖಾಸಗಿಯವರು ವಿದ್ಯುತ್ ಪೂರೈಕೆ ಮಾಡಲಿದ್ದಾರೆ. ಆದರೆ, ಕೆಪಿಟಿಸಿಎಲ್‌ನ ಮೂಲಸೌಕರ್ಯವನ್ನು ಬಳಸಿಕೊಳ್ಳುವುದರಿಂದ ಇದಕ್ಕೆ ಪ್ರತ್ಯೇಕ ಶುಲ್ಕವನ್ನು ಖಾಸಗಿಯವರು ಪಾವತಿಸಬೇಕಾಗಬಹುದು ಅಥವಾ ಸರ್ಕಾರ ಈ ಎಲ್ಲ ಸೌಲಭ್ಯಗಳನ್ನು ಖಾಸಗಿಯವರಿಗೆ ಮಾರಾಟ ಮಾಡುವ ಮೂಲಕ ಬೊಕ್ಕಸಕ್ಕೆ ಹಣ ಪಡೆಯಬಹುದು ಎನ್ನಲಾಗಿದೆ.

ಖಾಸಗಿಯವರೇ ವಿದ್ಯುತ್ ಅನ್ನು ಉತ್ಪಾದಿಸಿ ಗ್ರಾಹಕರಿಗೆ ಸರಬರಾಜು ಮಾಡಬಹುದು ಅಥವಾ ಈಗಿರುವ ವಿದ್ಯುತ್ ಉತ್ಪಾದನಾ ಸಂಸ್ಥೆಗಳಿಂದ ಖರೀದಿ ಮಾಡಿ, ವಿತರಣೆ ಮಾಡಬಹುದು. ವಿದ್ಯುತ್ ಉತ್ಪಾದನೆ ಅಥವಾ ಖರೀದಿಗೆ ತಗಲುವ ವೆಚ್ಚ, ನಿರ್ವಹಣೆ, ಸಿಬ್ಬಂದಿಯ ವೇತನ ಇತ್ಯಾದಿ ಅಂಶಗಳನ್ನು ಗಮನದಲ್ಲಿ ಇಟ್ಟುಕೊಂಡು ಆಯೋಗವು ದರ ನಿಗದಿ ಮಾಡಲಿದೆ.

ಒಂದಕ್ಕಿಂತ ಹೆಚ್ಚು ಕಂಪನಿಗಳಿಗೆ ವಿದ್ಯುತ್ ವಿತರಣೆಯ ಜವಾಬ್ದಾರಿ ವಹಿಸಲು ವಿದ್ಯುತ್ ಕಾಯ್ದೆಯಲ್ಲಿ ಅವಕಾಶ ಇದೆ. ಖಾಸಗಿಯವರಿಗೆ ವಹಿಸುವುದರಿಂದ ಏಕಸ್ವಾಮ್ಯ ತಪ್ಪಲಿದೆ. ಸರ್ಕಾರಿ ಸ್ವಾಮ್ಯದ ಕಂಪನಿಗಳು ಮತ್ತು ಖಾಸಗಿ ಸಂಸ್ಥೆಗಳ ನಡುವೆ ಸ್ಪರ್ಧೆ ಏರ್ಪಡುವುದರಿಂದ ಗ್ರಾಹಕರು ಗುಣಮಟ್ಟದ ಸೇವೆಯನ್ನು ನಿರೀಕ್ಷಿಸಬಹುದು ಎಂದು ಕೆಇಆರ್‌ಸಿಯ ಮಾಜಿ ಅಧ್ಯಕ್ಷ ಎಂ.ಆರ್.ಶ್ರೀನಿವಾಸಮೂರ್ತಿ ‘ಪ್ರಜಾವಾಣಿ’ಗೆ ತಿಳಿಸಿದರು.

‘ಇದರಿಂದ ಒಳ್ಳೆಯದು ಆಗಬಹುದು. ಕೆಲವೊಮ್ಮೆ ಕೆಟ್ಟದ್ದೂ ಆಗಬಹುದು. ಮುಂಬೈ, ದೆಹಲಿಯಲ್ಲಿ ಖಾಸಗಿಯವರಿಗೆ ಕೊಟ್ಟಿರುವುದರಿಂದ ಒಳ್ಳೆಯದಾಗಿದೆ. ಆದರೆ, ಒಡಿಶಾದಲ್ಲಿ ಈ ಪ್ರಯೋಗ ಯಶಸ್ವಿಯಾಗಲಿಲ್ಲ. ಖಾಸಗಿಯವರಿಂದ ಸರ್ಕಾರ ವಾಪಸ್ ಪಡೆಯಿತು. ದೆಹಲಿಯಲ್ಲಿ ಖಾಸಗಿಯವರಿಗೆ ಕೊಟ್ಟ ನಂತರ ನಷ್ಟ ಕಡಿಮೆ ಆಗಿದೆ. ಹೊಸತನದ ಬಗ್ಗೆ ಯೋಚಿಸುವುದರಲ್ಲಿ ತಪ್ಪಿಲ್ಲ’ ಎಂಬುದು ಅವರ ಅಭಿಪ್ರಾಯ.

‘ಸುಮಾರು 25 ವರ್ಷಗಳ ಹಿಂದೆ ಖಾಸಗಿಯವರಿಗೆ ವಹಿಸಲು ಜಾಗತಿಕ ಮಟ್ಟದ ಟೆಂಡರ್ ಕರೆಯಲಾಗಿತ್ತು. ಆಗ ಯಾರೂ ಟೆಂಡರ್‌ನಲ್ಲಿ ಭಾಗವಹಿಸಿರಲಿಲ್ಲ. ಖಾಸಗಿಯವರಿಗೆ ವಹಿಸುವುದರಿಂದ ಗ್ರಾಹಕರಿಗೆ ತೊಂದರೆ ಆಗುವುದಿಲ್ಲ. ಆದರೆ, ಆಡಳಿತಾತ್ಮಕ ಸಮಸ್ಯೆಗಳು ಎದುರಾಗಲಿವೆ. ಈಗಿರುವ ಸಿಬ್ಬಂದಿಯನ್ನು ಖಾಸಗಿಯವರು ತೆಗೆದುಕೊಳ್ಳುವ ಸಾಧ್ಯತೆ ಕಡಿಮೆ ಇರುತ್ತದೆ. ಅವರನ್ನು ಬೇರೆ ಕಡೆ ವರ್ಗಾವಣೆ ಮಾಡಬೇಕಾಗುತ್ತದೆ’ ಎಂದು ಇಂಧನ ಇಲಾಖೆಯ ನಿವೃತ್ತ ಅಧಿಕಾರಿಯೊಬ್ಬರು ತಿಳಿಸಿದರು.

ಕೈಗಾರಿಕೆಗಳಿಗೆ ಅನುಕೂಲ: ‘ಭಾಗಶಃ ಖಾಸಗೀಕರಣ ಮಾಡುವುದರಿಂದ ಕೈಗಾರಿಕೆಗಳಿಗೆ ಅನುಕೂಲವಾಗಲಿದೆ. ಲಂಚದ ಹಾವಳಿ ತಪ್ಪಲಿದೆ. ದರ ಕಡಿಮೆಯಾಗಲಿದೆ. ಎಸ್ಕಾಂಗಳ ಸಿಬ್ಬಂದಿ ಅತಿ ಹೆಚ್ಚು ಸಂಬಳ ಪಡೆಯುತ್ತಾರೆ. ಆದರೆ, ಗುಣಮಟ್ಟದ ಸೇವೆ ನೀಡುತ್ತಿಲ್ಲ. ಹೇಗಿದ್ದರೂ ಸರ್ಕಾರ ಹಣ ನೀಡುತ್ತದೆ ಎಂಬ ಧೋರಣೆಯಿಂದ ಬೇಕಾಬಿಟ್ಟಿ ಕೆಲಸ ಮಾಡುತ್ತಾರೆ. ಇದಕ್ಕೆಲ್ಲ ಕಡಿವಾಣ ಬೀಳಲಿದೆ’ ಎಂದು ಕೆಇಆರ್‌ಸಿ ಸಲಹಾ ಮಂಡಳಿಯ ಮಾಜಿ ಸದಸ್ಯ ಎಂ.ಜಿ. ಪ್ರಭಾಕರ್ ತಿಳಿಸಿದರು.

‘ಖಾಸಗಿಯವರದ್ದು ಲಾಭದ ಉದ್ದೇಶ’

ಲಾಭವೂ ಇಲ್ಲ, ನಷ್ಟವೂ ಇಲ್ಲ ಎಂಬ ಲೆಕ್ಕಾಚಾರದಲ್ಲಿ ನಾವು ಈಗ ಗ್ರಾಹಕರಿಗೆ ಸೇವೆ ನೀಡುತ್ತಿದ್ದೇವೆ. ಆದರೆ, ಖಾಸಗಿಯವರು ಲಾಭದ ಉದ್ದೇಶ ಇಟ್ಟುಕೊಂಡೇ ಬರುತ್ತಾರೆ. 1902ರಿಂದ ಇಲ್ಲಿಯವರೆಗೆ ಮೂಲ ಸೌಕರ್ಯ ಕಲ್ಪಿಸಲು ಲಕ್ಷಾಂತರ ಕೋಟಿ ವೆಚ್ಚ ಮಾಡಲಾಗಿದೆ. ಇದೆಲ್ಲವೂ ಈಗ ಖಾಸಗಿಯವರ ಪಾಲಾಗಲಿದೆ.

ನೌಕರರಿಗೆ ಸೇವಾ ಭದ್ರತೆ, ವೇತನ, ಪಿಂಚಣಿಯ ಗ್ಯಾರಂಟಿ ಇರುವುದಿಲ್ಲ. ರೈತರ ಪಂಪ್‌ಸೆಟ್‌ಗಳಿಗೆ, ಗೃಹಜ್ಯೋತಿ ಯೋಜನೆಯ ಫಲಾನುಭವಿಗಳಿಗೆ ಉಚಿತವಾಗಿ ವಿದ್ಯುತ್ ನೀಡಲಾಗುತ್ತಿದೆ. ಮುಂದಿನ ದಿನಗಳಲ್ಲಿ ಇದಕ್ಕೆಲ್ಲ ಕಡಿವಾಣ ಬೀಳಬಹುದು

ಕೆ.ಬಲರಾಮ್, ಅಧ್ಯಕ್ಷರು, ಕ.ವಿ.ಮಂ.ನೌಕರರ ಸಂಘಗಳ ಒಕ್ಕೂಟ

ವಿದ್ಯುತ್ ದರವನ್ನು ಕೆಇಆರ್‌ಸಿ ನಿಗದಿ ಮಾಡಲಿದೆ. ಖಾಸಗಿಯವರು ಮನಬಂದಂತೆ ಗ್ರಾಹಕರಿಂದ ವಿದ್ಯುತ್ ಶುಲ್ಕ ವಸೂಲಿ ಮಾಡಲು ಕಾಯ್ದೆ ಪ್ರಕಾರ ಅವಕಾಶ ಇಲ್ಲ

ಎಂ.ಆರ್.ಶ್ರೀನಿವಾಸಮೂರ್ತಿ, ಕೆಇಆರ್‌ಸಿ ಮಾಜಿ ಅಧ್ಯಕ್ಷರು

ಖಾಸಗೀಕರಣ ಒಳ್ಳೆಯದು. ರೈತರಿಗೆ ಉಚಿತ ವಿದ್ಯುತ್, ಸಹಾಯಧನದಂತಹ ವಿಚಾರಗಳನ್ನು ಮುಂದೆಯೂ ಸರ್ಕಾರವೇ ನೋಡಿಕೊಳ್ಳಬೇಕಾಗುತ್ತದೆ

ಎಂ.ಕೆ.ಶಂಕರಲಿಂಗೇಗೌಡ, ಮಾಜಿ ಅಧ್ಯಕ್ಷರು, ಕೆಇಆರ್‌ಸಿ

ಸುದ್ದಿ 2 ನಿಮಿಷ

ಕೋಲಾರ ಶಿಬಿರಕ್ಕೆ ಹಂಪಿಯ ‘ಲಕ್ಷ್ಮಿ’

ಹೊಸಪೇಟೆ (ವಿಜಯನಗರ): ಹಂಪಿಯ ವಿರೂಪಾಕ್ಷೇಶ್ವರ ದೇಗುಲದ 36 ವರ್ಷದ ಆನೆ ‘ಲಕ್ಷ್ಮಿ’ ಅನಾರೋಗ್ಯದಿಂದ ಬಳಲುತ್ತಿದ್ದು, ಚಿಕಿತ್ಸೆಗೆ ಕೋಲಾರದ ವಿಶೇಷ ಆನೆ ಶಿಬಿರಕ್ಕೆ ಕಳುಹಿಸಲು ಸಿದ್ಧತೆ ನಡೆದಿದೆ.

ಆದರೆ, ಇದಕ್ಕೆ ಒಪ್ಪದ ಸ್ಥಳೀಯರು, ‘ಆನೆಗೆ ಇಲ್ಲಿಯೇ ಚಿಕಿತ್ಸೆ ನೀಡಿ. ಕರೆದೊಯ್ಯಬೇಡಿ’ ಎಂದು ದೇವಾಲಯದ ಎದುರು ಮಂಗಳವಾರ ಪ್ರತಿಭಟನೆ ನಡೆಸಿದರು.

‘ಆನೆಯನ್ನು ಇಲ್ಲಿಂದ ಸಾಗಿಸಿದರೆ, ಪುನಃ ತರಲಾಗುವುದಿಲ್ಲ. ಹೀಗಾಗಿ ಕರೆದೊಯ್ಯುವುದು ಬೇಡ’ ಎಂದು ಸ್ಥಳೀಯರು ಹೇಳಿದರು. ಅವರನ್ನು ಸಮಾಧಾನ ಪಡಿಸಿದ ಜಿಲ್ಲಾಡಳಿತದ ಅಧಿಕಾರಿಗಳು, ‘ಆನೆಗೆ ಚಿಕಿತ್ಸೆ ನೀಡಲು ಸೂಕ್ತ ವ್ಯವಸ್ಥೆ ಇಲ್ಲ. ಕೋಲಾರದಲ್ಲಿ ತಜ್ಞ ವೈದ್ಯರ ಬಳಿ ಚಿಕಿತ್ಸೆ ಕೊಡಿಸಿ, ಮೂರು ತಿಂಗಳಲ್ಲಿ ತರಲಾಗುವುದು’ ಎಂದರು. ಎಲ್ಲವೂ ಮನವರಿಗೆಯಾದ ಬಳಿಕ ಮಾವುತ ಸೇರಿ ಸ್ಥಳೀಯರು ಒಪ್ಪಿಗೆ ನೀಡಿದರು.

ಆನೆಗೆ ಸೂಕ್ತ ಚಿಕಿತ್ಸೆ ಕೊಡಿಸಲು ಸಾಗಿಸಲಾಗುತ್ತಿದೆ. ಮೂರು ತಿಂಗಳಲ್ಲಿ ಆನೆಯ ಆರೋಗ್ಯದಲ್ಲಿ ಚೇತರಿಕೆ ಕಂಡ ಬಳಿಕ, ಹಂಪಿಗೆ ತರಲಾಗುವುದು ಎಂದು ಜಿಲ್ಲಾಧಿಕಾರಿ ಕವಿತಾ ಎಸ್. ಮನ್ನಿಕೇರಿ ತಿಳಿಸಿದರು.

‘ಬುಧವಾರ ಬೆಳಿಗ್ಗೆ ಆನೆಯನ್ನು ಕೋಲಾರಕ್ಕೆ ಒಯ್ಯಲು ಸಿದ್ಧತೆ ಮಾಡಿಕೊಳ್ಳಲಾಗಿದೆ’ ಎಂದು ಅರಣ್ಯಾಧಿಕಾರಿಗಳು ತಿಳಿಸಿದರು.

ಹಾಸನ: ಬಕ್ರೀದ್‌ಗೆ ಗೋಹತ್ಯೆ ಮಾಡದಿರಲು ಮುಸ್ಲಿಮರ ನಿರ್ಧಾರ

ಹಾಸನ: ಬಕ್ರೀದ್ ಹಬ್ಬದಲ್ಲಿ ಈ ಬಾರಿ ಜಾನುವಾರುಗಳನ್ನು ಖರೀದಿಸಬಾರದು ಹಾಗೂ ವಧೆ ಮಾಡಬಾರದು ಎಂದು ಜಿಲ್ಲಾ ಮುಸ್ಲಿಂ ಒಕ್ಕೂಟವು ಸ್ವಯಂ ನಿರ್ಬಂಧ ವಿಧಿಸಿಕೊಂಡಿದೆ.

ಈ ಹಿನ್ನೆಲೆಯಲ್ಲಿ ಮಂಗಳವಾರ ಇಲ್ಲಿನ ವಾರದ ಸಂತೆಗೆ ಜಾನುವಾರುಗಳನ್ನು ಮಾರಲು ಬಂದವರಲ್ಲಿ ಆಕ್ರೋಶ ಉಂಟು ಮಾಡಿತು. ‘ಜಾನುವಾರುಗಳನ್ನು ಖರೀದಿಸಬಾರದು ಹಾಗೂ ವಧೆ ಮಾಡಬಾರದು’ ಎಂದು ಮುಸ್ಲಿಂ ಮುಖಂಡರು ಮಂಗಳವಾರ ವಾರದ ಸಂತೆಯಲ್ಲಿ ಸಮುದಾಯದ ಜನರಿಗೆ ಮನವಿ ಮಾಡಿದರು.

‘ರಾಜ್ಯದಲ್ಲಿ ಗೋಹತ್ಯೆ ನಿಷೇಧ ಕಾಯ್ದೆ ಜಾರಿಯಲ್ಲಿದೆ. ನಾವು ಕಾನೂನು ಗೌರವಿಸುತ್ತೇವೆ. ಮುಂಜಾಗ್ರತೆಯಾಗಿ ಗೋಹತ್ಯೆ ಮಾಡದಿರಲು ನಿರ್ಧರಿಸಲಾಗಿದೆ’ ಎಂದು ಮುಸ್ಲಿಂ ಸಂಘಟನೆಗಳ ಒಕ್ಕೂಟದ ರಾಜ್ಯ ಸಂಚಾಲಕ ಅನ್‌ಷಾದ್-ಇ-ಪಾಳ್ಯ ತಿಳಿಸಿದರು.

‘ಗೋಹತ್ಯೆ ಮಾಡಬಾರದೆಂದು ಎಲ್ಲಾ ಮಸೀದಿಗಳಲ್ಲಿ ಈಗಾಗಲೇ ಪ್ರಚುರಪಡಿಸಲಾಗಿದೆ’ ಎಂದು ಜಿಲ್ಲಾ ಘಟಕದ ಅಧ್ಯಕ್ಷ ಯೂಸುಫ್ ಖಾನ್ ತಿಳಿಸಿದರು.

‘ಈಗ ಮಳೆಯಾಗುತ್ತಿದ್ದು, ಬಿತ್ತನೆ ಸೇರಿ ಕೃಷಿ ಚಟುವಟಿಕೆಗಳನ್ನು ಕೈಗೊಳ್ಳಬೇಕು. ಅದಕ್ಕೆ ಹಣ ಬೇಕು. ಆದರೆ ಜಾನುವಾರು ಖರೀದಿಸಲು ಯಾರೂ ಮುಂದೆ ಬರುತ್ತಿಲ್ಲ. ಯಾರಾದರೂ ಖರೀದಿಸಿ’ ಎಂದು ಸಂತೆಗೆ ಜಾನುವಾರುಗಳನ್ನು ತಂದಿದ್ದವರು ಒತ್ತಾಯಿಸಿದರು.

ತಂಬಾಕು ಇಳುವರಿ ಹೆಚ್ಚಿಸಲು ‘ಕ್ಯಾಪ್ಸೂಲ್’

• ಎಚ್.ಎಸ್.ಸಚ್ಚಿತ್

ಹುಣಸೂರು (ಮೈಸೂರು ಜಿಲ್ಲೆ): ತಂಬಾಕು ಬೆಳೆಯನ್ನು ರೋಗ ಮುಕ್ತವಾಗಿಸಲು, ಇಳುವರಿ ಮತ್ತು ಮಣ್ಣಿನ ಫಲವತ್ತತೆ ವೃದ್ಧಿಗೆ ‘ನ್ಯಾನೊ ಬಯೊ ಕ್ಯಾಪ್ಸೂಲ್’ ಅನ್ನು ರಾಷ್ಟ್ರೀಯ ವಾಣಿಜ್ಯ ಕೃಷಿ ಸಂಶೋಧನಾ ಕೇಂದ್ರ ಆವಿಷ್ಕರಿಸಿದೆ.

ಭಾರತೀಯ ಕೃಷಿ ಸಂಶೋಧನಾ ಮಂಡಳಿ ಹಾಗೂ ಭಾರತೀಯ ಮಸಾಲೆ ಬೆಳೆಗಳ ಸಂಶೋಧನಾ ಸಂಸ್ಥೆಯ ಸಹಯೋಗದಲ್ಲಿ ನಡೆಸಿದ ಆವಿಷ್ಕಾರವು ಪ್ರಾಯೋಗಿಕವಾಗಿ ಯಶಸ್ವಿಗೊಂಡಿದೆ.

ಮೈಸೂರು ಜಿಲ್ಲೆಯ ಸುಮಾರು 200ಕ್ಕೂ ಹೆಚ್ಚು ತಂಬಾಕು ಬೆಳೆಗಾರರಿಗೆ ಈ ಕ್ಯಾಪ್ಸೂಲ್ ಅನ್ನು ನೀಡಲಾಗಿದೆ. ಮುಂದಿನ ವರ್ಷದಿಂದ ಮಾರುಕಟ್ಟೆಗೆ ಬಿಡುಗಡೆ ಮಾಡಲು ಕೇಂದ್ರವು ನಿರ್ಧರಿಸಿದೆ.

‘ಸಂಶೋಧನಾ ಕೇಂದ್ರದ ಎರಡು ಎಕರೆ ಪ್ರದೇಶದಲ್ಲಿ ಈ ತಂತ್ರಜ್ಞಾನ ಬಳಸಿ ಬೆಳೆ ತೆಗೆಯಲಾಗಿದ್ದು, ಪ್ರಯೋಗವು ಕಳೆದ ಮೂರು ವರ್ಷದಲ್ಲಿ ಹಂತ ಹಂತವಾಗಿ ನಡೆದಿದೆ. ಕ್ಯಾಪ್ಸೂಲ್ ಬಳಸಿ ಬೆಳೆಸಿದ ತಂಬಾಕು ಗಿಡದ ಎಲೆಗಳು ಹೆಚ್ಚು ಅಗಲ ಹಾಗೂ ರೋಗಮುಕ್ತವಾಗಿವೆ. ಉತ್ತಮ ಇಳುವರಿ ಕೊಟ್ಟಿರುವ ಇದು, ರೈತರ ಉತ್ಪಾದನಾ ವೆಚ್ಚವನ್ನೂ ತಗ್ಗಿಸಲಿದೆ’ ಎನ್ನುತ್ತಾರೆ ಕೇಂದ್ರದ ವಿಜ್ಞಾನಿ ಡಾ.ರಾಮಕೃಷ್ಣನ್.

‘ಕ್ಯಾಪ್ಸೂಲ್‌ನಲ್ಲಿರುವ ರಂಜಕ, ಪೊಟ್ಯಾಷಿಯಂ, ಸಾರಜನಕ ಸೇರಿ ಅಗತ್ಯ ಪೋಷಕಾಂಶಗಳು ನೇರವಾಗಿ ಸಸಿಗಳಿಗೆ ಸಿಗುವುದರಿಂದ ಇಳುವರಿ ಉತ್ಕೃಷ್ಟವಾಗಿರಲಿದೆ’ ಎಂದು ‘ಪ್ರಜಾವಾಣಿ’ಗೆ ವಿವರಿಸಿದರು.

‘ಕ್ಯಾಪ್ಸೂಲ್ ಮಣ್ಣಿಗೆ ಉಪಯುಕ್ತವಾಗುವ ಸೂಕ್ಷ್ಮ ಜೀವಿಗಳನ್ನು ಅಪಾರವಾಗಿ ಹೊಂದಿದೆ. ಅಝೋಸ್ಪಿರಿಲಮ್, ಬ್ಯಾಸಿಲಸ್, ಫ್ರಟೂರಿಯಾ ಎಂಬ ಸೂಕ್ಷ್ಮಜೀವಿಗಳನ್ನು ಒಟ್ಟಿಗೆ ಸೇರಿಸಿ ಕ್ಯಾಪ್ಸುಲ್ ಸಿದ್ದಪಡಿಸಲಾಗಿದೆ. ಸೂಕ್ಷ್ಮಜೀವಿಗಳನ್ನು ಒಟ್ಟಿಗೆ ಸೇರಿಸುವುದು ಸುಲಭವಲ್ಲ’ ಎಂದು ಹೇಳಿದರು.

ಕ್ಯಾಪ್ಸೂಲ್ ಬಳಕೆ ಹೇಗೆ?

200 ಲೀಟರ್ ನೀರಿನಲ್ಲಿ 10 ಕ್ಯಾಪ್ಸೂಲ್‌ಗಳನ್ನು ಕರಗಿಸಿ 10-15 ನಿಮಿಷದ ನಂತರ ಒಂದು ಎಕರೆ ಪ್ರದೇಶದ ಗಿಡದ ಬುಡಗಳಿಗೆ ಸುರಿಯಬೇಕು. ಇಲ್ಲವೇ ಬ್ಯಾಟರಿ ಚಾಲಿತ ಪಂಪ್‌ನಲ್ಲಿ ಎಕರೆಗೆ 10 ಕ್ಯಾನ್‌ನಷ್ಟು ದ್ರಾವಣ ಸಿದ್ಧಪಡಿಸಿ ಸಿಂಪಡಿಸಬಹುದು’ ಎಂದು ವಿಜ್ಞಾನಿ ಡಾ.ರಾಮಕೃಷ್ಣನ್ ತಿಳಿಸಿದರು.

‘ದ್ರಾವಣವನ್ನು ಮರಳು ಅಥವಾ ಮಣ್ಣಿನೊಂದಿಗೆ ಮಿಶ್ರಣ ಮಾಡಿ ಸಸಿಗಳ ಬುಡಕ್ಕೆ ಹಾಕುವುದರಿಂದ ರಂಜಕ, ಪೊಟ್ಯಾಶಿಯಂ, ಸಾರಜನಕ, ನೈಟ್ರೋಜನ್ ಸೇರಿ ಗಿಡದ ಆರೋಗ್ಯ ಮತ್ತು ಫಲವತ್ತತೆ ಹೆಚ್ಚಲಿದೆ. ಬೇರು ಗಂಟು ಮತ್ತು ಸೊರಗು ರೋಗವನ್ನು ನಿಯಂತ್ರಿಸಬಹುದು. ದ್ರಾವಣ ಸಿಂಪರಣೆ ನಂತರದ 24 ಗಂಟೆಯಲ್ಲಿ ಯಾವುದೇ ರಾಸಾಯನಿಕ ಗೊಬ್ಬರ ನೀಡಬಾರದು. ಇದಲ್ಲದೆ ಕೀಟ ನಾಶಕವನ್ನೂ ಬಳಸಬಾರದು’ ಎಂದರು.

ನ್ಯಾನೊ ಬಯೊ ಕ್ಯಾಪ್ಸೂಲ್ ಬಳಸಿ ಬೆಳೆದ ತಂಬಾಕು

‘ಉತ್ಪಾದನಾ ವೆಚ್ಚ ಕಡಿತ’

‘ತಂಬಾಕು ಸಸಿ ಮಡಿಯು ಕರಿಕಡ್ಡಿ, ಸೊರಗು, ಕೊಳೆ ರೋಗಕ್ಕೆ ತುತ್ತಾಗುವುದು ಸಾಮಾನ್ಯ, ನ್ಯಾನೊ ಬಯೋ ಕ್ಯಾಪ್ಸೂಲ್ ಬಳಸಿ ಬೆಳೆಸಿದ ತಂಬಾಕು ಸಸಿಯು ರೋಗ ಮುಕ್ತವಾಗಿದೆ. ಶೇ 75ರಷ್ಟು ಉತ್ಪಾದನಾ ವೆಚ್ಚ ಕಡಿಮೆಯಾಗಿದೆ’ ಎಂದು ಪಿರಿಯಾಪಟ್ಟಣ ತಾಲ್ಲೂಕಿನ ಕೆಗ್ಗುಂಡಿಯ ಪ್ರಗತಿಪರ ರೈತ ರಾಜು ಹೇಳಿದರು.

ನ್ಯಾನೋ ಕ್ಯಾಪ್ಸೂಲ್ ನೀಡಿದ ತಂಬಾಕಿನ ಇಳುವರಿ ಶೇ 15ರಿಂದ 20ರಷ್ಟು ಹೆಚ್ಚಿರುವುದು ದೃಢಪಟ್ಟಿದೆ. ಆಯ್ದ ರೈತರ ಜಮೀನಿನಲ್ಲಿ ಪ್ರಯೋಗ ನಡೆಸಲಾಗಿದೆ

ಡಾ.ರಾಮಕೃಷ್ಣನ್, ಮುಖ್ಯಸ್ಥರು, ಎನ್‌ಐಆರ್‌ಸಿಎ ಕೇಂದ್ರ, ಹುಣಸೂರು

ಬಕ್ರೀದ್ ಪ್ರಯುಕ್ತ ಮನೆಗೆ ತಂದ ಕಾಶ್ಮೀರಿ ತಳಿಯ ಕುರಿಯನ್ನು ಕಾರವಾರದಲ್ಲಿ ಯುವಕನೊಬ್ಬ ಕಡಲತೀರಕ್ಕೆ ಕರೆತಂದಾಗ ಕಂಡಿದ್ದು ಹೀಗೆ...

ವಿಶ್ರಾಂತ ಕುಲಪತಿ ಸೇರಿ ಆರು ಜನರ ಬಂಧನ

ನಾರಾಯಣಸ್ವಾಮಿ

ಸುರೇಶ್

ಮೃತ್ಯುಂಜಯ

ಬೋಪಣ್ಣ

ಮಂಜುನಾಥ

ರಾಮಗೊಂಡ

ಪ್ರಜಾವಾಣಿ ವಾರ್ತೆ

₹45 ಕೋಟಿ ಹಗರಣ ಆರೋಪ

ಬೀದರ್: ನಕಲಿ ಬಿಲ್ ಸೃಷ್ಟಿಸಿ ₹45 ಕೋಟಿ ಅವ್ಯವಹಾರ ನಡೆಸಿದ ಆರೋಪದಡಿ ಇಲ್ಲಿನ ಕರ್ನಾಟಕ ಪಶು ವೈದ್ಯಕೀಯ, ಪಶು ಹಾಗೂ ಮೀನುಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯದ ವಿಶ್ರಾಂತ ಕುಲಪತಿ, ನಿವೃತ್ತ ಪ್ರಭಾರ ಹಣಕಾಸು ಅಧಿಕಾರಿ ಸೇರಿ ಆರು ಜನರನ್ನು ಲೋಕಾಯುಕ್ತ ಪೊಲೀಸರು ಬಂಧಿಸಿದ್ದಾರೆ.

ವಿಶ್ರಾಂತ ಕುಲಪತಿ ಎಚ್.ಡಿ. ನಾರಾಯಣಸ್ವಾಮಿ, ನಿವೃತ್ತ ಪ್ರಭಾರ ಹಣಕಾಸು ಅಧಿಕಾರಿ ಕೆ.ಎಲ್. ಸುರೇಶ್, ಸಹಾಯಕ ಹಣಕಾಸು ಅಧಿಕಾರಿ ಮೃತ್ಯುಂಜಯ ಹಿರೇಮಠ, ಬೆಂಗಳೂರಿನ ಖಾಸಗಿ ಎಂಟರ್‌ಪ್ರೈಸೆಸ್ ಮಾಲೀಕರಾದ ಬೋಪ್ಪಣ್ಣ, ಮಂಜುನಾಥ ಹಾಗೂ ರಾಮಗೊಂಡ ಅವರನ್ನು ಲೋಕಾಯುಕ್ತ ಪೊಲೀಸರು ಮಂಗಳವಾರ ಸ್ಥಳೀಯ ನ್ಯಾಯಾಲಯಕ್ಕೆ ಹಾಜರುಪಡಿಸಿದರು.

ನ್ಯಾಯಾಲಯವು ಆರೂ ಆರೋಪಿಗಳಿಗೆ ಜೂನ್ 2ರವರೆಗೆ ನ್ಯಾಯಾಂಗ ಬಂಧನ ವಿಧಿಸಿದೆ.

2017–18ನೇ ಸಾಲಿನಲ್ಲಿ ನಡೆದಿದೆ ಎನ್ನಲಾದ ಹಣಕಾಸಿನ ಅವ್ಯವಹಾರಕ್ಕೆ ಸಂಬಂಧಿಸಿದಂತೆ ವಿವಿ ಮಾಜಿ ಆಡಳಿತ ಮಂಡಳಿ ಸದಸ್ಯರಾದ ವೆಂಕಟ್ ರೆಡ್ಡಿ ಹಾಗೂ ಕೆ.ಸಿ. ಶಂಕರೇಗೌಡ ಅವರು ಲೋಕಾಯುಕ್ತ ಪೊಲೀಸ್ ಠಾಣೆಗೆ ದೂರು ನೀಡಿದ್ದರು.

ಜಿಲ್ಲಾ ನ್ಯಾಯಾಲಯವು ಆರೋಪಿಗಳ ವಿರುದ್ಧ ಬಂಧನದ ವಾರೆಂಟ್ ಹೊರಡಿಸಿತ್ತು. ಇದನ್ನು ಆಧರಿಸಿ ಇತರ ಐವರು ಆರೋಪಿಗಳನ್ನು ಬೆಂಗಳೂರಿನಲ್ಲಿ ವಶಕ್ಕೆ ಪಡೆದಿದ್ದಾರೆ.

ವಿದ್ಯುತ್ ವಿತರಣೆಯ ಖಾಸಗೀಕರಣಕ್ಕೆ ವಿರೋಧ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿದ್ಯುತ್ ವಿತರಣೆಗೆ ಪರವಾನಗಿ ನೀಡುವಂತೆ ಟಾಟಾ ಪವರ್ ಕಂಪನಿಯು ಕೆಇಆರ್‌ಸಿಗೆ ಸಲ್ಲಿಸಿರುವ ಅರ್ಜಿಯನ್ನು ತಿರಸ್ಕರಿಸಬೇಕು. ಇಲ್ಲದಿದ್ದರೆ ರಾಜ್ಯದಾದ್ಯಂತ ಪ್ರತಿಭಟನೆ ಮಾಡಲಾಗುವುದು ಎಂದು ಫೆಡರೇಷನ್ ಆಫ್ ಕರ್ನಾಟಕ ಎಲೆಕ್ಟ್ರಿಸಿಟಿ ಬೋರ್ಡ್ ಎಂಪ್ಲಾಯೀಸ್ ಯೂನಿಯನ್ ಆ್ಯಂಡ್ ಅಸೋಸಿಯೇಷನ್ ತಿಳಿಸಿದೆ.

ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅಸೋಸಿಯೇಷನ್ ಅಧ್ಯಕ್ಷ ಕೆ.ಬಲರಾಮ್, ಮಹಾ ಪ್ರಧಾನ ಕಾರ್ಯದರ್ಶಿ ಸಿ.ಬಸವಣ್ಣ, ‘ಸಾರ್ವಜನಿಕರ ಆಸ್ತಿಯಾಗಿರುವ ವಿದ್ಯುತ್ ಕ್ಷೇತ್ರವನ್ನು ಖಾಸಗೀಕರಣಗೊಳಿಸುವುದು ನೌಕರರ ಹಾಗೂ ಗ್ರಾಹಕರ ಹಿತಾಸಕ್ತಿಗೆ ಮಾರಕ. ರಾಜ್ಯದ ಎಲ್ಲ ಎಸ್ಕಾಂಗಳಲ್ಲಿ ನುರಿತ ಸಿಬ್ಬಂದಿ, ಸಾವಿರಾರು ಕೋಟಿ ರೂಪಾಯಿ ಮೌಲ್ಯದ ವಿತರಣಾ ಜಾಲ ಇದೆ. ಸಾರ್ವಜನಿಕ ಸಂಸ್ಥೆಗಳನ್ನು ಖಾಸಗೀಕರಣ ಮಾಡುತ್ತಿರುವುದು ಖಂಡನೀಯ’ ಎಂದರು.

‘ಖಾಸಗಿ ಕಂಪನಿಯು ಕೈಗಾರಿಕೆ ಹಾಗೂ ವಾಣಿಜ್ಯ ವಲಯದಂತಹ ಹೆಚ್ಚು ಲಾಭ ಬರುವ ನಗರ ಪ್ರದೇಶಗಳಲ್ಲಿ ಮಾತ್ರ ವಿದ್ಯುತ್ ವಿತರಣೆಗೆ ಅವಕಾಶ ನೀಡುವಂತೆ ಕೋರಿದೆ. ಸಾರ್ವಜನಿಕ ವಲಯದ ಎಸ್ಕಾಂಗಳು ಗ್ರಾಮೀಣ ಪ್ರದೇಶದಲ್ಲಿ ವಿದ್ಯುತ್ ವಿತರಿಸುವ ಮೂಲಕ ತೀವ್ರ ಸಂಕಷ್ಟಕ್ಕೆ ಸಿಲುಕುವ ಅಪಾಯ ಇದೆ’ ಎಂದರು.

‘ಉದ್ಯೋಗದ ಭದ್ರತೆಗೆ ಧಕ್ಕೆ’

‘ವಿದ್ಯುತ್ ವಿತರಣಾ ವಲಯ ಖಾಸಗೀಕರಣಗೊಂಡರೆ ಸ್ಮಾರ್ಟ್ ಮೀಟರ್ ಹೆಸರಿನಲ್ಲಿ ಮನಬಂದಂತೆ ದರ ಹೆಚ್ಚಳ ಮಾಡಲಾಗುತ್ತದೆ. ಇಂಧನ ಇಲಾಖೆಯಲ್ಲಿ 35 ಸಾವಿರಕ್ಕೂ ಹೆಚ್ಚು ಹುದ್ದೆಗಳು ಖಾಲಿ ಇವೆ. ಖಾಸಗೀಕರಣಗೊಂಡರೆ ಪ್ರಸ್ತುತ ಇರುವ ಗುತ್ತಿಗೆ, ಹೊರಗುತ್ತಿಗೆ ಹಾಗೂ ಕಾಯಂ ನೌಕರರ ಉದ್ಯೋಗದ ಭದ್ರತೆಗೆ ಧಕ್ಕೆ ಆಗಲಿದೆ’ ಎಂದು ಅಸೋಸಿಯೇಷನ್ ಸದಸ್ಯರು ದೂರಿದರು.

‘ಹೊರ ರಾಜ್ಯದ ಲಾಭಕೋರ ಖಾಸಗಿ ಸಂಸ್ಥೆಗೆ ರಾಜ್ಯದ ವಿದ್ಯುತ್ ಕ್ಷೇತ್ರವನ್ನು ಹಸ್ತಾಂತರಿಸಲು ಅವಕಾಶ ನೀಡುವುದಿಲ್ಲ’ ಎಂದರು.

ರಾಜೀನಾಮೆಗೆ ‘ಹೈ’ ಸೂಚನೆ

ಒಂದನೇ ಪುಟದಿಂದ...

ಹಾಗಿದ್ದರೂ, ಸಿದ್ದರಾಮಯ್ಯ ಅವರು ಪದತ್ಯಾಗ ಮಾಡಿದ ಬಳಿಕ ನಡೆಯಬಹುದಾದ ರಾಜಕೀಯ ವಿದ್ಯಮಾನ ಹಾಗೂ ಸ್ಥಿತ್ಯಂತರಗಳು ಸರ್ಕಾರದ ಮುಂದಿನ ನಾಯಕತ್ವ ಯಾರದ್ದು ಎಂಬುದನ್ನು ನಿರ್ಧರಿಸುವ ಸಾಧ್ಯತೆಯೂ ಇದೆ.

ದಿಢೀರ್ ಬೆಳವಣಿಗೆ: ಸಿದ್ದರಾಮಯ್ಯ ನೇತೃತ್ವದ ಸರ್ಕಾರ ಇದೇ 20ಕ್ಕೆ ಮೂರು ವರ್ಷ ಪೂರೈಸಿದೆ. ಈ ಬೆನ್ನಲ್ಲೇ, ಸಿದ್ದರಾಮಯ್ಯ ಹಾಗೂ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರನ್ನು ಕಾಂಗ್ರೆಸ್ ವರಿಷ್ಠರು ಮಂಗಳವಾರ ದೆಹಲಿಗೆ ಕರೆಯಿಸಿಕೊಂಡಿದ್ದರು. ನಾಯಕತ್ವ ಬದಲಾವಣೆ, ಸಂಪುಟ ಪುನರ್‌ರಚನೆ, ರಾಜ್ಯಸಭೆ ಹಾಗೂ ಪರಿಷತ್ತಿನ ಚುನಾವಣೆಗಳಿಗೆ ಅಭ್ಯರ್ಥಿಗಳ ಆಯ್ಕೆಯ ಚರ್ಚೆಯ ನಡೆಯಬಹುದು ಎಂದೂ ಹೇಳಲಾಗಿತ್ತು.

ಸಿದ್ದರಾಮಯ್ಯ ಅವರ ಜತೆಗೆ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಲೋಕಸಭೆಯ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ, ಪಕ್ಷದ ಪ್ರಧಾನ ಕಾರ್ಯದರ್ಶಿ ಕೆ.ಸಿ. ವೇಣುಗೋಪಾಲ್ ಹಾಗೂ ರಾಜ್ಯ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲಾ ಅವರು ಸಭೆ ನಡೆಸಿದರು.

ಬಳಿಕ ಸಿದ್ದರಾಮಯ್ಯ ಅವರ ಜತೆಗೆ ರಾಹುಲ್ ಗಾಂಧಿ ಪ್ರತ್ಯೇಕವಾಗಿ ಸಭೆ ನಡೆಸಿದರು. ಈ ಸಭೆಯಲ್ಲಿ ಅಧಿಕಾರ ಬಿಟ್ಟುಕೊಡುವ ಬಗ್ಗೆ ಪ್ರಸ್ತಾಪಿಸಿದ ರಾಹುಲ್, ನೀವೇ ತೀರ್ಮಾನ ತೆಗೆದುಕೊಳ್ಳಿ ಎಂದು ಸಲಹೆ ನೀಡಿದರು. ‘ನಾನೇನು ತೀರ್ಮಾನ ತೆಗೆದುಕೊಳ್ಳುವುದಿಲ್ಲ; ನೀವು ಸೂಚಿಸಿದಂತೆ ನಡೆದುಕೊಳ್ಳುವೆ’ ಎಂದು ಸಿದ್ದರಾಮಯ್ಯ ಹೇಳಿದರು ಎಂದು ಗೊತ್ತಾಗಿದೆ. ಬಳಿಕ, ಪಕ್ಷದ ವರಿಷ್ಠೆ ಹಾಗೂ ತಮ್ಮ ತಾಯಿ ಸೋನಿಯಾಗಾಂಧಿ ಅವರ ಮನೆಗೆ ತೆರಳಿದ ರಾಹುಲ್ ಅವರ ಜತೆ ಸಮಾಲೋಚನೆ ನಡೆಸಿದರು. ಮಧ್ಯಾಹ್ನದ ಭೋಜನದ ಬಳಿಕ ಮತ್ತೆ ಇಂದಿರಾ ಭವನದಲ್ಲಿ ಸಿದ್ದರಾಮಯ್ಯ ಅವರನ್ನು ಭೇಟಿ ಮಾಡಿದ ರಾಹುಲ್, ರಾಜೀನಾಮೆ ಕೊಡುವಂತೆ ಸೂಚಿಸಿದರು. ಈ ವೇಳೆ, ‘ನೀವು ಸೂಚಿಸಿದಂತೆ ನಡೆದುಕೊಳ್ಳುವೆ, ಮುಂದೆ ಯಾರನ್ನು ಕೂರಿಸುತ್ತೀರಿ’ ಎಂದು ಸಿದ್ದರಾಮಯ್ಯ ಪ್ರಶ್ನಿಸಿದರು ಎಂದು ತಿಳಿದು ಬಂದಿದೆ.

ಶಿವಾನಂದ ವಿಚಾರಣೆ ವಿಲಾಸಿ ಕಾರುಗಳ ವಶ

ಬೆಳಗಾವಿ: ಅಧಿಕ ಬಡ್ಡಿ ಆಮಿಷವೊಡ್ಡಿ ಅನಧಿಕೃತವಾಗಿ ಸಾವಿರಾರು ಕೋಟಿ ವಹಿವಾಟು ನಡೆಸಿದ್ದ ಆರೋಪವುಳ್ಳ ಶಿವಂ ಅಸೋಸಿಯೇಟ್ಸ್‌ನ ಮಾಲೀಕ ಶಿವಾನಂದ ನೀಲಣ್ಣವರ ಅವರನ್ನು ಸಿಐಡಿ ಅಧಿಕಾರಿಗಳು ಮಂಗಳವಾರ ಬೆಳಗಾವಿಗೆ ಕರೆತಂದು, ಮತ್ತಷ್ಟು ವಿಚಾರಣೆಗೆ ಒಳಪಡಿಸಿದರು.

ಶಿವಾನಂದ ಅವರ ಪತ್ನಿ ಹಾಗೂ ಅವರ ಸ್ನೇಹಿತರ ಹೆಸರಿನಲ್ಲಿರುವ ಆಸ್ತಿಯ ವಿವರ ಪಡೆದರು. ಐಷಾರಾಮಿ ಕಾರುಗಳನ್ನು ವಶಕ್ಕೆ ಪಡೆದರು.

ಆರೋಪಿಯನ್ನು ಮಂಗಳವಾರ ಮಾಳಮಾರುತಿ ಠಾಣೆಗೆ ಕರೆದೊಯ್ದು ದಿನವಿಡೀ ವಿಚಾರಣೆ ನಡೆಸಿದರು. ಜತೆಗೆ ಶಿವಾನಂದ ಪತ್ನಿ ಸಂಗೀತಾ, ಆಪ್ತರಾದ ನಟ ಆರ್.ಅಭಿಲಾಷ್ ಅವರ ವಿಚಾರಣೆ ಮಾಡಿದರು. ವ್ಯವಹಾರ ಪಾಲುದಾರ ಸುಭಾಷ್ ಅವರಿಗೆ ನೋಟಿಸ್ ನೀಡಿದ್ದರೂ ವಿಚಾರಣೆಗೆ ಹಾಜರಾಗಲಿಲ್ಲ.

ಶಿವಾನಂದ ಹೆಸರಲ್ಲಿದ್ದ ನಾಲ್ಕು ಹಾಗೂ ಅಭಿಲಾಷ್‌ಗೆ ಉಡುಗೊರೆ ನೀಡಿದ್ದ ಒಂದು ವಿಲಾಸಿ ಕಾರನ್ನು ವಶಕ್ಕೆ ಪಡೆದರು. ಆರೋಪಿ ಕಸ್ಟಡಿ ಅವಧಿ ಬುಧವಾರ (ಮೇ 27) ಮುಗಿಯಲಿದೆ.

ಮಾಜಿ ಸೈನಿಕರ ಆಗ್ರಹ: ‘ಶಿವಂ ಅಸೋಸಿಯೇಟ್ಸ್‌ನಲ್ಲಿ ಹಲವು ಮಾಜಿ ಸೈನಿಕರೂ ಹೂಡಿಕೆ ಮಾಡಿದ್ದಾರೆ. ಠೇವಣಿ ಮರಳಿಸುವಾಗ ಮಾಜಿ ಸೈನಿಕರಿಗೇ ಆದ್ಯತೆ ಕೊಡಿ’ ಎಂದು ಮಾಜಿ ಸೈನಿಕರ ಸಂಘದ ಮಹಾಒಕ್ಕೂಟದ ಅಧ್ಯಕ್ಷ ಜಗದೀಶ ಪೂಜಾರಿ ಆಗ್ರಹಿಸಿದರು.

ಚಾಮುಂಡಿ ದೇವಿ ಎದುರು ಮಂಡಿಯೂರಿದ ರಣವೀರ್

ಪ್ರಜಾವಾಣಿ ವಾರ್ತೆ

ಮೈಸೂರು: ಶಕ್ತಿದೇವತೆಗಳನ್ನು ಅಣಕಿಸಿ ವಿವಾದಕ್ಕೆ ಗುರಿಯಾಗಿದ್ದ ಬಾಲಿವುಡ್ ನಟ ರಣವೀರ್ ಸಿಂಗ್ ಇಲ್ಲಿನ ಚಾಮುಂಡಿ ಬೆಟ್ಟಕ್ಕೆ ಮಂಗಳವಾರ ಭೇಟಿ ನೀಡಿದ್ದು, ದೇವಿ ಮೂರ್ತಿ ಎದುರು ಮಂಡಿಯೂರಿ ಪ್ರಾರ್ಥಿಸಿದರು.

ನಟ ರಣವೀರ್ ಸಿಂಗ್ ಚಾಮುಂಡಿ ಬೆಟ್ಟದಲ್ಲಿ ಮಂಗಳವಾರ ಪೂಜೆ ಸಲ್ಲಿಸಿದರು

ಕರಾವಳಿಯ ದೈವಾರಾಧನೆ, ಚಾಮುಂಡೇಶ್ವರಿ ಮೊದಲಾದ ಶಕ್ತಿದೇವತೆಗಳ ಕುರಿತು ಕಾರ್ಯಕ್ರಮವೊಂದರಲ್ಲಿ ಅವರು ಆಕ್ಷೇಪಾರ್ಹವಾಗಿ ಮಾತನಾಡಿದ್ದು, ವ್ಯಾಪಕ ಟೀಕೆ ವ್ಯಕ್ತವಾಗಿತ್ತು. ಬೆಂಗಳೂರಿನ ಹೈಗ್ರೌಂಡ್ಸ್ ಪೊಲೀಸ್ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿತ್ತು. ಪ್ರಕರಣ ರದ್ದು ಕೋರಿ ಅವರು ಹೈಕೋರ್ಟ್ ಮೆಟ್ಟಿಲೇರಿದ್ದರು.

ಅವರ ಹೇಳಿಕೆಗೆ ಹೈಕೋರ್ಟ್ ಕೂಡಾ ಅಸಮಾಧಾನ ವ್ಯಕ್ತಪಡಿಸಿದ್ದು, ಚಾಮುಂಡಿ ಬೆಟ್ಟಕ್ಕೆ ಭೇಟಿ ನೀಡಿ ಕ್ಷಮೆ ಕೋರಲು ಸೂಚಿಸಿತ್ತು. ಅದರಂತೆ ಅವರು ಸಾಮಾನ್ಯರಂತೆ ಬೆಟ್ಟಕ್ಕೆ ಭೇಟಿ ನೀಡಿದ್ದರು.

ಬೆಳಿಗ್ಗೆ 7.30ರ ಸುಮಾರಿಗೆ ಬಂದು ಉತ್ಸವಮೂರ್ತಿಗೆ ಪೂಜೆ ಸಲ್ಲಿಸಿದರು. ಗರ್ಭಗುಡಿಯ ಬಳಿ ಕುಳಿತು ಪ್ರಾರ್ಥಿಸಿದರು. ಹತ್ತು ನಿಮಿಷ ಕಾಲ ದೇವಸ್ಥಾನದಲ್ಲಿದ್ದು ನಿರ್ಗಮಿಸಿದರು.

23 ಜಿಲ್ಲೆಗಳಿಗೆ ‘ಯೆಲ್ಲೊ ಅಲರ್ಟ್’ • ಜೂನ್ 2ರವರೆಗೂ ರಾಜ್ಯದ ಕೆಲವೆಡೆ ಮಳೆ ಸಾಧ್ಯತೆ

ಚಿಕ್ಕಮಗಳೂರು, ಹಾಸನದ ವಿವಿಧೆಡೆ ಮಳೆ

ಪ್ರಜಾವಾಣಿ ವಾರ್ತೆ

ಚಿಕ್ಕಮಗಳೂರು: ನಗರದಲ್ಲಿ ಮಂಗಳವಾರ ಮಧ್ಯಾಹ್ನ ಸುಮಾರು ಒಂದು ಗಂಟೆ ಗುಡುಗು, ಸಿಡಿಲಿನ ಅಬ್ಬರದ ನಡುವೆ ಭರ್ಜರಿ ಮಳೆ ಸುರಿಯಿತು.

ಮುಳ್ಳಯ್ಯನಗಿರಿ ಸೇರಿ ಚಂದ್ರದ್ರೋಣ ಪರ್ವತ ಶ್ರೇಣಿಯಲ್ಲಿ ಆರಂಭವಾದ ಮಳೆ, ಕೆಲ ಹೊತ್ತಿನಲ್ಲೇ ಹಲವೆಡೆ ವಿಸ್ತರಿಸಿತು. ಬಿರುಗಾಳಿ, ಸಿಡಿಲಿನ ಅಬ್ಬರಕ್ಕೆ ಜನ ಆತಂಕಗೊಂಡರು.

ಬಾಬಾಬುಡನ್‌ಗಿರಿ ರಸ್ತೆಯಲ್ಲಿ ಹೊನ್ನಮ್ಮನಹಳ್ಳ ಜಲಪಾತ ಬೋರ್ಗರೆಯಿತು. ನಗರದ ಆದಿಚುಂಚನಗಿರಿ ಎಂಜಿನಿಯರಿಂಗ್ ಕಾಲೇಜು ರಸ್ತೆ ಸೇರಿ ಹಲವು ರಸ್ತೆಗಳು ಜಲಾವೃತಗೊಂಡಿದ್ದವು.

ಆಲಿಕಲ್ಲು ಮಳೆ: (ಹಾಸನ ವರದಿ): ಜಿಲ್ಲೆಯ ಬೇಲೂರು ತಾಲ್ಲೂಕಿನ ಅಡಗೂರು ಗ್ರಾಮದಲ್ಲಿ ಸೋಮವಾರ ರಾತ್ರಿ ಬಿರುಗಾಳಿಯೊಂದಿಗೆ ಸುರಿದ ಆಲಿಕಲ್ಲು ಮಳೆಯಾಗಿದೆ.

ಸಿಹಿ ಕುಂಬಳ, ಬೀನ್ಸ್, ಟೊಮೆಟೊ ಸೇರಿ ತರಕಾರಿ ಬೆಳೆಗಳು ನೆಲಸಮವಾಗಿವೆ. ಕೊಯ್ಲು ಹಂತಕ್ಕೆ ಬಂದಿದ್ದ ಮಾವಿನ ಕಾಯಿಗಳು ನೆಲಕ್ಕೆ ಉದುರಿವೆ. ಹಾಸನ ನಗರ, ಜಾವಗಲ್‌ನಲ್ಲಿ ಗುಡುಗು ಸಹಿತ ಮಳೆ ಸುರಿದಿದೆ.

ಚಿಕ್ಕಮಗಳೂರು ನಗರದ ಅಂಬೇಡ್ಕರ್ ರಸ್ತೆಯಲ್ಲಿ ನೀರು ತುಂಬಿಕೊಂಡಿತ್ತು

ರಾಜ್ಯದ ವಿವಿಧೆಡೆ ಮಳೆ ಸಾಧ್ಯತೆ

ಬೆಂಗಳೂರು: ರಾಜ್ಯದ ವಿವಿಧೆಡೆ ಬುಧವಾರದಿಂದ ಒಂದು ವಾರ ಗುಡುಗು ಸಹಿತ ಮಳೆಯಾಗಬಹುದು ಎಂದು ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ. ಬುಧವಾರ 3 ಜಿಲ್ಲೆಗಳಿಗೆ ‘ಆರೆಂಜ್ ಅಲರ್ಟ್’, 23 ಜಿಲ್ಲೆಗಳಿಗೆ ‘ಯೆಲ್ಲೊ ಅಲರ್ಟ್’ ಘೋಷಿಸಿದೆ.

ಕಲಬುರಗಿ, ವಿಜಯಪುರ, ಬಾಗಲಕೋಟೆಗೆ ‘ಆರೆಂಜ್ ಅಲರ್ಟ್’ ನೀಡಲಾಗಿದೆ. ಈ ಜಿಲ್ಲೆಗಳಲ್ಲಿ ಕೆಲವೆಡೆ ಆಲಿಕಲ್ಲು ಮಳೆಯಾಗುವ ಸಂಭವವಿದೆ. ಉತ್ತರ ಒಳನಾಡಿನ ಬೆಳಗಾವಿ, ಧಾರವಾಡ, ಯಾದಗಿರಿ ಜಿಲ್ಲೆಯ ಒಂದು ಅಥವಾ ಎರಡು ಸ್ಥಳಗಳಲ್ಲಿ ಬಿರುಗಾಳಿಯೊಂದಿಗೆ ಸಾಧಾರಣ ಮಳೆಯಾಗುವ ಸಾಧ್ಯತೆಯಿದೆ ಎಂದು ಇಲಾಖೆ ತಿಳಿಸಿದೆ. ಜೂನ್ 2ರವರೆಗೂ ರಾಜ್ಯದ ಕೆಲವೆಡೆ ಮಳೆಯಾಗುವ ಸಾಧ್ಯತೆಯಿದೆ ಎಂದು ಇಲಾಖೆ ತಿಳಿಸಿದೆ.

ಬಾಲಕಿ, ರೈತ ಸಾವು

ಹುಲಸೂರ (ಬೀದರ್ ಜಿಲ್ಲೆ): ತಾಲ್ಲೂಕಿನಲ್ಲಿ ಮಂಗಳವಾರ ಸಂಜೆ ಬಿರುಗಾಳಿ ಸಹಿತ ಆಲಿಕಲ್ಲು ಮಳೆಯಾಗಿದ್ದು, ಮನೆಯ ಚಾವಣಿಯ ಕಲ್ಲು ಬಿದ್ದ ಪರಿಣಾಮ ಬಾಲಕಿ ಮಹಿರಾ (6) ಮೃತಪಟ್ಟಿದ್ದಾಳೆ. ಬಾಲಕಿಯ ತಂದೆ ಇಸ್ಮಾಯಿಲ್, ತಾಯಿ ಯಾಸ್ಮಿನ್, ಫಯಾಜ್ ಗಾಯಗೊಂಡಿದ್ದಾರೆ.

ರೈತ ಸಾವು: ಹುಮನಾಬಾದ್ ತಾಲ್ಲೂಕಿನ ವರವಟ್ಟಿ ಕೆ. ಗ್ರಾಮದಲ್ಲಿ ಸೋಮವಾರ ರಾತ್ರಿ ಮಳೆಯಾಗಿದ್ದು, ಸಿಡಿಲು ಬಡಿದು ರೈತ ವೀರಣ್ಣ ಖೇಳಗಿ(65) ಮೃತಪಟ್ಟಿದ್ದಾರೆ. ಸ್ಥಳದಲ್ಲಿದ್ದ ಎಮ್ಮೆಯೂ ಮೃತಪಟ್ಟಿದೆ.

ಎಂಜಿನಿಯರ್ ಸಾವು (ಮೈಸೂರು ವರದಿ): ತಾಲ್ಲೂಕಿನ ಇಲವಾಲದ ಬಳಿ ಸೋಮವಾರ ಸಂಜೆ ಸಿಡಿಲು ಬಡಿದು ಕೊಡಗು ಮೂಲದ ಸಾಫ್ಟ್‌ವೇರ್ ಎಂಜಿನಿಯರ್ ರೋಶನ್ (38) ಮೃತಪಟ್ಟರು.

‘ಮಡಿಕೇರಿ ನಗರದ ಜಲಾಶಯ ಬಡಾವಣೆಯ ಅವರು ಮೈಸೂರಿನ ಸಂಬಂಧಿಕರ ಮನೆಗೆ ಬಂದಿದ್ದರು. ನಿವೇಶನ ನೋಡಲು ತೆರಳಿದ್ದ ಅವರು ಆಶ್ರಯಕ್ಕಾಗಿ ಮಾವಿನ ಮರದ ಕೆಳಗೆ ನಿಂತಿದ್ದಾಗ ದುರ್ಘಟನೆ ನಡೆಯಿತು’ ಎಂದು ಇಲವಾಲ ಪೊಲೀಸರು ತಿಳಿಸಿದ್ದಾರೆ.

ಭಾರತ ಆಕ್ಷೇಪ

ನವದೆಹಲಿ (ಪಿಟಿಐ): ಚೀನಾ ಮತ್ತು ಪಾಕಿಸ್ತಾನ ಬಿಡುಗಡೆ ಮಾಡಿರುವ ಜಂಟಿ ಹೇಳಿಕೆಯಲ್ಲಿ ‘ಅನವಶ್ಯಕ’ವಾಗಿ ಜಮ್ಮು ಮತ್ತು ಕಾಶ್ಮೀರದ ಹೆಸರನ್ನು ಉಲ್ಲೇಖಿಸಿರುವುದಕ್ಕೆ ಭಾರತ ಮಂಗಳವಾರ ಆಕ್ಷೇಪ ವ್ಯಕ್ತಪಡಿಸಿದೆ.

‘ಕೇಂದ್ರಾಡಳಿತ ಪ್ರದೇಶ ಮತ್ತು ಲಡಾಖ್ ಎಂದೆಂದಿಗೂ ಭಾರತದ ಅವಿಭಾಜ್ಯ ಅಂಗ. ಈ ಬಗ್ಗೆ ಪ್ರಸ್ತಾಪಿಸಲು ಬೇರೆ ಯಾವುದೇ ದೇಶಗಳಿಗೆ ಹಕ್ಕು ಇಲ್ಲ’ ಎಂದು ತೀಕ್ಷ್ಣವಾಗಿ ಪ್ರತಿಕ್ರಿಯಿಸಿದೆ.

‘ಈ ವಿಚಾರದಲ್ಲಿ ಭಾರತದ ನಿಲುವು ಸ್ಪಷ್ಟವಾಗಿದೆ’ ಎಂದು ವಿದೇಶಾಂಗ ವ್ಯವಹಾರಗಳ ಸಚಿವಾಲಯದ ವಕ್ತಾರ ರಣಧೀರ್ ಜೈಸ್ವಾಲ್ ಹೇಳಿದ್ದಾರೆ.

ಪಾಕಿಸ್ತಾನ ಪ್ರಧಾನಿ ಶೆಹಬಾಜ್ ಷರೀಫ್ ಅವರು ಇತ್ತೀಚೆಗೆ ಚೀನಾಗೆ ಭೇಟಿ ನೀಡಿದ್ದ ಸಂದರ್ಭದಲ್ಲಿ ಜಂಟಿ ಹೇಳಿಕೆ ಬಿಡುಗಡೆ ಮಾಡಲಾಗಿತ್ತು.

ಪಶ್ಚಿಮ ಬಂಗಾಳ ₹5ಕ್ಕೆ ಮೀನೂಟ

ಕೋಲ್ಕತ್ತ (ಪಿಟಿಐ): ಪಶ್ಚಿಮ ಬಂಗಾಳದಲ್ಲಿ 400 ಸರ್ಕಾರಿ ಕ್ಯಾಂಟೀನ್‌ಗಳಲ್ಲಿ ವಾರಕ್ಕೆ ಎರಡು ಬಾರಿ ₹5ಕ್ಕೆ ಮೀನೂಟ ನೀಡಲು ರಾಜ್ಯ ಸರ್ಕಾರ ನಿರ್ಧರಿಸಿದೆ ಎಂದು ಮುಖ್ಯಮಂತ್ರಿ ಸುವೇಂದು ಅಧಿಕಾರಿ ತಿಳಿಸಿದ್ದಾರೆ.

‘ಗೃಹಲಕ್ಷ್ಮಿ’ಗೆ ಬಯೋಮೆಟ್ರಿಕ್ ‘ಗ್ಯಾರಂಟಿ’?

ಮೃತರನ್ನು ಫಲಾನುಭವಿ ಪಟ್ಟಿಯಿಂದ ಕೈಬಿಡಲು ರಾಜ್ಯ ಸರ್ಕಾರದ ಕ್ರಮ • ಮಾಹಿತಿ ಮುಚ್ಚಿಟ್ಟು ಹಣ ಪಡೆಯುತ್ತಿರುವ ಕುಟುಂಬಸ್ಥರು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮೃತರನ್ನು ‘ಗೃಹಲಕ್ಷ್ಮಿ’ಯಿಂದ ಹೊರಗಿಡಲು ಮುಂದಾಗಿರುವ ರಾಜ್ಯ ಸರ್ಕಾರವು, ಯೋಜನೆಯ ಫಲಾನುಭವಿಗಳ ಬಯೋಮೆಟ್ರಿಕ್ ವಿವರಗಳನ್ನು ಒಂದು ಬಾರಿ ಖಾತರಿ ಪಡಿಸಿಕೊಳ್ಳಲು ಮುಂದಾಗಿದೆ.

ರಾಜ್ಯದ ಪ್ರತಿ ಕುಟುಂಬದ ಯಜಮಾನಿಗೆ ತಿಂಗಳಿಗೆ ₹2,000 ಜಮೆ ಮಾಡುವ ಯೋಜನೆಯು ಆರಂಭವಾದಾಗ, 1.24 ಕೋಟಿಗೂ ಹೆಚ್ಚು ಫಲಾನುಭವಿಗಳು ನೋಂದಣಿ ಮಾಡಿಕೊಂಡಿದ್ದರು. ಅವರಲ್ಲಿ ಅನೇಕರು ಮೃತಪಟ್ಟಿದ್ದು, ಅವರ ಖಾತೆಗೆ ಈಗಲೂ ಹಣ ಹೋಗುತ್ತಿದೆ. ಹೀಗಾಗಿ, ಯೋಜನೆಯ ಫಲಾನುಭವಿಗಳ ಪಟ್ಟಿಯನ್ನು ಪರಿಷ್ಕರಿಸಲು ಸರ್ಕಾರ ಸಿದ್ಧತೆ ನಡೆಸಿದೆ.

ಯೋಜನೆ ಆರಂಭವಾಗಿ ಸುಮಾರು 3 ವರ್ಷಗಳಾಗಿವೆ. ಈ ಅವಧಿಯಲ್ಲಿ ಸುಮಾರು 2 ಲಕ್ಷ ಫಲಾನುಭವಿಗಳು ಮೃತಪಟ್ಟಿದ್ದಾರೆ ಎಂಬ ಮಾಹಿತಿ ಇದೆ. ತಿಳಿವಳಿಕೆ ಕೊರತೆ ಅಥವಾ ಉದ್ದೇಶಪೂರ್ಕವಾಗಿ ಫಲಾನುಭವಿಗಳ ಕುಟುಂಬದವರು ಈ ಮಾಹಿತಿಯನ್ನು ಮುಚ್ಚಿಟ್ಟು, ಹಣ ಪಡೆದುಕೊಳ್ಳುತ್ತಿದ್ದಾರೆ. ಯೋಜನೆಯನ್ನು ಈ ರೀತಿ ದುರ್ಬಳಕೆ ಮಾಡಿಕೊಳ್ಳುವುದನ್ನು ತಪ್ಪಿಸಲು ಫಲಾನುಭವಿಗಳ ದಾಖಲೆ ಸಂಗ್ರಹ ಮಾಡಬೇಕಿದೆ ಎಂದು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಮೂಲಗಳು ತಿಳಿಸಿವೆ.

ಅನರ್ಹರಿಗೆ ಯೋಜನೆಯ ಹಣ ತಲುಪುವುದನ್ನು ತಡೆಯುವುದು ಮತ್ತು ಮೃತ ಫಲಾನುಭವಿಯ ಕುಟುಂಬದ ಅರ್ಹರನ್ನು ಪಟ್ಟಿಗೆ ಸೇರಿಸುವುದು ದಾಖಲೆ ಸಂಗ್ರಹಣೆಯ ಉದ್ದೇಶ. ಈ ಮೊದಲು ಫಲಾನುಭವಿಯಿಂದ ಜೀವಿತ ಪ್ರಮಾಣಪತ್ರ ಕಲೆ ಹಾಕಬಹುದು ಎಂದು ಯೋಜಿಸಲಾಗಿತ್ತು. ಅದಕ್ಕೆ ವಿರೋಧ ವ್ಯಕ್ತವಾದ ಕಾರಣ ಬಯೋಮೆಟ್ರಿಕ್ ಮೂಲಕ ಫಲಾನುಭವಿಗಳನ್ನು ಖಚಿತಪಡಿಸಿಕೊಳ್ಳಲು ಯೋಜಿಸಲಾಗಿದೆ ಎಂದೂ ಮೂಲಗಳು ವಿವರಿಸಿವೆ.

ಫಲಾನುಭವಿಗಳು ಬೆಂಗಳೂರು ಒನ್, ಕರ್ನಾಟಕ ಒನ್ ಕೇಂದ್ರಗಳಲ್ಲಿ ಒಂದು ಬಾರಿ ತಮ್ಮ ಬಯೋಮೆಟ್ರಿಕ್ ವಿವರ ದಾಖಲಿಸಿ, ಖಚಿತ ಪಡಿಸಿದರೆಸಾಕು. ಅವರು ಪಟ್ಟಿಯಲ್ಲಿ ಉಳಿಯುತ್ತಾರೆ. ಬಯೋಮೆಟ್ರಿಕ್ ನೀಡದವರ ಖಾತೆಗಳನ್ನು ಫಲಾನುಭವಿಗಳ ಪಟ್ಟಿಯಿಂದ ಹೊರಗೆ ಇಡಲಾಗುತ್ತದೆ. ಶೀಘ್ರ ಈ ಬಗ್ಗೆ ಆದೇಶ ಹೊರಡಿಸಲಾಗುತ್ತದೆ ಎಂದು ಮಾಹಿತಿ ನೀಡಿವೆ.

ಗ್ಯಾರಂಟಿ ತೆಗೆಯಲು ವಿಶೇಷ ಅಭಿಯಾನ: ಅಶೋಕ

ಬೆಂಗಳೂರು: ಇಲ್ಲಿಯವರೆಗೆ ‘ಗ್ಯಾರಂಟಿ’ ಎಂದು ಡೊಳ್ಳು ಬಾರಿಸಿದ್ದ ರಾಜ್ಯ ಸರ್ಕಾರ, ಈಗ ಏಕಾಏಕಿ ಫಲಾನುಭವಿಗಳ ಮರುಪರಿಶೀಲನೆ, ಮರುನೋಂದಣಿ, ವಿಶೇಷ ಅಭಿಯಾನ ಎಂಬ ಹೊಸ ನಾಟಕ ಶುರು ಆರಂಭಿಸಿದೆ ಎಂದು ವಿರೋಧ ಪಕ್ಷದ ನಾಯಕ ಆರ್.ಅಶೋಕ ಟೀಕಿಸಿದ್ದಾರೆ.


ಆರ್. ಅಶೋಕ

ಈ ಕುರಿತು ‘ಎಕ್ಸ್’ನಲ್ಲಿ ಪೋಸ್ಟ್ ಮಾಡಿರುವ ಅವರು, ಗ್ಯಾರಂಟಿ ಯೋಜನೆಗಳು ಕಾಂಗ್ರೆಸ್ ಪಕ್ಷದ ರಾಜಕೀಯ ಗಿಮಿಕ್ ಮಾತ್ರವೇ ಹೊರತು, ಬಡವರ ಬದುಕಿನ ಬಗ್ಗೆ ಇರುವ ನಿಜವಾದ ಕಾಳಜಿ ಅಲ್ಲ ಎನ್ನುವುದು ಮತ್ತೊಮ್ಮೆ ಜಗಜ್ಜಾಹೀರಾಗಿದೆ ಎಂದರು.

ಈ ಕುರಿತು ಅಶೋಕ ಅವರು ಸರ್ಕಾರ ಕೆಲವು ಪ್ರಶ್ನೆಗಳನ್ನು ಕೇಳಿದ್ದಾರೆ:

- ಸತ್ತವರ ಹೆಸರನ್ನು ಪಟ್ಟಿಯಿಂದ ತೆಗೆದು ಹಾಕುವುದು ಸರ್ಕಾರದ ದೈನಂದಿನ ನಿರಂತರ ಆಡಳಿತಾತ್ಮಕ ಪ್ರಕ್ರಿಯೆ. ಅದಕ್ಕಾಗಿ ವಿಶೇಷ ಅಭಿಯಾನ ಅಗತ್ಯವಿದೆಯೇ?
- ಬಡವರು ಮತ್ತೆ ಅರ್ಜಿ ಹಿಡಿದು ಸರತಿ ಸಾಲಿನಲ್ಲಿ ನಿಲ್ಲವಂತೆ ಮಾಡಲು ಹೊರಟಿರುವುದರ ಹಿಂದಿನ ರಹಸ್ಯವೇನು?
- ಗ್ಯಾರಂಟಿಗಳನ್ನು ಹಂತ ಹಂತವಾಗಿ ನಿಲ್ಲಿಸಲು ಇದು ಪೀಠಿಕೆಯೇ ಅಥವಾ ಸ್ಥಳೀಯ ಸಂಸ್ಥೆ, ಜಿಬಿಎ ಚುನಾವಣೆಯವರೆಗೆ ಮಾತ್ರ ಹಣ ಕೊಟ್ಟು ಚುನಾವಣೆ ಮುಗಿದ ನಂತರ ಪಟ್ಟಿಯಲ್ಲಿ ನಿಮ್ಮ ಹೆಸರಿಲ್ಲ ಎಂದು ಕೈತೊಳೆಯುವ ರಹಸ್ಯ ಯೋಜನೆಯೇ?
- ಮರುಪರಿಶೀಲನೆ ಪ್ರಕ್ರಿಯೆ ಮುಗಿಯುವವರೆಗೆ ಯೋಜನೆಗಳ ಹಣವನ್ನು ತಡೆ ಹಿಡಿಯಲಾಗುತ್ತದೆಯೇ? ಲಕ್ಷಾಂತರ ತಾಯಂದಿರಿಗೆ ಬರುತ್ತಿರುವ ಗೃಹಲಕ್ಷ್ಮೀ ಹಣ ನಿಲ್ಲುತ್ತದೆಯೇ? ಅನ್ನಭಾಗ್ಯ, ಶಕ್ತಿ, ಯುವನಿಧಿ ಯೋಜನೆಗಳ ಫಲಾನುಭವಿಗಳನ್ನು ಕಡಿತಗೊಳಿಸುವ ಗುಪ್ತ ಕಾರ್ಯಾಚರಣೆ ನಡೆಯುತ್ತಿದೆಯೇ?

ಸುದ್ದಿ 2 ನಿಮಿಷ

150 ನಾಡ ಕಚೇರಿಗಳಿಗೆ ಹೊಸ ಕಟ್ಟಡ: ಕೃಷ್ಣಬೈರೇಗೌಡ

ಬೆಂಗಳೂರು: ರಾಜ್ಯದ ವಿವಿಧ ಹೋಬಳಿಗಳಲ್ಲಿ 150 ನಾಡ ಕಚೇರಿಗಳಿಗೆ ಸುಸಜ್ಜಿತ ಹೊಸ ಕಟ್ಟಡ ನಿರ್ಮಿಸಲು ಕಂದಾಯ ಇಲಾಖೆ ಸಮ್ಮತಿಸಿದೆ.

ಈ ಕುರಿತು ಕಂದಾಯ ಸಚಿವ ಕೃಷ್ಣಬೈರೇಗೌಡ ಅವರು ಮಾಹಿತಿ ನೀಡಿದ್ದಾರೆ.

‘ರಾಜ್ಯದಲ್ಲಿ 771 ನಾಡ ಕಚೇರಿಗಳು ಕಾರ್ಯನಿರ್ವಹಿಸುತ್ತಿವೆ. ಸಾರ್ವಜನಿಕರು 54 ಸೇವೆಗಳನ್ನು ಪಡೆಯಲು ಪ್ರತಿನಿತ್ಯ ಭೇಟಿ ನೀಡುತ್ತಾರೆ. ಹಲವು ಪ್ರಮಾಣ ಪತ್ರಗಳು, ದಾಖಲೆಗಳು, ಕಂದಾಯ ಸೇವೆಗಳಿಗಾಗಿ ಬಳಕೆಯಾಗುತ್ತಿವೆ. ಜನ ಸಂಪರ್ಕವಿರುವ ಹಲವು ನಾಡ ಕಚೇರಿಗಳಿಗೆ ಸ್ವಂತ ಕಟ್ಟಡಗಳಿಲ್ಲ. ಕೆಲವೆಡೆ ಅಧಿಕಾರಿಗಳು ಹಳೇ ಕಟ್ಟಡಗಳಲ್ಲಿ ಅಥವಾ ಶಿಥಿಲಾವಸ್ಥೆಯ ಕಟ್ಟಡಗಳಲ್ಲಿ ಕೆಲಸ ಮಾಡುತ್ತಿದ್ದಾರೆ. ಹಾಗಾಗಿ, ಮೊದಲ ಹಂತದಲ್ಲಿ 94 ಕಚೇರಿಗಳಿಗೆ ಹೊಸ ಕಟ್ಟಡ ನಿರ್ಮಾಣ ಮಾಡಲಾಗುತ್ತಿದೆ. ಎರಡನೇ ಹಂತದಲ್ಲಿ 56 ಕಚೇರಿಗಳ ಕಟ್ಟಡ ಕಾಮಗಾರಿ ಕೈಗೆತ್ತಿಕೊಳ್ಳಲು ಸೂಚಿಸಲಾಗಿದೆ’ ಎಂದಿದ್ದಾರೆ.



‘ಹೊಸ ಕಟ್ಟಡಗಳಲ್ಲೇ ಉಪ ತಹಶೀಲ್ದಾರ್, ಕಂದಾಯ ನಿರೀಕ್ಷಕರು, ಗ್ರಾಮ ಆಡಳಿತ ಅಧಿಕಾರಿಗಳ ಕಚೇರಿಗಳೂ ಕಾರ್ಯನಿರ್ವಹಿಸಲಿವೆ. ಕಟ್ಟಡ ನಿರ್ಮಾಣಕ್ಕೆ ಇದುವರೆಗೆ ₹18 ಲಕ್ಷದಂತೆ ಹಂಚಿಕೆ ಮಾಡಲಾಗುತ್ತಿತ್ತು. ಇಷ್ಟು ಕಡಿಮೆ ಮೊತ್ತದಲ್ಲಿ ಅಗತ್ಯ ಸೌಕರ್ಯ ಸಾಧ್ಯವಾಗುತ್ತಿರಲಿಲ್ಲ. ಹಾಗಾಗಿ, ನಾಡ ಕಚೇರಿಗಳ ನಿರ್ಮಾಣಕ್ಕೆ ನಗರ ಪ್ರದೇಶಕ್ಕೆ ₹75 ಲಕ್ಷ ಹಾಗೂ ಗ್ರಾಮೀಣ ಪ್ರದೇಶಕ್ಕೆ ₹55 ಲಕ್ಷ ನೀಡಲು ತೀರ್ಮಾನಿಸಲಾಗಿದೆ’ ಎಂದು ತಿಳಿಸಿದ್ದಾರೆ.

ಜಪಾನ್‌ಗೆ 4 ವಿದ್ಯಾರ್ಥಿಗಳು

ಬೆಂಗಳೂರು: ಸರ್ಕಾರಿ ಪದವಿಪೂರ್ವ ಕಾಲೇಜುಗಳ ನಾಲ್ವರು ವಿದ್ಯಾರ್ಥಿಗಳು ಜಪಾನ್‌ನಲ್ಲಿ ಮೇ 24ರಿಂದ 30ರವರೆಗೆ ನಡೆಯುವ ‘ಸಕುರಾ ಸೈನ್ಸ್ ಪ್ರೋಗ್ರಾಂ–2026’ಕ್ಕೆ ಆಯ್ಕೆಯಾಗಿದ್ದಾರೆ.

ಶೃಂಗೇರಿಯ ಅಶ್ವಿತಾ ಕೆ.ಎಚ್, ಕೆ.ಆರ್.ನಗರ ನಮ್ರತಾ ಬೈ, ಅರಸೀಕೆರೆಯ ರೋಹಿತ್ ಡಿ.ಎಸ್ ಹಾಗೂ ಕುಮಟಾದ ಆಕಾಶ ಉದಯ ಹರಿಕಾಂತ್ ಅವರು ದೇಶದ 15 ರಾಜ್ಯಗಳಿಂದ ಆಯ್ಕೆಯಾದ 56 ವಿದ್ಯಾರ್ಥಿಗಳ ತಂಡದಲ್ಲಿ ಸ್ಥಾನ ಪಡೆದಿದ್ದಾರೆ. ಸರ್ಕಾರಿ ಪ್ರೌಢಶಾಲೆಗಳಲ್ಲಿ ಎಸ್‌ಎಸ್‌ಎಲ್‌ಸಿ ಪೂರ್ಣಗೊಳಿಸಿ, ಸರ್ಕಾರಿ ಪದವಿಪೂರ್ವ ಕಾಲೇಜುಗಳಲ್ಲಿ ವಿಜ್ಞಾನ ವಿಭಾಗದಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಗಾಗಿ ಕೇಂದ್ರ ಸರ್ಕಾರ ಈ ಕಾರ್ಯಕ್ರಮವನ್ನು ಆಯೋಜಿಸಿದೆ.

‘ಮೇಕೆದಾಟು: ಡಿಪಿಆರ್ ತಿರಸ್ಕರಿಸಿ’

ಚೆನ್ನೈ (ಪಿಟಿಐ): ಮೇಕೆದಾಟು ಯೋಜನೆ ಕುರಿತಂತೆ ಕರ್ನಾಟಕ ಸಿದ್ಧಪಡಿಸಿರುವ ಡಿಪಿಆರ್‌ಅನ್ನು ತಿರಸ್ಕರಿಸುವಂತೆ ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಚಿಸು ವಂತೆ ಪ್ರಧಾನಿ ನರೇಂದ್ರ ಮೋದಿ ಅವರಿಗೆ ತಮಿಳುನಾಡು ಮುಖ್ಯಮಂತ್ರಿ ಸಿ. ಜೋಸೆಫ್ ವಿಜಯ್ ಮಂಗಳವಾರ ಮನವಿ ಮಾಡಿದ್ದಾರೆ.

ವಿಜಯ್

‘ಕರ್ನಾಟಕದ ಈ ವಿಸ್ತೃತ ಯೋಜನಾ ವರದಿಯು (ಡಿಪಿಆರ್) ಕಾವೇರಿ ಜಲ ವಿವಾದಗಳ ನ್ಯಾಯ ಮಂಡಳಿಯ ಅಂತಿಮ ಐತೀರ್ಪು ಹಾಗೂ ಸುಪ್ರೀಂ ಕೋರ್ಟ್ ತೀರ್ಪಿಗೆ ವಿರುದ್ಧವಾಗಿದೆ’ ಎಂದು ಮೋದಿ ಅವರಿಗೆ ಬರೆದ ಪತ್ರದಲ್ಲಿ ಹೇಳಿದ್ದಾರೆ.

‘ಜಲ ಶಕ್ತಿ ಸಚಿವಾಲಯ, ಕೇಂದ್ರೀಯ ಜಲ ಆಯೋಗವು ತಮಿಳುನಾಡಿನ ಮನವಿಯನ್ನು ನಿರ್ಲಕ್ಷಿಸಿ, ಕರ್ನಾಟಕದ ಪ್ರಸ್ತಾವವನ್ನು ಪರಿಗಣಿಸಿದ್ದು ಅಚ್ಚರಿ ಮೂಡಿಸಿದೆ’ ಎಂದಿದ್ದಾರೆ.

‘ಕರ್ನಾಟಕ, ತಮಿಳುನಾಡು ನಡುವೆ ಒಮ್ಮತ ಮೂಡದೇ ಹಾಗೂ ಸುಪ್ರೀಂ ಕೋರ್ಟ್ ತೀರ್ಪನ್ನು ಉಲ್ಲಂಘಿಸಿ ಯಾವುದೇ ಹೊಸ ಯೋಜನೆ ಕೈಗೆತ್ತಿಕೊಳ್ಳದಂತೆ ಮೋದಿಯವರು ಕರ್ನಾಟಕ ಸರ್ಕಾರಕ್ಕೆ ಸೂಚಿಸಬೇಕು’ ಎಂದೂ ಆಗ್ರಹಿಸಿದ್ದಾರೆ.

‘ಜಲಾಶಯ ನಿರ್ಮಾಣಕ್ಕೆ ಭೂಮಿಪೂಜೆ ನೆರವೇರಿಸುವ ಕುರಿತ ಡಿಸಿಎಂ ಡಿ.ಕೆ.ಶಿವಕುಮಾರ್ ಅವರ ಹೇಳಿಕೆ ರೈತರಲ್ಲಿ ಆತಂಕ ಮೂಡಿಸಿದೆ’ ಎಂದು ಪತ್ರದಲ್ಲಿ ವಿವರಿಸಿದ್ದಾರೆ.

ಅರ್ಜಿ ವಿಚಾರಣೆಗೆ ‘ಸುಪ್ರೀಂ’ ನಕಾರ

ವಿಧಾನ ಪರಿಷತ್ ಸದಸ್ಯ, ವಿಧಾನಸಭಾ ಸದಸ್ಯರಿಗೆ ಸಚಿವ ಸಂಪುಟ ಸ್ಥಾನಮಾನ

ನವದೆಹಲಿ (ಪಿಟಿಐ): ಕರ್ನಾಟಕದ ವಿವಿಧ ನಿಗಮ, ಮಂಡಳಿಗೆ ನೇಮಿಸಿರುವ ವಿಧಾನಸಭಾ ಸದಸ್ಯರು ಮತ್ತು ವಿಧಾನ ಪರಿಷತ್ ಸದಸ್ಯರಿಗೆ ಸಚಿವ ಸಂಪುಟದ ಸ್ಥಾನಮಾನ ನೀಡುವ ಸರ್ಕಾರದ ನಿರ್ಧಾರ ಪ್ರಶ್ನಿಸಿ ಸಲ್ಲಿಸಿದ್ದ ಅರ್ಜಿಯ ವಿಚಾರಣೆ ನಡೆಸಲು ಸುಪ್ರೀಂಕೋರ್ಟ್ ನಿರಾಕರಿಸಿದೆ.

ಸುಪ್ರೀಂ ಕೋರ್ಟ್ ಮುಖ್ಯ ನ್ಯಾಯಮೂರ್ತಿ ಸೂರ್ಯ ಕಾಂತ್ ಮತ್ತು ನ್ಯಾಯಮೂರ್ತಿ ಜಾಯ್‌ಮಾಲ್ಯ ಬಾಗ್ಚಿ ಅವರಿದ್ದ ಪೀಠವು ಅರ್ಜಿದಾರರಿಗೆ ಹೈಕೋರ್ಟ್ ಮುಂದೆ ಪುನರ್ ಪರಿಶೀಲನಾ ಅರ್ಜಿ ಸಲ್ಲಿಸಲು ಸೂಚಿಸಿದೆ.

‘ಹೈಕೋರ್ಟ್‌ನಲ್ಲಿ ಈ ಅರ್ಜಿ ಸಲ್ಲಿಸಲು ಅರ್ಜಿದಾರರಿಗೆ ಸ್ವಾತಂತ್ರ್ಯ ನೀಡುವ ಜೊತೆಗೆ ಈ ಅರ್ಜಿಯನ್ನು ವಿಲೇವಾರಿ ಮಾಡಲಾಗಿದೆ’ ಎಂದು ನ್ಯಾಯಪೀಠ ತಿಳಿಸಿದೆ.

ಅರ್ಜಿದಾರರ ಪರ ಹಾಜರಾದ ಹಿರಿಯ ವಕೀಲ ಕೆ. ಪರಮೇಶ್ವರ್, ‘ಹೈಕೋರ್ಟ್‌ನಲ್ಲಿ ಈ ಅರ್ಜಿಯನ್ನು ಗಂಭೀರವಾಗಿ ಪರಿಗಣಿಸಿಲ್ಲ. ಸೌಲಭ್ಯ ನೀಡಲು ಇಲಾಖೆಯ ಬಳಿ ಹಣವಿಲ್ಲ, ದೇಶದ ಸಂಚಿತ ನಿಧಿಯಿಂದ ನೀಡಲಾಗುತ್ತಿದೆ’ ಎಂದು ನ್ಯಾಯಪೀಠದ ಗಮನಸೆಳೆದರು.

ಕಳೆದ ಮಾರ್ಚ್ 4ರಂದು ಕರ್ನಾಟಕ ಹೈಕೋರ್ಟ್ ಈ ಅರ್ಜಿಯನ್ನು ವಜಾಗೊಳಿಸಿತ್ತು. ಇದನ್ನು ಪ್ರಶ್ನಿಸಿ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯಲ್ಲಿ ಕೆಲಸ ಮಾಡುತ್ತಿರುವ ಸೂರ್ಯ ಪಯಾಲ ಅವರು ಮೇಲ್ಮನವಿ ಸಲ್ಲಿಸಿದ್ದರು.

‘ಶಾಸಕರಿಗೆ ಸಚಿವ ಸಂಪುಟದ ಸ್ಥಾನಮಾನ ನೀಡಿದರೆ, ಹೆಚ್ಚಿನ ವೇತನ, ಸರ್ಕಾರದಿಂದಲೇ ಅಧಿಕೃತ ವಾಹನ, ಇಂಧನ ಭತ್ಯೆ, ಮನೆ ಬಾಡಿಗೆ ಹಾಗೂ ವೈದ್ಯಕೀಯ ವೆಚ್ಚವನ್ನು ಮರು ಪಾವತಿಸಲಾಗುತ್ತದೆ. ಸಂವಿಧಾನದ 191ನೇ ವಿಧಿಯ ಪ್ರಕಾರ, ಇದು ಲಾಭದಾಯಕ ಹುದ್ದೆಯಾಗಿದ್ದು, ಅವರನ್ನು ಹುದ್ದೆಯಿಂದಲೇ ಅನರ್ಹಗೊಳಿಸಬಹುದಾಗಿದೆ’ ಎಂದು ಪೀಠದ ಗಮನ ಸೆಳೆದರು.

ವಾದವನ್ನು ಪರಿಗಣಿಸಿದ ನ್ಯಾಯಪೀಠವು, ಹೈಕೋರ್ಟ್‌ನಲ್ಲಿ ಅರ್ಜಿ ಸಲ್ಲಿಸುವಂತೆ ಅರ್ಜಿದಾರರಿಗೆ ಸೂಚನೆ ನೀಡಿದೆ.

‘ರಾಜ್ಯಸಭೆ ಚುನಾವಣೆ: ವರಿಷ್ಠರ ತೀರ್ಮಾನವೇ ಅಂತಿಮ’

ಪ್ರಜಾವಾಣಿ ವಾರ್ತೆ

ಹಾಸನ: ‘ಎಚ್.ಡಿ. ದೇವೇಗೌಡರ ರಾಜ್ಯಸಭಾ ಸದಸ್ಯತ್ವ ಅವಧಿ ಮುಗಿಯುತ್ತಿದ್ದು, ಡಿ.ವಿ. ಸದಾನಂದಗೌಡರು ಆಕಾಂಕ್ಷಿಯಾಗಿದ್ದಾರೆ. ಈ ವಿಷಯದಲ್ಲಿ ಕೇಂದ್ರ ನಾಯಕರ ತೀರ್ಮಾನವೇ ಅಂತಿಮ’ ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್. ಅಶೋಕ ಹೇಳಿದರು.

ಮಂಗಳವಾರ ಸುದ್ದಿಗಾರರೊಂದಿಗೆ ಮಾತನಾಡಿ, ‘ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಸ್ಥಾನದ ಕುರಿತು ರಾಷ್ಟ್ರೀಯ ಅಧ್ಯಕ್ಷರು, ಸಂಸದೀಯ ಮಂಡಳಿ ತೀರ್ಮಾನ ಮಾಡಲಿದೆ. ಯಾರನ್ನೇ ನೇಮಿಸಿದರೂ ಸ್ವಾಗತ’ ಎಂದರು.

ಸಿ.ಎಂ ಸಿದ್ದರಾಮಯ್ಯ ಮತ್ತು ಡಿಸಿಎಂ ಡಿ.ಕೆ.ಶಿವಕುಮಾರ್ ಅವರ ದೆಹಲಿ ಭೇಟಿ ಕುರಿತು ಪ್ರತಿಕ್ರಿಯಿಸಿ, ‘ಕಾಂಗ್ರೆಸ್ ಹೈಕಮಾಂಡ್ ವೀಕ್ ಕಮಾಂಡ್ ಆಗಿದೆ. ದೆಹಲಿಯಲ್ಲಿ ಒಬ್ಬೊಬ್ಬರನ್ನು ಒಂದೊಂದು ರೂಮ್‌ನಲ್ಲಿ ಕೂಡಿ ಹಾಕಿದ್ದಾರೆ. ಸಂಧಾನ ನಡೆಯುತ್ತಿದೆ. ಡಿ.ಕೆ. ಶಿವಕುಮಾರ್ ಭವಿಷ್ಯ ಕಾಣುತ್ತಿಲ್ಲ’ ಎಂದರು.

‘ಕಾಂಗ್ರೆಸ್ ನಾಯಕರೇ ದೆಹಲಿ ಬಿಟ್ಟು ಕರ್ನಾಟಕಕ್ಕೆ ಬನ್ನಿ. ಅಂಗನವಾಡಿ ನೌಕರರಿಗೆ ಸಂಬಳ ಕೊಡಿ. ಜಾಲಿ ಮಾಡಲು ದೆಹಲಿಗೆ ಹೋದರೆ ಹೇಗೆ? ಶಾಸಕರು, ಸಚಿವರು ದೆಹಲಿ ಪ್ರವಾಸ ಮಾಡುತ್ತಾರೆ. ಇಲ್ಲಿ ಜನ ಕಾಂಗ್ರೆಸ್‌ಗೆ ಏಕಾದರೂ ವೋಟು ಹಾಕಿದೆವೆಂದು ಮರುಗುತ್ತಿದ್ದಾರೆ’ ಎಂದರು.

‘2028ಕ್ಕೆ ಜನ ಕಾಂಗ್ರೆಸ್ ಪಕ್ಷವನ್ನು ತಿರಸ್ಕರಿಸಲಿದ್ದಾರೆ. ಬಿಜೆಪಿ ನೇತೃತ್ವದ ಎನ್‌ಡಿಎ ಸರ್ಕಾರ ರಾಜ್ಯದಲ್ಲಿ ಅಧಿಕಾರಕ್ಕೆ ಬರಲಿದೆ. ಮೋದಿ, ಬಿಜೆಪಿ, ಕಮಲದ ಹೆಸರಲ್ಲಿ ಚುನಾವಣೆ ಎದುರಿಸುತ್ತೇವೆ’ ಎಂದು ಹೇಳಿದರು.

ಮುಲಾಜಿಲ್ಲದೆ ಹೊಸ ಪಕ್ಷ ಕಟ್ಟುವೆ: ಯತ್ನಾಳ

ಬೆಂಗಳೂರು: ‘ಬಿಜೆಪಿಗೆ ವಾಪಸ್ ಬರುತ್ತೇನೋ ಇಲ್ಲವೊ ಗೊತ್ತಿಲ್ಲ. ಆದರೆ, ರಾಜ್ಯಕ್ಕೆ ಪರ್ಯಾಯ ರಾಜಕೀಯ ಶಕ್ತಿಯ ಅಗತ್ಯವಿದೆ. ಮುಲಾಜಿಲ್ಲದೇ ಹೊಸ ಪಕ್ಷ ಕಟ್ಟುತ್ತೇನೆ. ಮುಂದಿನ ಸರ್ಕಾರದಲ್ಲಿ ಪ್ರಮುಖ ಪಾತ್ರವಹಿಸುತ್ತೇನೆ’ ಎಂದು ಬಿಜೆಪಿಯಿಂದ ಉಚ್ಚಾಟಿತರಾಗಿರುವ ಶಾಸಕ ಬಸನಗೌಡ ಪಾಟೀಲ ಯತ್ನಾಳ ಹೇಳಿದ್ದಾರೆ.

ಬಸನಗೌಡ ಪಾಟೀಲ ಯತ್ನಾಳ

ಸುದ್ದಿಗಾರರ ಜತೆ ಮಂಗಳವಾರ ಮಾತನಾಡಿದ ಅವರು, ‘ಬಿಜೆಪಿಯಲ್ಲಿ ಪ್ರಾಮಾಣಿಕರಿಗೆ ಅವಕಾಶ ನೀಡಿದರೆ ಪಕ್ಷ ಅಧಿಕಾರಕ್ಕೆ ಬರಲಿದೆ. ಹೈಕಮಾಂಡ್‌ಗೆ ಬ್ಲ್ಯಾಕ್ ಮೇಲ್ ಮಾಡಿದವರಿಗೇ ಅವಕಾಶ ಕೊಟ್ಟರೆ ಬಿಜೆಪಿ ಗೆಲ್ಲುವುದಿಲ್ಲ’ ಎಂದರು.

‘ಬಿಜೆಪಿಯಲ್ಲಿ ವ್ಯವಸ್ಥಿತವಾಗಿ ಯಾವುದೇ ಕೆಲಸ ನಡೆಯುತ್ತಿಲ್ಲ. ಅಲ್ಲಿ ಪಕ್ಷಕ್ಕಿಂತ ವ್ಯಕ್ತಿ ವೈಭವೀಕರಣವೇ ಹೆಚ್ಚಾಗಿದೆ. ತಮ್ಮ ಹಿಂದೆ ಮಠಾಧೀಶರು, ಸ್ವಾಮೀಜಿಯವರು ಇದ್ದಾರೆ ಅಂತ ‘ಪೂಜ್ಯ ತಂದೆ’ಯವರು ತೋರಿಸಿಕೊಳ್ಳುತ್ತಿದ್ದಾರೆ. ರಾಷ್ಟ್ರೀಯ ಅಧ್ಯಕ್ಷ ನಿತಿನ್ ನವೀನ್ ಅವರ ಜತೆ ಯಡಿಯೂರಪ್ಪ ಕುಟುಂಬ ಫೋಟೊ ತೆಗೆಸಿಕೊಂಡಿದೆ. ಏಕೆಂದರೆ ಯಡಿಯೂರಪ್ಪ ಕುಟುಂಬದಿಂದ ಬಿಜೆಪಿ ಮುಕ್ತ ಎಂಬ ಕಾರಣಕ್ಕೆ ಫೋಟೊ ತೆಗೆಸಿಕೊಳ್ಳುತ್ತಿದ್ದಾರೆ’ ಎಂದರು.

‘ಡಿ.ವಿ.ಸದಾನಂದಗೌಡ ಅವರು ಯಡಿಯೂರಪ್ಪ ಅವರಿಗೆ ಬೈಯ್ಯುತ್ತಿದ್ದರು. ಈಗ ರಾಜ್ಯಸಭಾ ಸ್ಥಾನಕ್ಕಾಗಿ ಅವರ ಬೆನ್ನ ಹಿಂದೆ ಬಿದ್ದಿದ್ದಾರೆ. ಒಂದು ವೇಳೆ ಅವಕಾಶ ತಪ್ಪಿದರೆ, ಸದಾನಂದಗೌಡ ಹೇಗೆ ತಿರುಗಿ ಬೀಳುತ್ತಾರೆ ನೋಡಿ’ ಎಂದರು.

ಎಬೋಲಾ: ಉಗಾಂಡ ಮಹಿಳೆಯಲ್ಲಿ ಸೋಂಕು ಶಂಕೆ

ಬೆಂಗಳೂರು: ಉಗಾಂಡದಿಂದ ಇಲ್ಲಿಗೆ ಬಂದಿದ್ದ 28 ವರ್ಷದ ಮಹಿಳೆಯಲ್ಲಿ ಎಬೋಲಾದ ಸೋಂಕಿನ ಶಂಕೆ ವ್ಯಕ್ತವಾಗಿದ್ದು, ಅವರನ್ನು ಕೇಂದ್ರ ಸರ್ಕಾರದ ಮಾರ್ಗಸೂಚಿ ಅನುಸಾರ ನಿಗಾ ವ್ಯವಸ್ಥೆಗೆ ಒಳಪಡಿಸಲಾಗಿದೆ.

ಆಫ್ರಿಕನ್ ದೇಶಗಳಾದ ಉಗಾಂಡ, ಕಾಂಗೊ ದೇಶಗಳಿಂದ ಬಂದವರನ್ನು 21 ದಿನ ನಿಗಾದಲ್ಲಿ ಇರಿಸಲಾಗುತ್ತದೆ.

ಇದೇ 23ರಂದು ಉಗಾಂಡದಿಂದ ಬೆಂಗಳೂರಿಗೆ ಬಂದಿದ್ದ ಮಹಿಳೆ, ಖಾಸಗಿ ಹೋಟೆಲ್‌ನಲ್ಲಿ ನೆಲಸಿದ್ದರು. ಅವರಿಗೆ ರೋಗ ಲಕ್ಷಣಗಳು ಕಾಣಿಸಿಕೊಂಡ ಕಾರಣ, ಪ್ರತ್ಯೇಕ ವಾಸಕ್ಕೆ ಆಂಬುಲೆನ್ಸ್ ಮೂಲಕ ಸಾಂಕ್ರಾಮಿಕ ರೋಗಗಳ ಆಸ್ಪತ್ರೆಗೆ ಸ್ಥಳಾಂತರ ಮಾಡಲಾಗಿದೆ.

ನಿರ್ಣಾಯಕ ಖನಿಜಗಳ ಪೂರೈಕೆ ಒಪ್ಪಂದಕ್ಕೆ ಭಾರತ–ಅಮೆರಿಕ ಸಹಿ

ನವದೆಹಲಿ (ಪಿಟಿಐ): ನಿರ್ಣಾಯಕ ಖನಿಜಗಳ ಸ್ಥಿರ ಪೂರೈಕೆಯನ್ನು ಖಚಿತಪಡಿಸಿಕೊಳ್ಳಲು ಸಹಕಾರಕ್ಕಾಗಿ ಭಾರತ ಹಾಗೂ ಅಮೆರಿಕ ಪ್ರಮುಖವಾದ ಒಪ್ಪಂದ ಮಾಡಿಕೊಂಡಿದೆ.

ಜಾಗತಿಕ ತಂತ್ರಜ್ಞಾನ ಕ್ಷೇತ್ರದಲ್ಲಿ ವಿರಳ ಖನಿಜಗಳ ಪೂರೈಕೆ ಸರಪಳಿಯಲ್ಲಿ ಚೀನಾವು ರಫ್ತು ನಿಯಂತ್ರಣ ಹೊಂದಿರುವ ಕುರಿತು ಕಳವಳ ವ್ಯಕ್ತವಾದ ಬೆನ್ನಲ್ಲೇ, ಉಭಯ ರಾಷ್ಟ್ರಗಳ ನಡುವಿನ ಒಪ್ಪಂದವು ಮಹತ್ವ ಪಡೆದುಕೊಂಡಿದೆ.

ನವದೆಹಲಿಯಲ್ಲಿ ನಡೆದ ಕ್ವಾಡ್ ವಿದೇಶಾಂಗ ಸಚಿವರ ಸಭೆಯಲ್ಲಿ ನಿರ್ಣಾಯಕ ಹಾಗೂ ವಿರಳ ಖನಿಜಗಳ ಸ್ಥಿರ ಪೂರೈಕೆ ಹಾಗೂ ಸಂಸ್ಕರಣೆ ಕುರಿತ ಒಪ್ಪಂದಕ್ಕೆ ಎರಡು ರಾಷ್ಟ್ರಗಳು ಸಹಿ ಹಾಕಿವೆ.

‘ಇದು ಬಹಳ ಸಮಯೋಚಿತ ಹಾಗೂ ನಿರ್ಣಾಯಕ ನಿರ್ಧಾರವಾಗಿದೆ’ ಎಂದು ಅಮೆರಿಕ ವಿದೇಶಾಂಗ ಕಾರ್ಯದರ್ಶಿ ಮಾರ್ಕೊ ರುಬಿಯೊ ಸಮ್ಮುಖದಲ್ಲಿ ವಿದೇಶಾಂಗ ಸಚಿವ ಎಸ್. ಜೈಶಂಕರ್ ಬಣ್ಣಿಸಿದರು.

‘ನಿರ್ಣಾಯಕ, ವಿರಳ ಖನಿಜಗಳ ಪೂರೈಕೆ ಉಭಯ ರಾಷ್ಟ್ರಗಳ ಸಹಕಾರ ವನ್ನು ಒಪ್ಪಂದವು ಮತ್ತಷ್ಟು ಬಲಪಡಿಸಲಿದ್ದು, ಗಣಿಗಾರಿಕೆ, ಸಂಸ್ಕರಣೆ, ಮರುಬಳಕೆ ಹಾಗೂ ಹೂಡಿಕೆ ವಿಚಾರದಲ್ಲಿ ಜೊತೆಗೂಡಿ ಕೆಲಸ ಮಾಡಲಾಗುವುದು’ ಎಂದು ತಿಳಿಸಿದ್ದಾರೆ.

ಅಕಾಡೆಮಿ ಅಧ್ಯಕ್ಷ ಎಲ್.ಎನ್. ಮುಕುಂದರಾಜ್ ಹೇಳಿಕೆ

30–31ಕ್ಕೆ ಜನಮುಖಿ ಸಾಹಿತ್ಯ ಕಾರ್ಯಾಗಾರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕ ಸಾಹಿತ್ಯ ಅಕಾಡೆಮಿ ಹಾಗೂ ಸೌಹಾರ್ದ ಕರ್ನಾಟಕ ಸಂಘಟನೆ ಜಂಟಿಯಾಗಿ ಇದೇ 30 ಮತ್ತು 31ರಂದು ಕಬ್ಬನ್ ಉದ್ಯಾನದಲ್ಲಿರುವ ಸಚಿವಾಲಯ ನೌಕರರ ಕ್ಲಬ್‌ನಲ್ಲಿ ‘ಜನಮುಖಿ ಸಾಹಿತ್ಯ: ಯುವ ಬರಹಗಾರರು’ ರಾಜ್ಯ ಮಟ್ಟದ ಕಾರ್ಯಾಗಾರ ಹಮ್ಮಿಕೊಂಡಿದೆ.

ಮಂಗಳವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅಕಾಡೆಮಿ ಅಧ್ಯಕ್ಷ ಎಲ್.ಎನ್. ಮುಕುಂದರಾಜ್, ‘ಯುವ ಬರಹಗಾರರನ್ನು ಸೃಜನಶೀಲಗೊಳಿಸಲು ಈ ಕಾರ್ಯಾಗಾರ ಸಹಕಾರಿಯಾಗಲಿದೆ. ಸಾಹಿತಿ ಬರಗೂರು ರಾಮಚಂದ್ರಪ್ಪ ಅವರು ಕಾರ್ಯಾಗಾರ ಉದ್ಘಾಟಿಸಲಿದ್ದಾರೆ. ‘ಕರ್ನಾಟಕ ಸೌಹಾರ್ದ ಪರಂಪರೆ’ ವಿಷಯದ ಬಗ್ಗೆ ಲೇಖಕ ರಾಜಪ್ಪ ದಳವಾಯಿ, ‘ಸಾಹಿತ್ಯ ಮತ್ತು ಶ್ರೇಣೀಕೃತ ವ್ಯವಸ್ಥೆ’ ವಿಷಯದ ಬಗ್ಗೆ ಬಂಜಗೆರೆ ಜಯಪ್ರಕಾಶ್ ಮಾತನಾಡಲಿದ್ದಾರೆ’ ಎಂದು ಹೇಳಿದರು.

‘ಎರಡನೇ ದಿನ ನಡೆಯುವ ಮೂರನೇ ಗೋಷ್ಠಿಯಲ್ಲಿ ‘ಸಾಹಿತ್ಯ: ಪ್ರಜಾಪ್ರಭುತ್ವ ಮತ್ತು ಅಭಿವ್ಯಕ್ತಿ ಸ್ವಾತಂತ್ರ್ಯ’ ವಿಷಯದ ಬಗ್ಗೆ ರಾಜೇಂದ್ರ ಚೆನ್ನಿ, ನಾಲ್ಕನೇ ಗೋಷ್ಠಿಯಲ್ಲಿ ‘ಭಾರತ: ಅಭಿವೃದ್ಧಿಯ ಅಡಿಪಾಯ’ ವಿಷಯದ ಬಗ್ಗೆ ಜಿ.ಎನ್. ನಾಗರಾಜ್ ಅವರು ವಿಚಾರ ಮಂಡಿಸಲಿದ್ದಾರೆ’ ಎಂದು ವಿವರಿಸಿದರು.

ಸೌಹಾರ್ದ ಕರ್ನಾಟಕದ ಸಂಯೋಜಕ ಎಸ್.ವೈ.ಗುರುಶಾಂತ್, ‘ಕಾರ್ಯಾಗಾರದಲ್ಲಿ ವಿಷಯ ಮಂಡಿಸುವವರ ಜತೆಗೆ ಸಂವಾದ ನಡೆಸಲು ಯುವ ಬರಹಗಾರರಿಗೆ ಅವಕಾಶ ನೀಡಲಾಗುತ್ತದೆ. ಆಸಕ್ತ ಯುವ ಬರಹಗಾರರು ನೋಂದಣಿಗೆ ಮೊಬೈಲ್ ಸಂಖ್ಯೆ 9036371588, ಅಥವಾ 9632329955ಕ್ಕೆ ಸಂಪರ್ಕಿಸಬಹುದು’ ಎಂದು ಹೇಳಿದರು.

6ಕ್ಕೆ ಪ್ರಶಸ್ತಿ ಪ್ರದಾನ ಸಮಾರಂಭ

ಕರ್ನಾಟಕ ಸಾಹಿತ್ಯ ಅಕಾಡೆಮಿಯು ಜೂನ್ 6ರಂದು ಸಂಜೆ 5.30ಕ್ಕೆ ರವೀಂದ್ರ ಕಲಾಕ್ಷೇತ್ರದಲ್ಲಿ ವಾರ್ಷಿಕ ಪ್ರಶಸ್ತಿಗಳ ಪ್ರದಾನ, ಮಹಿಳಾ ಮುನ್ನಡೆ ಪುಸ್ತಕ ಸರಣಿ ಮತ್ತು ಪಂಚಮ ಪತ್ರಿಕೆ ಸಂಪುಟಗಳ ಬಿಡುಗಡೆ ಸಮಾರಂಭ ಹಮ್ಮಿಕೊಂಡಿದೆ. 2025ನೇ ಸಾಲಿನ ಗೌರವ ಹಾಗೂ ಸಾಹಿತ್ಯ ಶ್ರೀ ಪ್ರಶಸ್ತಿ ಮತ್ತು 2024ನೇ ಸಾಲಿನ ಪುಸ್ತಕ ಬಹುಮಾನವನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಪ್ರದಾನ ಮಾಡಲಿದ್ದಾರೆ.

ಎಲ್.ಎನ್. ಮುಕುಂದರಾಜ್

‘ಮಹಿಳಾ ಮುನ್ನಡೆ ಶೀರ್ಷಿಕೆಯಡಿ ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿದ 50 ಮಹಿಳಾ ಸಾಧಕರ ಬಗ್ಗೆ 50 ಪುಸ್ತಕಗಳನ್ನು ಸಿದ್ಧಪಡಿಸಲಾಗಿದೆ. 70–80ರ ದಶಕದಲ್ಲಿ ದಲಿತ ಲೇಖಕರು ಪಂಚಮ ಪತ್ರಿಕೆಯಲ್ಲಿ ಬರೆಯುತ್ತಿದ್ದ ಲೇಖನಗಳ ಸಂಗ್ರಹವನ್ನು ಎರಡು ಸಂಪುಟಗಳಲ್ಲಿ ಹೊರತರಲಾಗುತ್ತಿದೆ’ ಎಂದು ಎಲ್.ಎನ್. ಮುಕುಂದರಾಜ್ ಮಾಹಿತಿ ನೀಡಿದರು.

ಕೋಚಿಂಗ್ ಕೇಂದ್ರಗಳಲ್ಲೇ ಪಿಯು ಪಾಠ: ಮಾನ್ಯತೆ ರದ್ದು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಾನ್ಯತೆ ಪಡೆದ ಕೆಲವು ಪಿಯು ಕಾಲೇಜುಗಳು ವಿದ್ಯಾರ್ಥಿಗಳಿಗೆ ಪ್ರವೇಶ ನೀಡಿ, ಅನಧಿಕೃತವಾಗಿ ಕೋಚಿಂಗ್ ಕೇಂದ್ರಗಳಿಗೆ ತೆರಳಲು ಅವಕಾಶ ನೀಡುತ್ತಿದ್ದು, ಅಂತಹ ಕಾಲೇಜುಗಳ ಮಾನ್ಯತೆ ರದ್ದುಪಡಿಸಲು ಪದವಿಪೂರ್ವ ಶಿಕ್ಷಣ ಇಲಾಖೆ ಮುಂದಾಗಿದೆ.

‘ನೀಟ್, ಜೆಇಇ, ಸಿಇಟಿ ಸೇರಿದಂತೆ ವೃತ್ತಿಪರ ಕೋರ್ಸ್‌ಗಳ ಪ್ರವೇಶ ಪರೀಕ್ಷೆಗಳಿಗೆ ತರಬೇತಿ ನೀಡುವ ಹೆಸರಿನಲ್ಲಿ ಕೆಲವು ಸಂಸ್ಥೆಗಳು ವಿದ್ಯಾರ್ಥಿಗಳನ್ನು ಪಿಯು ತರಗತಿಗಳಿಗೆ ದಾಖಲು ಮಾಡಿಕೊಂಡು ಬೇರೆಡೆ ಶೈಕ್ಷಣಿಕ ಚಟುವಟಿಕೆಗಳನ್ನು ನಡೆಸುತ್ತಿ ರುವ ಕುರಿತು ದೂರುಗಳು ಬಂದಿವೆ. ಇಂತಹ ಕ್ರಮಗಳು ಪದವಿಪೂರ್ವ ಶಿಕ್ಷಣ ನಿಯಮಗಳು–2024, ಕರ್ನಾಟಕ ಶಿಕ್ಷಣ ಕಾಯ್ದೆ–1983ರ ಉಲ್ಲಂಘನೆಯಾಗಿದ್ದು, ತಪ್ಪಿತಸ್ಥ ಸಂಸ್ಥೆಗಳ ಮಾನ್ಯತೆ ರದ್ದುಪಡಿಸಲಾಗುವುದು’ ಎಂದು ಪದವಿಪೂರ್ವ ಶಿಕ್ಷಣ ಇಲಾಖೆ ನಿರ್ದೇಶಕ ಭರತ್ ಎಸ್. ಎಚ್ಚರಿಕೆ ನೀಡಿದ್ದಾರೆ.

ಸ್ಪಷ್ಟೀಕರಣಕ್ಕೆ ಅವಕಾಶ ನೀಡಿದ ಬಳಿಕ ಶೈಕ್ಷಣಿಕ ಮಾನ್ಯತೆ ಹಿಂಪಡೆಯುವುದು, ಪಿಯು ಕೋರ್ಸ್‌ಗಳನ್ನು ನಡೆಸಲು ನೀಡಿದ ಅನುಮತಿ ರದ್ದುಪಡಿಸಲಾಗುವುದು ಎಂದಿದ್ದಾರೆ.

ಸೂಕ್ತ ಪರಿಶೀಲನೆ ನಡೆಸದೆ ಇಂತಹ ಸಂಸ್ಥೆಗಳಲ್ಲಿ ವಿದ್ಯಾರ್ಥಿಗಳು ಪ್ರವೇಶ ಪಡೆಯಬಾರದು. ಪ್ರಥಮ ಮತ್ತು ದ್ವಿತೀಯ ಪಿಯು ಪ್ರವೇಶಕ್ಕೆ ಮಕ್ಕಳನ್ನು ಸೇರಿಸುವ ಮುನ್ನ ಕಾಲೇಜಿನ ಅಧಿಕೃತ ಸ್ಥಳ, ಅನುಮೋದಿತ ವಿಭಾಗಗಳು, ಮಂಜೂರಾದ ವಿದ್ಯಾರ್ಥಿ ಪ್ರವೇಶ ಸಂಖ್ಯೆಯನ್ನು ಇಲಾಖೆಯ ಅಧಿಕೃತ ಜಾಲತಾಣದಲ್ಲಿ ಪರಿಶೀಲಿಸಬೇಕು ಎಂದು ಸೂಚಿಸಿದ್ದಾರೆ.

ಹೊಸ ಕಾಲೇಜು, ಹೆಚ್ಚುವರಿ ವಿಭಾಗ, ಭಾಷೆ ಅಥವಾ ಕೋರ್ಸ್‌ಗಳಿಗೆ ಅನುಮೋದನೆ ಸಿಗಲಿದೆ, ಮುಂದಿನ ದಿನಗಳಲ್ಲಿ ವಿಸ್ತರಣೆ ಮಾಡಲಾಗುವುದು ಅಥವಾ ತರಗತಿಗಳನ್ನು ಬೇರೆಡೆ ಸ್ಥಳಾಂತರಿಸಲಾಗುವುದು ಎಂಬ ಮೌಖಿಕ ಭರವಸೆಗಳನ್ನು ನಂಬಬಾರದು. ಎಲ್ಲ ಅನುಮೋದನೆಗಳ ಮಾಹಿತಿ ಇಲಾಖೆಯ ಅಧಿಕೃತ ಜಾಲತಾಣದಲ್ಲಷ್ಟೇ ಪ್ರಕಟವಾಗಲಿದೆ. ಪೋಷಕರು ಗಮನಿಸಬೇಕು ಎಂದು ಹೇಳಿದ್ದಾರೆ.

‘ಬೆಳಗಾವಿಯು ಕರ್ನಾಟಕದ ಅವಿಭಾಜ್ಯ ಅಂಗ’ ಎಂಬ ನಿರ್ಣಯವನ್ನು ಮಹಾನಗರ ಪಾಲಿಕೆ ಪರಿಷತ್ ಸಭೆಯಲ್ಲಿ ಅಂಗೀಕರಿಸುವಂತೆ ಆಗ್ರಹಿಸಿ ಹೋರಾಟಗಾರ ವಾಟಾಳ್ ನಾಗರಾಜ್ ನೇತೃತ್ವದಲ್ಲಿ ಕನ್ನಡಪರ ಸಂಘಟನೆಗಳ ಕಾರ್ಯಕರ್ತರು ಬೆಳಗಾವಿಯಲ್ಲಿ ಮಂಗಳವಾರ ಪ್ರತಿಭಟನೆ ನಡೆಸಿದರು –ಪ್ರಜಾವಾಣಿ ಚಿತ್ರ

ಗಿರ್ ಅರಣ್ಯದಲ್ಲಿ 5 ಸಿಂಹಗಳ ಸಾವು

ಅಹಮದಾಬಾದ್ (ಪಿಟಿಐ): ಗುಜರಾತ್‌ನ ಗಿರ್ ಅರಣ್ಯ ಪ್ರದೇಶದಲ್ಲಿ ಎರಡು ಸಿಂಹದ ಮರಿಗಳು ಹಾಗೂ ಮೂರು ಸಿಂಹಗಳು ಮೃತಪಟ್ಟಿವೆ. ಸಿಂಹದ ಮರಿಗಳು ಬೆಬೆಸಿಯಾ ವೈರಾಣು ಸೋಂಕಿನಿಂದ ಮೃತಪಟ್ಟಿರುವ ಶಂಕೆ ವ್ಯಕ್ತವಾಗಿದೆ.

ಅರಣ್ಯ ಸಚಿವರಾದ ಅರ್ಜುನ್ ಮೊದ್ವಾಡಿಯಾ ಈ ಕುರಿತು ಮಂಗಳವಾರ ಮಾಹಿತಿ ನೀಡಿದ್ದಾರೆ.

‘ವೈರಾಣು ಸೋಂಕಿನಿಂದ ಎರಡು ಸಿಂಹದ ಮರಿಗಳು ಮೃತಪಟ್ಟಿರುವ ಶಂಕೆ ವ್ಯಕ್ತವಾಗಿದೆ. ಈ ಎರಡೂ ಮರಿಗಳು ಅರಣ್ಯದ ಬೇರೆ ಬೇರೆ ಪ್ರದೇಶದಲ್ಲಿ ಮೃತಪಟ್ಟಿದ್ದು, ಬೇರೆ ಪ್ರಾಣಿಗಳಿಗೆ ಸೋಂಕು ಹರಡಿರುವ ಸಾಧ್ಯತೆ ಇಲ್ಲ. ಇತರ ಮೂರು ಸಿಂಹಗಳ ಪೈಕಿ ಎರಡು ಸಿಂಹಗಳು ಸ್ವಾಭಾವಿಕ ಕಾರಣಗಳಿಂದ ಮೃತಪಟ್ಟಿದ್ದು, ಇನ್ನೊಂದು ಸಿಂಹ ಕಾದಾಟದಲ್ಲಿ ಮೃತಪಟ್ಟಿದೆ’ ಎಂದಿದ್ದಾರೆ.

ಮಣ್ಣು ಕುಸಿದು ಐವರು ಸಾವು

ಪಟ್ನಾ (ಪಿಟಿಐ): ಮಧ್ಯಪ್ರದೇಶದ ಪನ್ನಾ ಜಿಲ್ಲೆಯ ಹಳ್ಳಿಯೊಂದರಲ್ಲಿ ಮಂಗಳವಾರ ಬಾವಿ ನಿರ್ಮಿಸುತ್ತಿದ್ದಾಗ ಮಣ್ಣು ಕುಸಿದು ಐವರು ಕಾರ್ಮಿಕರು ಮೃತಪಟ್ಟಿದ್ದಾರೆ.

ನರೇಗಾ ಯೋಜನೆಯಡಿ ನಿರ್ಮಿಸಲಾಗುತ್ತಿದ್ದ ಸಾರ್ವಜನಿಕ ಬಾವಿಯ ಕಾಮಗಾರಿ ವೇಳೆ ಅವಘಡ ಸಂಭವಿಸಿದೆ ಎಂದು ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ವಿನಯ ಮೇಲ್ಮನವಿ: ಆಕ್ಷೇಪಣೆ ಸಲ್ಲಿಸಲು ಸಿಬಿಐಗೆ ಸೂಚನೆ

ಬೆಂಗಳೂರು: ‘ಧಾರವಾಡದ ಬಿಜೆಪಿ ಮುಖಂಡ ಯೋಗೀಶ್‌ಗೌಡ ಗೌಡರ ಕೊಲೆ ಪ್ರಕರಣದಲ್ಲಿ ಸೆಷನ್ಸ್ ನ್ಯಾಯಾಲಯ ವಿಧಿಸಿರುವ ಜೀವಾವಧಿ ಶಿಕ್ಷೆ ರದ್ದುಪಡಿಸಬೇಕು’ ಎಂದು ಕೋರಿ ಮಾಜಿ ಶಾಸಕ ವಿನಯ ಕುಲಕರ್ಣಿ ಮತ್ತು ಚಂದ್ರಶೇಖರ ಇಂಡಿ ಸಲ್ಲಿಸಿರುವ ಕ್ರಿಮಿನಲ್ ಮೇಲ್ಮನವಿಗಳ ವಿಚಾರಣೆಯನ್ನು ಹೈಕೋರ್ಟ್ ಜೂನ್ 2ಕ್ಕೆ ಮುಂದೂಡಿದೆ.

‘ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯದ ಆದೇಶ ರದ್ದುಪಡಿಸಬೇಕು’ ಎಂದು ಕೋರಿ ವಿನಯ ಕುಲಕರ್ಣಿ ಹಾಗೂ ಚಂದ್ರಶೇಖರ ಇಂಡಿ ಸಲ್ಲಿಸಿರುವ ಪ್ರತ್ಯೇಕ ಮೇಲ್ಮನವಿಗಳನ್ನು ರಜಾಕಾಲದ ನ್ಯಾಯಪೀಠದ ನ್ಯಾಯಮೂರ್ತಿ ಎಸ್. ಸುನಿಲ್ ದತ್ ಯಾದವ್ ನೇತೃತ್ವದ ವಿಭಾಗೀಯ ನ್ಯಾಯ ಪೀಠ ಮಂಗಳವಾರ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ವಿನಯ ಕುಲಕರ್ಣಿ ಪರ ಸುಪ್ರೀಂ ಕೋರ್ಟ್‌ನ ಪದಾಂಕಿತ ಹಿರಿಯ ವಕೀಲ ಸಿದ್ಧಾರ್ಥ ಲೂಥ್ರಾ, ‘ಅರ್ಜಿದಾರರಿಗೆ ಶಿಕ್ಷೆ ವಿಧಿಸಿರುವ ಕಾರಣ ಅವರು ಶಾಸಕ ಸ್ಥಾನದಿಂದ ಅನರ್ಹಗೊಂಡಿದ್ದಾರೆ. ಸದ್ಯ ಖಾಲಿಯಿರುವ ಅವರ ಸ್ಥಾನಕ್ಕೆ ಮಧ್ಯಂತರ ಚುನಾವಣೆ ಘೋಷಣೆ ಮಾಡುವ ಸಾಧ್ಯತೆಯಿದೆ. ಹಾಗಾಗಿ, ಚುನಾವಣೆ ಘೋಷಣೆಗೆ ತಡೆ ನೀಡಬೇಕು’ ಎಂದು ನ್ಯಾಯಪೀಠಕ್ಕೆ ಮನವಿ ಮಾಡಿದರು.

ಇದಕ್ಕೆ ಸಿಬಿಐ ಪರ ವಕೀಲ ಹೆಚ್ಚುವರಿ ಸಾಲಿಸಿಟರ್ ಜನರಲ್ ಎಸ್.ವಿ.ರಾಜು ಮತ್ತು ಪಿ.ಪ್ರಸನ್ನಕುಮಾರ್, ‘ಆಕ್ಷೇಪಣೆ ಸಿದ್ಧವಿದ್ದು ಶೀಘ್ರವೇ ನ್ಯಾಯಾಲಯಕ್ಕೆ ಸಲ್ಲಿಸಲಾಗುವುದು’ ಎಂದು ತಿಳಿಸಿದರು.

ಇದಕ್ಕೆ ಪ್ರತಿಕ್ರಿಯಿಸಿದ ನ್ಯಾಯಪೀಠ, ‘ಈ ಮೇಲ್ಮನವಿಗಳನ್ನು ರಜಾಕಾಲ ಮುಗಿದ ಬಳಿಕ ವಿಚಾರಣೆ ನಡೆಸಬಹುದು’ ಎಂದು ತಿಳಿಸಿತು. ಅಂತೆಯೇ, ಆಕ್ಷೇಪಣೆ ಸಲ್ಲಿಸಲು ಸಿಬಿಐಗೆ ಸೂಚಿಸಿ ವಿಚಾರಣೆಯನ್ನು ಜೂನ್ 2ಕ್ಕೆ ಮುಂದೂಡಿತು.

ಇಂಡಿಯನ್ ಕೌನ್ಸಿಲ್ ಫಾರ್ ಕಲ್ಚರಲ್ ರಿಲೇಷನ್ಸ್ ಜತೆ ಒಡಂಬಡಿಕೆ

ಕಲಾವಿದರಿಗೆ ವಿದೇಶದಲ್ಲಿ ಅವಕಾಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: ದೇಶದ ವಿವಿಧೆಡೆ ಮತ್ತು ವಿದೇಶದಲ್ಲಿ ಇಲ್ಲಿನ ಕಲಾ ಪ್ರಕಾರ ಹಾಗೂ ಕಲಾವಿದರನ್ನು ಉತ್ತೇಜಿಸುವ ಉದ್ದೇಶದಿಂದ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ಇಂಡಿಯನ್ ಕೌನ್ಸಿಲ್ ಫಾರ್ ಕಲ್ಚರಲ್ ರಿಲೇಷನ್ಸ್ (ಐಸಿಸಿಆರ್) ಜತೆಗೆ ಒಡಂಬಡಿಕೆ ಮಾಡಿಕೊಂಡಿದೆ.

ಇಲಾಖೆ ಕಾರ್ಯದರ್ಶಿ ಜೆ. ಮಂಜುನಾಥ್ ಹಾಗೂ ಐಸಿಸಿಆರ್ ಪರವಾಗಿ ವಿದೇಶಾಂಗ ಸಚಿವಾಲಯದ ಜಂಟಿ ಕಾರ್ಯದರ್ಶಿ ಮನಿಷಾ ಸ್ವಾಮಿ ಒಡಂಬಡಿಕೆಗೆ ಸಹಿ ಹಾಕಿದರು. ಐಸಿಸಿಆರ್ ಡೈರೆಕ್ಟರ್ ಜನರಲ್ ಕೆ. ನಂದಿನಿ ಸಿಂಗ್ಲ ಉಪಸ್ಥಿತರಿದ್ದರು. ಐಸಿಸಿಆರ್ ಸಂಸ್ಥೆಯು ಕೇಂದ್ರ ವಿದೇಶಾಂಗ ಸಚಿವಾಲಯದ ಅಡಿ ಕಾರ್ಯನಿರ್ವಹಿಸುತ್ತಿದೆ.

ಮನಿಷಾ ಸ್ವಾಮಿ ಮತ್ತು ಜೆ. ಮಂಜುನಾಥ್ ಅವರು ಒಡಂಬಡಿಕೆಗೆ ಸಹಿ ಮಾಡಿದರು. ಕೆ. ನಂದಿನಿ ಸಿಂಗ್ಲ ಉಪಸ್ಥಿತರಿದ್ದರು

‘ರಾಜ್ಯದ ಸಂಸ್ಕೃತಿ, ಪ್ರವಾಸೋದ್ಯಮ, ಆರ್ಥಿಕ ಪ್ರಗತಿಗೆ ಈ ಒಡಂಬಡಿಕೆ ಸಹಕಾರಿಯಾಗಲಿದೆ. ವಿದೇಶಗಳಲ್ಲಿ ನಡೆಯುವ ಪ್ರಮುಖ ಅಂತರರಾಷ್ಟ್ರೀಯ ಉತ್ಸವಗಳು ಮತ್ತು ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ರಾಜ್ಯದ ಕಲಾ ತಂಡಗಳು ಭಾಗವಹಿಸಲು ಅನುಕೂಲವಾಗುತ್ತದೆ. ಆ ನಿಟ್ಟಿನಲ್ಲಿ ಐಸಿಸಿಆರ್ ರಾಜ್ಯಕ್ಕೆ ಸಹಾಯ ಮಾಡುತ್ತದೆ’ ಎಂದು ಜೆ. ಮಂಜುನಾಥ್ ತಿಳಿಸಿದ್ದಾರೆ.

‘ರಾಜ್ಯದ ಅತ್ಯುತ್ತಮ ಕಲಾ ತಂಡಗಳು, ಕಲಾವಿದರ ವಿವರವನ್ನು ಐಸಿಸಿಆರ್‌ನಲ್ಲಿ ನಮೂದಿಸಿ, ಅವರಿಗೆ ಹೆಚ್ಚಿನ ಅವಕಾಶ ದೊರಕಿಸಿಕೊಡಲಾಗುತ್ತದೆ. ಸಾಹಿತ್ಯ, ಶೈಕ್ಷಣಿಕ, ಶಿಲ್ಪಕಲೆ, ಆಹಾರ, ಜವಳಿ, ಕರಕುಶಲ, ವಾಸ್ತುಶಿಲ್ಪ ಸೇರಿ ವಿವಿಧ ಕ್ಷೇತ್ರಗಳಲ್ಲಿನ ಯುವ ಪ್ರತಿಭೆಗಳನ್ನು ಗುರುತಿಸಿ ಪ್ರೋತ್ಸಾಹಿಸಲಾಗುತ್ತದೆ’ ಎಂದು ಹೇಳಿದ್ದಾರೆ.

‘ವಿದೇಶಗಳಲ್ಲಿ ನಡೆಯುವ ಕಲಾ ಪ್ರದರ್ಶನದಲ್ಲಿ ಭಾಗವಹಿಸುವ ರಾಜ್ಯದ ಕಲಾವಿದರ ಅಂತರರಾಷ್ಟ್ರೀಯ ವಿಮಾನ ಪ್ರಯಾಣದ ವೆಚ್ಚ, ಪ್ರದರ್ಶನ ಶುಲ್ಕ, ವೀಸಾ ಶುಲ್ಕವನ್ನು ಭರಿಸಲು ಐಸಿಸಿಆರ್ ಸಿದ್ಧವಿದ್ದು, ಊಟ, ವಸತಿ, ವೈದ್ಯಕೀಯ ಶುಲ್ಕ ಸೇರಿ ವಿವಿಧ ವೆಚ್ಚವನ್ನು ರಾಜ್ಯ ಸರ್ಕಾರ ಮತ್ತು ಕಲಾವಿದರು ಭರಿಸಬೇಕು’ ಎಂದು ತಿಳಿಸಿದ್ದಾರೆ.

‘ಐಸಿಸಿಆರ್‌ನಿಂದ ಭಾಗಶಃ ಹಣಕಾಸಿನ ಬೆಂಬಲದೊಂದಿಗೆ ಅಂತರರಾಷ್ಟ್ರೀಯ ಮನ್ನಣೆಯನ್ನು ಪಡೆಯಲು ಸಾಧ್ಯವಾಗುತ್ತದೆ’ ಎಂದಿದ್ದಾರೆ.

ಜಿರಲೆ ಪಕ್ಷ: ರಾಜಕೀಯ ಮಾನ್ಯತೆಗೆ ಅರ್ಜಿ

ಪ್ರಜಾವಾಣಿ ವಾರ್ತೆ

ನವದೆಹಲಿ: ದೇಶದಲ್ಲಿ ಆನ್‌ಲೈನ್ ಆಂದೋಲನದ ರೂಪದಲ್ಲಿ ದಿಢೀರ್ ಹುಟ್ಟಿಕೊಂಡ ವಿಡಂಬನಾ ರಾಜಕೀಯ ಪಕ್ಷವಾದ ‘ಕಾಕ್ರೋಚ್ ಜನತಾ ಪಾರ್ಟಿ’ಯನ್ನು (ಜಿರಲೆ ಜನತಾ ಪಕ್ಷ– ಸಿಜೆಪಿ) ರಾಜಕೀಯ ಪಕ್ಷವಾಗಿ ನೋಂದಣಿ ಮಾಡಲು ಹರಿಯಾಣದ ವಕೀಲರೊಬ್ಬರು ಕೇಂದ್ರ ಚುನಾವಣಾ ಆಯೋಗಕ್ಕೆ ಅರ್ಜಿ ಸಲ್ಲಿಸಿದ್ದಾರೆ.

‘ಸಿಜೆಪಿ’ ಹುಟ್ಟಿಗೆ ಕಾರಣವಾದ, ಸದ್ಯ ಅಮೆರಿಕದಲ್ಲಿರುವ ಪುಣೆಯ ಅಭಿಜೀತ್ ದೀಪ್ಕೆ ಭಾರತಕ್ಕೆ ಬಂದು, ಈ ಆಂದೋಲನವನ್ನು ರಾಜಕೀಯ ಚಳವಳಿಯಾಗಿ ಮುನ್ನಡೆಸಲು ಹಿಂದೇಟು ಹಾಕುತ್ತಿರುವುದರಿಂದ, ತಾವು ಈ ಹೊಣೆ ಹೊತ್ತುಕೊಂಡಿರುವುದಾಗಿ ಪಾಣಿಪತ್‌ನ ಸುಧೀರ್ ಜಾಖಡ್ ಹೇಳಿದ್ದಾರೆ. ಮೇ 22ರಂದು ಚುನಾವಣಾ ಆಯೋಗಕ್ಕೆ ಸಲ್ಲಿಸಿರುವ ಅರ್ಜಿಯಲ್ಲಿ ತಮ್ಮನ್ನು ಸಿಜೆಪಿಯ ರಾಷ್ಟ್ರೀಯ ಸಂಚಾಲಕ ಎಂದು ಸುಧೀರ್ ಹೇಳಿಕೊಂಡಿದ್ದಾರೆ.

‘ಬಾಸ್ಟನ್‌ನಲ್ಲಿರುವ ದೀಪ್ಕೆ ಭಾರತಕ್ಕೆ ಬರುವುದಿಲ್ಲ. ಹೀಗಾಗಿ ನಾನೇ ಈ ಚಳವಳಿಯ ನೇತೃತ್ವ ವಹಿಸಿಕೊಂಡಿರುವೆ. ಇಲ್ಲದಿದ್ದರೆ ಬೇರೆ ಯಾರಾದರೂ ರಾಜಕೀಯ ಪಕ್ಷವಾಗಿ ‘ಸಿಜೆಪಿ’ ನೋಂದಣಿ ಮಾಡಿಕೊಂಡು ದುರ್ಬಳಕೆ ಮಾಡಿಕೊಳ್ಳುತ್ತಾರೆ’ ಎಂದು ಸುಧೀರ್ ‘ಪ್ರಜಾವಾಣಿ’ಗೆ ತಿಳಿಸಿದರು. 1951ರ ಜನ ಪ್ರಾತಿನಿಧ್ಯ ಕಾಯ್ದೆ, ಸೆಕ್ಷನ್ 29ಎ ಪ್ರಕಾರ, ರಾಜಕೀಯ ಪಕ್ಷವಾಗಿ ಸಿಜೆಪಿ ನೋಂದಣಿ ಮಾಡಲು ಚುನಾವಣಾ ಆಯೋಗಕ್ಕೆ ಅರ್ಜಿ ಸಲ್ಲಿಸಿದ್ದೇನೆ ಎಂದರು. ವಿದ್ಯಾರ್ಥಿ ಮುಖಂಡ, ರೈತಪರ ಹೋರಾಟಗಾರ ಎಂದೂ ಸುಧೀರ್ ತಮ್ಮನ್ನು ಕರೆದುಕೊಂಡಿದ್ದಾರೆ.

ಅಭಿಯಾನ: ‘ಕಾಕ್ರೋಚ್ ಜನತಾ ಪಾರ್ಟಿಯಿಂದ ಸ್ಫೂರ್ತಿ ಪಡೆದು, ಕೇಂದ್ರದ ಬಿಜೆಪಿ ಸರ್ಕಾರದ ಭ್ರಷ್ಟಾಚಾರ, ನಿರುದ್ಯೋಗ ನೀತಿ, ಪ್ರಶ್ನೆಪತ್ರಿಕೆ ಸೋರಿಕೆ ಖಂಡಿಸಿ, ರಾಷ್ಟ್ರವ್ಯಾಪಿ ಯುವ ಪ್ರತಿರೋಧ ಚಳುವಳಿ ರೀತಿಯಲ್ಲಿ ’ ಭಾರತೀಯ ಯುವ ಜಿರಲೆ ಅಭಿಯಾನ’ಕ್ಕೆ ಭಾರತೀಯ ಯುವ ಕಾಂಗ್ರೆಸ್ (ಐವೈಸಿ) ಮಂಗಳವಾರ ಚಾಲನೆ ನೀಡಿದೆ.

ಅಭಿಮತದ ವಿಳಾಸ: ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75 ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು-01 **editpage@prajavani.co.in**

ಸಂಪಾದಕೀಯ

ವಿಚಾರಣೆಗೆ ಬಾಕಿ ಇರುವ ಪ್ರಕರಣ ಆಮೂಲಾಗ್ರ ಸುಧಾರಣೆ ಬೇಕು

ಸುಪ್ರೀಂ ಕೋರ್ಟ್‌ನಲ್ಲಿ ವಿಚಾರಣೆಯ ಹಂತದಲ್ಲಿ ಉಳಿದಿರುವ ಪ್ರಕರಣಗಳ ಸಂಖ್ಯೆ 92 ಸಾವಿರಕ್ಕಿಂತ ಜಾಸ್ತಿ ಇದೆ. ಸುಪ್ರೀಂ ಕೋರ್ಟ್‌ನ ನ್ಯಾಯಮೂರ್ತಿಗಳ ಸಂಖ್ಯೆಯನ್ನು 34ರಿಂದ 38ಕ್ಕೆ ಹೆಚ್ಚಿಸಲು ಈಚೆಗೆ ಸುಗ್ರೀವಾಜ್ಞೆ ಹೊರಡಿಸಿರುವುದು ಈ ಹಿನ್ನೆಲೆಯಲ್ಲಿ ಸ್ವಾಗತಾರ್ಹ ಕ್ರಮ. 2019ರಲ್ಲಿ ನ್ಯಾಯಮೂರ್ತಿಗಳ ಸಂಖ್ಯೆಯನ್ನು 31ರಿಂದ 34ಕ್ಕೆ ಹೆಚ್ಚಿಸಲಾಗಿತ್ತು. ಅದಾದ ನಂತರದಲ್ಲಿ ಬಾಕಿ ಉಳಿದಿರುವ ಪ್ರಕರಣಗಳ ಸಂಖ್ಯೆಯು ಶೇಕಡ 50ರಷ್ಟು ಜಾಸ್ತಿ ಆಗಿದೆ ಎಂಬುದು ಇಲ್ಲಿ ಗಮನಾರ್ಹ. ಅಂದರೆ, ನ್ಯಾಯಮೂರ್ತಿಗಳ ಸಂಖ್ಯೆ ಕಡಿಮೆ ಇರುವುದು ಸಮಸ್ಯೆಯ ಒಂದು ಭಾಗ ಮಾತ್ರ ಎಂಬುದನ್ನು ಇದು ಹೇಳುತ್ತಿದೆ. ಕೋರ್ಟ್‌ನ ಕೆಲಸಗಳಲ್ಲಿ ವ್ಯವಸ್ಥಿತವಾದ ಬದಲಾವಣೆಗಳನ್ನು ತರುವ ಮೂಲಕ ಮಾತ್ರವೇ ಪ್ರಕರಣಗಳ ಹೊರೆಯ ಸಮಸ್ಯೆಯನ್ನು ಪರಿಣಾಮಕಾರಿಯಾಗಿ ನಿರ್ವಹಿಸಲು ಸಾಧ್ಯ. ಈಗ ಸುಪ್ರೀಂ ಕೋರ್ಟ್‌ನಲ್ಲಿ ಪ್ರಕರಣವೊಂದು ಇತ್ಯರ್ಥವಾಗಲು ಸರಾಸರಿ 1ರಿಂದ 3 ವರ್ಷಗಳು ಬೇಕಾಗುತ್ತಿವೆ. ಆದರೆ, ಕೆಲವು ಪ್ರಕರಣಗಳು 13 ವರ್ಷಗಳಿಗಿಂತ ಹೆಚ್ಚಿನ ಅವಧಿಗೆ ವಿಚಾರಣೆಯ ಹಂತದಲ್ಲಿ ಇದ್ದ ನಿದರ್ಶನಗಳೂ ಇವೆ.

ವಾಸ್ತವದಲ್ಲಿ ಸುಪ್ರೀಂ ಕೋರ್ಟ್‌ಗೆ ಮಂಜೂರಾದ ಅಷ್ಟೂ ನ್ಯಾಯಮೂರ್ತಿಗಳ ಹುದ್ದೆಗಳು ಭರ್ತಿ ಆಗಿರುವುದಿಲ್ಲ. ಇದಕ್ಕೆ ಹಲವು ಕಾರಣಗಳನ್ನು ಗುರ್ತಿಸಬಹುದು. ಸುಪ್ರೀಂ ಕೋರ್ಟ್‌ನ ಹಿರಿಯ ನ್ಯಾಯಮೂರ್ತಿಗಳ ಸಮಿತಿಯ (ಕೊಲಿಜಿಯಂ) ಜೊತೆಗಿನ ಭಿನ್ನಮತದಿಂದಾಗಿ ಹೊಸ ನ್ಯಾಯಮೂರ್ತಿಗಳನ್ನು ನೇಮಕ ಮಾಡಲು ಕೇಂದ್ರ ಸರ್ಕಾರವು ವಿಳಂಬ ಮಾಡುವುದು ಕೂಡ ಒಂದು ಕಾರಣ. ತಾನು ವಿಚಾರಣೆಗೆ ಕೈಗೆತ್ತಿಕೊಳ್ಳಲು ಒಪ್ಪಿಕೊಳ್ಳುವ ಪ್ರಕರಣಗಳ ವಿಚಾರದಲ್ಲಿ ಕೋರ್ಟ್ ಇನ್ನಷ್ಟು ಅಳೆದು-ತೂಗಿ ತೀರ್ಮಾನ ಕೈಗೊಳ್ಳಬೇಕು ಎಂಬ ವಾದವೊಂದು ಇದೆ; ಹಲವು ಪ್ರಕರಣಗಳು ಸುಪ್ರೀಂ ಕೋರ್ಟ್‌ನಲ್ಲಿ ವಿಚಾರಣೆ ನಡೆಯಬೇಕಾದಷ್ಟು ಗಂಭೀರವಾಗಿ ಇರುವುದಿಲ್ಲ ಎಂದು ಈ ವಾದದ ಪರ ಇರುವವರು ಹೇಳುತ್ತಾರೆ. ಹೆಚ್ಚು ಉತ್ತಮ ಫಲಿತಾಂಶಕ್ಕಾಗಿ ಕೋರ್ಟ್ ತಂತ್ರಜ್ಞಾನದ ಮೊರೆ ಹೋಗಬಹುದು. ಉದಾಹರಣೆಗೆ, ಡಿಜಿಟಲ್ ಇ-ಫೈಲಿಂಗ್ ವ್ಯವಸ್ಥೆಯನ್ನು ಹೆಚ್ಚು ಬಳಸಿಕೊಳ್ಳುವುದರಿಂದ ಸಮಯ ಉಳಿಸಬಹುದು. ವಾದ ಆಲಿಸಲು, ವಾದ ಮಂಡನೆಗೆ ಸಮಯಮಿತಿ ನಿಗದಿ ಮಾಡುವುದನ್ನು ಬದಲಾವಣೆಯ ಭಾಗವಾಗಿಸಬಹುದು. ಕ್ಷುಲ್ಲಕ ಸಂಗತಿಗಳನ್ನೆಲ್ಲ ಕೋರ್ಟ್‌ಗೆ ಎಳೆಯದೆ ಇರುವ ಮೂಲಕ ಸರ್ಕಾರ ಕೂಡ ಪ್ರಕರಣಗಳ ಹೊರೆ ತಗ್ಗಿಸಲು ನೆರವಾಗಬಹುದು. ದೇಶದಲ್ಲಿ ಸರ್ಕಾರವೇ ಅತಿದೊಡ್ಡ ಸಂಖ್ಯೆಯಲ್ಲಿ ಮೊಕದ್ದಮೆಗಳನ್ನು ದಾಖಲಿಸಿದೆ. ಹಲವು ಪ್ರಕರಣಗಳು ಕೋರ್ಟ್‌ನ ಮಧ್ಯಪ್ರವೇಶಕ್ಕೆ ಅರ್ಹವಾದವು ಅಲ್ಲ.



ಪ್ರಕರಣಗಳ ಹೊರೆ ತಗ್ಗಿಸುವ ಪ್ರಯತ್ನದ ಭಾಗವಾಗಿ ಸುಪ್ರೀಂ ಕೋರ್ಟ್‌ನ ನ್ಯಾಯಮೂರ್ತಿಗಳ ಸಂಖ್ಯೆ ಹೆಚ್ಚಿಸಲು ನಿರ್ಧರಿಸಲಾಗಿದೆ. ಕೆಳ ಹಂತಗಳ ನ್ಯಾಯಾಲಯಗಳಿಗೂ ಈ ನಿಯಮ ಅನ್ವಯವಾಗಬೇಕು.

ದೇಶದ ಕೆಳಗಿನ ಹಂತಗಳ ನ್ಯಾಯಾಲಯಗಳಲ್ಲಿ ನ್ಯಾಯದಾನ ವಿಳಂಬ ಆಗುತ್ತಿರುವುದು ಇನ್ನಷ್ಟು ಹೆಚ್ಚು ತೀವ್ರವಾಗಿ ಅನುಭವಕ್ಕೆ ಬರುವಂತಿದೆ. ದೇಶದಲ್ಲಿ ಇತ್ಯರ್ಥವಾಗದೆ ಬಾಕಿ ಇರುವ ಅಷ್ಟೂ ಪ್ರಕರಣಗಳ ಸಂಖ್ಯೆಯನ್ನು ಪರಿಗಣಿಸಿದರೆ, ಸುಪ್ರೀಂ ಕೋರ್ಟ್‌ನಲ್ಲಿ ಬಾಕಿ ಇರುವ ಪ್ರಕರಣಗಳ ಪ್ರಮಾಣ ಶೇ 0.14ರಷ್ಟು ಮಾತ್ರ. ಹೈಕೋರ್ಟ್‌ಗಳಲ್ಲಿ ಒಟ್ಟು 56 ಲಕ್ಷಕ್ಕಿಂತ ಹೆಚ್ಚು ಪ್ರಕರಣಗಳು ಬಾಕಿ ಇವೆ. ಜಿಲ್ಲಾ ನ್ಯಾಯಾಲಯ ಹಾಗೂ ಇತರ ಅಧೀನ ನ್ಯಾಯಾಲಯಗಳಲ್ಲಿ ಬಾಕಿ ಇರುವ ಪ್ರಕರಣಗಳ ಸಂಖ್ಯೆಯು 4.3 ಕೋಟಿಗಿಂತ ಹೆಚ್ಚು. ಇವುಗಳಲ್ಲಿ ಹಲವು, ಆ ಪ್ರಕರಣಗಳ ಭಾಗವಾದವರ ಜೀವಿತಾವಧಿಯಲ್ಲಿ ಇತ್ಯರ್ಥ ಆಗದೇ ಇರಬಹುದು. ಈಗಿರುವ ಬಾಕಿ ಪ್ರಕರಣಗಳನ್ನು ಇತ್ಯರ್ಥಪಡಿಸಲು, ಈಗಿನ ವೇಗದಲ್ಲೇ ಮುನ್ನಡೆದರೆ ಇನ್ನೂ 300ಕ್ಕೂ ಹೆಚ್ಚು ವರ್ಷಗಳು ಬೇಕಾಗಬಹುದು ಎಂದು ಅಂದಾಜು ಮಾಡಲಾಗಿದೆ. ಕೆಳ ಹಂತಗಳ ನ್ಯಾಯಾಲಯಗಳಲ್ಲಿ ಬಾಕಿ ಇರುವ ಪ್ರಕರಣಗಳು ಜನಸಾಮಾನ್ಯರನ್ನು ಹೆಚ್ಚು ಬಾಧಿಸುತ್ತವೆ. ಆ ಪ್ರಕರಣಗಳನ್ನು ಹೆಚ್ಚು ಆದ್ಯತೆಯ ಮೇರೆಗೆ ಇತ್ಯರ್ಥಪಡಿಸಬೇಕು. ಜಾಮೀನು ಪಡೆಯುವ ಸಾಮರ್ಥ್ಯವಿಲ್ಲದ ಲಕ್ಷಾಂತರ ಮಂದಿ ವಿಚಾರಣಾಧೀನ ಕೈದಿಗಳಾಗಿ ಜೈಲುಗಳಲ್ಲಿ ಇದ್ದಾರೆ. ಪ್ರಕರಣಗಳ ಹೊರೆಯನ್ನು ತಗ್ಗಿಸುವ ಪ್ರಯತ್ನಗಳ ಭಾಗವಾಗಿ ಕೆಳ ಹಂತಗಳ ನ್ಯಾಯಾಲಯಗಳಲ್ಲಿಯೂ ನ್ಯಾಯಾಧೀಶರ ಸಂಖ್ಯೆ ಹೆಚ್ಚಿಸಬೇಕು. ಗರಿಷ್ಠ ಸಂಖ್ಯೆಯ ಜನರಿಗೆ ತ್ವರಿತವಾಗಿ ನ್ಯಾಯದಾನ ಮಾಡುವಲ್ಲಿ ವ್ಯವಸ್ಥೆ ವಿಫಲವಾದಾಗ ಸುಧಾರಣೆಗಳನ್ನು ತರುವುದನ್ನು ವಿಳಂಬ ಮಾಡಲಾಗದು.

ಚೂಟಿಡಿ

ಕಠೋರ ವಾಸ್ತವ

ಹಿಂದೆಲ್ಲಾ ಕೊಟ್ಟ ಹೆಣ್ಣು ಕುಲಕ್ಕೆ ಹೊರಗೆ ಅಷ್ಟೇ. ಅವಳದ್ದೇ ಆದ ಐಡೆಂಟಿಟಿ ಎಲ್ಲಿದೆ? ಗಂಡನೇ ಸುರಕ್ಷತಾ ಬಾಂಡ್, ಮಕ್ಕಳೇ ಆಸ್ತಿ. ಎಷ್ಟೋ ಹೆಣ್ಣುಮಕ್ಕಳಿಗೆ ಅವರ ಹೆಸರಿನಲ್ಲಿ ಬ್ಯಾಂಕ್ ಅಥವಾ ಪೋಸ್ಟ್ ಆಫೀಸಿನಲ್ಲಿ ಖಾತೆ ಓಪನ್ ಆಗುವುದೇ ಅವರ ಗಂಡ ತೀರಿಕೊಂಡ ನಂತರ. ಸ್ವಾತಂತ್ರ್ಯಾನಂತರ ಬಹುಶಃ ಅಂಬೇಡ್ಕರ್ ವ್ಯಾಕುಲಗೊಂಡು ಹಿಂದೂ ಕೋಡ್ ಬಿಲ್ ತರಲು ಹೆಣಗಿದ್ದು, ಈ ಕಾರಣಕ್ಕಾಗಿಯೇ.

ಸವಿತಾ ನಾಗಭೂಷಣ, ಕವಯಿತ್ರಿ, 'ಫೇಸ್‌ಬುಕ್'ನಿಂದ

ಕಿಡಿನುಡಿ

'ಗ್ಯಾರಂಟಿ' ಎಂದು ಡೊಳ್ಳು ಹೊಡೆದಿದ್ದ ರಾಜ್ಯ ಸರ್ಕಾರ, ಈಗ ಏಕಾಏಕಿ ಫಲಾನುಭವಿಗಳ ಮರುಪರಿಶೀಲನೆ, ಮರು ನೋಂದಣಿ, ವಿಶೇಷ ಅಭಿಯಾನ ಎಂಬ ಹೊಸ ನಾಟಕ ಶುರು ಮಾಡಿದೆ. ಬಡವರ ಬದುಕಿನ ಬಗ್ಗೆ ಸರ್ಕಾರಕ್ಕೆ ನಿಜವಾದ ಕಾಳಜಿಯಿಲ್ಲ ಎನ್ನುವುದು ಜಗಜ್ಜಾಹೀರಾಗಿದೆ.

ಆರ್. ಅಶೋಕ, ವಿಧಾನಸಭಾ ವಿರೋಧ ಪಕ್ಷದ ನಾಯಕ

25 ವರ್ಷಗಳ ಹಿಂದೆ

ಭಾನುವಾರ, 27-5-2001

• ಕನ್ನಡದಲ್ಲಿ ಪ್ರಮಾಣ ವಚನ ಸ್ವೀಕರಿಸಿದ ಕೇರಳ ಸಚಿವ!

ತಿರುವನಂತಪುರ, ಮೇ 26 (ಪಿಟಿಐ)- ಕೇರಳ ಮುಖ್ಯಮಂತ್ರಿ ಎ.ಕೆ. ಆಂಟನಿ ನೇತೃತ್ವದ ಯುಡಿಎಫ್ ಸಂಪುಟಕ್ಕೆ ಇಂದು ಸೇರ್ಪಡೆಯಾದ 12 ಸಚಿವರ ಪೈಕಿ ಮಂಜೇಶ್ವರದ ಶಾಸಕ ಚೆರ್ಕಳಂ ಅಬ್ದುಲ್ಲಾ ಅವರು ಕನ್ನಡದಲ್ಲಿ ಪ್ರಮಾಣ ವಚನ ಸ್ವೀಕರಿಸುವ ಮೂಲಕ ಎಲ್ಲರ ಗಮನ ಸೆಳೆದರು.

ಮುಸ್ಲಿಂ ಲೀಗ್ ಶಾಸಕ ಅಬ್ದುಲ್ಲಾ ಇದೇ ಮೊದಲ ಬಾರಿಗೆ ಸಚಿವರಾಗಿದ್ದಾರೆ. ಇತರ 11 ಮಂದಿ ಮಲಯಾಳದಲ್ಲಿ ಪ್ರಮಾಣ ಸ್ವೀಕರಿಸಿದರು. ಅಬ್ದುಲ್ಲಾ ಅವರು ಕಾಸರಗೋಡು ಜಿಲ್ಲೆಯ ಮಂಜೇಶ್ವರದಿಂದ ಸತತ ನಾಲ್ಕನೇ ಬಾರಿಗೆ ಕೇರಳ ವಿಧಾನಸಭೆಗೆ ಆಯ್ಕೆಯಾಗಿದ್ದಾರೆ.

• ಡೇರಿ ಆಡಳಿತದಲ್ಲಿ ಮಹಿಳೆಯರಿಗೆ ಆದ್ಯತೆ ನೀಡಿ: ಕುರಿಯನ್

ಮಂಗಳೂರು, ಮೇ 26- 'ಹಾಲು ಉತ್ಪಾದನೆಯಲ್ಲಿ ಮಹತ್ವದ ಪಾತ್ರವಹಿಸುತ್ತಿರುವ ಮಹಿಳೆಯರಿಗೆ ಸಹಕಾರಿ ಸಂಘಟನೆಯ ಆಡಳಿತದಲ್ಲಿ ಹೆಚ್ಚಿನ ಹೊಣೆಗಾರಿಕೆ ನೀಡಬೇಕು' ಎಂದು ಅಮೂಲ್ ಸಂಸ್ಥೆಯ ಅಧ್ಯಕ್ಷ ಡಾ. ಕುರಿಯನ್ ವರ್ಗೀಸ್ ಹೇಳಿದರು.

ದಕ್ಷಿಣ ಕನ್ನಡ ಜಿಲ್ಲಾ ಸಹಕಾರಿ ಹಾಲು ಉತ್ಪಾದಕ ಸಂಘಗಳ ಒಕ್ಕೂಟ ತಮಗೆ ನೀಡಿದ ಸನ್ಮಾನ ಸಂದರ್ಭದಲ್ಲಿ ಅವರು ಮಾತನಾಡಿದರು.

ಡೇರಿ ಉದ್ಯಮ ಮತ್ತು ಉತ್ಪಾದನೆ ಪ್ರತ್ಯೇಕ ನಮೂನೆಯಾಗಿ ಮಾರುಕಟ್ಟೆಯಲ್ಲಿ ಪೈಪೋಟಿ ನಡೆಸುವ ಬಳಕೆ ವಸ್ತುವಾಗಿ ಪ್ರವರ್ಧಮಾನಕ್ಕೆ ಬರಬೇಕು ಎಂದರು.

75 ವರ್ಷಗಳ ಹಿಂದೆ

ಭಾನುವಾರ, 27-5-1951

• ಕಾಲೇಜ್ ಫೀ ಏರಿಸಲು ಸೆನೇಟ್ ಸಭೆ ಅಸಮ್ಮತಿ

ಬೆಂಗಳೂರು, ಮೇ 26- ವಿಶ್ವವಿದ್ಯಾನಿಲಯದ ಕಾಲೇಜುಗಳ ಫೀ ದರ ಹೆಚ್ಚು ಮಾಡುವ ಬಗ್ಗೆ ಮೇ 23ನೇ ಬುಧವಾರ ವಿಶ್ವವಿದ್ಯಾನಿಲಯದ ಅಕೆಡೆಮಿಕ್ ಕೌನ್ಸಿಲ್ ಮಾಡಿದ ನಿರ್ಣಯದ ಮೇಲೆ ಶನಿವಾರ ನಡೆದ ವಿಶ್ವವಿದ್ಯಾನಿಲಯದ ಸೆನೇಟ್ ಸಭೆ ದೀರ್ಘ ಚರ್ಚೆ ನಡೆಸಿ, ಆ ನಂತರ ನಿರ್ಣಯಕ್ಕೆ 15-10 ಮತಗಳಿಂದ ಅಸಮ್ಮತಿಯನ್ನು ಸೂಚಿಸಿತು.

ನಿರ್ಣಯ ತಿರಸ್ಕರಿಸಲು ಅಗತ್ಯವಾದ ಮೂರನೇ ಎರಡು ಭಾಗ ಮತ ದೊರೆಯದೇ ಹೋದುದರಿಂದ ನಿರ್ಣಯಕ್ಕೆ ಸೆನೇಟ್, ಅಸಮ್ಮತಿ ಸೂಚಿಸಿತೆಂದು ಪರಿಗಣಿಸಲಾಯಿತು.

'ಗೇ' ಎನ್ನುವುದು ದುಶ್ಚಟವೇ?

ವಿಶ್ಲೇಷಣೆ

ವಸುಧೇಂದ್ರ

'ಗೇ'ಗಳ ಬಗ್ಗೆ ಹಾಗೂ ಅವರ ಲೈಂಗಿಕ ಜೀವನದ ಕುರಿತು ಸಮಾಜದಲ್ಲಿ ಅನೇಕ ಪೂರ್ವಗ್ರಹಗಳಿವೆ. ಗಂಡು-ಹೆಣ್ಣಿನಂತೆಯೇ 'ಗೇ' ಆಗಿರುವುದೂ ಒಂದು ಸಹಜ ನೈಸರ್ಗಿಕ ಸ್ಥಿತಿ ಎನ್ನುವುದನ್ನು ಸಮಾಜಕ್ಕೆ ತಿಳಿಸಿಕೊಡುವ ಅಗತ್ಯವಿದೆ.

ನಾವು ಎಲ್ಲೇ 'ಗೇ' ಬದುಕಿನ ಬಗ್ಗೆ ಬರೆಯಲಿ ಅಥವಾ ಮಾತಾಡಲಿ, ಸಮಾಜದ ಬಹುತೇಕರು 'ಗೇ ಗಳು ಅವರ ಪಾಡಿಗೆ ಅವರಿದ್ದರೆ ಯಾರಿಗೂ ತೊಂದರೆಯಿಲ್ಲ. ಆದರೆ, ಒಳ್ಳೆಯ ಹುಡುಗರನ್ನೂ ಆ ದುಶ್ಚಟಕ್ಕೆ ಹಚ್ಚಿ ಹಾಳು ಮಾಡುತ್ತಾರೆ. ಅದನ್ನು ನಾವು ವಿರೋಧಿಸುತ್ತೇವೆ' ಎಂದು ಹೇಳುತ್ತಾರೆ. ಇದೊಂದು ರೀತಿ 'ಗೇ'ತನವನ್ನು ನೇರವಾಗಿ ವಿರೋಧಿಸದೆ ತಾವು ಆಧುನಿಕರೆಂದು ತೋರಿಸಿಕೊಳ್ಳುತ್ತಾ, 'ಆದರೆ...' ಎಂಬ ಕೊಸರನ್ನು ವ್ಯಕ್ತಪಡಿಸುವ ಕ್ರಮ. ಜಾತ್ಯತೀತ ವಿವಾಹವನ್ನು ಸಮರ್ಥಿಸುತ್ತಾ, 'ಆದರೆ... ಆಹಾರ ಆಚಾರ ವಿಚಾರಗಳು ವ್ಯತ್ಯಾಸವಾಗಿ ತೊಂದರೆ ಅನುಭವಿಸಬೇಕಾಗುತ್ತದೆ' ಎಂದು ಕೆಲವರು ಕೊಸರನ್ನು ಹಾಕುತ್ತಾರಲ್ಲಾ, ಹಾಗೆ. ಈ ಲೇಖನದಲ್ಲಿ 'ಗೇ'ತನವೆನ್ನುವುದು ಯಾಕೆ ದುಶ್ಚಟವಲ್ಲ ಎಂದು ವಿಶ್ಲೇಷಿಸಲು ಪ್ರಯತ್ನಿಸಿದ್ದೇನೆ. ನನಗೆ ಅನುಭವಜನ್ಯವಾದ ಗೇ ಜಗತ್ತನ್ನು ಕುರಿತು ಇಲ್ಲಿ ಮಾತಾಡಿದ್ದರೂ, ಈ ಲೇಖನವನ್ನು ಎಲ್ಲಾ ಕ್ವೀರ್ ಸಮುದಾಯಕ್ಕೂ ಅನ್ವಯಿಸಿ ಓದಿಕೊಳ್ಳಬಹುದು.

ಮೊದಲಿಗೆ ಚಟವೆಂದರೇನು ಎಂದು ತಿಳಿಯೋಣ. ಒಂದೇ ಕೆಲಸವನ್ನು ಅನವಶ್ಯಕವಾಗಿ ಮತ್ತೆ ಮತ್ತೆ ಮಾಡುತ್ತಿದ್ದರೆ ಆ ಗೀಳು ಚಟವೆಂದು ಕರೆಯಲ್ಪಡುತ್ತದೆ. ಈ ಚಟ ಸಾತ್ವಿಕವೂ ಆಗಿರಬಹುದು, ತಾಮಸವೂ ಆಗಿರಬಹುದು. ತಾಮಸ ಚಟಕ್ಕೆ 'ದುಶ್ಚಟ' ಎಂಬ ಪದವನ್ನು ಬಳಸುತ್ತೇವೆ.

ಸಾತ್ವಿಕ ಚಟದಿಂದ ಅಂತಹ ಸಮಸ್ಯೆಗಳೇನೂ ಇರುವುದಿಲ್ಲ. ಉದಾಹರಣೆಗೆ, ಕೆಲವರಿಗೆ ಮತ್ತೆ ಮತ್ತೆ ತಮ್ಮ ಒಟ್ಟು ಆಸ್ತಿಯನ್ನು ಲೆಕ್ಕ ಹಾಕಿಕೊಳ್ಳುವ ಚಟವಿರುತ್ತದೆ. ಇನ್ನೂ ಕೆಲವರು ಕೈಗಳನ್ನು ಮತ್ತೆ ಮತ್ತೆ ತೊಳೆದುಕೊಳ್ಳುತ್ತಾರೆ. ಇತ್ತೀಚೆಗೆ ಮೊಬೈಲ್ ನೋಡುವ ವ್ಯಸನವೂ ಕಾಣುತ್ತಿದೆ. ಇಂತಹ ಚಟಗಳು ತುಸು ಮಾನಸಿಕ ಒತ್ತಡವನ್ನು ಹೇರಿದರೂ, ದೈಹಿಕವಾಗಿ ತೊಂದರೆ ಮಾಡುವುದಿಲ್ಲ. ಆದ್ದರಿಂದ ಇವೆಲ್ಲ ಸಾತ್ವಿಕ ಚಟಗಳು.

ತಾಮಸ ಚಟಕ್ಕೆ ಬಲಿಯಾದ ವ್ಯಕ್ತಿ ದೈಹಿಕವಾಗಿಯೂ, ಆರ್ಥಿಕವಾಗಿಯೂ, ಸಾಮಾಜಿಕವಾಗಿಯೂ ತೊಂದರೆ ಅನುಭವಿಸುತ್ತಾನೆ ಮತ್ತು ತನ್ನನ್ನು ನಂಬಿಕೊಂಡವರಿಗೆ ತೊಂದರೆ ಕೊಡುತ್ತಾನೆ. ಉದಾಹರಣೆಗೆ, ಗುಟ್ಕಾ ಸೇವನೆ, ಹಲವು ನಶೆಗಳ ಬಳಕೆ, ಧೂಮಪಾನ, ಮದ್ಯಪಾನ, ಜುಗಾರಿ, ಇತ್ಯಾದಿಗಳು. ಸಮಾಜವು ಇಂತಹವನ್ನು 'ದುಶ್ಚಟ'ಗಳೆಂದು ಕರೆಯುತ್ತದೆ. ಅಂದರೆ ಯಾರೋ ಯಾರಿಗೋ ಕಲಿಸಿಕೊಟ್ಟ ನಂತರ ತಲೆದೋರುವ ವಿನಾಶಕಾರಿ ಚಟಗಳಿವು. ಅವುಗಳಿಂದ ಹೊರಬರುವುದು ಕಷ್ಟ. ಸಮಾಜದ ಬಹುತೇಕರು 'ಗೇ' ಸ್ವಭಾವವು ಇಂತಹ ದುಶ್ಚಟಕ್ಕೆ ಸೇರುತ್ತದೆ ಎಂಬ ಅಭಿಪ್ರಾಯ ವ್ಯಕ್ತಪಡಿಸುತ್ತಾರೆ. 'ಗೇ'ತನದ ಕಲ್ಪನೆಯೇ ಇಲ್ಲದ ಅಮಾಯಕ ಹುಡುಗನೊಬ್ಬನಿಗೆ ಯಾರೋ ಮತ್ತೊಬ್ಬ ಗೇ ಅದರ 'ರುಚಿ ಹತ್ತಿಸಿ ಬಿಡುತ್ತಾನೆ'. ಆಗಿನಿಂದ ಈ 'ಅಮಾಯಕ' ಹುಡುಗ ಗೇ ಬದುಕನ್ನು ಜೀವಿಸತೊಡಗುತ್ತಾನೆ. ಸಾಯುವ ತನಕವೂ ಅದು ಮುಂದುವರಿಯುತ್ತದೆ. ಇದರಲ್ಲಿ ಅವನದೇನೂ ತಪ್ಪಿರುವುದಿಲ್ಲ. ಗೇ ಗಳು ಡ್ರಾಕುಲಾ ಇದ್ದಂತೆ. ಒಂದು ಡ್ರಾಕುಲಾ ಮತ್ತೊಬ್ಬ ಸಾಮಾನ್ಯ ವ್ಯಕ್ತಿಗೆ ಹಲ್ಲೂರಿಸಿ ರಕ್ತ ಹೀರಿದರೆ ತೀರಿತು, ಅವನೂ ಡ್ರಾಕುಲಾ ಆಗಿ ಬಿಡುತ್ತಾನಲ್ಲ, ಅಂತಹದು ಎಂದು ಅವರ ಕಲ್ಪನೆ.

ದುಶ್ಚಟಗಳಿಗೆ ಮನುಷ್ಯ ಯಾಕೆ ಬಲಿಯಾಗುತ್ತಾನೆ ಎಂದು ಯೋಚಿಸಿ. ಯಾವುದು ಸದ್ಯದ ವಾಸ್ತವದ ಸಂಗತಿಗಿಂತಲೂ ಹೆಚ್ಚಿನ ಸಂತೋಷವನ್ನೂ, ಕಾಲ್ಪನಿಕ ನಶೆಯನ್ನು ನೀಡುತ್ತದೋ ಅಂತಹವುಗಳಿಗೆ ತನ್ನ ದುರ್ಬಲ ಗಳಿಗೆಗಳಲ್ಲಿ ಮನುಷ್ಯ ಬಲಿಯಾಗುತ್ತಾನೆ. ಮದ್ಯಪಾನ ಮಾಡಿದಾಗ ಅದರ ನಶೆ ಇಳಿಯುವವರೆಗೆ ವ್ಯಕ್ತಿಯು ವಾಸ್ತವದ ಸಮಸ್ಯೆಗಳಿಂದ ಮುಕ್ತವಾಗುತ್ತಾನೆ. ಈ ನಶೆ ಎನ್ನುವುದು ಮನೆಯಲ್ಲಿ ಶ್ಯಾವಿಗೆ ಪಾಯಸ ಕುಡಿದರೆ ಸಿಗುವುದಿಲ್ಲವಾದ್ದರಿಂದ ಹೊರಗೆ ಹುಡುಕುತ್ತಾನೆ. ಇದೇ ರೀತಿ ಜುಗಾರಿಯ ಚಟವೂ ಅವನ ಸ್ಪರ್ಧಾಮನೋಭಾವವನ್ನು ಸಂತೃಪ್ತಿಪಡಿಸುವ, ಸುಲಭವಾಗಿ ಹಣ ಸಂಪಾದಿಸಬೇಕೆಂಬ ಹಂಬಲವನ್ನು ಪೂರೈಸುತ್ತದೆ. ವಾಸ್ತವ ಬದುಕಿನಲ್ಲಿ ಅಂತಹುದು ಅವನಿಗೆ ಕಷ್ಟ.

ಆದರೆ, ಗೇ ಕೂಡುವಿಕೆಯಿಂದ ಇಂತಹ ಯಾವುದೇ ಲಾಭ 'ಗೇ' ಅಲ್ಲದ ಹುಡುಗನಿಗೆ ದಕ್ಕುವುದಿಲ್ಲ. ಗೇ ಹುಡುಗನಿಗೆ ಮನೆಯಲ್ಲಿ ಮದುವೆ ಮಾಡಿಕೊಡಲು ಪ್ರಯತ್ನಗಳು ನಡೆಯುತ್ತವೆ. ಹೆಣ್ಣಿನೊಡನೆ ಕೂಡುವುದರಲ್ಲೇ ದೊಡ್ಡ ಆನಂದ ಸಿಗುವುದಾದರೆ ಅವನು ಗಂಡಿನ ಬಳಿಗೆ ಯಾಕೆ ಹೋಗುತ್ತಾನೆ? ಯಾರೋ ಅವನಿಗೆ ಗಂಡಿನ ಸಹವಾಸ ('ದುಶ್ಚಟ') ಕಲಿಸಿದ್ದರೆಂದರೂ, ಜೀವಮಾನವಿಡೀ ಅವನು ಗಂಡಿಗಾಗಿ ಏಕೆ ಹಂಬಲಿಸುತ್ತಾನೆ? ಮನೆಯಲ್ಲಿಯೇ ನಶೆ ಸಿಗುವುದಾದರೆ ಪಬ್‌ಗೆ ಹೋಗಿ ಯಾರಾದರೂ ಕುಡಿಯುತ್ತಾರೆ ಯಾಕೆ? ಎಷ್ಟೋ ಮದುವೆಯಾದ ಗಂಡಸರು ಗೇ ಹುಡುಗರನ್ನು ಕೂಡಲು ಅರಸಿ ಒದ್ದಾಡುತ್ತಾರೆ. ಹಾಗಂತ ಗಂಡಿನೊಡನೆ ಕೂಡುವ ಸುಖವು ಹೆಣ್ಣಿನೊಡನೆ ಕೂಡುವ ಸುಖಕ್ಕಿಂತಾ ಹೆಚ್ಚು ಎಂದರೆ ಅದೂ ತಪ್ಪಾಗುತ್ತದೆ. ಅದೇ ಸತ್ಯವಾಗಿದ್ದರೆ ಜಗತ್ತಿನ ಗಂಡಸರೆಲ್ಲಾ 'ಗೇ'ಗಳಾಗಲು ಹಾತೊರೆಯುತ್ತಿದ್ದರು. ಇದು ಅವರವರ ಸ್ವಭಾವ. ಹುಟ್ಟಿನಿಂದ ಬರುವ ಗುಣ.

ಸಲಿಂಗರತಿಯಿಂದ ದೇಹಾರೋಗ್ಯ ಕೆಡುತ್ತದೆಯೆ ಅಥವಾ ಆರ್ಥಿಕ ತೊಂದರೆ ಅನುಭವಿಸುತ್ತಾನೆಯೆ ಎಂದು ನೋಡಿದರೆ ಅದೂ ಇಲ್ಲ. ಅಸುರಕ್ಷಿತ ಲೈಂಗಿಕ ಸಂಪರ್ಕ ಮಾಡಿದರೆ, ಹೆಣ್ಣಾಗಲಿ ಅಥವಾ ಗಂಡಾಗಲಿ, ಗುಪ್ತರೋಗಗಳು ಬರುತ್ತವೆ. ಅದಕ್ಕೆ ನಾವು ಗೇ ಬದುಕನ್ನು ಆರೋಪಿಸುವಂತಿಲ್ಲ. ಎಷ್ಟೋ ಬಾರಿ ಕೂಡುವಿಕೆಯಾದ ನಂತರ ಗೇ ಹುಡುಗರು ಸಂತೋಷದಿಂದ ಹಾಡುವುದನ್ನು ಗಮನಿಸಿದ್ದೇನೆ. ಅಂದರೆ ಮಾನಸಿಕವಾಗಿಯೂ ಕೂಡುವಿಕೆ ಅವರಿಗೆ ಚೇತೋಹಾರಿಯಾದದ್ದೇ ಆಗಿದೆ. ಆರ್ಥಿಕ ಹೊರೆಯಂತೂ ಇಲ್ಲವೇ ಅಲ್ಲ. ತನ್ನಂತೆಯೇ ಗಂಡನ್ನು ಕೂಡುವ ಅಭಿರುಚಿ ಹೊಂದಿರುವ ಸಾವಿರಾರು ಜನರು ನಮ್ಮ ಸುತ್ತಮುತ್ತಲೇ ಇರುತ್ತಾರೆ. ಈ ಡಿಜಿಟಲ್ ಯುಗದಲ್ಲಿ ಅವರನ್ನು ಹುಡುಕುವುದೂ ಕಷ್ಟವಲ್ಲ. ತಮ್ಮ ಬಯಕೆ ತೀರಿಸಿಕೊಳ್ಳಲು ಅವರು ಹಣ ಕೊಡುವ ಅವಶ್ಯಕತೆ ಬರುವುದಿಲ್ಲ.

ಯಾವುದೇ ರೀತಿಯಿಂದ ನೋಡಿದರೂ ಗೇ ಎನ್ನುವುದು ಒಂದು ಸ್ವಭಾವವೇ ಹೊರತು ದುಶ್ಚಟವಲ್ಲ. ವ್ಯಕ್ತಿಯೊಬ್ಬನಿಗೆ ಬಲವಂತದಿಂದ ಲೈಂಗಿಕ ಆಸಕ್ತಿಯನ್ನು ರೂಢಿಸುವುದಾದರೂ ಹೇಗೆ? ಅದು ಅಷ್ಟು ಸುಲಭವಾಗಿದ್ದರೆ ಗೇ ವ್ಯಕ್ತಿಗೆ ಹೆಣ್ಣುಗಳ ರುಚಿ ತೋರಿಸಿ ಸಂಪೂರ್ಣವಾಗಿ 'ಸ್ಟ್ರೇಟ್' ಮಾಡಬಹುದಿತ್ತಲ್ಲವೆ? ಇಡೀ ಸಮಾಜದ ಕಡೆಗಣ್ಣಿಗೆ ಗುರಿಯಾಗಿ ಯಾರಿಗಾದರೂ ಗೇ ಬದುಕು ಬದುಕುವ ಅವಶ್ಯಕತೆಯಾದರೂ ಏನಿರುತ್ತದೆ? ಅವಕಾಶ ಸಿಕ್ಕರೆ ಸಾಕು 'ಗೇ'ತನದಿಂದ ಹೊರಬಂದು ಸಮಾಜದ ರೂಢಿಯಂತೆ ಮದುವೆ, ಮಕ್ಕಳು ಮಾಡಿಕೊಂಡು ಅವನೂ ಸುಖವಾಗಿ ಇರಲು ಬಯಸುವುದಿಲ್ಲವೆ? ಅದು ಸಾಧ್ಯವಿಲ್ಲವೆಂಬ ಕಾರಣಕ್ಕೇ 'ಗೇ'ಗಳ ಕುರಿತು ಸಮಾಜಕ್ಕೆ ತಿಳಿಸಿಕೊಡುವುದು ಅಗತ್ಯವಿದೆ.

ಅನಿವಾರ್ಯದ ಮೈಥುನ ಕತೆಗಳು ಬೇರೆ. ಉದಾಹರಣೆಗೆ ಸೈನ್ಯದಲ್ಲೋ, ಜೈಲಿನಲ್ಲೋ ಬರೀ ಗಂಡಸರೇ ಇದ್ದು ಹೆಣ್ಣಿನ ಸಂಪರ್ಕವೇ ಇಲ್ಲದಿದ್ದಾಗ ಅವರು ಅಂತಿಮ ಆಯ್ಕೆಯಾಗಿ ತಮ್ಮ ಕಾಮತೃಷೆಯನ್ನು ಗಂಡಿನ ಜೊತೆ ತೀರಿಸಿಕೊಂಡಿರುವ ಸಾಧ್ಯತೆ ಇರುತ್ತದೆ. ಆದರೆ, ಒಮ್ಮೆ ಅಲ್ಲಿಂದ ಹೊರಬಂದು ಅವನ ಆಯ್ಕೆಯ ಹೆಣ್ಣುಗಳು ಸಿಕ್ಕಾಗ ಅವನು ಅಪ್ಪಿತಪ್ಪಿಯೂ ಗಂಡಿನ ಕಡೆ ನೋಡಲಾರ. ಇದೇ ರೀತಿ ಗೇ ಹುಡುಗನೊಬ್ಬನನ್ನು ಬರೀ ಹೆಂಗಸರೇ ಇರುವ ಪರಿಸರದಲ್ಲಿ ಇಟ್ಟುಬಿಟ್ಟರೆ ಅವನೂ ಬೇರೆ ದಾರಿಯಿಲ್ಲದೆ ಹೆಣ್ಣನ್ನು ಕೂಡಬಹುದೇನೋ? ಆದರೆ, ಒಮ್ಮೆ ಗಂಡಿನ ಸಂಪರ್ಕ ಸಿಕ್ಕ ತಕ್ಷಣ ಅವನು ಹೆಣ್ಣಿನ ಕಡೆ ಕಣ್ಣೆತ್ತಿಯೂ ನೋಡುವುದಿಲ್ಲ. ಕೆಲವೊಬ್ಬ ಗಂಡಸರಿಗೆ ಹೆಣ್ಣು ಮತ್ತು ಗಂಡು, ಇಬ್ಬರ ಮೇಲೂ ಸಮಾನ ದೈಹಿಕ ಆಸಕ್ತಿ ಇರುತ್ತದೆ. ಎರಡನ್ನೂ ಅವರು ಬಯಸುತ್ತಿರುತ್ತಾರೆ. ಆದರೆ, ಸಮಾಜವನ್ನು ಎದುರಿಸುವ ಧೈರ್ಯವಿಲ್ಲದೆ ಗಂಡಿನ ಮೇಲಿರುವ ಬಯಕೆಯನ್ನು ಹತ್ತಿಕ್ಕಿಕೊಂಡು ಜೀವನವಿಡೀ ಹೆಣ್ಣಿನೊಡನೆ ಬದುಕುತ್ತಾರೆ. ಟ್ಯಾಬೂ ಸಂಸ್ಕೃತಿಯಲ್ಲಿ ಬದುಕುವುದಕ್ಕೆ ವ್ಯಕ್ತಿಗೆ ಸಾಕಷ್ಟು ಧೈರ್ಯ ಇರಬೇಕಾಗುತ್ತದೆ.

ಮತ್ತೆ ಕೆಲವರು ಗೇ ಬದುಕು ಅನೈಸರ್ಗಿಕ ಎನ್ನುವ ವಾದ ಹಿಡಿದು ಬರುತ್ತಾರೆ. ನಾವು ಸುಮ್ಮನೆ ಗೂಗಲ್ ಮಾಡಿದರೆ ತಿಳಿಯುವ ಸಂಗತಿಯೇನೆಂದರೆ, ಜಗತ್ತಿನಲ್ಲಿ 1,500ಕ್ಕೂ ಹೆಚ್ಚು ಪ್ರಾಣಿ-ಪಕ್ಷಿ ಪ್ರಭೇದದಲ್ಲಿ ವಿಜ್ಞಾನಿಗಳು ಸಲಿಂಗರತಿಯನ್ನು ಗುರ್ತಿಸಿದ್ದಾರೆ. ಈ ವಿಷಯ ಅವರಿಗೆ ಸ್ಪಷ್ಟಪಡಿಸಿದೊಡನೆ 'ಗಂಡು-ಹೆಣ್ಣು ಕೂಡುವ ಮುಖ್ಯ ಉದ್ದೇಶ ಸಂತಾನೋತ್ಪತ್ತಿ' ಎಂದು ಮುಂದುವರಿಯುತ್ತಾರೆ. ಅದನ್ನೂ ಚರ್ಚಿಸೋಣ. ಸಂತಾನವಾಗಲು ಪ್ರಾಪ್ತ ಗಂಡು-ಹೆಣ್ಣುಗಳು ಸರಿಯಾದ ಸಮಯದಲ್ಲಿ ಕೂಡಿದರೆ ಗರ್ಭ ನಿಂತು ಮಗುವಾಗುತ್ತದೆ. ಅಂದರೆ, ಒಂದೆರಡು ಕೂಡುವಿಕೆಯಿಂದ ಕೂಡುವಿಕೆಯ ಉದ್ದೇಶ ಪೂರ್ಣಗೊಳ್ಳುತ್ತದೆ. ಹಾಗಿದ್ದರೆ ಸಾಯುವ ತನಕ ತನ್ನ ಸಂಗಾತಿಯೊಡನೆ ಕೂಡಲು ಮನುಷ್ಯ ಏಕೆ ಹಾತೊರೆಯುತ್ತಾನೆ? ಇದಕ್ಕೆ ಉತ್ತರ ಸ್ಪಷ್ಟವಾಗಿದೆ. ಕೂಡುವಿಕೆಯ (ನಾಗರಿಕ ರೀತಿಯಲ್ಲಿ 'ಮದುವೆ') ಮುಖ್ಯ ಉದ್ದೇಶ ದೈಹಿಕ ಸುಖವನ್ನು ಹೊಂದುವ ಬಯಕೆಯಾಗಿದೆ. ತಿನ್ನುವುದಕ್ಕೆ, ನಿದ್ರಿಸುವುದಕ್ಕೆ ಮನುಷ್ಯ ಹೇಗೆ ಒದ್ದಾಡುತ್ತಾನೋ ಅಂತಹದೇ ತೀವ್ರತೆಯಲ್ಲಿ ಕೂಡುವಿಕೆಗೂ ಹಂಬಲಿಸುತ್ತಾನೆ. ಈ ಕೂಡುವಿಕೆಗೆ ಸಂತಾನ ಎನ್ನುವ ಒಂದು ಸುಂದರ ಉಪ ಉತ್ಪನ್ನವಿದ್ದರೂ, ಸಂತಾನವೇ ಕೂಡುವಿಕೆಯ ಮುಖ್ಯ ಗುರಿಯಲ್ಲ ಎಂಬುದು ನಮ್ಮ ಅರಿವಿನಲ್ಲಿರಬೇಕು.

ಇನ್ನು ಕೊನೆಯ ಅಸ್ತ್ರವಾಗಿ 'ಗೇ'ಗಳು ಚಿಕ್ಕ ಹುಡುಗರನ್ನು ತಮ್ಮ ಕಾಮತೃಷೆಗೆ ಬಳಸಿಕೊಳ್ಳುತ್ತಾರೆ ಎನ್ನುವ ಆಪಾದನೆ. ಇದು ಸುಳ್ಳಲ್ಲ. ಕೆಲವೊಬ್ಬರು ಹಿರಿಯರು ಎಳೆಯ ಪ್ರಾಯದ ಹುಡುಗರನ್ನು ತಮ್ಮ ಕಾಮತೃಷೆಗೆ ಬಳಸಿಕೊಂಡ ಉದಾಹರಣೆಗಳಿವೆ. ಇದು ವಿಕೃತಿ ಮತ್ತು ಅಕ್ಷಮ್ಯ ಅಪರಾಧ. ಅಂತಹವುಗಳನ್ನು ಪೊಲೀಸ್ ಇಲಾಖೆಗೆ ರಿಪೋರ್ಟ್ ಮಾಡಬೇಕು. ಆದರೆ, ಇಂತಹ ವಿಕೃತಿಗಳು ಎಲ್ಲಾ ಸಮುದಾಯದಲ್ಲೂ ಇರುತ್ತವಲ್ಲವೆ? ದಿನನಿತ್ಯ ವೃತ್ತಪತ್ರಿಕೆಗಳಲ್ಲಿ ಅಪ್ರಾಪ್ತ ವಯಸ್ಸಿನ ಬಾಲೆಯರನ್ನು ಗಂಡಸರು ಅತ್ಯಾಚಾರ ಮಾಡಿದ, ಮಗಳನ್ನೇ ಅಪ್ಪನೊಬ್ಬ ತನ್ನ ಖೆಡ್ಡಾಕ್ಕೆ ಕೆಡವಿಕೊಂಡ ವರದಿಗಳು ಬರುತ್ತಲೇ ಇರುತ್ತವೆ. ಹಾಗಂತ ಎಲ್ಲಾ ಗಂಡಸರೂ ಬಾಲಕಾಮುಕರು ಎಂದು ಹೇಳಲು ಸಾಧ್ಯವೆ?

ಸುಭಾಷಿತ

ಕಲಿತ ವಿದ್ಯೆಯನ್ನು ಧಾರಾಳವಾಗಿ ಹತ್ತು ಜನಕ್ಕೆ ಹೇಳಿ ಕೊಡಬೇಕು; ನಾನು ಕಲಿತದ್ದು ಮುಗಿಯಿತು ಎಂಬ ಅಹಂಭಾವ ಬಿಟ್ಟು ಸದಾ ಕಲಿಯುತ್ತಿರಬೇಕು.

-ಅ.ನ. ಕೃಷ್ಣರಾಯ

ವಾಚಕರ ವಾಣಿ

ತ್ಯಾಜ್ಯ ಗುತ್ತಿಗೆ: ನೈಸ್ ರಸ್ತೆ ಕಥೆ ಆಗದಿರಲಿ

ದೆಹಲಿ ಮಹಾನಗರ ಪಾಲಿಕೆಯು ಪ್ರತಿದಿನ ಸುಮಾರು 12 ಸಾವಿರ ಟನ್‌ನಷ್ಟು ಘನತ್ಯಾಜ್ಯ ನಿರ್ವಹಣೆ ಮಾಡುತ್ತದೆ. ಮುಂಬೈ ಮಹಾನಗರ ಪಾಲಿಕೆಯು 8 ಸಾವಿರ ಟನ್‌ನಷ್ಟು ನಿರ್ವಹಣೆ ಮಾಡುತ್ತಿದೆ. ಈ ಎರಡೂ ನಗರಗಳು ಪ್ರತಿ ಐದರಿಂದ ಏಳು ವರ್ಷಗಳಲ್ಲಿ ಗುತ್ತಿಗೆ ನವೀಕರಿಸುವ ಮಾದರಿ ಅಳವಡಿಸಿಕೊಂಡಿವೆ. ವಿಶೇಷ ಸಂದರ್ಭದಲ್ಲಿ ಪಿಪಿಪಿ ಮತ್ತು ಡಿಬಿಎಫ್‌ಒಟಿ (ಡಿಸೈನ್, ಬಿಲ್ಡ್, ಫೈನಾನ್ಸ್, ಆಪರೇಟ್ ಅಂಡ್ ಟ್ರಾನ್ಸ್‌ಫರ್) ಗುತ್ತಿಗೆ ಅವಧಿಯನ್ನು 15 ವರ್ಷಕ್ಕೆ ಸೀಮಿತಗೊಳಿಸಿವೆ. ಆದರೆ, ಬೆಂಗಳೂರು ವ್ಯಾಪ್ತಿಯಲ್ಲಿ ಮೂವತ್ತು ವರ್ಷಗಳ ದೀರ್ಘ ಕಾಲದ ಗುತ್ತಿಗೆಯನ್ನು ಒಬ್ಬರಿಗೆ ನೀಡುವುದು ಸರಿಯಲ್ಲ. ಅವರು ಗುಣಮಟ್ಟದ ಸೇವೆ ನೀಡದಿದ್ದರೆ ಬದಲಾಯಿಸುವ ಅವಕಾಶದಿಂದ ವಂಚಿತವಾಗುವ ಸಾಧ್ಯತೆ ಇದೆ. ಮುಂದಿನ ದಿನಗಳಲ್ಲಿ ತ್ಯಾಜ್ಯ ಸಂಸ್ಕರಿಸಲು ಬರಬಹುದಾದ ಹೊಸ ತಂತ್ರಜ್ಞಾನವನ್ನು ಅಳವಡಿಸಿಕೊಳ್ಳಲು ಅಡ್ಡಿಯಾಗಲಿದೆ. ಇದು ಇನ್ನೊಂದು ನೈಸ್ ರಸ್ತೆಯ ಕಥೆ ಆಗದಿರಲಿ.

ತಿಮ್ಮ ನಾಯಕ್ ಸಿಂಗಟಗೆರೆ, ಬೆಂಗಳೂರು

'ಯುವನಿಧಿ' ವಿಳಂಬ: ತಪ್ಪದ ಸಂಕಷ್ಟ

ರಾಜ್ಯ ಸರ್ಕಾರದ 'ಯುವನಿಧಿ' ಯೋಜನೆಯ ಹಣ ಕಳೆದ ನಾಲ್ಕು ತಿಂಗಳಿಂದ ಫಲಾನುಭವಿಗಳ ಖಾತೆಗೆ ಜಮೆಯಾಗಿಲ್ಲ. ಇದರಿಂದ ನಿರುದ್ಯೋಗಿಗಳು ಸಂಕಷ್ಟ ಅನುಭವಿಸುವಂತಾಗಿದೆ. ಹಲವರು ಬ್ಯಾಂಕ್ ಖಾತೆ, ಇ-ಕೆವೈಸಿ ಸೇರಿ ದಾಖಲೆಗಳ ಪರಿಶೀಲನೆಯನ್ನು ಪೂರ್ಣಗೊಳಿಸಿದ್ದರೂ ಹಣ ಪಾವತಿಯಾಗಿಲ್ಲ. ಬಾಡಿಗೆ, ಪ್ರಯಾಣ ಹಾಗೂ ದೈನಂದಿನ ಖರ್ಚುಗಳಿಗೆ ಈ ಹಣವನ್ನೇ ಫಲಾನುಭವಿಗಳು ನಂಬಿಕೊಂಡಿದ್ದಾರೆ. ಸರ್ಕಾರ ತಕ್ಷಣವೇ ಬಾಕಿ ಹಣವನ್ನು ಬಿಡುಗಡೆಗೊಳಿಸಬೇಕು. ಪ್ರತಿ ತಿಂಗಳ ನಿಗದಿತ ದಿನದಂದು ಹಣ ಜಮೆ ಮಾಡಲೂ ಕ್ರಮವಹಿಸಬೇಕು.

ಸಂತೋಷ್ ಪೂಜಾರಿ, ವಿಜಯಪುರ

'ಸಿಜೆಪಿ': ವಾಸ್ತವದ ಅಭಿವ್ಯಕ್ತಿ ಆಗಲಿ

'**ಭಾರತದ** ಜಿರಲೆಗಳು ಮತ್ತು ನಾವು' ಲೇಖನವು (ಲೇ: ನಾರಾಯಣ ಎ., ಪ್ರ.ವಾ., ಮೇ 26) ದೇಶದಲ್ಲಿನ ವಾಸ್ತವ ಚಿತ್ರಣವನ್ನು ತೆರೆದಿಟ್ಟಿದೆ. ಸೆಕ್ಯುಲರ್ ಮತ್ತು ಸಮಾಜವಾದಿ ಮನಃಸ್ಥಿತಿಯವರ ಆಲಸ್ಯ, ನಿರ್ಲಕ್ಷ್ಯದ ಬಗ್ಗೆ ಸರಿಯಾಗಿಯೇ ಚಾಟಿ ಬೀಸಿದೆ. ಜಡಗಟ್ಟಿದ ಯುವಪೀಳಿಗೆಯನ್ನು ಕೋಮುವಾದದ ಕಡೆಗೆ ಸೆಳೆದುಕೊಂಡು ಸಮಾಜವಿದ್ರೋಹಿಗಳಾದ ಒಂದು ಜನರೇಷನ್ ಅನ್ನೂ ನೋಡಿಯಾಗಿದೆ. ಹಾಗಾಗಿ, 'ಸಿಜೆಪಿ' ಆಶಾದಾಯಕ ಆಗಿದೆ. ಎಲ್ಲಿಯವರೆಗೆ ಗಾಂಧಿ, ನೆಹರೂ ಮತ್ತು ಅಂಬೇಡ್ಕರ್ ಅವರನ್ನು ನಿಜಾರ್ಥದಲ್ಲಿ ಅಪ್ಪಿಕೊಂಡು ಮುಂದುವರಿಯುವರೋ ಅಲ್ಲಿಯವರೆಗೂ ಭಾರತೀಯರಾದ ನಾವು ಎಚ್ಚತ್ತು ಬೆಂಬಲ ಕೊಡಲೇಬೇಕು.

ವೃಂದಾ ಹೆಗಡೆ, ಸಾಗರ

ಎಸ್‌ಐಆರ್: ಸಂವಿಧಾನ ವಿರೋಧಿ ನಡೆ

ಸಾಂವಿಧಾನಿಕವಾಗಿ ಮತದಾರರ ಪಟ್ಟಿಗೆ ಸಂಬಂಧಿಸಿದಂತೆ 'ಐಆರ್' (ತೀವ್ರ ಪರಿಷ್ಕರಣೆ) ಮಾನ್ಯವಾಗಿದೆ. ಸ್ವಾತಂತ್ರ್ಯ ನಂತರದಿಂದ ಈವರೆಗೂ ನಡೆದುಕೊಂಡು ಬಂದಿದ್ದು ಒಂದು ಹಂತದಿಂದೀಚೆಗೆ ನಿಂತು ಹೋಗಿದೆ. ಈಗ ಅದಕ್ಕೆ ಆಳುವವರ ಪರವಾಗಿ ಚುನಾವಣೆಯಲ್ಲಿ ಸಹಾಯ ಮಾಡಬಹುದಾದ ಅಂಶಗಳನ್ನು ಸೇರಿಸಿ ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆ (ಎಸ್‌ಐಆರ್) ಎಂದು ಬದಲಾಯಿಸಲಾಗಿದೆ; ಇದರಡಿ ದೇಶವಾಸಿಗಳಿಗೆ ತಮ್ಮ ಪೌರತ್ವ ಸಾಬೀತುಪಡಿಸಿಕೊಳ್ಳಲು ಕೋರುತ್ತಿರುವುದು ಆತಂಕಕಾರಿ. 'ಎಸ್‌ಐಆರ್' ಎಂಬುದೇ ಅಸಾಂವಿಧಾನಿಕ ಪ್ರಕ್ರಿಯೆ ಎಂದು ಸಾಂವಿಧಾನಿಕ ತಜ್ಞರು ಹೇಳಿದ್ದಾರೆ. ಆದರೆ, ಸುಪ್ರೀಂ ಕೋರ್ಟ್ ಇದಕ್ಕೆ ಮಾನ್ಯತೆ ನೀಡಿರುವುದು ಅಚ್ಚರಿದಾಯಕ.

ರವಿಕಿರಣ್ ಶೇಖರ್, ಬೆಂಗಳೂರು

ದ್ವಿಭಾಷೆಯಲ್ಲಿ ಬೋಧನೆ ಸಮಂಜಸವೆ?

ಸರ್ಕಾರಿ ಶಾಲೆಗಳಲ್ಲಿ ಈ ವರ್ಷದಿಂದ 1ರಿಂದ 5ನೇ ತರಗತಿ ವಿದ್ಯಾರ್ಥಿಗಳಿಗೆ ಬೈಲಿಂಗ್ವಲ್ ಬೋಧನಾ ಪದ್ಧತಿ ಪ್ರಾರಂಭಿಸಲಾಗಿದೆ. ಅಂದರೆ ಪಠ್ಯಪುಸ್ತಕಗಳನ್ನು ಕನ್ನಡ ಮತ್ತು ಇಂಗ್ಲಿಷ್ ಭಾಷೆಯಲ್ಲಿ ಮುದ್ರಿಸಲಾಗಿದೆ. ವಿದ್ಯಾರ್ಥಿಗಳು ಎರಡು ಭಾಷೆಯ ಮೇಲೆ ಹಿಡಿತ ಸಾಧಿಸಬೇಕು ಎನ್ನುವ ಉದ್ದೇಶ ಸರಿ. ಆದರೆ, ಇಲ್ಲಿ ಹಲವು ಗೊಂದಲಗಳಿವೆ. ವಿದ್ಯಾರ್ಥಿಗಳು ಒಂದು ಭಾಷೆಯನ್ನು ಸಂಪೂರ್ಣವಾಗಿ ಅರ್ಥೈಸಿಕೊಳ್ಳುವ ಬದಲು ಗೊಂದಲಕ್ಕೆ ಸಿಲುಕಬಹುದು. ಶಿಕ್ಷಕರು ಎರಡು ಭಾಷೆಯ ಮೇಲೆ ಪ್ರಭುತ್ವ ಹೊಂದಿದ್ದರೆ ಬೋಧನೆ ಸುಲಭವಾಗುತ್ತದೆ; ಇಲ್ಲದಿದ್ದರೆ ವ್ಯರ್ಥವಾಗುತ್ತದೆ. ಶಿಕ್ಷಕರಿಗೆ ಈ ಬಗ್ಗೆ ತರಬೇತಿಯ ಅವಶ್ಯಕತೆ ಇದೆ. ಜೊತೆಗೆ ವಿದ್ಯಾರ್ಥಿಗಳು ಯಾವ ಮಾಧ್ಯಮದಲ್ಲಿ ಪರೀಕ್ಷೆ ಎದುರಿಸಬೇಕು ಎನ್ನುವ ಗೊಂದಲ ತಲೆದೋರಿದೆ. ಶಿಕ್ಷಣ ಇಲಾಖೆಯು ಈ ಗೊಂದಲಕ್ಕೆ ತೆರೆ ಎಳೆಯಬೇಕಿದೆ.

ಪ್ರೇಮಾನಂದ ಹಿರೇಮಠ, ಜಮಖಂಡಿ

ಸ್ಥಳಾಂತರ: ಸಂಕಟಕ್ಕೆ ಸಿಲುಕಿದ ಗಿರಿಜನರು

ಅರಣ್ಯ ಪ್ರದೇಶದಲ್ಲಿ ಬದುಕು ಕಟ್ಟಿಕೊಂಡಿರುವ ಗಿರಿಜನರಿಗೆ ಪರಿಹಾರ ನೀಡಿ ಮುಖ್ಯವಾಹಿನಿಗೆ ಕರೆತರಬೇಕೆಂಬ ವಿಚಾರ ಆಗಾಗ್ಗೆ ಮಾಧ್ಯಮಗಳಲ್ಲಿ ಪ್ರಸ್ತಾಪವಾಗುತ್ತದೆ. ದಶಕಗಳಿಂದಲೂ ಹಾಗೆ ಮುಖ್ಯವಾಹಿನಿಗೆ ತರಲ್ಪಟ್ಟ ಜನರ ಸ್ಥಿತಿಗತಿ ಹೇಗಿದೆ ಎಂಬುದನ್ನೂ ನೋಡಬೇಕಲ್ಲವೆ? ಬದಲಾದ ಪರಿಸ್ಥಿತಿಯಲ್ಲಿ ಕಾಡಿನಲ್ಲಿ ವಾಸಿಸುತ್ತಿರುವ ಕುಟುಂಬಗಳು ಕಾಡಿನಿಂದ ಹೊರಬಂದು ಬದುಕು ರೂಪಿಸಿಕೊಳ್ಳಬೇಕೆಂದು ಇಚ್ಛಿಸುವುದು ಸಹಜ. ಆದರೆ, ಅರಣ್ಯ ಪ್ರದೇಶಗಳಲ್ಲಿ ಕೃಷಿ ಮೂಲಕ ಬದುಕು ಕಟ್ಟಿಕೊಂಡಿರುವ ಬಹಳಷ್ಟು ಕುಟುಂಬಗಳಿಗೆ ಇನ್ನೂ ಜಮೀನಿನ ಹಕ್ಕುಪತ್ರ ನೀಡಿಲ್ಲ. ಅರಣ್ಯ ಕಾನೂನಿನ ತೊಡಕುಗಳು, ಸರ್ಕಾರದ ಇಚ್ಛಾಶಕ್ತಿ ಕೊರತೆ ಮತ್ತು ಈ ಸಮುದಾಯಗಳಿಗೆ ರಾಜಕೀಯ ಧ್ವನಿ ಇಲ್ಲದಿರುವುದೇ ಇದಕ್ಕೆ ಕಾರಣ. ಅವರಿಗೆ ಮೊದಲು ಹಕ್ಕುಪತ್ರ ನೀಡಬೇಕಿದೆ. ನಂತರ ಅವರು ಇಚ್ಛಿಸಿದರೆ ಗೌರವಯುತ ಪರಿಹಾರ ನೀಡಿ ಸ್ಥಳಾಂತರಿಸಬೇಕು. ಈಗ ಎದುರಿಸುತ್ತಿರುವ ಪರಿಸರದ ಬಿಕ್ಕಟ್ಟಿಗೆ ಅರಣ್ಯವಾಸಿಗಳು ಕಾರಣರಲ್ಲ; ನಾಗರಿಕ ಜಗತ್ತಿನ ಪಾಪಗಳಿಗೆ ಅವರನ್ನು ಬಲಿಪಶು ಮಾಡಬಾರದು.

ಗುರುಮೂರ್ತಿ ಜೋಗಿಬೈಲು, ಶೃಂಗೇರಿ

ಚುರುಮುರಿ

ಬ್ರ್ಯಾಂಡ್ ಬೆಂಗಳೂರು

• ಮಣ್ಣೆ ರಾಜು

'ರೀ, ಊರು ಉದ್ಧಾರ ಆಗಬೇಕೂಂದ್ರೆ ಏನು ಮಾಡಬೇಕು?' ಸುಮಿ ಕೇಳಿದಳು.

'ಆ ಊರಿಗೆ ಬೆಂಗಳೂರು ಅಂತ ಹೆಸರಿಟ್ಟರೆ ಸಾಕು ಉದ್ಧಾರ, ಅಭಿವೃದ್ಧಿ ಆಗುವುದಂತೆ, ಕೆಟ್ಟು ಪಟ್ಟಣ ಸೇರು ಅಂತಾರಲ್ಲಾ ಹಾಗೆ!' ಅಂದ ಶಂಕ್ರಿ.

'ತುಮಕೂರನ್ನು ಬೆಂಗಳೂರಿಗೆ ಸೇರಿಸಿ ಬೆಂಗಳೂರು ಉತ್ತರ ಜಿಲ್ಲೆ ಮಾಡಿ, ತುಮಕೂರಿಗೆ ಬೆಂಗಳೂರು ಬ್ರ್ಯಾಂಡ್ ವ್ಯಾಲ್ಯೂ ಕೊಡಿಸಿ ವಿದೇಶಿ ಹೂಡಿಕೆದಾರರ ಗಮನ ಸೆಳೆದು ತುಮಕೂರಿಗೆ ಸೆಳೆಯುತ್ತೇವೆ. ಆಗ ತುಮಕೂರು ಜಿಲ್ಲೆಯ ರೈತರ ಜಮೀನಿಗೆ ಒಳ್ಳೆ ಬೆಲೆ ಸಿಗುತ್ತದೆ, ರೈತರ ಲೈಫ್‌ಸ್ಟೈಲ್ ಸುಧಾರಿಸುತ್ತದೆ ಅಂತ ಹೋಂ ಮಿನಿಸ್ಟರ್ ಹೇಳ್ತಿದ್ದಾರೆ'.

'ಒಳ್ಳೆಯ ಬೆಲೆ ಕೇಳಲು ರೈತರು ತಮ್ಮ ಜಮೀನನ್ನು ಮಾರಾಟಕ್ಕಿಟ್ಟಿಲ್ಲ, ಜಮೀನಿನ ಬೆಲೆಗಿಂತ ಜಮೀನಿನಲ್ಲಿ ರೈತರು ಬೆಳೆಯುವ ಬೆಳೆಯ ಬೆಲೆ ಹೆಚ್ಚಾಗಬೇಕು ಅಲ್ವಾ?'

'ರಾಮನಗರವನ್ನು ಬೆಂಗಳೂರು ದಕ್ಷಿಣ ಮಾಡಿದಂತೆ ತುಮಕೂರನ್ನು ಬೆಂಗಳೂರು ಉತ್ತರ ಮಾಡಿದರೆ ಹೂಡಿಕೆದಾರರು ತುಮಕೂರಿನಲ್ಲೂ ಹೂಡಿಕೆ ಮಾಡ್ತಾರಂತೆ'.

'ತುಮಕೂರು ಮಾತ್ರ ಯಾಕೆ ಉದ್ಧಾರ ಆಗಬೇಕು, ಬೆಂಗಳೂರಿನ ನೆರೆ ಜಿಲ್ಲೆಗಳನ್ನೂ ಬೆಂಗಳೂರು ಪೂರ್ವ, ಪಶ್ಚಿಮ, ಉತ್ತರ, ದಕ್ಷಿಣ, ಈಶಾನ್ಯ, ಆಗ್ನೇಯ, ನೈರುತ್ಯ, ವಾಯವ್ಯ ಅಂತ ಮಾಡಬಹುದು'.

'ಕರ್ನಾಟಕವನ್ನು ಬೆಂಗಳೂರು ರಾಜ್ಯ ಅಂತ ಹೆಸರು ಬದಲಾಯಿಸಿದರೆ ಹೂಡಿಕೆದಾರರು ಬಂಡವಾಳ ಹಾಕಿ ವ್ಯವಹಾರ ಮಾಡಿಕೊಳ್ಳಲು ಸುಲಭವಾಗುತ್ತದೆ ಅಲ್ವೇನ್ರೀ?'

'ಬಂಡವಾಳಗಾರರು ಬಯಸಿದರೆ ಊರಿನ ಹೆಸರಿನ ಜೊತೆಗೆ ಊರಿನ ರಸ್ತೆ, ವೃತ್ತ, ಬೆಟ್ಟಗುಡ್ಡಗಳ ಹೆಸರನ್ನೂ ಬದಲಾಯಿಸಲು ನಾವು ತಯಾರಿರಬೇಕು'.

'ಹೌದು, ರೈತರು ಬರೀ ಅನ್ನದಾತರು. ಹೂಡಿಕೆದಾರರು-ಚಿನ್ನದಾತರು, ಅವರ ಅಭಿವೃದ್ಧಿ ಕಾರ್ಯಕ್ಕೆ ಬೆಟ್ಟಗುಡ್ಡ ಒಡೆದು ಬಟಾಬಯಲು ಮಾಡಿಕೊಡಲೂ ನಾವು ಸಿದ್ಧರಿರಬೇಕು, ಯಾಕೆಂದರೆ ಊರು ಉದ್ಧಾರ ಆಗಬೇಕಲ್ವಾ?!' ಎಂದು ಶಂಕ್ರಿ ನಕ್ಕ.

ಸಂಗತ

ಇದೀಗ 'ನೋಡು ಜನಮೇಜಯ' ಸಮಯ!

ಎಫ್‌ಎಂ ವಾಹಿನಿಗಳ 'ಕೇಳು ಜನಮೇಜಯ' ಕಾಲ ಮುಗಿಯುತ್ತಾ ಬಂದಂತಿದೆ. ಈ ಬೆಳವಣಿಗೆ ಮಾತಿನ ಕಾಲದ ಬೆಳವಣಿಗೆಯನ್ನು ಗಮನಕ್ಕೆ ತರುವಂತಿದೆ.

• ವಿಶಾಖ ಎನ್.

ದಿನವೂ ಬೆಳಗ್ಗೆ ಕಣ್ಣು ಹೊಸಕಿಕೊಳ್ಳುವ ಹೊತ್ತಿಗೆ ವಾರ್ತೆಯೊಂದಿಗೆ ಕಿವಿ ಅರಳುವಂತೆ ಮಾಡುತ್ತಿದ್ದ ಆಕಾಶವಾಣಿ, ಆಮೇಲೆ ಕೃಷಿಮಾತು, ಚಿತ್ರಗೀತೆಗಳವರೆಗೆ ಕೇಳುಗರನ್ನು ಹಿಡಿದಿಡುತ್ತಿತ್ತು. ಎರಡು ದಶಕಗಳ ಹಿಂದೆ ಎಫ್‌ಎಂ ವಾಹಿನಿಗಳು ಬಂದಾಗ ಮಾತೆಲ್ಲ ಗಿಲೀಟು, ಹೊಸತು! ಇಂಗ್ಲಿಷ್ ಮಿಶ್ರಿತ ಕನ್ನಡದ ಕುರಿತು ಹೊರಗೆಲ್ಲ ವಿಶ್ಲೇಷಣೆ. ಬದಲಾದ ನುಡಿಗಟ್ಟುಗಳ ಪಟ್ಟು ನೋಡಿ ವಯ್ಯಾಕರಣಿಗಳಿಗೂ ಪರಮಾಶ್ಚರ್ಯ. ಈಗ ಅಂತಹ ದನಿಗಳೂ ಉಡುಗಿಹೋಗುವ ಆತಂಕ ಎದುರಾಗಿದೆ. ರೇಡಿಯೊ ನಶಾ, ರೇಡಿಯೊ ಒನ್, ಫೀವರ್ ಎಫ್‌ಎಂ ಮುಂದಿನ ಜೂನ್ 15ರಿಂದ ಮಾತು ನಿಲ್ಲಿಸಲಿವೆ. 'ಮಾತಿಗಿದು ಕಾಲ' ಎನ್ನುವ ಮಾತು ಎಫ್‌ಎಂ ವಾಹಿನಿಗಳಿಗೆ ಹೊಂದುವಂತೆ ಕಾಣಿಸುತ್ತಿಲ್ಲ.

ರೇಡಿಯೊ ನಶಾ ಮುಂಬೈ ಶ್ರೋತೃಗಳಿಗೆ ಪರಿಚಿತ. ರೇಡಿಯೊ ಒನ್ ಕೇಳುಗರಲ್ಲಿ ದೆಹಲಿ, ಮುಂಬೈನವರಲ್ಲದೆ ಬೆಂಗಳೂರಿಗರೂ ಇದ್ದಾರೆ. ಫೀವರ್ ಎಫ್‌ಎಂ ವಾಹಿನಿಯು ಚೆನ್ನೈ ಮಂದಿಯ ಬದುಕಿನೊಟ್ಟಿಗೆ ಬೆಸೆದುಕೊಂಡಿತ್ತು. ಈ ಎಲ್ಲ ವಾಹಿನಿಗಳ ಪರವಾನಗಿಗಳನ್ನು ರದ್ದುಪಡಿಸುವುದಾಗಿ ಎಚ್‌ಟಿ ಮೀಡಿಯಾ ಲಿಮಿಟೆಡ್ ಇತ್ತೀಚೆಗಷ್ಟೇ ಪ್ರಕಟಿಸಿದೆ.

ಎಫ್‌ಎಂ ವಾಹಿನಿಗಳು ಮಹಾನಗರಗಳಲ್ಲಿ ಮನೆಯಿಂದ ಕಚೇರಿ ತಲಪುವ ಹಾಗೂ ಕೆಲಸ ಮುಗಿಸಿ ವಾಪಸ್ ಆಗುವ ಮಂದಿಯನ್ನೇ ಗುರಿ-ಗ್ರಾಹಕರನ್ನಾಗಿ ಒಳಗೊಂಡಿದ್ದವು. ಟ್ರಾಫಿಕ್ ಸಿಗ್ನಲ್‌ನಲ್ಲಿ ನಿಂತವರೂ ಎಫ್‌ಎಂ ಹಾಡುಗಳಿಗೆ ಕಿವಿಗೊಡುತ್ತಿದ್ದರು. ಬಿಎಂಟಿಸಿಯ ಆಯ್ದ ಬಸ್‌ಗಳಲ್ಲಿ ಎಫ್‌ಎಂ ಕಾರ್ಯಕ್ರಮಗಳು ಪ್ರಸಾರವಾಗುತ್ತಿದ್ದ ದಿನಗಳಿಗೂ ನಾವು ಸಾಕ್ಷಿಯಾಗಿದ್ದೇವೆ. ಚಿತ್ರಗೀತೆಗಳನ್ನು ದೊಡ್ಡ ಆಕರ್ಷಣೆಯಾಗಿ ಮಾಡಿಕೊಂಡು ಈ ವಾಹಿನಿಗಳು ಮಜಬೂತಾಗಿ ಬೆಳೆದವು. ಒಂದು ಕಾಲದಲ್ಲಿ ವಾಹಿನಿಗಳಲ್ಲಿ ಹಾಡು ಪ್ರಸಾರ ಮಾಡಲು ಚಿತ್ರರಂಗದವರೇ ಹಣ ಕೊಡಬೇಕಿತ್ತು. ಆಮೇಲೆ ಅದು ಉಲ್ಟಾ ಆಗುವ ಮಟ್ಟಕ್ಕೆ ವಹಿವಾಟು ಬದಲಾಯಿತು. ಕಾರ್ಪೊರೇಟ್ ಜಾಹೀರಾತುದಾರರಿಗೂ ಎಫ್‌ಎಂ ವಾಹಿನಿಗಳು ಹೊಸಕಾಲದವರನ್ನು ತಲಪುವ ಮಾಧ್ಯಮದಂತೆ ಕಾಣಿಸಿತು.

ಒಂದೇ ದಿಕ್ಕಿನ ಮನರಂಜನೆಯ ದಾರಿ ಹಿಡಿದದ್ದೇ ಈ ವಾಹಿನಿಗಳ ಮಿತಿಯೂ ಆಯಿತು. ಈಗ ಹಾಡುಗಳನ್ನು ಕೇಳಿಸಲು ಅಮೆಜಾನ್ ಮ್ಯೂಸಿಕ್, ಸ್ಪಾಟಿಫೈ ತರಹದ ವೇದಿಕೆಗಳಿವೆ. ಅವುಗಳಲ್ಲಿ ಜಾಹೀರಾತುಮುಕ್ತ ಸೇವೆ ಪಡೆಯಲು ಇಂತಿಷ್ಟು ಎಂದು ಶುಲ್ಕ ಕಟ್ಟಿದರೆ ಆಯಿತು. ಅವುಗಳಲ್ಲಿ ಲಭ್ಯವಿರುವ ಹಾಡುಗಳ ವೈವಿಧ್ಯಕ್ಕೆ ಎಫ್‌ಎಂ ಈಗ ಸಾಟಿಯೇ ಅಲ್ಲ. ರಾಜಕೀಯ ಚರ್ಚೆಗಳನ್ನು ನಡೆಸುವುದು, ಸುದ್ದಿಗಳನ್ನಷ್ಟೇ ಪ್ರಸಾರ ಮಾಡುವುದರಿಂದ ಎಫ್‌ಎಂ ವಾಹಿನಿಗಳನ್ನು ಮೊದಲಿನಿಂದಲೇ ನಿರ್ಬಂಧಿಸಲಾಯಿತು. ಆದಾಗ್ಯೂ ಅರಿವಿಗೆ ಪೂರಕವಾದ ಕೆಲವು ಪ್ರಮುಖ ಸಮಕಾಲೀನ ವಿದ್ಯಮಾನಗಳನ್ನು ರೇಡಿಯೊ ಜಾಕಿಗಳು (ಆರ್‌ಜೆ) ದಾಟಿಸುತ್ತಾ ಬಂದರು. ಆರ್‌ಜೆಗಳ ವಾಕ್ಚಾತುರ್ಯದ ಮೇಲೆಯೇ ಎಫ್‌ಎಂ ವಾಹಿನಿಗಳ ಜನಪ್ರಿಯತೆ ವಿಸ್ತಾರಗೊಂಡ ಹಲವು ಉದಾಹರಣೆಗಳಿವೆ.

ಈಗ 'ಕೇಳು ಮಾಧ್ಯಮ'ಕ್ಕೆ ಹಲವು ಪರ್ಯಾಯಗಳಿವೆ. ಪಾಡ್‌ಕಾಸ್ಟ್‌ಗಳು ಅಭಿರುಚಿಗೆ ತಕ್ಕ ಹಲವು ವಿಷಯಗಳನ್ನು ಪೂರೈಸುತ್ತಿವೆ. ಅಂಗೈ ಮೇಲಿನ ಮೊಬೈಲ್‌ನಲ್ಲಿ ಆಯಾ ವ್ಯಕ್ತಿಯ ಆಸಕ್ತಿಗೆ ತಕ್ಕಂತಹ ವಿಷಯಗಳೇ ರೀಲ್ಸ್ ರೂಪದಲ್ಲಿ ಪ್ರವಹಿಸುತ್ತವೆ. ಸಂಗೀತ, ಸಾಹಿತ್ಯ, ಹಾಸ್ಯ, ರಾಜಕೀಯ ವಿದ್ಯಮಾನ, ನೃತ್ಯ, ಜೀವನಶೈಲಿಗೆ ಬೇಕಾದ ಸಲಹೆಗಳು, ವೈದ್ಯರ ಸೂಚನೆಗಳು, ವಿಜ್ಞಾನದ ಶೋಧಗಳು, ಸಾಧಕರ ಬದುಕಿನ ಪರಿಚಯ, ಕೃಷಿ ಮಾಹಿತಿ, ವೈಯಕ್ತಿಕ ಹಣಕಾಸು ನಿರ್ವಹಣೆಯ ಮಾರ್ಗಗಳು, ವನಿತಾ ವಿಷಯ... ಹೀಗೆ ಎಲ್ಲಕ್ಕೂ ಪ್ರತ್ಯೇಕವಾದ ಪಾಡ್‌ಕಾಸ್ಟ್‌ಗಳಿವೆ. ಆಹಾರ, ಆರೋಗ್ಯ, ವ್ಯಾಯಾಮಕ್ಕೆ ಸಂಬಂಧಿಸಿದ ಮಾಹಿತಿಯ ವಿಡಿಯೊ, ಆಡಿಯೊಗಳಂತೂ ಸಾಕಷ್ಟಿವೆ. ಯೂಟ್ಯೂಬ್ ತರಹದ ವೇದಿಕೆಯಲ್ಲೂ ಈಗ ಶಾರ್ಟ್ಸ್ ರೂಪದಲ್ಲಿ ಚುಟುಕು ವಿಡಿಯೊಗಳು ನೋಡಲು ಸಿಗುತ್ತಿವೆ. 'ಕೇಳು ಮಾಧ್ಯಮ'ವು ನೇಪಥ್ಯಕ್ಕೆ ಸರಿದು, 'ನೋಡು ಮಾಧ್ಯಮ'ವು ವ್ಯಾಪಕವಾಗಿರುವುದೇ ಎಫ್‌ಎಂ ವಾಹಿನಿಗಳು ಸಂಕಷ್ಟದ ಪರಿಸ್ಥಿತಿಗೆ ಬರಲು ಕಾರಣ.

ರೆಡ್ ಎಫ್‌ಎಂನ ಸಿಒಒ ನಿಶಾ ನಾರಾಯಣನ್ ಪ್ರಕಾರ, ಭಾರತದಲ್ಲಿ ಆಕಾಶವಾಣಿ ಹಾಗೂ ಎಫ್‌ಎಂ ವಾಹಿನಿಗಳ ಶ್ರೋತೃಗಳ ಸಂಖ್ಯೆ 40 ಕೋಟಿಗೂ ಹೆಚ್ಚು. ವಿಶ್ವದಲ್ಲೇ ಅತಿಹೆಚ್ಚು ಕೇಳುಗರು ಇರುವುದು ಇಲ್ಲಿಯೇ. ಆದರೆ, ಇಲ್ಲಿನ ಶ್ರೋತೃಗಳಿಗೆ ಕೇವಲ ಹಾಡುಗಳನ್ನು ಉಣಬಡಿಸುವುದನ್ನೇ ಮುಖ್ಯ ಕಾರ್ಯತಂತ್ರ ಆಗಿಸಿಕೊಂಡಿದ್ದೇ ಮಿತಿಗೆ ಕಾರಣ ಆಯಿತು. ಹಾಡುಗಳನ್ನು ಒದಗಿಸುವ ಒಟಿಟಿಗಳ ಜೊತೆಗೆ ಈ ವಾಹಿನಿಗಳು ಪೈಪೋಟಿ ನಡೆಸುವುದು ಸಾಧ್ಯವೇ ಇಲ್ಲ.

ಮೊದಲಿಗೆ ಎಫ್‌ಎಂ ವಾಹಿನಿಗಳು ಖರ್ಚು ಕಡಿಮೆ ಮಾಡಿಕೊಳ್ಳಲು ಉದ್ಯೋಗ ಕಡಿತ ಮಾಡಿದವು. ಹರಾಜು ಆಧರಿತ ಶುಲ್ಕ ಪಾವತಿ, ಪರವಾನಗಿ ನೆಚ್ಚಿಕೊಂಡ ವ್ಯವಸ್ಥೆ, ಆದಾಯ ಹಂಚಿಕೆಯ ವಹಿವಾಟಿನ ಮಾದರಿ ಎಲ್ಲವೂ ಅವುಗಳು ಹೊಸದಾರಿಗೆ ಹೊರಳಲು ತಡೆಯಾದವು. ಮುಂದೆ ಇನ್ನಷ್ಟು ಎಫ್‌ಎಂ ವಾಹಿನಿಗಳು ಮೌನ ತಾಳುವ ಮುನ್ಸೂಚನೆ ಇದು ಎಂದೇ ವಿಶ್ಲೇಷಿಸಲಾಗುತ್ತಿದೆ. 'ನೋಡು ಮಾಧ್ಯಮ'ದ ಜಾಲ ಯಾವುದನ್ನೆಲ್ಲ ಉಡುಗಿಸುತ್ತಿದೆ ಎನ್ನುವುದಕ್ಕೂ ಈ ಬೆಳವಣಿಗೆ ಕನ್ನಡಿ ಹಿಡಿಯುತ್ತಿದೆ.

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಇಂಧನ ದರ ಪಾರದರ್ಶಕತೆ ಕೊರತೆ

ದೇಶದಲ್ಲಿ ಪೆಟ್ರೋಲ್, ಡೀಸೆಲ್ ದರವನ್ನು 10 ದಿನಗಳಲ್ಲಿ ನಾಲ್ಕು ಬಾರಿ ಏರಿಕೆ ಮಾಡಲಾಗಿದೆ. ಅಂತರರಾಷ್ಟ್ರೀಯ ಮಟ್ಟದಲ್ಲಿ ಕಚ್ಚಾ ತೈಲ ದುಬಾರಿ ಆಗಿರುವುದು ಕಾರಣ ಎನ್ನಲಾಗುತ್ತಿದೆ. ಆದರೆ, ಕೇಂದ್ರ ಸರ್ಕಾರದ ರಾಜಕೀಯ ಹಿತಾಸಕ್ತಿ, ರಾಜ್ಯಗಳು–ಕೇಂದ್ರದ ವಿವಿಧ ರೀತಿಯ ತೆರಿಗೆಗಳು, ತೈಲ ಕಂಪನಿಗಳ ಲಾಭಕೋರ ಧೋರಣೆ ಎಲ್ಲವೂ ತೈಲ ಬೆಲೆ ನಿರ್ಣಯದ ವಿಚಾರವನ್ನು ಸಂಕೀರ್ಣಗೊಳಿಸಿದ್ದು, ಈ ವಿಚಾರದಲ್ಲಿ ಪಾರದರ್ಶಕತೆ ಮಾಯವಾಗಿದೆ ಎಂಬ ಆರೋಪ ಇದೆ

ಪ್ರಜಾವಾಣಿ ವಾರ್ತೆ

ಅಮೆರಿಕ, ಇಸ್ರೇಲ್ ಮತ್ತು ಇರಾನ್ ನಡುವೆ ಯುದ್ಧ ಆರಂಭವಾಗಿದ್ದು 2026ರ ಫೆಬ್ರುವರಿ 28ರಂದು. ಅದರ ಬೆನ್ನಲ್ಲೇ ಹೊರ್ಮುಜ್ ಜಲಸಂಧಿಯಲ್ಲಿ ತೈಲ, ಎಲ್‌ಪಿಜಿ ಸಾಗಣೆ ಹಡಗುಗಳ ಸಂಚಾರಕ್ಕೆ ಸಮಸ್ಯೆ ಉಂಟಾಯಿತು. ಇದು ಜಾಗತಿಕ ತೈಲ ಮಾರುಕಟ್ಟೆಯಲ್ಲಿ ತೈಲ ಮತ್ತು ಅನಿಲ ಪೂರೈಕೆಯಲ್ಲಿ ವ್ಯತ್ಯಾಸ ಉಂಟುಮಾಡಿದ್ದಲ್ಲದೇ ದರ ಏರಿಕೆಗೂ ಕಾರಣವಾಯಿತು. ಜಾಗತಿಕ ಮಟ್ಟದಲ್ಲಿ ಹಲವು ರೀತಿಯ ಸಮಸ್ಯೆಗಳು ಕಾಣಿಸಿಕೊಂಡರೂ, ಭಾರತದಲ್ಲಿ ಎಲ್ಲವೂ ಸಹಜವಾಗಿವೆ ಎಂದೇ ಕೇಂದ್ರ ಸರ್ಕಾರ ಪ್ರತಿಪಾದಿಸಿತ್ತು. ಜನರೂ ಅದನ್ನು ನಂಬಿದ್ದರು. ಐದು ವಿಧಾನಸಭೆಗಳ ಚುನಾವಣಾ ಫಲಿತಾಂಶ ಹೊರ ಬಿದ್ದ ಕೆಲವೇ ದಿನಗಳಲ್ಲಿ ತೈಲ ಕಂಪನಿಗಳು ಪೆಟ್ರೋಲ್ ಮತ್ತು ಡೀಸೆಲ್ ದರ ಏರಿಕೆ ಮಾಡಲು ಆರಂಭಿಸಿದ್ದು, 10 ದಿನಗಳಲ್ಲಿ ನಾಲ್ಕು ಬಾರಿ ದರ ಏರಿಕೆಯಾಗಿದೆ. ಇದು ಹೀಗೆಯೇ ಮುಂದುವರಿಯುವ ಸಾಧ್ಯತೆ ಇದ್ದು, ಅಗತ್ಯ ವಸ್ತುಗಳ ಬೆಲೆ ಗಗನಮುಖಿಯಾಗುವ ಆತಂಕ ಮೂಡಿಸಿದೆ.

ಯುದ್ಧ ಆರಂಭವಾಗುವುದಕ್ಕೆ ಮುಂಚೆ ಬ್ಯಾರಲ್‌ಗೆ 70ರಿಂದ 80 ಡಾಲರ್‌ನಷ್ಟಿದ್ದ ಕಚ್ಚಾ ತೈಲದ ಬೆಲೆ ಯುದ್ಧ ಆರಂಭವಾದ ನಂತರ ಭಾರಿ ಪ್ರಮಾಣದಲ್ಲಿ ಹೆಚ್ಚಾಗಿತ್ತು. ಒಂದು ಹಂತದಲ್ಲಿ ಬ್ಯಾರಲ್‌ಗೆ 126.46 ಡಾಲರ್‌ವರೆಗೂ ಏರಿಕೆಯಾಗಿತ್ತು. ಅದನ್ನು ಅನುಸರಿಸಿ ಅಮೆರಿಕ ಸೇರಿದಂತೆ ವಿವಿಧ ದೇಶಗಳಲ್ಲಿ ತೈಲೋತ್ಪನ್ನಗಳ ಬೆಲೆ ಹೆಚ್ಚಾಗಿತ್ತು. ಆದರೆ, ಭಾರತದಲ್ಲಿ ಮಾತ್ರ ಪೆಟ್ರೋಲ್, ಡೀಸೆಲ್ ಬೆಲೆ ಏರಿಕೆ ಕಂಡಿರಲಿಲ್ಲ. ಈಗ ಜಾಗತಿಕ ಮಾರುಕಟ್ಟೆಯಲ್ಲಿ ತೈಲ ಬೆಲೆ ಇಳಿದಿದೆ. ಜಾಗತಿಕ ಮಾರುಕಟ್ಟೆಯಲ್ಲಿ ಕಚ್ಚಾ ತೈಲದ ಬೆಲೆ ಮಂಗಳವಾರ ರಾತ್ರಿ ಬ್ಯಾರಲ್‌ಗೆ 100 ಡಾಲರ್ ಇದ್ದು, ಇಳಿಕೆ ಕಂಡಿದೆ. ಆದರೆ, ಅದಕ್ಕೆ ತಕ್ಕಂತೆ ಭಾರತದಲ್ಲಿ ದರ ಇಳಿದಿಲ್ಲ. ದೇಶದಲ್ಲಿ ಕಚ್ಚಾ ತೈಲಕ್ಕಾಗಿ ಶೇ 85ರಷ್ಟು ಆಮದಿನ ಮೇಲೆ ಅವಲಂಬಿಸಿರುವುದು, ಡಾಲರ್ ಮೂಲಕ ವಹಿವಾಟು ನಡೆಯುವುದು, ಬೆಲೆ ನಿರ್ಣಯ ವ್ಯವಸ್ಥೆಯಲ್ಲಿ ರಾಜಕೀಯ ಹಸ್ತಕ್ಷೇಪ, ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ತೆರಿಗೆ ಪದ್ಧತಿಯೂ ಬೆಲೆ ಏರಿಕೆಗೆ ಕಾರಣವಾಗಿವೆ.

ರಾಜಕೀಯ ಹಿತಾಸಕ್ತಿ: ಭಾರತದಲ್ಲಿ ಹಿಂದೆ ಕೇಂದ್ರ ಸರ್ಕಾರವೇ ತೈಲೋತ್ಪನ್ನಗಳ ಬೆಲೆಯನ್ನು ನೇರವಾಗಿ ನಿಯಂತ್ರಿಸುತ್ತಿತ್ತು. ಕಿರೀಟ್ ಪಾರಿಖ್ ಸಮಿತಿಯ ವರದಿ ಆಧರಿಸಿ 2010ರಲ್ಲಿ ಪೆಟ್ರೋಲ್ ದರ ಮತ್ತು 2014ರಲ್ಲಿ ಡೀಸೆಲ್ ದರವನ್ನು ಕೇಂದ್ರ ಸರ್ಕಾರವು ತನ್ನ ನಿಯಂತ್ರಣದಿಂದ ಮುಕ್ತಗೊಳಿಸಿ, ಮಾರುಕಟ್ಟೆ ದರ ಆಧಾರದಲ್ಲಿ ಬದಲಾವಣೆ ಮಾಡುವ ವ್ಯವಸ್ಥೆ ಜಾರಿ ಮಾಡಿತ್ತು. ಆದರೆ, ಕೇಂದ್ರ ಸರ್ಕಾರವು ತನ್ನ ರಾಜಕೀಯ ಹಿತಾಸಕ್ತಿಯನ್ನು ಕಾಪಾಡಲು ತೈಲ ಬೆಲೆಯನ್ನು ಬಳಸಿಕೊಳ್ಳುತ್ತಲೇ ಇದೆ ಎಂದು ವಿರೋಧ ಪಕ್ಷಗಳು ಆರೋಪಿಸುತ್ತಿವೆ.

ಇಸ್ರೇಲ್–ಇರಾನ್ ಯುದ್ಧ ಆರಂಭವಾದಾಗ ಭಾರತದಲ್ಲಿ ಐದು ವಿಧಾನಸಭೆಗಳ ಚುನಾವಣೆ ನಡೆಯುತ್ತಿತ್ತು. ಜಾಗತಿಕ ಮಾರುಕಟ್ಟೆಯಲ್ಲಿ ಕಚ್ಚಾ ತೈಲದ ಬೆಲೆ ಏರಿಕೆಯಾದರೂ, ಗ್ರಾಹಕರ ಹಿತರಕ್ಷಣೆಯ ದೃಷ್ಟಿಯಿಂದ ಪೆಟ್ರೋಲ್–ಡೀಸೆಲ್ ಬೆಲೆ ಹೆಚ್ಚಳ ಮಾಡುವುದಿಲ್ಲ ಎಂದು ಕೇಂದ್ರ ಸರ್ಕಾರ ಹೇಳಿತು. ಜತೆಗೆ, ಪೆಟ್ರೋಲ್ ಮತ್ತು ಡೀಸೆಲ್ ಮೇಲಿನ ಅಬಕಾರಿ ಸುಂಕದಲ್ಲಿ ₹10 ಇಳಿಕೆ ಮಾಡಿತ್ತು. ಆದರೆ, ಐದು ವಿಧಾನಸಭೆಗಳ ಚುನಾವಣೆ ಫಲಿತಾಂಶ ಬಂದ ಕೆಲವೇ ದಿನಗಳಲ್ಲಿ ತೈಲೋತ್ಪನ್ನಗಳ ಬೆಲೆ ಏರಿಕೆ ಆರಂಭವಾಗಿದೆ.

ಆಧಾರ: ಪಿಟಿಐ, ರಾಯಿಟರ್ಸ್, ಪೆಟ್ರೋಲಿಯಂ ಪ್ಲಾನಿಂಗ್ ಆ್ಯಂಡ್ ಅನಾಲಿಸಿಸ್ ಸೆಲ್, ನೀತಿಆಯೋಗದ ಐಸಿಇಡಿ ಡ್ಯಾಶ್‌ಬೋರ್ಡ್

ಬ್ರೆಂಟ್ ಕಚ್ಚಾ ತೈಲದ ಸರಾಸರಿ ದರ

(ಪ್ರತಿ ಬ್ಯಾರಲ್‌ಗೆ ಡಾಲರ್‌ಗಳಲ್ಲಿ)



ಮಹಾನಗರಗಳಲ್ಲಿ ಪೆಟ್ರೋಲ್, ಡೀಸೆಲ್ ಸರಾಸರಿ ದರ

(ಪ್ರತಿ ಲೀಟರ್‌ಗೆ ₹ಗಳಲ್ಲಿ)



** ಈ ಅವಧಿಯಲ್ಲಿ ಬೆಂಗಳೂರು ಮತ್ತು ಕರ್ನಾಟಕದ ವಿವಿಧ ಕಡೆಗಳಲ್ಲಿ ಪೆಟ್ರೋಲ್ ಡೀಸೆಲ್ ದರದಲ್ಲಿ ಕೊಂಚ ವ್ಯತ್ಯಾಸ ಇತ್ತು

ಪಶ್ಚಿಮ ಏಷ್ಯಾ ಬಿಕ್ಕಟ್ಟಿನ ಕಾರಣದಿಂದ ಇಂಧನ ಕೊರತೆ ಉಂಟಾಗಿದೆ ಎಂಬ ವದಂತಿಯಿಂದ ಆತಂಕಗೊಂಡ ವಾಹನ ಸವಾರರು ಮಂಗಳವಾರ ಉತ್ತರ ಪ್ರದೇಶದ ಪ್ರಯಾಗರಾಜ್‌ನ ಪೆಟ್ರೋಲ್ ಬಂಕ್ ಒಂದರಲ್ಲಿ ಪೆಟ್ರೋಲ್‌ಗಾಗಿ ಮುಗಿಬಿದ್ದರು – ಪಿಟಿಐ ಚಿತ್ರ

ತೈಲ ಅಗ್ಗವಾದರೂ ಇಳಿಯದ ದರ

ಹತ್ತು ದಿನಗಳ ಹಿಂದೆ ಪೆಟ್ರೋಲ್ ಡೀಸೆಲ್ ದರ ಏರಿಕೆ ಮಾಡುವುದಕ್ಕೂ ಮುನ್ನ ಕೇಂದ್ರ ಸರ್ಕಾರವು, ದೇಶದಲ್ಲಿ 2022ರಿಂದ ನಾಲ್ಕು ವರ್ಷಗಳಿಂದ ಪೆಟ್ರೋಲ್ ಡೀಸೆಲ್ ದರದಲ್ಲಿ ಏರಿಕೆಯಾಗಿಲ್ಲ ಎಂಬ ಹೇಳಿತ್ತು. ಆದರೆ, ಈ ಅವಧಿಯಲ್ಲಿ ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಕಚ್ಚಾ ತೈಲದ ದರ ಇಳಿಕೆಯಾಗಿದ್ದರೂ, ಅದರ ಪ್ರಯೋಜನವನ್ನು ಸರ್ಕಾರ/ತೈಲ ಕಂಪನಿಗಳು ಗ್ರಾಹಕರಿಗೆ ರವಾನಿಸಿರಲಿಲ್ಲ. 2023–24ನೇ ಸಾಲಿನಲ್ಲಿ ಕಚ್ಚಾ ತೈಲದ ಸರಾಸರಿ ದರ ಪ್ರತಿ ಬ್ಯಾರಲ್‌ಗೆ 82.58 ಡಾಲರ್ ಇತ್ತು. 2024–25ರಲ್ಲಿ ಅದು 78.56ಕ್ಕೆ ಇಳಿದಿತ್ತು. 2025–26ರಲ್ಲಿ ಅದು 70.99 ಡಾಲರ್‌ಗೆ ಇಳಿದಿತ್ತು. ಹಾಗಿದ್ದರೂ, ಪ್ರತಿ ಲೀಟರ್ ಪೆಟ್ರೋಲ್ ಮತ್ತು ಡೀಸೆಲ್ ದರ ಕಡಿಮೆಯಾಗಿರಲಿಲ್ಲ. 'ಈ ಅವಧಿಯಲ್ಲಿ ತೈಲ ಕಂಪನಿಗಳು ಮತ್ತು ಸರ್ಕಾರ ಉತ್ತಮ ಲಾಭ ಮಾಡಿಕೊಂಡಿವೆ. ಅದರ ಪ್ರಯೋಜನ ಜನಸಾಮಾನ್ಯರಿಗೆ ಆಗಿಲ್ಲ. ಈಗ ಕಚ್ಚಾ ತೈಲದ ಬೆಲೆ ಏರಿಕೆಯಾಗುತ್ತಿದ್ದಂತೆಯೇ ಪೆಟ್ರೋಲ್, ಡೀಸೆಲ್ ದರಗಳನ್ನು ಗಣನೀಯವಾಗಿ ಹೆಚ್ಚಿಸುತ್ತಿದೆ' ಎಂಬುದು ವಿರೋಧ ಪಕ್ಷಗಳ ಆರೋಪ.

ಪೆಟ್ರೋಲಿಯಂ ವಲಯದಿಂದ ಕೇಂದ್ರ ಬೊಕ್ಕಸಕ್ಕೆ ಸಿಕ್ಕಿದ್ದೆಷ್ಟು? (ಲಕ್ಷ ಕೋಟಿಗಳಲ್ಲಿ)

2014-15	₹1.72
2015-16	₹2.54
2016-17	₹3.35
2017-18	₹3.36
2018-19	₹3.48
2019-20	₹3.34
2020-21	₹4.55
2021-22	₹4.92
2022-23	₹4.28
2023-24	₹4.32
2024-25	₹4.24
2025-26	₹3.24

₹43.34 ಲಕ್ಷ ಕೋಟಿ 12 ವರ್ಷಗಳಲ್ಲಿ ಕೇಂದ್ರದ ಬೊಕ್ಕಸಕ್ಕೆ ಪೆಟ್ರೋಲಿಯಂ ವಲಯದಿಂದ ದೊರೆತ ವರಮಾನ

ಕೇಂದ್ರ-ರಾಜ್ಯಕ್ಕೆ ಆದಾಯ ಮೂಲ

ಪೆಟ್ರೋಲ್, ಡೀಸೆಲ್ ಬೆಲೆಯಲ್ಲಿ ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ತೆರಿಗೆಯ ಪಾಲು ಸುಮಾರು ಶೇ 50ರಷ್ಟು ಇದೆ. ಕೇಂದ್ರವಷ್ಟೆ ಅಲ್ಲ, ಪೆಟ್ರೋಲ್–ಡೀಸೆಲ್ ರಾಜ್ಯಗಳ ಪಾಲಿಗೂ ಭಾರಿ ವರಮಾನ ತರುವ ಸರಕುಗಳಾಗಿವೆ. ಕೇಂದ್ರ ಸರ್ಕಾರ ವಿವಿಧ ರೀತಿಯ ಸುಂಕ, ಸೆಸ್‌ಗಳನ್ನು ವಿಧಿಸುತ್ತವೆ. ರಾಜ್ಯಗಳು ಕೂಡ ತೈಲ ಮಾರಾಟದ ಮೇಲೆ ಮೌಲ್ಯವರ್ಧಿತ ತೆರಿಗೆ (ವ್ಯಾಟ್), ವಿವಿಧ ರೀತಿಯ ಅಭಿವೃದ್ಧಿ ಸೆಸ್ ವಿಧಿಸುತ್ತಿವೆ. ರಾಜ್ಯದಿಂದ ರಾಜ್ಯಕ್ಕೆ ಇವುಗಳಲ್ಲಿ ವ್ಯತ್ಯಾಸ ಇದೆ. ಹಾಗಾಗಿಯೇ ರಾಜ್ಯದಿಂದ ರಾಜ್ಯಕ್ಕೆ ಪೆಟ್ರೋಲ್–ಡೀಸೆಲ್ ದರಗಳಲ್ಲಿ ವ್ಯತ್ಯಾಸ ಇರುವುದು. ಕೆಲವು ರಾಜ್ಯಗಳಲ್ಲಿ ತೆರಿಗೆ ಪ್ರಮಾಣವು ಶೇ 30 ಮತ್ತು ಅದಕ್ಕಿಂತ ಹೆಚ್ಚಿದೆ. ಆಂಧ್ರ ಪ್ರದೇಶದಲ್ಲಿ ವ್ಯಾಟ್, ಸೆಸ್ ಸೇರಿ ಶೇ 35ರಷ್ಟು ವಿಧಿಸಲಾಗುತ್ತಿದೆ. ತೆಲಂಗಾಣ ಮತ್ತು ಕೇರಳದಲ್ಲಿಯೂ ತೆರಿಗೆ ಪ್ರಮಾಣ ಹೆಚ್ಚಾಗಿದೆ. ಕರ್ನಾಟಕದಲ್ಲಿ ಪೆಟ್ರೋಲ್ ಮೇಲೆ ಶೇ 29.84 ಮತ್ತು ಡೀಸೆಲ್ ಮೇಲೆ ಶೇ 21.17ರಷ್ಟು ಮಾರಾಟ ತೆರಿಗೆ ವಿಧಿಸಲಾಗುತ್ತಿದೆ. ರಾಜ್ಯ ಸರ್ಕಾರವು ತೈಲದ ಮೇಲಿನ ತೆರಿಗೆ ಇಳಿಸಿ, ಗ್ರಾಹಕರನ್ನು ಬೆಲೆ ಏರಿಕೆಯಿಂದ ರಕ್ಷಿಸಬೇಕು ಎಂದು ರಾಜ್ಯದಲ್ಲಿ ವಿರೋಧ ಪಕ್ಷಗಳು ಒತ್ತಾಯಿಸುತ್ತಿವೆ.

ರಾಜ್ಯಕ್ಕೆಷ್ಟು ವರಮಾನ?: ಪೆಟ್ರೋಲ್, ಡೀಸೆಲ್ ಸೇರಿದಂತೆ ಪೆಟ್ರೋಲಿಯಂ ಉತ್ಪನ್ನಗಳ ಮೇಲೆ ಕರ್ನಾಟಕ ಸರ್ಕಾರವು ವಿಧಿಸುತ್ತಿರುವ ಮಾರಾಟ ತೆರಿಗೆ/ವ್ಯಾಟ್‌ನಿಂದಾಗಿ ಬೊಕ್ಕಸಕ್ಕೆ ವಾರ್ಷಿಕವಾಗಿ ₹20 ಸಾವಿರ ಕೋಟಿಗೂ ಹೆಚ್ಚು ವರಮಾನ ಬರುತ್ತಿದೆ. ಕೇಂದ್ರ ಪೆಟ್ರೋಲಿಯಂ ಸಚಿವಾಲಯದ ಅಂಕಿ ಅಂಶಗಳ ಪ್ರಕಾರ, 2023–24ರಲ್ಲಿ **₹20,030** ಕೋಟಿ, 2024–25ರಲ್ಲಿ **₹23,428** ಕೋಟಿ ಮತ್ತು 2025–26ರಲ್ಲಿ **₹19,465** ಕೋಟಿ ಸಂಗ್ರಹವಾಗಿದೆ.

ಜಾಗತಿಕ ಮಾರುಕಟ್ಟೆಯಲ್ಲಿ ಬೆಲೆ ಇಳಿದರೆ, ಕೇಂದ್ರ–ರಾಜ್ಯಗಳ ತೆರಿಗೆ ಹೆಚ್ಚಾಗುತ್ತದೆ ಇಲ್ಲವೇ ಬೆಲೆ ಇಳಿಕೆಯ ಲಾಭವನ್ನು ತೈಲ ಕಂಪನಿಗಳು ತಮ್ಮ ಖಾತೆಗೆ ಸೇರಿಸಿಕೊಳ್ಳುತ್ತವೆ. ಆದರೆ, ಬೆಲೆ ಹೆಚ್ಚಳವಾದಾಗ ಸರ್ಕಾರಗಳು ತೆರಿಗೆ ಪ್ರಮಾಣ ಇಳಿಸುವುದಿಲ್ಲ. ತೈಲ ಕಂಪನಿಗಳು ಲಾಭ ಕಡಿಮೆಯಾಯಿತು ಎಂದು ನೇರವಾಗಿ ಅದನ್ನು ಗ್ರಾಹಕರಿಗೆ ವರ್ಗಾಯಿಸುತ್ತವೆ. ಭಾರತದ ಜನರು ಜಾಗತಿಕ ಅಸ್ಥಿರ ಸ್ಥಿತಿಯ ಜತೆಗೆ ರಾಜ್ಯಗಳು–ಕೇಂದ್ರದ ನಡುವಿನ ಆದಾಯ ಹಂಚಿಕೆಯ ಸಮಸ್ಯೆಯನ್ನೂ ಎದುರಿಸಬೇಕಿದೆ. ತೈಲ ಬೆಲೆಗೆ ಸಂಬಂಧಿಸಿದಂತೆ ಏಕರೂಪದ ಅಥವಾ ಪಾರದರ್ಶಕವಾದ ವ್ಯವಸ್ಥೆಯ ಕೊರತೆ ಇದೆ ಎನ್ನುವ ವಿಶ್ಲೇಷಣೆ ಇದೆ.

ಪ್ರಜಾವಾಣಿ– ಡೆಕ್ಕನ್ ಹೆರಾಲ್ಡ್ ನೆರವು ನಿಧಿ

ಎಸ್‌ಎಸ್‌ಎಲ್‌ಸಿಯಲ್ಲಿ ಉನ್ನತ ಶ್ರೇಣಿಯಲ್ಲಿ ಪಾಸಾಗಿರುವ ಬಡ ವಿದ್ಯಾರ್ಥಿಗಳಿಗೆ ದಾನಿಗಳ ನೆರವಿನಿಂದ ಪ್ರಜಾವಾಣಿ– ಡೆಕ್ಕನ್ ಹೆರಾಲ್ಡ್ ಪತ್ರಿಕೆಗಳು ಆರ್ಥಿಕ ನೆರವು ನೀಡಲಿವೆ. ಇದಕ್ಕಾಗಿ ದಾನಿಗಳು ಆನ್‌ಲೈನ್ ಮೂಲಕ ಹಣವನ್ನು **'Deccan Herald- Prajavani Relief Trust'**ಗೆ ಕಳುಹಿಸಬಹುದು.

₹ 5,000ಕ್ಕಿಂತ ಹೆಚ್ಚು ಹಣ ನೀಡುವವರ ಹೆಸರನ್ನು ಪತ್ರಿಕೆಗಳಲ್ಲಿ ಪ್ರಕಟಿಸಲಾಗುವುದು. ದಾನ ನೀಡಿದ ಹಣಕ್ಕೆ 2025ನೇ ಸಾಲಿನ ಆದಾಯ ತೆರಿಗೆ ಕಾಯ್ದೆಯ ಸೆಕ್ಷನ್ 133ರ ಅನ್ವಯ ಆದಾಯ ತೆರಿಗೆ ವಿನಾಯಿತಿ ಇದೆ.

ಆನ್‌ಲೈನ್‌ನಲ್ಲಿ ಹಣ ಸಂದಾಯ ಮಾಡುವವರು ಪಕ್ಕದಲ್ಲಿರುವ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ ಅಥವಾ ಲಿಂಕ್ ಬಳಸಿ. ಚೆಕ್, ನಗದು ಮತ್ತು ಡಿ.ಡಿ ಸ್ವೀಕರಿಸುವುದಿಲ್ಲ.

https://bit.ly/3xFpoz4

'ಶುಲ್ಕ ಪಾವತಿ, ನೋಟ್‌ಬುಕ್ ಖರೀದಿ'

'ಪ್ರಜಾವಾಣಿ'ಯಿಂದ ಸಿಕ್ಕ ವಿದ್ಯಾರ್ಥಿವೇತನದಲ್ಲೇ ಪಿಯುಸಿ ವಿಜ್ಞಾನ ವಿಭಾಗದಲ್ಲಿ ಓದಲು, ಶುಲ್ಕ ಪಾವತಿಸಲು, ಪುಸ್ತಕ, ನೋಟ್‌ಬುಕ್ ಕೊಳ್ಳಲು ನೆರವಾಯಿತು. 'ಪ್ರಜಾವಾಣಿ'ಗೆ ನಾನು ಆಭಾರಿ. ಭವಿಷ್ಯದಲ್ಲಿ ಎಂಜಿನಿಯರಿಂಗ್ ಓದುವ ಉದ್ದೇಶವಿದೆ. ಬಡ ವಿದ್ಯಾರ್ಥಿಗಳಿಗೆ ನೆರವಾಗುವ ಈ ಕ್ರಮ ಸ್ವಾಗತಾರ್ಹ.

ಹುಸೇನ್‌ಸಾಬ್ ಲಾಲ್ ಸಾಬ್ ನದಾಫ್, ಹಿರೇಮುರಾಳ, ಮುದ್ದೇಬಿಹಾಳ ತಾಲ್ಲೂಕು, ವಿಜಯಪುರ ಜಿಲ್ಲೆ

'ಬಡ ಪ್ರತಿಭಾವಂತರಿಗೆ ಪ್ರೋತ್ಸಾಹ'

ವಿದ್ಯಾರ್ಥಿ ವೇತನ ಬಡ ವಿದ್ಯಾರ್ಥಿಗಳಿಗೆ ತುಂಬಾ ಅನುಕೂಲವಾಗುತ್ತದೆ. ಅವರ ಕಲಿಕೆಗೆ ಮತ್ತಷ್ಟು ಪ್ರೋತ್ಸಾಹ ನೀಡುತ್ತದೆ. ಸರಿಯಾಗಿ ಕಾಲೇಜು ಪ್ರವೇಶದ ಸಮಯದಲ್ಲಿ ಹಣ ಬಂದಿದ್ದರಿಂದ ಶುಲ್ಕ ಪಾವತಿಗೆ ಬಳಸಿಕೊಂಡೆ.

ಹರಿಣಿ, ತುಮಕೂರು

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ 9606038256

ಭಾರತದ ವಿದೇಶಾಂಗ ಸಚಿವ ಎಸ್.ಜೈಶಂಕರ್ ಅವರು ಇತ್ತೀಚೆಗೆ ದೆಹಲಿಯಲ್ಲಿ ಅಮೆರಿಕದ ವಿದೇಶಾಂಗ ಕಾರ್ಯದರ್ಶಿ ಮಾರ್ಕೊ ರುಬಿಯೊ ಅವರೊಂದಿಗೆ ಜಂಟಿ ಪತ್ರಿಕಾಗೋಷ್ಠಿ ನಡೆಸುವಾಗ, 'ಕಾಕ್ರೋಚ್ ಜನತಾ ಪಾರ್ಟಿಯ ನಿರ್ವಾಹಕರು ಭಾರತ ವಿರೋಧಿ ಚಳವಳಿ ನಡೆಸಲು ಅಮೆರಿಕದ ನೆಲವನ್ನು ಬಳಸುತ್ತಿದ್ದಾರೆ. ಹಾಗಾಗಿ ಅವರನ್ನು ಭಾರತಕ್ಕೆ ಹಸ್ತಾಂತರಿಸಬೇಕು ಎಂದು ಮಾರ್ಕ್ ರುಬಿಯೊ ಮತ್ತು ಡೊನಾಲ್ಡ್ ಟ್ರಂಪ್ ಅವರಿಗೆ ಮನವಿ ಮಾಡಿದ್ದಾರೆ' ಎಂದು ಪ್ರತಿಪಾದಿಸುತ್ತಾ, ಜೈಶಂಕರ್ ಅವರು ಮಾತನಾಡುತ್ತಿರುವ ವಿಡಿಯೊ ತುಣುಕೊಂದನ್ನು ಕೆಲವರು 'ಎಕ್ಸ್'ನಲ್ಲಿ ಪೋಸ್ಟ್ ಮಾಡಿದ್ದಾರೆ. ಹಲವರು ಅದನ್ನು ಹಂಚಿಕೊಳ್ಳುತ್ತಿದ್ದಾರೆ. ಆದರೆ. ಇದು ಸುಳ್ಳು ಸುದ್ದಿ.

ಕೇಂದ್ರ ಸರ್ಕಾರದ ಪ್ರೆಸ್ ಇನ್‌ಫರ್ಮೇಷನ್ ಬ್ಯೂರೊ (ಪಿಐಬಿ) ಈ ಬಗ್ಗೆ ಫ್ಯಾಕ್ಟ್‌ಚೆಕ್ ನಡೆಸಿದ್ದು, ಜಂಟಿ ಪತ್ರಿಕಾಗೋಷ್ಠಿಯಲ್ಲಿ ಜೈಶಂಕರ್ ಅವರು ಈ ವಿಚಾರವನ್ನು ಎಲ್ಲೂ ಪ್ರಸ್ತಾಪಿಸಿಲ್ಲ ಎಂದು ಹೇಳಿದೆ. ಪತ್ರಿಕಾಗೋಷ್ಠಿಯ ಮೂಲ ವಿಡಿಯೊ ಯೂಟ್ಯೂಬ್‌ನಲ್ಲಿ ಲಭ್ಯವಿದೆ. ಕಾಕ್ರೋಚ್ ಜನತಾ ಪಾರ್ಟಿ ಬಗ್ಗೆ ಅವರೆಲ್ಲೂ ಮಾತನಾಡಿಲ್ಲ. ಸಾಮಾಜಿಕ ಜಾಲತಾಣಗಳಲ್ಲಿ ಹಂಚಿಕೊಳ್ಳುತ್ತಿರುವ ವಿಡಿಯೊ ಎಐ ತಂತ್ರಜ್ಞಾನದಲ್ಲಿ ತಿರುಚಿದ ವಿಡಿಯೊ ಆಗಿದ್ದು, ಭಾರತದ ವಿರುದ್ಧ ಅಪಪ್ರಚಾರ ನಡೆಸುತ್ತಿರುವ ಖಾತೆಗಳು ಹಂಚಿಕೊಳ್ಳುತ್ತಿವೆ ಎಂದು ಪಿಐಬಿ ತನ್ನ ಫ್ಯಾಕ್ಟ್‌ಚೆಕ್‌ನಲ್ಲಿ ತಿಳಿಸಿದೆ.

ಎಲ್ಲಾ ಇದೆ ಈ ನಮ್ಮೊಳಗೆ

ನುಡಿ ಬೆಳಗು

ವಾಸುದೇವ ನಾಡಿಗ್

ಮುಪ್ಪಿನಲ್ಲಿ ಮಗನನ್ನು ಹೊರತುಪಡಿಸಿ ಆ ವೃದ್ಧನ ಬಳಿ ಏನೂ ಇರಲಿಲ್ಲ. ಒಂದು ಕೋಣೆಯ ಕಲ್ಲಿನ ಮನೆ, ಒಂದು ಮುರುಕು ಕುರ್ಚಿ ಅಷ್ಟೇ. ಬೆಲ್ಲ ಇದ್ದಲ್ಲಿ ಇರುವೆಗಳು ಎಂಬ ಮಾತು ಸಹಜ; ಕೆಲವೊಮ್ಮೆ ಜೀರ್ಣವಾಗದ ಸತ್ಯ ಕೂಡ. ಈ ಮೊದಲು ಒಂದಿಷ್ಟು ತ್ರಾಣ ಇದ್ದಾಗ ಜನ ಕೆಲಸ ಕಾರ್ಯಗಳಿಗೆ ಕರೆಯುತ್ತ, ಸಂಜೆ ಮನೆ ಬಳಿ ಬಂದು ಮಾತಾಡಿಸಿಯೂ ಹೋಗುತ್ತಿದ್ದರು. ಮಗ ದೊಡ್ಡವನಾಗಿ ಹೊಟ್ಟೆಪಾಡು, ಉದ್ಯೋಗ ಎಂದು ಶಹರದಲ್ಲಿ ಅಲೆಯುವಾಗ ಇವರು ಇಲ್ಲಿ ಒಬ್ಬಂಟಿ. ವಯೋಸಹಜವಾಗಿ ಮಂಜಾದ ಕಣ್ಣು ಮತ್ತು ಮೊಣಕಾಲು ನೋವು. ಮುಕ್ಕಾಲು ಪಾಲು ಅಂಗವೈಕಲ್ಯ ಎನ್ನುವಂಥ ಸ್ಥಿತಿ. ನಿರುಪಯುಕ್ತ ಅಂತ ಯಾರೂ ಹತ್ತಿರ ಕೂಡ ಸುಳಿಯರು, ಮಾತೂ ಆಡಿಸರು. ನಸುಕು ಮತ್ತು ಸಂಜೆ ಮುರುಕು ಕುರ್ಚಿ ಹಾಕಿಕೊಂಡು ಕೂತರೆ, ಒಂದು ನರಪಿಳ್ಳೆಯೂ ಮಾತಾಡಿಸುತ್ತಿರಲಿಲ್ಲ.

ನಿರುಪಯುಕ್ತತೆ ಅವರನ್ನು ಜನ ನಿರ್ಲಕ್ಷಿಸುವಂತೆ ಮಾಡಿತ್ತು. ಮಗನ ಬಳಿ ಹೋಗಿ ಇರಲಾರದ ಅಸಹಾಯಕತೆ. ಮಗನಿಗೆ ವಿಷಯ ತಿಳಿಸಿದಾಗ ಅವನೂ ಬಹಳ ನೊಂದುಕೊಂಡ. 'ಏನೂ ಭಯ ಬೇಡ. ನನಗೆ ಮೂರು ವಸ್ತು ತಂದುಕೊಡು ಸಾಕು: ಒಂದು ಟಿವಿ, ಒಂದು ಜನರೇಟರ್, ಒಂದು ಸೈಕಲ್' ಎಂಬ ಬೇಡಿಕೆ ಇಟ್ಟ ವೃದ್ಧ. ಮಗ ಕೆಲದಿನಗಳಲ್ಲೇ ಈ ಮೂರೂ ವಸ್ತುಗಳನ್ನು ತಂದುಕೊಟ್ಟ. ಕಣ್ಣು ಕಾಣಲ್ಲ; ಟಿವಿ? ಕಾಲು ನೋವು; ಸೈಕಲ್? ಇನ್ನು ಜನರೇಟರ್..? ಅಚ್ಚರಿ ಎನಿಸಿತು. ಆದರೆ, ಇಲ್ಲೇ ಇದ್ದದ್ದು ಸ್ವಾರಸ್ಯ. ಕೆಲವೇ ದಿನಗಳಲ್ಲಿ ವೃದ್ಧನ ಬಾಳೇ ಬದಲಾಯಿತು. ಹತ್ತಾರು ಜನ ಟಿವಿ ನೋಡಲು ನಿತ್ಯ ಬರಲು ಶುರುಮಾಡಿದರು. ಗ್ರಾಮದ ಅನೇಕ ಪುಟ್ಟ ಮಕ್ಕಳು ಸೈಕಲ್ ನೆಪದಲ್ಲಿ ವೃದ್ಧನ ಸುತ್ತ ನೆರೆದರು. ಕರೆಂಟ್ ಹೋದಾಗಲೆಲ್ಲ ಅನೇಕರು ತಮ್ಮ ಮೊಬೈಲ್‌ಗಳನ್ನು ಚಾರ್ಜ್ ಮಾಡಿಕೊಳ್ಳಲು ಧಾವಿಸಿದರು. ಮನೆ ತುಂಬಾ ಜನವೋ ಜನ. ಕೂತಲ್ಲೇ ಜನ ವೃದ್ಧನಿಗೆ ಊಟ ತಿಂಡಿ ಕೊಡಲು ಶುರು ಮಾಡಿದರು. ತಾವೇ ಬರುವುದು, ಟಿವಿ ನೋಡುವುದು, ಜನರೇಟರ್ ಶುರು ಮಾಡುವುದು, ಮಕ್ಕಳು ಸರದಿಯಲ್ಲಿ ಸೈಕಲ್ ಅನ್ನು ಓಡಿಸುವುದು... ಹೀಗೇ. ಅದ್ಭುತವೇ ನಡೆದುಹೋಯಿತು.

ಮಗ ಅನುಕೂಲಸ್ಥನಾದಾಗ ಮುರುಕು ಮನೆಯ ತಾರಸಿ ಗೋಡೆ ಎಲ್ಲ ಬದಲಾಯಿಸಿದ. ಮನೆಯ ಪಕ್ಕ ತಂಪು ಪಾನೀಯದ ಪುಟ್ಟ ಅಂಗಡಿ ಇಟ್ಟುಕೊಟ್ಟ. ಜನರೇಟರ್ ಇದ್ದುದರಿಂದ ವಿದ್ಯುತ್ ಕಡಿತವಾದರೂ ಪಾನೀಯಗಳು ತಂಪನ್ನು ಕಳೆದುಕೊಳ್ಳುತ್ತಿರಲಿಲ್ಲ. ತಂದೆ ಕೂತ ಕೂತಲ್ಲೇ ಚೈತನ್ಯಮಯಿ ಆದ ಸಂಗತಿಯನ್ನು ಕಂಡು ಅಚ್ಚರಿಪಟ್ಟ. ಕೇವಲ ಮೂರು ವಸ್ತುಗಳು ಜನ ಮತ್ತು ಜೀವನವನ್ನೇ ಬದಲಾಯಿಸಿದ ಕತೆ ಇದು.

ನಿರುಪಯುಕ್ತ ಬಾಳು ಉಪಯುಕ್ತಗೊಳ್ಳಬೇಕಾದರೂ ಒಂದು ಕೌಶಲ ಬೇಕಲ್ಲ?

ಅಸಡ್ಡೆ ತೋರುತ್ತಿದ್ದ ಜನರ ದೃಷ್ಟಿ ಬದಲಾಗುವಂತೆ, ಕನಿಷ್ಠ ಮಟ್ಟದಲ್ಲಿ ಉಪಯುಕ್ತವಾಗುವಂತೆ ಬಾಳು ರೂಪಿಸಿಕೊಳ್ಳಲೇಬೇಕಲ್ಲವೆ? ಮೊದಲೇ ಲಾಭಕೋರತನದ ಸಮಾಜ. ಲಾಭವಿದ್ದರೆ ಮಾತ್ರ ಜನ ಹತ್ತಿರ ಬರುವ ಕಾಲಮಾನ. ಅದು ಏನೇ ಇರಲಿ, ಹತ್ತಾರು ಜನ ತಾವೇ ಹತ್ತಿರ ಬರುವ ಹಾಗೆ ಮಾಡಿಕೊಳ್ಳದ ಬಾಳು ಅದೆಷ್ಟು ನೀರಸ ನೋಡಿ. ಪರಿಹಾರವನ್ನು ಮಾತ್ರ ಗೌರವಿಸುವ ಸಮಾಜದಲ್ಲಿ ಸಮಸ್ಯೆಯನ್ನು ಯಾರು ಇಷ್ಟಪಡುತ್ತಾರೆ? ನಮಗೆ ನಾವೇ ಒಂದು ಸಮಸ್ಯೆಯಾಗಿ ಕೂತಾಗ ಅರಿವಿಲ್ಲದೇ ಹತ್ತಿರವಿದ್ದವರೂ ದೂರ ಸರಿಯುವ ಪಾಠ ಕಹಿಸತ್ಯವೇ.

ಪದಬಂಧ 6415

ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1. ಪುರದಲ್ಲಿರುವ ಕೊಳ (4)
3. ಈತ ಮಹಾ ಪರಾಕ್ರಮಿ (4)
5. ರಾಯರಿಂದ ಬಂದಿರುವ ನಿರೂಪ (3)
7. ಹಾವುಗೆ ಹತ್ತಿರ ಉರಗ ಬಂದಿತಲ್ಲಾ? (2)
8. ಮಿತಿಗೆ ಒಳಪಟ್ಟಿದ್ದು ಮಿಡಿತದಲ್ಲಿದೆ (2)
10. ಅರಣ್ಯವನ್ನು ಹೀಗೂ ಕರೆಯುತ್ತಾರೆ (3)
11. ಬೆಲ್ಲವಾಗುವುದಕ್ಕೆ ಮೊದಲು ತೆಗೆದ ಕಬ್ಬಿನಹಾಲಿನಪಾಕ (3)
13. ರಭಸದಿಂದ ಹರಿದ ದ್ರವ! (2)
15. ಜಾಗರಣೆ ಮಾಡಿದ ಬುದ್ಧಿವಂತೆ! (2)
16. ನಂಟರ ಸಮೂಹ (3)
18. ಕಲೆಯೊಳಗಿರುವ ಆಹ್ವಾನ ಕಾಣಿಸಿತೇ? (4)
19. ರತ್ನಗಳನ್ನು ಅಡಗಿಸಿಟ್ಟುಕೊಂಡಿರುವ ಸಮುದ್ರ (4)

ಮೇಲಿಂದ ಕೆಳಕ್ಕೆ

1. ಪ್ರಗತಿಶೀಲ ಸ್ವಭಾವದವನು (4)
2. ರಾಜನ ಪತ್ನಿ ಏಕೋ ತಿರುಗಿದ್ದಾಳಲ್ಲಾ? (2)
3. ಕನಸಲ್ಲಿ ಕಾಣಿಸಿದ ಕೊಳೆ (2)
4. ಲೀಲಾಜಾಲವಾಗಿ ನಡೆದ ಏಲಂ (3)
6. ಈತ ಗ್ರೀಸ್ ದೇಶದವನು (3)
7. ಹಾರದಲ್ಲಿಯೇ ಈ ಪ್ರಲಾಪ! (4)
9. ಕೂಲಂಕಷವಾದ ವಿಚಾರಣೆ (4)
12. ಕೆಸರು ಗದ್ದೆಯಲ್ಲಿ ಕೋಣವನ್ನು ಓಡಿಸುವ ಸ್ಪರ್ಧೆ (3)
14. ಸಂಭ್ರಮಕ್ಕಿಲ್ಲಿ ಕೊನೆಗೆ ಗರ ಬಡಿದಿದೆ! (4)
15. ಹುಟ್ಟಿದ ತಾರೀಕು.ತಿಥಿ, ಇತ್ಯಾದಿಗಳನ್ನು ತಿಳಿಸುವ ಪತ್ರಿಕೆ (3)
16. ಪ್ರಾಣಿ ಪಕ್ಷಿಗಳನ್ನು ಹಿಡಿಯುವ ಸಾಧನ (2)
17. ಪಗಡೆಯಾಟದಲ್ಲಿ ದಾಳದಿಂದ ಸೂಚಿತವಾಗುವ ಸಂಖ್ಯೆ (2)



6414ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ: 1.ಪಿತ 3.ವಿದ್ರುಮ 5.ನಿಮೀಲನ 6.ವಿಕೋಪ 7.ಗುರಾಣಿ 8.ರಾಷ್ಟ್ರೀಕರಣ 9.ಸುಸಂಧಿ 10.ಕಮಾನು 13.ಅವಸಾನ 14.ತಪ್ಪಲೆ 15.ಗುಟ್ಟು

ಮೇಲಿಂದ ಕೆಳಕ್ಕೆ: 1.ಪಿಳ್ಳಂಗೋವಿ 2.ಶಲಭ 4.ಮಹಾರಾಣಿ 5.ನಿರಪರಾಧಿ 7.ಗುಣಕಥನ 9.ಸುಚರಿತ 11.ನುಡಿಗಟ್ಟು 12.ಪ್ರವರ

ಸುಡೊಕು 6798

ಆಡುವುದು ಹೀಗೆ: ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

		3			7		1	
8		7	6		4	2		9
	2		3				5	
2	4			1		9		
							7	
7	5			9		3	4	
	8							3
			4		8	5		
9		4			2		6	

6797 ಸುಡೊಕು

7	1	4	2	5	6	8	9	3
3	2	8	1	4	9	6	7	5
6	9	5	7	3	8	4	1	2
2	8	3	6	7	4	1	5	9
9	7	1	5	8	3	2	4	6
4	5	6	9	1	2	3	8	7
8	4	9	3	6	7	5	2	1
5	6	2	4	9	1	7	3	8
1	3	7	8	2	5	9	6	4

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ, ಕಮ್ಮರಡಿ

27 ಮೇ 2026 ಬುಧವಾರ, ಶ್ರೀ ಪರಾಭವ ನಾಮ ಸಂವತ್ಸರ ಉತ್ತರಾಯಣ ಗ್ರೀಷ್ಮ ಋತು ತಿಥಿ: ಅಧಿಕ ಜ್ಯೇಷ್ಠ ಶುಕ್ಲ ಏಕಾದಶಿ ಗಂ. 06-22 ನಕ್ಷತ್ರ : ಹಸ್ತ ಗಂ. 05-57 ಯೋಗ : ವ್ಯತೀಪಾತ ಗಂ. 27-25 ಕರಣ : ಭದ್ರ ಗಂ. 06-02, ವೃಷಭ ಮಾಸದ 13 ನೇ ದಿನ. ಮಳೆ ನಕ್ಷತ್ರ : ರೋಹಿಣಿ 1 ನೇ ಪಾದ. ರಾಹುಕಾಲ : ಮಧ್ಯಾಹ್ನ 12-00 - 01-30 ,ಸೂರ್ಯೋದಯ : 06-06 ಸೂರ್ಯಾಸ್ತ : 06-49,ಮುಸ್ಲಿಂ ದಿನಾಂಕ : 10 ದುಲ್ ಹಿಜ್ಜಾ,ಅದೃಷ್ಟ ಸಂಖ್ಯೆ : 5, 10

ಮೇಷ: ಹೊಸ ಅವಕಾಶಗಳಿಗೆ ಸರಿಯಾದ ಹಾದಿ ಇದೆ. ಒಂದೆಡೆ ಹಣದ ಉಳಿತಾಯಕ್ಕೆ ಯತ್ನಿಸುತ್ತಿದ್ದರೆ, ಮತ್ತೊಂದೆಡೆ ಖರ್ಚು ಹೆಚ್ಚಲಿದೆ. ಮಾತುಗಳ ಮೇಲೆ ಹಿಡಿತವಿರಲಿ.

ವೃಷಭ: ವೈದ್ಯರ ಸಲಹೆಯಂತೆ ಧ್ಯಾನ ಮತ್ತು ಯೋಗದ ಅಭ್ಯಾಸ ಮಾಡಿಕೊಳ್ಳಿ. ಸೌಜನ್ಯ ಹುದ್ದೆಗೆ ಮೆರುಗು ತರುವುದು. ಕೃಷಿ ಕಾರ್ಯಗಳಿಂದ ಆದಾಯವಿರುವುದು. ಸಿನಿಮಾ ರಂಗದವರಿಗೆ ಅವಕಾಶ ಲಭಿಸುತ್ತದೆ.

ಮಿಥುನ: ಸೃಜನಶೀಲತೆಯಿಂದ ಕಾರ್ಯನಿರ್ವಹಿಸಿ ಹೆಸರು ಗಳಿಸುವಿರಿ. ಅಭಿವೃದ್ಧಿಗೆ ಸ್ನೇಹಿತರ ಬಳಗವು ಕಾರಣವಾಗುತ್ತದೆ. ರಾಜಕೀಯ ವ್ಯಕ್ತಿಗಳಿಗೆ ಚಟುವಟಿಕೆಗಳಿಗಾಗಿ ಬಿರುಸಿನ ಓಡಾಟ ಅನಿವಾರ್ಯವಾಗುವುದು.

ಕರ್ಕಾಟಕ: ಸಂಸ್ಥೆಯ ಜವಾಬ್ದಾರಿ ನೋಡುವಂಥ ಸಿಬ್ಬಂದಿಗೆ ಕೆಲಸದಲ್ಲಿ ಸ್ವಲ್ಪ ಬಿಡುವು ಸಿಗಲಿದೆ. ಮನೆಯಲ್ಲಿ ಮತ್ತು ವೃತ್ತಿಪರ ಕೆಲಸದಲ್ಲಿ ನಿರ್ಧಾರವನ್ನು ಎಲ್ಲರ ಮನಮುಟ್ಟುವಂತೆ ಸ್ಪಷ್ಟ ಮಾತುಗಳಲ್ಲಿ ತಿಳಿಯಪಡಿಸಿ.

ಸಿಂಹ: ಗ್ರಹಸ್ಥಿತಿಯು ತಂದೆ ಮಕ್ಕಳಲ್ಲಿ ಅನ್ಯೋನ್ಯತೆ ಕಡಿಮೆ ಮಾಡುವ ಲಕ್ಷಣ ಹೊಂದಿರುವುದರಿಂದ ಜಾಗ್ರತರಾಗಿರಿ. ಮನೆಯ ಆಕರ್ಷಣೆಗೋಸ್ಕರ ದುಂದುವೆಚ್ಚ ಮಾಡುವುದು ಸರಿಯಲ್ಲ.

ಕನ್ಯಾ: ಛಾಯಾಗ್ರಾಹಕರಿಗೆ ಸಮಾರಂಭವೊಂದರಲ್ಲಿ ಪಾಲ್ಗೊಳ್ಳುವ ಅವಕಾಶ ಲಭಿಸುವುದು. ಪೋಷಕರಲ್ಲಿ ವೈವಾಹಿಕ ವಿಷಯಗಳ ಬಗ್ಗೆ ಮಾತುಕತೆ ನಡೆಸಿ ತೀರ್ಮಾನಕ್ಕೆ ಬನ್ನಿ. ಶುಭಕ್ಕಾಗಿ ಮಹಾಗಣಪತಿಯನ್ನು ಆರಾಧಿಸಿ.

ತುಲಾ: ಆರೋಗ್ಯದಲ್ಲಾಗುವ ಬದಲಾವಣೆಗೆ ಆಹಾರವೇ ಮುಖ್ಯ ಕಾರಣ. ಕೆಲಸಕ್ಕೆ ಸೋಮಾರಿತನ ಅಥವಾ ಸಮಯದ ಅಭಾವದಂತಹ ಸಮಸ್ಯೆ ಎದುರಾಗುತ್ತದೆ. ಮನೆಯ ಜವಾಬ್ದಾರಿಗಳ ಕಡೆಗೆ ಗಮನವಿರಲಿ.

ವೃಶ್ಚಿಕ: ಗುರಿ ಸಾಧನೆಯತ್ತ ಆಸಕ್ತಿಯಿಂದ ಕೆಲಸ ಕಾರ್ಯಗಳನ್ನು ಅಚ್ಚುಕಟ್ಟಾಗಿ ನಿರ್ವಹಿಸುವಿರಿ. ಧನ ಆದಾಯಕ್ಕೆ ಅಡ್ಡಿಗಳು ಇರುವುದಿಲ್ಲ. ಹಿರಿಯರ ಆರೋಗ್ಯಕ್ಕಾಗಿ ವ್ಯಯ ಉಂಟಾಗಬಹುದು.

ಧನು: ಪ್ರಸ್ತುತ ಕೆಲಸದಲ್ಲೇ ಮುಂದುವರಿಯುವುದು ಒಳ್ಳೆಯದು. ಧನ ಮತ್ತು ಗೌರವಗಳೆರಡು ಸಂಪಾದನೆಯಾಗಲಿವೆ. ಏಳಿಗೆಯು ಹತ್ತಾರು ಶತ್ರುಗಳನ್ನು ಹುಟ್ಟಿಸಲಿದೆ.

ಮಕರ: ಧ್ಯಾನ ಹಾಗೂ ಯೋಗದ ಕಡೆ ಗಮನ ಹರಿಸಿ. ಆರೋಗ್ಯದ ಲವಲವಿಕೆಗೆ ಬಹಳ ಸಹಾಯವಾಗಲಿದೆ. ಹೆಂಡತಿಗೆ ಹೊಸ ಉದ್ಯೋಗ ದೊರೆತು ಸಂತೋಷವಾಗುವುದು. ಅವಿವಾಹಿತರಿಗೆ ವಿವಾಹ ಯೋಗ ಇದೆ.

ಕುಂಭ: ಕುಟುಂಬ ಅಭಿವೃದ್ಧಿಗೆ ಉತ್ತಮ ಯೋಚನೆಗಳು ಬರಲಿವೆ. ಸ್ನೇಹಿತರ ಒಡನಾಟದಿಂದ ಭವಿಷ್ಯ ಹಾಳಾಗುತ್ತಿರುವುದರ ಅರಿವಾಗುವುದು. ಧಾರ್ಮಿಕ ವಿಚಾರಗಳಲ್ಲಿ ಶ್ರದ್ಧೆ ಮೂಡಲಿದೆ.

ಮೀನ: ಕೆಲಸವೊಂದನ್ನು ನಿಮ್ಮ ಸ್ನೇಹಿತರೊಬ್ಬರು ನಿಮಗೊಪ್ಪಿಸಲಿದ್ದಾರೆ, ಒಪ್ಪಿಕೊಳ್ಳಿ. ಸಾಕಷ್ಟು ಆದಾಯ ಮತ್ತು ಹೆಸರನ್ನು ತರಲಿದೆ. ಎಂಜಿನಿಯರಿಂಗ್ ಶಿಕ್ಷಣದಲ್ಲಿ ವಿದ್ಯಾರ್ಥಿಗಳು ವಿಶೇಷ ಸಾಧನೆ ತೋರಲಿದ್ದಾರೆ.

ಗುಂಡಣ್ಣ

ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ	
ಹಿಂದಿನ ಅಂತ್ಯ:	24,031
ಇಂದಿನ ಅಂತ್ಯ:	23,913
ದಿನದ ಕನಿಷ್ಠ:	23,885
	↓ 118

ಮೊಟ್ಟೆ ಧಾರಣೆ (ಎನ್‌ಇಸಿಸಿ) ಬೆಂಗಳೂರು		
	100 ಕ್ಕೆ	₹620
	12 ಕ್ಕೆ	₹86
ಮೈಸೂರು:	100 ಕ್ಕೆ	₹630

ರಾಮನಗರ ರೇಷ್ಮೆಗೂಡು	
ಮಿಶ್ರತಳಿ(ಸಿ.ಬಿ)	₹345-667
ದ್ವಿತಳಿ (ಬಿ.ವಿ)	₹375-844

ಎನ್.ಆರ್.ಪುರ ರಬ್ಬರ್ (ಪ್ರತಿ ಕೆ.ಜಿಗೆ)	
ಆರ್‌ಎಸ್‌ಎಸ್-4	₹247
ಆರ್‌ಎಸ್‌ಎಸ್-5	₹238
ಗುಡ್ ಲಾಟ್	₹205

ಮುದ್ರೆ-ಮನೆ ಕಾಫಿ (50 ಕೆಜಿಗೆ)	
ಎಪಿ	₹23,000
ಎಸಿ	₹13,000
ಆರ್‌ಪಿ	₹18,300
ಆರ್‌ಸಿ	₹9,750

ಜೂನ್‌ನಲ್ಲಿ ಹಣದುಬ್ಬರ ಶೇ 5ಕ್ಕೆ?

ಇಂಧನ ಬೆಲೆ ಹೆಚ್ಚಳ ಹಾಗೂ ಆಮದು ಸುಂಕ ಏರಿಕೆಯ ಪರಿಣಾಮ

ನವದೆಹಲಿ (ಪಿಟಿಐ): ಪೆಟ್ರೋಲ್, ಡೀಸೆಲ್ ಬೆಲೆ ಹೆಚ್ಚಳ ಹಾಗೂ ಚಿನ್ನ, ಬೆಳ್ಳಿಯ ಮೇಲಿನ ಆಮದು ಸುಂಕದ ಏರಿಕೆಯು ದೇಶದಲ್ಲಿ ಚಿಲ್ಲರೆ ಹಣದುಬ್ಬರ ಪ್ರಮಾಣವನ್ನು ಜೂನ್ ವೇಳೆಗೆ ಶೇ 5ರ ಮಟ್ಟಕ್ಕೆ ಒಯ್ಯಬಹುದು ಎಂದು ಅರ್ಥಶಾಸ್ತ್ರಜ್ಞರು ಅಂದಾಜು ಮಾಡಿದ್ದಾರೆ.

ಆದರೆ, ರೆಪೊ ದರವನ್ನು ಹೆಚ್ಚು ಮಾಡುವ ಮೊದಲು ಆರ್‌ಬಿಐ ಇಂಧನ ಬೆಲೆ ಏರಿಕೆಯ ಪರಿಣಾಮಗಳು ಒಂದು ಹಂತಕ್ಕೆ ಬರಲಿ ಎಂದು ಕಾಯಬಹುದು ಎಂಬ ಅಭಿಪ್ರಾಯವನ್ನು ಅವರು ವ್ಯಕ್ತಪಡಿಸಿದ್ದಾರೆ.

11 ದಿನಗಳ ಅಂತರದಲ್ಲಿ ಪೆಟ್ರೋಲ್, ಡೀಸೆಲ್ ಬೆಲೆಯನ್ನು ಲೀಟರಿಗೆ ಕ್ರಮವಾಗಿ ₹7.38 ಹಾಗೂ ₹7.48ರಷ್ಟು ಹೆಚ್ಚಿಸಲಾಗಿದೆ. ಚಿನ್ನ ಹಾಗೂ ಬೆಳ್ಳಿಯ ಆಮದು ಸುಂಕವನ್ನು ಕೇಂದ್ರ ಸರ್ಕಾರವು ಶೇ 15ಕ್ಕೆ ಹೆಚ್ಚಿಸಿದೆ.

ಮುಖ್ಯಾಂಶಗಳು
- ಜೂನ್‌ನಲ್ಲಿ ರೆಪೊ ದರ ಯಥಾಸ್ಥಿತಿಯಲ್ಲಿ ಇರುವ ಸಾಧ್ಯತೆ
- ಹಣದುಬ್ಬರ ಮತ್ತಷ್ಟು ಜಾಸ್ತಿಯಾಗುವ ಸೂಚನೆ ಸಿಕ್ಕರೆ ರೆಪೊ ಏರಿಕೆ?

ಸಿಎನ್‌ಜಿ ಬೆಲೆಯನ್ನು ಕೂಡ ಜಾಸ್ತಿ ಮಾಡಲಾಗಿದೆ.

'ಪೆಟ್ರೋಲ್, ಡೀಸೆಲ್ ಬೆಲೆಯ ಹೆಚ್ಚಳದ ಪರಿಣಾಮವಾಗಿ ಚಿಲ್ಲರೆ ಹಣದುಬ್ಬರ ಪ್ರಮಾಣವು ಶೇ 0.75ರಷ್ಟು ಜಾಸ್ತಿ ಆಗಬಹುದು. ಹೀಗಾಗಿ ಮೇ ತಿಂಗಳಲ್ಲಿ ಹಣದುಬ್ಬರ ಪ್ರಮಾಣವು ಶೇ 4ರಿಂದ ಶೇ 4.5ರ ಮಟ್ಟದಲ್ಲಿ ಇರಬಹುದು. ಜೂನ್‌ನಲ್ಲಿ ಇದು ಶೇ 4.5ರಿಂದ ಶೇ 5ರಷ್ಟು ಆಗಬಹುದು' ಎಂದು 'ಇವೈ ಇಂಡಿಯಾ' ಹಿರಿಯ ಅಧಿಕಾರಿ ಡಿ.ಕೆ.ಶ್ರೀವಾಸ್ತವ ಹೇಳಿದ್ದಾರೆ.

'ಹಣದುಬ್ಬರ ಪ್ರಮಾಣ ಶೇ 5ಕ್ಕಿಂತ ಜಾಸ್ತಿ ಆಗಿ, ಇನ್ನೂ ಹೆಚ್ಚಳ ಕಾಣುವ ಸೂಚನೆ ಸಿಕ್ಕರೆ ಬಡ್ಡಿ ದರವನ್ನು ಹೆಚ್ಚಿಸಲು ಆರ್‌ಬಿಐ ಮುಂದಾಗಬಹುದು' ಎಂದು ಅವರು ಅಂದಾಜಿಸಿದ್ದಾರೆ.

ಆರ್‌ಬಿಐನ ಹಣಕಾಸು ನೀತಿ ಸಮಿತಿಯ ಸಭೆಯು ಜೂನ್ 5ರಂದು ನಡೆಯಲಿದ್ದು, ಸಮಿತಿಯು ದರಗಳಲ್ಲಿ ಯಾವುದೇ ಬದಲಾವಣೆ ಮಾಡದೆ 'ತಟಸ್ಥ ನಿಲುವು' ಮುಂದುವರಿಸಲಿದೆ ಎಂಬ ನಿರೀಕ್ಷೆಯನ್ನು ಅರ್ಥಶಾಸ್ತ್ರಜ್ಞರು ಹೊಂದಿದ್ದಾರೆ.

'ಜೂನ್‌ನಲ್ಲಿ ರೆಪೊ ದರದಲ್ಲಿ ಬದಲಾವಣೆ ಆಗಲಿಕ್ಕಿಲ್ಲ. ಆದರೆ ಸರಕು ಸಾಗಣೆ ದರ ಹೆಚ್ಚಳ, ಇತರ ಕಚ್ಚಾ ವಸ್ತುಗಳ ಬೆಲೆಯಲ್ಲಿ ಏರಿಕೆ ಹಾಗೂ ಅಂತಿಮವಾಗಿ ಉತ್ಪನ್ನದ ಬೆಲೆಯಲ್ಲಿನ ಏರಿಕೆಯಿಂದಾಗಿ ಈ ಹಣಕಾಸು ವರ್ಷದ ದ್ವಿತೀಯಾರ್ಧದಲ್ಲಿ ಹಣದುಬ್ಬರ ಪ್ರಮಾಣ ನಿಭಾಯಿಸಲು ಆಗದಂತಹ ಮಟ್ಟ ತಲುಪಬಹುದು ಎಂಬ ಚಿಂತೆ ನಮ್ಮನ್ನು ಕಾಡುತ್ತಿದೆ. ಹಾಗೆ ಆದಾಗ ಬಡ್ಡಿ ದರ ಹೆಚ್ಚಳ ಮಾಡಬೇಕಾಗಬಹುದು' ಎಂದು ಬಾರ್ಕ್ಲೇಸ್ ಸಂಸ್ಥೆಯ ಮುಖ್ಯ ಅರ್ಥಶಾಸ್ತ್ರಜ್ಞೆ ಆಸ್ತಾ ಗುಡ್ವಾನಿ ಹೇಳಿದ್ದಾರೆ.

ಪ್ರಸಕ್ತ ಹಣಕಾಸು ವರ್ಷದಲ್ಲಿ ಚಿಲ್ಲರೆ ಹಣದುಬ್ಬರ ಪ್ರಮಾಣವು ಶೇ 5.1ರ ಮಟ್ಟದಲ್ಲಿ ಇರಬಹುದು ಎಂದು ಕ್ರಿಸಿಲ್ ಸಂಸ್ಥೆಯ ಪ್ರಧಾನ ಅರ್ಥಶಾಸ್ತ್ರಜ್ಞೆ ದೀಪ್ತಿ ದೇಶಪಾಂಡೆ ಅವರು ಹೇಳಿದ್ದಾರೆ.

ಪ್ರಶ್ನೋತ್ತರ

ಪ್ರಮೋದ ಶ್ರೀಕಾಂತ ದೈತೋಟ
ತೆರಿಗೆ ಮತ್ತು ವೈಯಕ್ತಿಕ ಹಣಕಾಸು ತಜ್ಞ

ಜಯಕುಮಾರ್, ಆರ್.ಟಿ.ನಗರ, ಬೆಂಗಳೂರು

● **ಪ್ರಶ್ನೆ: ನಾನು ಷೇರುಪೇಟೆ, ಇಟಿಎಫ್ ಹಾಗೂ ಮ್ಯೂಚುವಲ್ ಫಂಡ್‌ಗಳಲ್ಲಿ ಹೂಡಿಕೆ ಅನುಭವ ಹೊಂದಿದ್ದೇನೆ. ಈಚೆಗೆ ಡಾಲರ್ ಮೌಲ್ಯವು ವೃದ್ಧಿಯಾಗುತ್ತಿದೆ. ಇದು ಹೂಡಿಕೆಯ ದೃಷ್ಟಿಯಿಂದ ನಮಗೆ ಲಾಭದಾಯಕವೇ? ನಾನು ಈ ವ್ಯವಹಾರದಲ್ಲಿ ಹಣ ತೊಡಗಿಸಬೇಕು ಅಂದುಕೊಂಡಿದ್ದೇನೆ. ಇದಕ್ಕೆ ಪ್ರತ್ಯೇಕ ಖಾತೆ ಬೇಕೆ ಅಥವಾ ಪ್ರಸ್ತುತ ಇರುವ ಡಿಮ್ಯಾಟ್ ಮೂಲಕ ವ್ಯವಹರಿಸಬಹುದೇ? ಯಾವೆಲ್ಲ ಮುಂಜಾಗ್ರತಾ ಕ್ರಮಗಳನ್ನು ವಹಿಸಬೇಕು? ಡಾಲರ್–ರೂಪಾಯಿ ವಿನಿಮಯ ಉತ್ತಮವೇ ಅಥವಾ ಯೂರೊ, ಪೌಂಡ್, ಯೆನ್ ಇತ್ಯಾದಿಗಳಲ್ಲೂ ವ್ಯವಹರಿಸುವುದು ಲಾಭದಾಯಕವೇ?**

ಉತ್ತರ: ಭಾರತದಲ್ಲಿ ಷೇರು ಮಾರುಕಟ್ಟೆ, ಮ್ಯೂಚುವಲ್ ಫಂಡ್ ಹಾಗೂ ಎಕ್ಸ್‌ಚೇಂಜ್ ಟ್ರೇಡೆಡ್ ಫಂಡ್‌ಗಳಲ್ಲಿ (ಇಟಿಎಫ್) ಹೂಡಿಕೆ ಮಾಡುವವರು ಇತ್ತೀಚೆಗೆ ಇತರ ಹೂಡಿಕೆ ವರ್ಗಗಳಾದ ಕಮಾಡಿಟಿ, ಕರೆನ್ಸಿ ಮಾರುಕಟ್ಟೆಯತ್ತ ಹೆಚ್ಚು ಗಮನ ಹರಿಸುತ್ತಿದ್ದಾರೆ. ವಿಶೇಷವಾಗಿ ಅಮೆರಿಕದ ಡಾಲರ್ ಮೌಲ್ಯವು ನಿರಂತರವಾಗಿ ಬಲವಾಗುತ್ತಿರುವ ಹಿನ್ನೆಲೆಯಲ್ಲಿ 'ಡಾಲರ್–ರೂಪಾಯಿ ವ್ಯವಹಾರ' ಲಾಭದಾಯಕವೇ ಎಂಬ ಪ್ರಶ್ನೆ ಸಾಮಾನ್ಯವಾಗಿದೆ. ಕರೆನ್ಸಿ ಮಾರುಕಟ್ಟೆಯಲ್ಲಿ ನೇರವಾಗಿ ಡಾಲರ್ ಖರೀದಿ ಮಾಡಿ ನಮ್ಮ ಖಾತೆಯಲ್ಲಿ ಇಟ್ಟುಕೊಳ್ಳಲು ಅನುಮತಿ ಇಲ್ಲ. ವಿದೇಶಿ ವಿನಿಮಯ ನಿರ್ವಹಣಾ ಕಾಯ್ದೆ (ಫೆಮಾ) ಅಡಿಯಲ್ಲಿ ಭಾರತೀಯ ನಿವಾಸಿಗಳು ವಿದೇಶಿ ಕರೆನ್ಸಿಯನ್ನು ಪ್ರವಾಸ, ಶಿಕ್ಷಣ, ವೈದ್ಯಕೀಯ ಅಥವಾ ಮಾನ್ಯ ಹೂಡಿಕೆ ಉದ್ದೇಶಗಳಿಗೆ ಮಾತ್ರ ನಿರ್ದಿಷ್ಟ ನಿಯಮಗಳ ಅಡಿಯಲ್ಲಿ ಹೊಂದಿರಬಹುದು. ಮೌಲ್ಯ ಏರಿಕೆಯ ನಿರೀಕ್ಷೆಯಲ್ಲಿ ಭೌತಿಕ ವಿದೇಶಿ ಕರೆನ್ಸಿಯನ್ನು ಸಂಗ್ರಹಿಸುವುದು ಷೇರು, ಮ್ಯೂಚುವಲ್ ಫಂಡ್ ಇತ್ಯಾದಿ ಖರೀದಿಸಿದಂತೆ ಸಾಮಾನ್ಯ ಹೂಡಿಕೆ ಮಾರ್ಗವಲ್ಲ.

ಭಾರತೀಯ ಹೂಡಿಕೆದಾರರಿಗೆ ಷೇರು ವಿನಿಮಯ ಕೇಂದ್ರಗಳಾದ ಎನ್‌ಎಸ್‌ಇ ಮತ್ತು ಬಿಎಸ್‌ಇ ಮೂಲಕ ಕರೆನ್ಸಿ ಡೆರಿವೇಟಿವ್ ವಿಭಾಗದಲ್ಲಿ ಡಾಲರ್–ರೂಪಾಯಿ, ಯೂರೊ–ರೂಪಾಯಿ, ಪೌಂಡ್–ರೂಪಾಯಿ ಹಾಗೂ ಯೆನ್–ರೂಪಾಯಿ 'ಫ್ಯೂಚರ್ಸ್ ಮತ್ತು ಆಪ್ಷನ್' ಒಪ್ಪಂದಗಳಲ್ಲಿ ವ್ಯವಹರಿಸುವ ಅವಕಾಶವಿದೆ. ಈಗಿರುವ ಟ್ರೇಡಿಂಗ್ ಹಾಗೂ ಡಿಮ್ಯಾಟ್ ಖಾತೆಯಲ್ಲಿಯೇ ಕರೆನ್ಸಿ ವಿಭಾಗವನ್ನು ಸಕ್ರಿಯಗೊಳಿಸಿ ವ್ಯವಹರಿಸಬಹುದು; ಪ್ರತ್ಯೇಕ ಬ್ಯಾಂಕ್ ಖಾತೆ ಅಗತ್ಯವಿಲ್ಲ. ಪ್ರತ್ಯೇಕ ಕರೆನ್ಸಿ ವಿಭಾಗವು ಅನುಮತಿ ಹಾಗೂ ದಾಖಲೆಗಳನ್ನು ಕೇಳಬಹುದು. ಈ ಮಾರುಕಟ್ಟೆಗಳಲ್ಲಿ ವ್ಯವಹಾರಗಳು ಮುಖ್ಯವಾಗಿ 'ಫ್ಯೂಚರ್ಸ್ ಮತ್ತು ಆಪ್ಷನ್' ಒಪ್ಪಂದಗಳಲ್ಲಿ ನಡೆಯುತ್ತವೆ. ಎನ್‌ಎಸ್‌ಇ ಮೂಲಕ ನಡೆಯುವ ವ್ಯವಹಾರಕ್ಕೆ ಹೆಚ್ಚಿನ ದ್ರವ್ಯತೆ ಇದೆ; ಭೌತಿಕ ಕರೆನ್ಸಿ ವಿತರಣೆ ಸಾಮಾನ್ಯವಾಗಿ ನಡೆಯುವುದಿಲ್ಲ. ಈ ಬಗ್ಗೆ ಹೆಚ್ಚಿನ ಮಾಹಿತಿ ನಿಮ್ಮ ಬ್ರೋಕರೇಜ್ ಸಂಸ್ಥೆಯನ್ನು ಸಂಪರ್ಕಿಸಿ.

ಕರೆನ್ಸಿ ಮಾರುಕಟ್ಟೆ ಸಮಯ ಸಾಮಾನ್ಯ ಈಕ್ವಿಟಿ ಮಾರುಕಟ್ಟೆಗಿಂತ ಹೆಚ್ಚಿರುತ್ತದೆ. ಸಾಮಾನ್ಯವಾಗಿ ಬೆಳಿಗ್ಗೆ 9 ಗಂಟೆಯಿಂದ ಸಂಜೆ 5 ಗಂಟೆಯವರೆಗೆ ಸಕ್ರಿಯ ವಹಿವಾಟು ನಡೆಯುತ್ತದೆ. ಜಾಗತಿಕ ಆರ್ಥಿಕ ಮಾಹಿತಿ, ಫೆಡರಲ್ ರಿಸರ್ವ್ ಬಡ್ಡಿದರ ನಿರ್ಧಾರಗಳು, ಕಚ್ಚಾ ತೈಲದ ಬೆಲೆ, ಜಾಗತಿಕ ರಾಜಕಾರಣ, ವಿದೇಶಿ ಬಂಡವಾಳ ಹೂಡಿಕೆ, ಭಾರತದ ವ್ಯಾಪಾರ ಕೊರತೆ ಹಾಗೂ ರಿಸರ್ವ್ ಬ್ಯಾಂಕ್ ನಿರ್ಧಾರ ಇತ್ಯಾದಿಗಳು ಡಾಲರ್–ರೂಪಾಯಿ ಮೌಲ್ಯವನ್ನು ಪ್ರಭಾವಿಸುತ್ತವೆ. ಭಾರತದಲ್ಲಿ ತೈಲ, ಚಿನ್ನ ಆಮದು ಹೆಚ್ಚಿರುವುದರಿಂದ ಡಾಲರ್ ಬೇಡಿಕೆ ಸಾಮಾನ್ಯವಾಗಿ ಹೆಚ್ಚು ಇರುತ್ತದೆ. ಈ ಕಾರಣದಿಂದ ಡಾಲರ್–ರೂಪಾಯಿ ಒಪ್ಪಂದಗಳಲ್ಲಿ ಹೆಚ್ಚಿನ ವಹಿವಾಟು ಮತ್ತು ದ್ರವ್ಯತೆ ಇರುತ್ತದೆ. ಯೂರೊ, ಪೌಂಡ್ ಹಾಗೂ ಯೆನ್ ಕರೆನ್ಸಿಗಳಲ್ಲಿ ವ್ಯವಹಾರ ಸಾಧ್ಯವಿದ್ದರೂ, ಅವುಗಳಲ್ಲಿ ವಹಿವಾಟಿನ ಪ್ರಮಾಣ ಕಡಿಮೆ ಇರುವ ಕಾರಣ ಸ್ಪ್ರೆಡ್ ಮತ್ತು ಅಸ್ಥಿರತೆ ಹೆಚ್ಚಿರಬಹುದು.

ತೆರಿಗೆ ದೃಷ್ಟಿಯಿಂದ ಕರೆನ್ಸಿ 'ಫ್ಯೂಚರ್ಸ್ ಮತ್ತು ಆಪ್ಷನ್' ವ್ಯವಹಾರಗಳಿಗೆ ವಿಶೇಷ ಗಮನ ಅಗತ್ಯ. ಷೇರು ವಿನಿಮಯದಲ್ಲಿ ನಡೆಯುವ ಕರೆನ್ಸಿ ಡೆರಿವೇಟಿವ್ ವ್ಯವಹಾರಗಳನ್ನು ಅಂದರೆ ಅದರ ಲಾಭ ಅಥವಾ ನಷ್ಟವನ್ನು ಸಾಮಾನ್ಯವಾಗಿ 'ವ್ಯವಹಾರ ಆದಾಯ' ಎಂದು ಪರಿಗಣಿಸಲಾಗುತ್ತದೆ. ಇದು ಸಾಮಾನ್ಯ ಷೇರು ಹೂಡಿಕೆಗಳಂತೆ 'ಅಲ್ಪಾವಧಿ ಬಂಡವಾಳ ವೃದ್ಧಿ' ಅಥವಾ 'ದೀರ್ಘಾವಧಿ ಬಂಡವಾಳ ವೃದ್ಧಿ' ವಿಭಾಗಕ್ಕೆ ಸೇರುವುದಿಲ್ಲ. ಏಕೆಂದರೆ ಈ ಒಪ್ಪಂದಗಳು ಹೂಡಿಕೆ ಆಸ್ತಿ ಹೊಂದಿರುವುದಕ್ಕಿಂತ ವ್ಯಾಪಾರ ಒಪ್ಪಂದದ ಸ್ವರೂಪ ಹೊಂದಿರುತ್ತವೆ. ಇಂತಹ ವ್ಯವಹಾರಗಳಲ್ಲಿ ಲಾಭ ಉಂಟಾದರೆ ಸಾಮಾನ್ಯ ಆದಾಯ ತೆರಿಗೆ ಹಂತದ ಪ್ರಕಾರ ತೆರಿಗೆ ವಿಧಿಸಲಾಗುತ್ತದೆ; ನಷ್ಟ ಉಂಟಾದರೆ ನಿಯಮಾನುಸಾರ ಮುಂದಿನ ವರ್ಷಗಳಿಗೆ ಅದನ್ನು ವರ್ಗಾಯಿಸಿಕೊಳ್ಳುವ ಅವಕಾಶವೂ ಇರಬಹುದು.

ಹೂಡಿಕೆದಾರರ ದೃಷ್ಟಿಯಿಂದ ಕರೆನ್ಸಿ ವ್ಯವಹಾರವು ಸಾಮಾನ್ಯ ಹೂಡಿಕೆಗೆ ಹೋಲಿಸಿದರೆ ಹೆಚ್ಚು ಸಂವೇದನಾಶೀಲ ಮತ್ತು ಲಿವರೇಜ್ ಆಧಾರಿತವಾಗಿದೆ. ಕಡಿಮೆ ಮಾರ್ಜಿನ್‌ನಲ್ಲಿ ದೊಡ್ಡ ಒಪ್ಪಂದ ಮೌಲ್ಯವನ್ನು ನಿಯಂತ್ರಿಸಬಹುದಾದ್ದರಿಂದ ಲಾಭದೊಂದಿಗೆ ನಷ್ಟವೂ ವೇಗವಾಗಿ ಉಂಟಾಗಬಹುದು. ವಿಶೇಷವಾಗಿ 'ಫ್ಯೂಚರ್ಸ್ ಮತ್ತು ಆಪ್ಷನ್' ವ್ಯವಹಾರಗಳಲ್ಲಿ ಅನುಭವವಿಲ್ಲದೆ ಪ್ರವೇಶಿಸುವುದು ಅಪಾಯಕಾರಿ. ಕರೆನ್ಸಿ ಚಲನೆಗಳನ್ನು 'ಡಾಲರ್ ಏರುತ್ತಿದೆ' ಎಂಬ ಸರಳ ನಿರೀಕ್ಷೆಯ ಮೇಲೆ ಅಂದಾಜಿಸಲು ಸಾಧ್ಯವಿಲ್ಲ; ಕೇಂದ್ರೀಯ ಬ್ಯಾಂಕ್ ನೀತಿಗಳು ಮತ್ತು ಜಾಗತಿಕ ಆರ್ಥಿಕ ಬೆಳವಣಿಗೆಗಳು ತೀವ್ರ ಪರಿಣಾಮ ಬೀರುತ್ತವೆ. ದೀರ್ಘಾವಧಿ ಸಂಪತ್ತಿನ ನಿರ್ಮಾಣಕ್ಕೆ ಷೇರು ಮತ್ತು ಮ್ಯೂಚುವಲ್ ಫಂಡ್ ಹೂಡಿಕೆಗಳು ಹೆಚ್ಚು ಸ್ಥಿರವಾದ ಮಾರ್ಗಗಳಾಗಿದ್ದರೆ, ಕರೆನ್ಸಿ ಡೆರಿವೇಟಿವ್ ವ್ಯವಹಾರವು ಅನುಭವ ಮತ್ತು ನಿರಂತರ ಮಾರುಕಟ್ಟೆ ಗಮನ ಬೇಡುವ ವಿಶೇಷ ವಿಭಾಗವೆಂದು ಪರಿಗಣಿಸಬೇಕು. ಹೀಗಾಗಿ ಈ ವ್ಯವಹಾರದಲ್ಲಿ ತೊಡಗುವ ಮುನ್ನ ಮಾಹಿತಿ ಹಾಗೂ ಅನುಭವ ಪಡೆದುಕೊಳ್ಳಿ.

ಹಣಕಾಸಿಗೆ ಸಂಬಂಧಿಸಿದ ಪ್ರಶ್ನೆಗಳನ್ನು ಪತ್ರದಲ್ಲಿ (ದೂರವಾಣಿ ಸಂಖ್ಯೆ ಸಹಿತ) ಬರೆದು ಕಳುಹಿಸಿ.
ವಿಳಾಸ: ಪ್ರಶ್ನೋತ್ತರ, ವಾಣಿಜ್ಯ ವಿಭಾಗ, ಪ್ರಜಾವಾಣಿ, ನಂ.75, ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು-560001.
ಇ-ಮೇಲ್: businessdesk@prajavani.co.in

ಅಡಿಕೆ ಧಾರಣೆ

ಪುತ್ತೂರು				ಯಲ್ಲಾಪುರ	
ಕೋಕ	20000-33500	ಬಿಳಿಗೋಟು	25899-35899	ಆಪಿ	60777-60777
ಹೊಸತು	30000-45000	ಚಾಲಿ	37899-45919	ಬಿಳಿಗೋಟು	16109-36899
ಹಳತು	49000-53500	ಕೋಕ	21899-33789	ಚಾಲಿ	36899-46899
ಸಾಗರ		ಕೆಂಪುಗೋಟು	31100-36600	ಕೋಕ	16000-31209
ಬಿಳಿಗೋಟು	23269-30300	ರಾಶಿ	46969-52409	ಕೆಂಪುಗೋಟು	16081-36099
ಚಾಲಿ	37199-39199	ತಟ್ಟಬೆಟ್ಟೆ	38000-46089	ರಾಶಿ	49869-57519
ಕೋಕ	29999-33699	ಶಿರಸಿ		ಶಿವಮೊಗ್ಗ	
ಕೆಂಪುಗೋಟು	34399-34399	ಬೆಟ್ಟೆ	36099-47800	ಸರಕು/ಹಸ	54859-96199
ರಾಶಿ	47699-51699	ಬಿಳಿಗೋಟು	25009-37199	ಬೆಟ್ಟೆ	50014-64300
ಸಿಪ್ಪೆಗೋಟು	13269-21089	ಚಾಲಿ	42100-46501	ರಾಶಿಇಡಿ	43366-53699
ಸಿದ್ದಾಪುರ		ಕೆಂಪುಗೋಟು	26219-34719	ಗೊರಬಲು	19252-42230
		ರಾಶಿ	48009-53000		

ಕಚ್ಚಾ ತೈಲ ಬೆಲೆ ಇಳಿಕೆಯಾದರೂ ಪೆಟ್ರೋಲ್, ಡೀಸೆಲ್ ದರ ಏರಿಕೆ ಏಕೆ: ಖರ್ಗೆ ಪ್ರಶ್ನೆ ಸರಿಯೇ

ಸರಿ | ತಪ್ಪು

ಪ್ರತಿಕ್ರಿಯಿಸಲು ಕೋಡ್ ಸ್ಕ್ಯಾನ್ ಮಾಡಿ

ಮುಂಬೈ ಧಾರಣೆ (ಶೇಂಗಾ)

26-05-2026	
ಜಾವಾ 70/80(ಹೊಸ)	11300-11400
ಜಾವಾ 80/90(ಹೊಸ)	10600-10700
ದಪ್ಪ ಮಧ್ಯಪ್ರದೇಶ (ಹೊಸ)	8500-8600
ದಪ್ಪ ಗುಜರಾತ್ (ಹೊಸ)	9400-9500
ಶೇಂಗಾ ಎಣ್ಣೆ (10 ಕೆಜಿಗೆ)	
ಕಚ್ಚಾ (ತೆರಿಗೆ ಬಿಟ್ಟು)	1650 (1650)
ಒಂದು ವಾರದ ಡೆಲಿವರಿ	1645 (1645)
ಪಾಮ್ ವಾರದ ಡೆಲಿವರಿ	1488 (1493)
ಸೂರ್ಯಕಾಂತಿ ಎಣ್ಣೆ ಕಚ್ಚಾ	1555 (1560)
ಚಿನ್ನ-ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)	
ಅಪರಂಜಿ ಚಿನ್ನ 10 ಗ್ರಾಂ	1,57,200 (1,58,000)
ಬೆಳ್ಳಿ ಕೆ.ಜಿಗೆ	2,66,500 (2,70,000)

ಆವರಣದಲ್ಲಿ ಹಿಂದಿನ ವಹಿವಾಟಿನ ಧಾರಣೆ

ಮುಂಬೈ ಖಾದ್ಯ ತೈಲ (ಆವರಣದಲ್ಲಿ ಕಳೆದ ವಹಿವಾಟಿನ ದರ) (10 ಕೆ.ಜಿಗೆ)

ಶೇಂಗಾ (ರಿಫೈನ್ಡ್)	₹1640 (1640)
ಸೋಯಾ (ರಿಫೈನ್ಡ್)	₹1510 (1510)
ಸೂರ್ಯಕಾಂತಿ (ರಿಫೈನ್ಡ್)	₹1655 (1660)
ಪಾಮೋಲಿನ್	₹1490 (1495)

ಸುದ್ದಿ ವೈವಿಧ್ಯಕ್ಕೆ prajavani.netಗೆ ಭೇಟಿ ಮಾಡಿ

'ಭಾರತ, ಕೆನಡಾ ಎಫ್‌ಟಿಎ ಮಾತುಕತೆ ವರ್ಷಾಂತ್ಯಕ್ಕೆ ಪೂರ್ಣ'

ನವದೆಹಲಿ (ಪಿಟಿಐ): ಕೆನಡಾ ಜೊತೆಗಿನ ಮುಕ್ತ ವ್ಯಾಪಾರ ಒಪ್ಪಂದಕ್ಕೆ (ಎಫ್‌ಟಿಎ) ಸಂಬಂಧಿಸಿದ ಮಾತುಕತೆಗಳನ್ನು ಈ ವರ್ಷದ ಅಂತ್ಯದ ಹೊತ್ತಿಗೆ ಪೂರ್ಣಗೊಳಿಸುವ ಉದ್ದೇಶ ಇದೆ ಎಂದು ಕೇಂದ್ರ ವಾಣಿಜ್ಯ ಮತ್ತು ಕೈಗಾರಿಕಾ ಸಚಿವ ಪೀಯೂಷ್ ಗೋಯಲ್ ತಿಳಿಸಿದ್ದಾರೆ.

ಪೀಯೂಷ್ ಗೋಯಲ್

ಗೋಯಲ್ ಅವರು ಈಗ ಕೆನಡಾ ಪ್ರವಾಸದಲ್ಲಿದ್ದಾರೆ. 100ಕ್ಕೂ ಹೆಚ್ಚು ಕಂಪನಿಗಳ ಪ್ರತಿನಿಧಿಗಳನ್ನು ಒಳಗೊಂಡ ನಿಯೋಗದ ನೇತೃತ್ವ ವಹಿಸಿದ್ದಾರೆ.

'ನಮ್ಮ ದೇಶಗಳ ನಾಯಕರು ಎಫ್‌ಟಿಎ ಕುರಿತ ಮಾತುಕತೆಯನ್ನು ವರ್ಷದ ಅಂತ್ಯಕ್ಕೆ ಮೊದಲು ಪೂರ್ಣಗೊಳಿಸುವ ಗುರಿಯನ್ನಷ್ಟೇ ಹಾಕಿಕೊಟ್ಟಿಲ್ಲ. ಬದಲಿಗೆ, ಅವರು ಎರಡೂ ದೇಶಗಳ ವ್ಯಾಪಾರ ವಹಿವಾಟಿನ ಗಾತ್ರವನ್ನು ಮೂರು ಪಟ್ಟು ಹೆಚ್ಚಿಸುವ ಗುರಿಯನ್ನೂ ನಿಗದಿ ಮಾಡಿಕೊಟ್ಟಿದ್ದಾರೆ' ಎಂದು ಗೋಯಲ್ ಅವರು ಕೆನಡಾದ ವ್ಯಾಪಾರ ಸಚಿವ ಮಣಿಂದರ್ ಸಿಧು ಅವರ ಜೊತೆ ಒಟ್ಟಾವದಲ್ಲಿ ಜಂಟಿ ಸುದ್ದಿಗೋಷ್ಠಿಯಲ್ಲಿ ಹೇಳಿದ್ದಾರೆ.

ಗೋಯಲ್ ಅವರು ಕೆನಡಾ ಪ್ರಧಾನಿ ಮಾರ್ಕ್ ಕಾರ್ನಿ ಅವರನ್ನು ಭೇಟಿ ಮಾಡಿದ್ದಾರೆ. ಒಪ್ಪಂದದ ಕುರಿತಾದ ಮಾತುಕತೆಗಳು ಬೇಗನೆ ಪೂರ್ಣಗೊಳ್ಳುತ್ತವೆ ಎಂಬ ವಿಶ್ವಾಸವನ್ನು ಇಬ್ಬರೂ ವ್ಯಕ್ತಪಡಿಸಿದ್ದಾರೆ.

'ನಾವು ಭಾರತದ ಜೊತೆ ಮುಕ್ತ ವ್ಯಾಪಾರ ಒಪ್ಪಂದ ಕುರಿತು ಮಾತುಕತೆ ನಡೆಸುತ್ತಿದ್ದೇವೆ. ಇದು ಕೆನಡಾದ ಕಾರ್ಮಿಕರಿಗೆ ಹಾಗೂ ಉದ್ದಿಮೆಗಳಿಗೆ ಮಹತ್ವದ ಬದಲಾವಣೆ ತರಲಿದೆ. ಅವರಿಗೆ ಇದು ಬೃಹತ್ತಾದ ಹೊಸ ಮಾರುಕಟ್ಟೆಯನ್ನು ತೆರೆದುಕೊಡಲಿದೆ...' ಎಂದು ಕಾರ್ನಿ ಅವರು ಸಾಮಾಜಿಕ ಜಾಲತಾಣ ಖಾತೆಯಲ್ಲಿ ಬರೆದಿದ್ದಾರೆ.

ಭಾರತ ಮತ್ತು ಕೆನಡಾ ನಡುವೆ ಸಮಗ್ರ ಆರ್ಥಿಕ ಪಾಲುದಾರಿಕೆ ಒಪ್ಪಂದ ಕುರಿತಾಗಿ ಎರಡು ಸುತ್ತಿನ ಮಾತುಕತೆಗಳು ಪೂರ್ಣಗೊಂಡಿವೆ. ಮೂರನೆಯ ಸುತ್ತಿನ ಮಾತುಕತೆಯು ಒಟ್ಟಾವದಲ್ಲಿ ಮೇ 29ರವರೆಗೆ ನಡೆಯಲಿದೆ.

ಸಚಿವ ಜೈಶಂಕರ್ ಅಧ್ಯಕ್ಷತೆಯಲ್ಲಿ ವಿದೇಶಾಂಗ ಸಚಿವರ ಸಭೆ ● ಕಾರ್ಯತಂತ್ರ ಕುರಿತು ಚರ್ಚೆ

ಚೀನಾ ಪ್ರಾಬಲ್ಯ ತಡೆಗೆ 'ಕ್ವಾಡ್' ಪ್ರತಿತಂತ್ರ

ನವದೆಹಲಿ(ಪಿಟಿಐ): ಹಿಂದೂ ಮಹಾಸಾಗರ–ಪೆಸಿಫಿಕ್ ಪ್ರದೇಶದಲ್ಲಿ ತನ್ನ ಮಿಲಿಟರಿ ಪ್ರಾಬಲ್ಯ ಹೆಚ್ಚಿಸಿಕೊಳ್ಳುತ್ತಿರುವ ಚೀನಾದ ಪ್ರಯತ್ನಗಳಿಗೆ ಪ್ರತಿಯಾಗಿ ಕಾರ್ಯತಂತ್ರ ಹೆಣೆಯುವುದಕ್ಕೆ ಸಂಬಂಧಿಸಿ 'ಕ್ವಾಡ್' ಗುಂಪು ಮಂಗಳವಾರ ಹಲವಾರು ಕ್ರಮಗಳನ್ನು ಘೋಷಿಸಿದೆ.

'ಪೂರ್ವ ಚೀನಾ ಸಮುದ್ರ ಮತ್ತು ದಕ್ಷಿಣ ಚೀನಾ ಸಮುದ್ರದಲ್ಲಿನ ಸನ್ನಿವೇಶ ಕಳವಳಕಾರಿಯಾಗಿದೆ. ಈ ಜಲಪ್ರದೇಶದಲ್ಲಿ ಕೈಗೊಳ್ಳುವ ಏಕಪಕ್ಷೀಯ ಅಥವಾ ಅಸ್ಥಿರತೆ ಉಂಟು ಮಾಡಬಲ್ಲ ಕ್ರಮಗಳಿಗೆ ನಮ್ಮ ವಿರೋಧ ಇದೆ' ಎಂದು ಹೇಳುವ ಮೂಲಕ, 'ಕ್ವಾಡ್' ರಾಷ್ಟ್ರಗಳು ಚೀನಾಕ್ಕೆ ಪರೋಕ್ಷ ಸಂದೇಶ ರವಾನಿಸಿದವು.

ಇಂಧನ ಹಾಗೂ ನಿರ್ಣಾಯಕ ಖನಿಜಗಳ ವಿಚಾರದಲ್ಲಿ 'ಕ್ವಾಡ್' ಸದಸ್ಯ ರಾಷ್ಟ್ರಗಳ ನಡುವೆ ಸಹಕಾರ ವೃದ್ಧಿಸುವುದು, ಹಿಂದೂಮಹಾಸಾಗರ–ಪೆಸಿಫಿಕ್ ಪ್ರದೇಶದಲ್ಲಿ ಕಣ್ಗಾವಲು ಹೆಚ್ಚಿಸುವುದು ಹಾಗೂ ಈ ಪ್ರದೇಶದಲ್ಲಿನ ಬಂದರುಗಳಲ್ಲಿ ಮೂಲಸೌಕರ್ಯ ಅಭಿವೃದ್ಧಿಗೆ ಒತ್ತು ನೀಡುವುದಕ್ಕೆ ಕೂಡ ನಾಲ್ಕು ರಾಷ್ಟ್ರಗಳನ್ನು ಒಳಗೊಂಡ ಈ ಗುಂಪು ನಿರ್ಧರಿಸಿತು.

ಸಚಿವ ಎಸ್.ಜೈಶಂಕರ್ ಅಧ್ಯಕ್ಷತೆಯಲ್ಲಿ ನಡೆದ 'ಕ್ವಾಡ್' ಸದಸ್ಯ ರಾಷ್ಟ್ರಗಳ ವಿದೇಶಾಂಗ ಸಚಿವರ ಸಭೆಯಲ್ಲಿ, ಹಿಂದೂಮಹಾಸಾಗರ–ಪೆಸಿಫಿಕ್ ಪ್ರದೇಶದಲ್ಲಿ ಎದುರಾಗುವ ಸವಾಲುಗಳನ್ನು ಎದುರಿಸುವ ಕುರಿತು ಚರ್ಚಿಸಲಾಯಿತು.

ಅಮೆರಿಕ ವಿದೇಶಾಂಗ ಕಾರ್ಯದರ್ಶಿ ಮಾರ್ಕೊ ರುಬಿಯೊ, ಆಸ್ಟ್ರೇಲಿಯಾ ವಿದೇಶಾಂಗ ಸಚಿವೆ ಪೆನ್ನಿ ವಾಂಗ್ ಹಾಗೂ ಜಪಾನ್ ವಿದೇಶಾಂಗ ಸಚಿವ ತೋಷಿಮಿತ್ಸು ಮೊಟೇಗಿ ಸಭೆಯಲ್ಲಿ ಪಾಲ್ಗೊಂಡಿದ್ದರು. ಸಭೆ ನಂತರ, ಜಂಟಿ ಹೇಳಿಕೆಯನ್ನು ಬಿಡುಗಡೆ ಮಾಡಲಾಯಿತು.

ನವದೆಹಲಿಯಲ್ಲಿ ಮಂಗಳವಾರ ನಡೆದ 'ಕ್ವಾಡ್' ವಿದೇಶಾಂಗ ಸಚಿವರ ಸಭೆಯಲ್ಲಿ ಪಾಲ್ಗೊಳ್ಳಲು ಜಪಾನ್‌ನ ತೋಷಿಮಿತ್ಸು ಮೊಟೇಗಿ,ಆಸ್ಟ್ರೇಲಿಯಾದ ಪೆನ್ನಿ ವಾಂಗ್, ಅಮೆರಿಕದ ಮಾರ್ಕೊ ರುಬಿಯೊ ಮತ್ತು ಎಸ್.ಜೈಶಂಕರ್ ತೆರಳುತ್ತಿರುವುದು —ಪಿಟಿಐ ಚಿತ್ರ

ಪ್ರಮುಖ ಅಂಶಗಳು
- ಹೊರ್ಮುಜ್ ಜಲಸಂಧಿ ಮೂಲಕ ಹಡಗುಗಳ ತಡೆರಹಿತ ಸಂಚಾರ ಸಾಧ್ಯವಾಗಬೇಕು
- ಭಯೋತ್ಪಾದನೆ ಕುರಿತು ಶೂನ್ಯ ಸಹಿಷ್ಣುತೆ ಅಗತ್ಯ. ಉಗ್ರರ ದಾಳಿಗೆ ಒಳಗಾಗುವ ರಾಷ್ಟ್ರಗಳು ತಮ್ಮನ್ನು ರಕ್ಷಿಸಿಕೊಳ್ಳುವ ಹಕ್ಕು ಹೊಂದಿವೆ

ಸದಸ್ಯ ರಾಷ್ಟ್ರಗಳ ಒತ್ತಾಯ
- ತೈಲ ಉತ್ಪಾದಿಸುವ ಮತ್ತು ಖರೀದಿಸುವ ದೇಶಗಳು ಇಡೀ ಪ್ರಕ್ರಿಯೆಗಳಲ್ಲಿ ಪಾರದರ್ಶಕತೆ ಕಾಪಾಡಿಕೊಳ್ಳಬೇಕು
- ಇಂಧನ ಮಾರುಕಟ್ಟೆಯಲ್ಲಿ ಏರಿಳಿತ ಹಾಗೂ ಸಮಸ್ಯೆಗಳು ಕಂಡುಬಂದ ಸಂದರ್ಭಗಳಲ್ಲಿ ಹಿಂದೂ ಮಹಾಸಾಗರ–ಪೆಸಿಫಿಕ್ ಪ್ರದೇಶ ಹಾಗೂ ಜಾಗತಿಕ ಮಟ್ಟದಲ್ಲಿ ಇಂಧನ ಲಭ್ಯತೆಯಲ್ಲಿ ಸ್ಥಿರತೆ ಇರುವುದನ್ನು ಖಾತ್ರಿಪಡಿಸಬೇಕು
- ಸುರಕ್ಷಿತ ಸಮುದ್ರಯಾನ ಖಾತ್ರಿಪಡಿಸಬೇಕು. ನಿರ್ಣಾಯಕ ಜಲಮಾರ್ಗಗಳು ಹಾಗೂ ಮೂಲಸೌಕರ್ಯಗಳಿಗೆ ರಕ್ಷಣೆ ಒದಗಿಸಬೇಕು
- ತಂತ್ರಜ್ಞಾನ, ನಿರ್ವಹಣೆ, ನೀತಿ ನಿರೂಪಣೆ, ಅಂತರರಾಷ್ಟ್ರೀಯ ಮಾರುಕಟ್ಟೆ ವಿಶ್ಲೇಷಣೆ ಹಾಗೂ ತುರ್ತು ಸಂದರ್ಭಗಳಲ್ಲಿ ಸ್ಪಂದಿಸುವ ವ್ಯವಸ್ಥೆಯನ್ನು ಒಳಗೊಂಡ 'ಹಿಂದೂಮಹಾಸಾಗರ–ಪೆಸಿಫಿಕ್ ಇಂಧನ ಸುರಕ್ಷತೆ' ಉಪಕ್ರಮ ಜಾರಿಗೆ ಒತ್ತು

ಕಣ್ಗಾವಲು: ನಿರ್ಧಾರಕ್ಕೆ ಚೀನಾ ವಿರೋಧ

ಬೀಜಿಂಗ್: 'ಕ್ವಾಡ್ ಗುಂಪು ರಚಿಸಿರುವುದಕ್ಕೆ ಚೀನಾ ಮೊದಲಿನಿಂದಲೂ ವಿರೋಧ ವ್ಯಕ್ತಪಡಿಸುತ್ತಾ ಬಂದಿದೆ. ಹಲವಾರು ಸಂದರ್ಭಗಳಲ್ಲಿ ತನ್ನ ಈ ನಿಲುವನ್ನು ಹೇಳಿದೆ' ಎಂದು ಚೀನಾ ವಿದೇಶಾಂಗ ಸಚಿವಾಲಯ ವಕ್ತಾರರಾದ ಮಾವೊ ನಿಂಗ್ ಮಂಗಳವಾರ ಹೇಳಿದ್ದಾರೆ.

ಹಿಂದೂಮಹಾಸಾಗರ–ಪೆಸಿಫಿಕ್ ಪ್ರದೇಶದ ಸಮುದ್ರ ಮಾರ್ಗಗಳಲ್ಲಿ ಕಣ್ಗಾವಲು ಹೆಚ್ಚಿಸುವುದಕ್ಕೆ ಕ್ವಾಡ್ ವಿದೇಶಾಂಗ ಸಚಿವರ ಸಭೆ ಕೈಗೊಂಡಿರುವ ನಿರ್ಧಾರ ಕುರಿತ ಸುದ್ದಿಗಾರರ ಪ್ರಶ್ನೆಗೆ ಅವರು ಹೀಗೆ ಪ್ರತಿಕ್ರಿಯಿಸಿದ್ದಾರೆ.

'ದೇಶಗಳ ನಡುವಿನ ಸಹಕಾರವು ಆಯಾ ಪ್ರದೇಶಗಳಲ್ಲಿ ಶಾಂತಿ, ಸ್ಥಿರತೆ ಸ್ಥಾಪನೆಗೆ ಹಾಗೂ ಪ್ರಗತಿಗೆ ಅನುಕೂಲವಾಗುವಂತಿರಬೇಕೇ ಹೊರತು ಮೂರನೇ ದೇಶವನ್ನು ಗುರಿಯಾಗಿಸಿರಬಾರದು' ಎಂದರು.

ಯಾವುದೇ ಆರ್ಥಿಕ ಚಟುವಟಿಕೆ, ಇಂಧನ ವ್ಯಾಪಾರ ಅಥವಾ ಕಡಲ ಮಾರ್ಗದಲ್ಲಿನ ವ್ಯವಹಾರ ವಾಗಿರಲಿ ಬರುವ ದಿನಗಳಲ್ಲಿ ಹಿಂದೂಮಹಾಸಾಗರ–ಪೆಸಿಫಿಕ್ ಪ್ರದೇಶವು ಜಾಗತಿಕ ಮಟ್ಟದಲ್ಲಿ ಮಹತ್ವದ ಪಾತ್ರ ವಹಿಸಲಿದೆ. ಕ್ವಾಡ್‌ನ ಜವಾಬ್ದಾರಿ ಹೆಚ್ಚಲಿದ್ದು ನಾವು ಸಿದ್ಧರಾಗಬೇಕು
ಎಸ್.ಜೈಶಂಕರ್, ವಿದೇಶಾಂಗ ಸಚಿವ

ಜಗತ್ತಿನಲ್ಲಿ ಸಮುದ್ರ ಮಾರ್ಗದ ಮೂಲಕ ನಡೆಯುವ ವಾಣಿಜ್ಯ ಚಟುವಟಿಕೆಗಳ ಪೈಕಿ ಶೇ60ರಷ್ಟು ವ್ಯವಹಾರವು ಹಿಂದೂಮಹಾಸಾಗರ–ಪೆಸಿಫಿಕ್ ಪ್ರದೇಶ ಮೂಲಕ ನಡೆಯುತ್ತದೆ. ಹೀಗಾಗಿ ಈ ಜಲಪ್ರದೇಶದ ಸುರಕ್ಷತೆ ಮಹತ್ವದ್ದು. ಈ ಪ್ರದೇಶದಲ್ಲಿ ಕಣ್ಗಾವಲು ಹೆಚ್ಚಿಸಿ, ಬಂದರುಗಳಲ್ಲಿ ಮೂಲಸೌಕರ್ಯ ಅಭಿವೃದ್ಧಿಪಡಿಸಲಾಗುವುದು
ಮಾರ್ಕೊ ರುಬಿಯೊ, ಅಮೆರಿಕ ವಿದೇಶಾಂಗ ಕಾರ್ಯದರ್ಶಿ

ಆಗ್ನೇಯ ಏಷ್ಯಾದಲ್ಲಿ ಸಕ್ರಿಯವಾಗಿರುವ ಅಕ್ರಮ ಚಟುವಟಿಕೆಗಳ ಕೇಂದ್ರಗಳ ನಿಗ್ರಹಕ್ಕೆ 'ಕ್ವಾಡ್' ರಾಷ್ಟ್ರಗಳ ನಡುವಿನ ಸಹಕಾರ ಅಗತ್ಯ. ಹಿಂದೂಮಹಾಸಾಗರದಲ್ಲಿ ಕಣ್ಗಾವಲು ಹೆಚ್ಚಳಕ್ಕೆ ಆಸ್ಟ್ರೇಲಿಯಾ ಒತ್ತು ನೀಡಲಿದೆ
ಪೆನ್ನಿ ವಾಂಗ್, ಆಸ್ಟ್ರೇಲಿಯಾ ವಿದೇಶಾಂಗ ಸಚಿವೆ

ಪ್ರಜಾವಾಣಿ
ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
Log on to : https://homages.deccanherald.com
or
Scan QR code to access booking form



ಶ್ರದ್ಧಾಂಜಲಿ
ಅತ್ಯಂತ ದುಃಖದ ವಿಷಯವೇನೆಂದರೆ, ನಮ್ಮ ಪ್ರೀತಿಯ ಎ.ವಿ.ಶ್ರೀರಾಮರೆಡ್ಡಿ ಅವರು ದಿ: 25.05.2026ರಂದು ನಿಧನರಾಗಿದ್ದಾರೆ. ಇವರ ಪಾರ್ಥಿವ ಶರೀರದ ಅಂತಿಮ ದರ್ಶನ ಪಡೆಯಲು ಮೃತರ ನಿವಾಸ ನಂ. 1359, 32ನೇ ಇ ಕ್ರಾಸ್, 4ನೇ ಟಿ. ಬ್ಲಾಕ್, ಜಯನಗರ, ಬೆಂಗಳೂರು–41 ಇಲ್ಲಿ 27ರಂದು ಬೆ. 9 ರಿಂದ 1 ಗಂಟೆಯವರೆಗೆ ಆಗಮಿಸಿ ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿ. ಅಂತ್ಯಕ್ರಿಯೆಯನ್ನು ಸಂಜೆ 4.00 ಗಂಟೆಗೆ ವಿಲ್ಸನ್ ಗಾರ್ಡನ್‌ನ ಚಿತಾಗಾರದಲ್ಲಿ ನಡೆಯಲಿದೆ.

ಎ.ವಿ. ಶ್ರೀರಾಮ ರೆಡ್ಡಿ
ನಿವೃತ್ತ ಪ್ರಾಂಶುಪಾಲರು, ಜಿ.ಐ.ಪಿ.ಟಿ
07.03.1957 – 25.05.2026

ಇಂತಿ ದುಃಖತಪ್ತರು:
ಆರ್.ಎಲ್.ವಿ.ರತ್ನಮ್ಮ (ಹೆಂಡತಿ),
ಚಿತ್ರಾ. ಎಸ್.ರೆಡ್ಡಿ (ಮಗಳು),
ವಿ ಅನಂದ (ತಮ್ಮ)

ಪ್ರಜಾವಾಣಿ **ಕ್ಲಾಸಿಫೈಡ್ಸ್**
ಪ್ರತಿಯೊಬ್ಬರಿಗೂ ಉಪಯುಕ್ತ

ಉದ್ಯೋಗಾವಕಾಶ

Drivers

ಚಾಲಕರು ಬೇಕಾಗಿದ್ದಾರೆ
ಬೆಂಗಳೂರಿನ ನ್ಯಾಷನಲ್ ಎಜ್ಯುಕೇಷನ್ ಫೌಂಡೇಷನ್ ಸಂಸ್ಥೆಯ ಶಾಲೆ/ಕಾಲೇಜಿಗೆ ಅನುಭವವುಳ್ಳ ಬಸ್ ಚಾಲಕರು ಬೇಕಾಗಿದ್ದಾರೆ. ಪಿಎಫ್ ಮತ್ತು ಗ್ರಾಚ್ಯುಟಿ ಸೌಲಭ್ಯಗಳೊಂದಿಗೆ ತಿಂಗಳಿಗೆ ರೂ. 25,000 ಸಂಬಳ. ಭಾರಿ ವಾಹನ ಚಾಲನಾ ಪರವಾನಗಿ ಜೊತೆಗೆ ಕನಿಷ್ಠ 3 ವರ್ಷ ಅನುಭವ ಹೊಂದಿರಬೇಕು. ರಾಜರಾಜೇಶ್ವರಿನಗರ ಸುತ್ತಮುತ್ತಲಿನಲ್ಲಿರುವವರಿಗೆ ಆದ್ಯತೆ ನೀಡಲಾಗುವುದು.
ಹೆಚ್ಚಿನ ಮಾಹಿತಿಗೆ ಸಂಪರ್ಕಿಸಿ:
9243466956
9243190102

Part-Time Jobs
ಕರ್ನಾಟಕದ್ಯಾಂತ ಕಂಪನಿಗಳಿಗೆ ಮನೆಯಿಂದಲೇ ಕೆಲಸಕ್ಕೆ ಮಹಿಳೆಯರಿಗೆ, ವಿದ್ಯಾರ್ಥಿಗಳಿಗೆ, ಪುರುಷರಿಗೆ ಮೊದಲ ಆದ್ಯತೆ. 19,000 -25,000 ಸಂಪಾದಿಸಿ. ಕೊರಿಯರ್ ಸೌಲಭ್ಯವಿದೆ. 7090177446

ಸೌಂದರ್ಯ-ಆರೋಗ್ಯ

Health Clinic
ವೆರಿಕೋಸ್ ವೇನ್ಸ್/ಅಲ್ಸರ್ ತೊಂದರೆಯೇ? ಮಂಡಿನೋವಿನ ಸಮಸ್ಯೆಯೇ? ಸೋರಿಯಾಸಿಸ್‌ಯಿಂದ ಬಳಲುತ್ತಿದ್ದಿರಾ? ಯಾವುದೇ ವಿಧವಾದ ಔಷದಿ ಸೇವನೆ ಮತ್ತು ಆಪರೇಷನ್ ಇಲ್ಲದೆ ನುರಿತ ತಜ್ಞರಿಂದ ಸಂಶೋದಿಸಿದ ಔಷದದಿಂದ ಪರಿಣಾಮಕಾರಿ ಚಿಕಿತ್ಸೆ. ವಿಜಯ ಆಯುರ್ ಕ್ಲಿನಿಕ್, ರಾಜಾಜಿನಗರ,ಬೆಂಗಳೂರು: 8861137033

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ಇಂಧನ ಸುರಕ್ಷತೆ: 'ಕ್ವಾಡ್' ಚೌಕಟ್ಟು

ಒಂದನೇ ಪುಟದಿಂದ...

ಇಲ್ಲಿ ನಡೆದ 'ಕ್ವಾಡ್' ರಾಷ್ಟ್ರಗಳ ವಿದೇಶಾಂಗ ಸಚಿವರ ಸಭೆಯಲ್ಲಿ ಈ ಕುರಿತು ಚರ್ಚಿಸಿ, ನಿರ್ಣಯ ಕೈಗೊಳ್ಳಲಾಯಿತು. ವಿದೇಶಾಂಗ ಸಚಿವ ಎಸ್.ಜೈಶಂಕರ್ ಅಧ್ಯಕ್ಷತೆಯಲ್ಲಿ ನಡೆದ ಈ ಸಭೆಯಲ್ಲಿ, ಸದಸ್ಯ ರಾಷ್ಟ್ರಗಳ ವಿದೇಶಾಂಗ ಸಚಿವರು ಪಾಲ್ಗೊಂಡಿದ್ದರು.

ಸಭೆ ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಜೈಶಂಕರ್,'ಎಲ್ಲ ದೇಶಗಳು ಆರ್ಥಿಕವಾಗಿ ಮತ್ತೆ ಪುಟಿದೇಳಬೇಕು ಎಂಬುದು ಕ್ವಾಡ್ ರಾಷ್ಟ್ರಗಳ ನಂಬಿಕೆಯಾಗಿದೆ. ಇದಕ್ಕೆ ಉತ್ತೇಜನ ನೀಡುವ ಜೊತೆಗೆ ಸಾಗಣಿಕೆ ಸರಪಳಿಯನ್ನು ಬಲಪಡಿಸಬೇಕಿದೆ' ಎಂದು ಹೇಳಿದರು.

'ಇಂಧನ, ರಸಗೊಬ್ಬರ, ನಿರ್ಣಾಯಕ ಖನಿಜಗಳ ಲಭ್ಯತೆ ಕುರಿತು ಸಭೆಯಲ್ಲಿ ಚರ್ಚಿಸಲಾಯಿತು. ಈ ಎಲ್ಲ ವಿಚಾರಗಳಲ್ಲಿ ಸದಸ್ಯ ರಾಷ್ಟ್ರಗಳ ನಡುವೆ ಸಹಕಾರ ಹೆಚ್ಚಿಸುವ ಜೊತೆಗೆ ಇತರ ರಾಷ್ಟ್ರಗಳಿಗೂ ನೆರವು ನೀಡುವ ಕುರಿತು ಚರ್ಚೆ ನಡೆಸಲಾಯಿತು' ಎಂದರು.

ಮನೆಯಿಂದಲೇ ಕೆಲಸ: ಮಾರುತಿ

ನವದೆಹಲಿ (ಪಿಟಿಐ): ಪ್ರಧಾನಿ ನರೇಂದ್ರ ಮೋದಿ ಅವರು ನೀಡಿರುವ ಮಿತವ್ಯಯದ ಕರೆಗೆ ಸ್ಪಂದಿಸಿ, ಸಾಧ್ಯವಿರುವೆಡೆಗಳಲ್ಲಿ ಮನೆಯಿಂದಲೇ ಕೆಲಸ ಮಾಡುವ ಹಾಗೂ ವಿದೇಶ ಪ್ರಯಾಣ ಕಡಿಮೆ ಮಾಡುವ ಕ್ರಮಗಳನ್ನು ತಾನು ತೆಗೆದುಕೊಂಡಿರುವುದಾಗಿ ಮಾರುತಿ ಸುಜುಕಿ ಇಂಡಿಯಾ ಕಂಪನಿ ಹೇಳಿದೆ.

'ನಮ್ಮ ಎಲ್ಲ ಪ್ರಕ್ರಿಯೆಗಳನ್ನು ಪುನರವಲೋಕಿಸಲು, ನಮ್ಮೆಲ್ಲ ಪ್ರಕ್ರಿಯೆಗಳಲ್ಲಿನ ದಕ್ಷತೆಯನ್ನು ಹೆಚ್ಚಿಸಲು ಇದು ಸರಿಯಾದ ಅವಕಾಶ' ಎಂದು ಕಂಪನಿಯು 'ಎಕ್ಸ್' ಮೂಲಕ ತಿಳಿಸಿದೆ.

ಸಾಧ್ಯವಿರುವ ಎಲ್ಲ ಕಡೆ ಮನೆಯಿಂದಲೇ ಕೆಲಸ ಮಾಡಿ, ಪ್ರಯಾಣದಿಂದಾಗಿ ಆಗುವ ಇಂಧನ ಬಳಕೆಯನ್ನು ಕಡಿಮೆ ಮಾಡಲು ಆಡಳಿತ ಮಂಡಳಿಯು ಕರೆ ನೀಡಿದೆ ಎಂದು ಕಂಪನಿ ತಿಳಿಸಿದೆ. ದೇಶದಲ್ಲಿ ಕೂಡ ಪ್ರಯಾಣವನ್ನು ಕಡಿಮೆ ಮಾಡಿ, ಭೇಟಿಗಳಿಗೆ ವರ್ಚುವಲ್ ವೇದಿಕೆಗಳನ್ನು ಆಯ್ಕೆ ಮಾಡಿಕೊಳ್ಳುವಂತೆ ಕಂಪನಿ ನೌಕರರಿಗೆ ಸೂಚನೆ ನೀಡಿದೆ.

ಅಮೆರಿಕದ ಗುರಾಣಿಯಲ್ಲ: ಇರಾನ್

ಟೆಹರಾನ್ (ಎಎಫ್‌ಪಿ): 'ಇನ್ನು ಮುಂದೆ ಪಶ್ಚಿಮ ಏಷ್ಯಾ ದೇಶಗಳು ಅಮೆರಿಕದ ಗುರಾಣಿಯಾಗಿ ಕಾರ್ಯನಿರ್ವಹಿಸುವುದಿಲ್ಲ' ಎಂದು ಇರಾನ್‌ನ ಪರಮೋಚ್ಚ ನಾಯಕ ಮೊಜ್ತಾಬಾ ಖಮೇನಿ ಹೇಳಿದ್ದಾರೆ.

ಬಕ್ರೀದ್ ಹಬ್ಬದ ಪ್ರಯುಕ್ತ ನೀಡಿರುವ ಸಂದೇಶದಲ್ಲಿ, 'ತಪ್ಪುಗಳಿಂದ ಪಾಠ ಕಲಿತುಕೊಳ್ಳಿ, ಕಳೆದ ಸಮಯ ಮತ್ತೆ ಮರಳಿ ಬರುವುದಿಲ್ಲ ಎಂದಿರುವ ಅವರು, ಅಮೆರಿಕ ಈಗಾಗಲೇ ಪಶ್ಚಿಮ ಏಷ್ಯಾ ವಲಯದಲ್ಲಿ ಪ್ರಭಾವ ಕಳೆದುಕೊಳ್ಳುತ್ತಿದೆ. ದಿನಕಳೆದಂತೆ ಅದರ ಸ್ಥಾನಮಾನ ಕುಸಿಯುತ್ತಿದೆ. ಇನ್ನು ಮುಂದೆ ಪಶ್ಚಿಮ ಏಷ್ಯಾ ದೇಶಗಳು ಮತ್ತು ಇಲ್ಲಿನ ನೆಲವು ಅಮೆರಿಕದ ಪಡೆಗಳಿಗೆ ಗುರಾಣಿಯಾಗಿ ಕಾರ್ಯನಿರ್ವಹಿಸುವುದಿಲ್ಲ' ಎಂದು ಎಚ್ಚರಿಕೆ ನೀಡಿದ್ದಾರೆ.

ಮಾರ್ಚ್‌ನಲ್ಲಿ ಇರಾನ್‌ನ ಪರಮೋಚ್ಚ ನಾಯಕನಾಗಿ ಮೊಜ್ತಾಬಾ ಆಯ್ಕೆಯಾಗಿದ್ದರು.

₹11.88 ಲಕ್ಷ ಕೋಟಿ ಬದಲು ₹12.71 ಲಕ್ಷ ಕೋಟಿ ಸಾಲ ನೀಡಿಕೆ

ಸಾಲ ವಿತರಣೆ: ರಾಜ್ಯದಲ್ಲಿ ಪ್ರಗತಿ

₹13.52 ಲಕ್ಷ ಕೋಟಿ	₹5.03 ಲಕ್ಷ ಕೋಟಿ	₹2.50 ಲಕ್ಷ ಕೋಟಿ	₹2.27 ಲಕ್ಷ ಕೋಟಿ	₹2,528 ಕೋಟಿ	₹9,465 ಕೋಟಿ
2026–27ನೇ ಸಾಲಿನಲ್ಲಿ ಸಾಲ ವಿತರಣೆಗೆ ಹಾಕಿಕೊಳ್ಳಲಾದ ಗುರಿ	ಆದ್ಯತಾ ವಲಯ	ಕೃಷಿ ವಲಯ	ಎಂಎಸ್‌ಎಂಇ	ಶೈಕ್ಷಣಿಕ ವಲಯ	ವಸತಿ ವಲಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದ ಬ್ಯಾಂಕುಗಳು 2025–26ನೇ ಸಾಲಿನಲ್ಲಿ ಸಾಲ ನೀಡಿಕೆಯಲ್ಲಿ ಉತ್ತಮ ಪ್ರಗತಿ ಸಾಧಿಸಿದ್ದು, ₹11.88 ಲಕ್ಷ ಕೋಟಿ ಗುರಿಗೆ ಪ್ರತಿಯಾಗಿ ₹12.71 ಲಕ್ಷ ಕೋಟಿಯಷ್ಟು ಸಾಲ ವಿತರಣೆ ಮಾಡಿವೆ.

ಸಾಲದ ಬೆಳವಣಿಗೆಯಲ್ಲಿ ರಾಜ್ಯವು ವಾರ್ಷಿಕ ಶೇ 12.77ರಷ್ಟು ಗುರಿ ಸಾಧಿಸಿದ್ದು, ಇದು ರಾಷ್ಟ್ರೀಯ ಸರಾಸರಿಗಿಂತ (ಶೇ 16.08) ಕಡಿಮೆ. ಠೇವಣಿ ಸಂಗ್ರಹದಲ್ಲೂ ರಾಜ್ಯದ ಬ್ಯಾಂಕ್‌ಗಳು ಶೇ 13.31ರಷ್ಟು ಬೆಳವಣಿಗೆ ಸಾಧಿಸಿದ್ದು, ಇದು ರಾಷ್ಟ್ರೀಯ ಸರಾಸರಿಗಿಂತ (ಶೇ 13.47) ತುಸು ಕಡಿಮೆ.

ವಿಧಾನಸೌಧದಲ್ಲಿ ಸೋಮವಾರ ನಡೆದ ರಾಜ್ಯ ಮಟ್ಟದ ಬ್ಯಾಂಕರ್‌ಗಳ ಸಮಿತಿಯ 175ನೇ ಪ್ರಗತಿ ಪರಿಶೀಲನಾ ಸಭೆಯಲ್ಲಿ ಈ ವಿವರವನ್ನು ಮಂಡಿಸಲಾಗಿದೆ. ವಸತಿ ಮತ್ತು ಶಿಕ್ಷಣ ಹೊರತುಪಡಿಸಿ ಉಳಿದೆಲ್ಲಾ ವಲಯಗಳಲ್ಲಿ ಬ್ಯಾಂಕುಗಳು ನಿಗದಿತ ಗುರಿಗಿಂತ ಹೆಚ್ಚು ಸಾಧನೆ ಮಾಡಿವೆ.

2025–26ನೇ ಸಾಲಿನ ವಾರ್ಷಿಕ ಸಾಲ ಯೋಜನೆಯಲ್ಲಿ ಆದ್ಯತಾ ವಲಯಕ್ಕೆ ₹4.38 ಲಕ್ಷ ಕೋಟಿಯ ಗುರಿ ಹಾಕಿಕೊಳ್ಳಲಾ ಗಿದ್ದು, ₹4.73 ಲಕ್ಷ ಕೋಟಿಯಷ್ಟು ಸಾಲ ವಿತರಿಸಲಾಗಿದೆ. ಒಟ್ಟು ಸಾಲದಲ್ಲಿ ಕನಿಷ್ಠ ಶೇ 40ರಷ್ಟನ್ನು ಆದ್ಯತಾ ವಲಯಕ್ಕೆ ವಿತರಣೆ ಮಾಡಬೇಕು ಎಂಬುದು ಆರ್‌ಬಿಐನ ನಿಯಮ. ರಾಜ್ಯದಲ್ಲಿ ಶೇ 42ರಷ್ಟು ಸಾಲವನ್ನು ಆದ್ಯತಾ ವಲಯಕ್ಕೆ ನೀಡಲಾಗಿದೆ.

ಇತರ ಅಂಶಗಳು
- 2025–26ನೇ ಸಾಲಿನಲ್ಲಿ ರಾಜ್ಯದ ಬ್ಯಾಂಕುಗಳ ಠೇವಣಿ ಮಟ್ಟದ ಹೋಲಿಕೆಯಲ್ಲಿ ಶೇ 77ರಷ್ಟು ಸಾಲವನ್ನು ವಿತರಣೆ ಮಾಡಲಾಗಿದೆ. ಈ ಪ್ರಮಾಣವು ಶೇ 70ರಿಂದ ಶೇ 80ರಷ್ಟು ಇರುವುದು ಆರೋಗ್ಯಕರ. ಠೇವಣಿ ಮತ್ತು ಸಾಲ ವಿತರಣೆ ದರದ ರಾಷ್ಟ್ರೀಯ ಸರಾಸರಿ ಶೇ 81.40ರಷ್ಟಿದ್ದು, ರಾಜ್ಯವು ಉತ್ತಮ ಸ್ಥಿತಿಯಲ್ಲಿದೆ
- ವಸತಿ ವಲಯಕ್ಕೆ ನಿಗದಿ ಪಡಿಸಲಾದ ಗುರಿಯಲ್ಲಿ ಶೇ 70ರಷ್ಟು (₹8,191 ಕೋಟಿ), ಶೈಕ್ಷಣಿಕ ವಲಯದ ನಿಗದಿತ ಗುರಿಯಲ್ಲಿ ಶೇ 89ರಷ್ಟು (₹1,987) ಮಾತ್ರ ಸಾಲ ವಿತರಿಸಲಾಗಿದೆ
- ಮುದ್ರಾ ಯೋಜನೆಯಡಿ ಅತಿಹೆಚ್ಚು ಸಾಲ ನೀಡಿದ ರಾಜ್ಯಗಳ ಪಟ್ಟಿಯಲ್ಲಿ ಕರ್ನಾಟಕವು 6ನೇ ಸ್ಥಾನ, ಪಿಎಂ ಸ್ವನಿಧಿ ಯೋಜನೆಯಲ್ಲಿ 7ನೇ ಸ್ಥಾನ ಕಾಯ್ದುಕೊಂಡಿದೆ. ಒಟ್ಟಾರೆ ಸಾಲ ವಿತರಣೆಯಲ್ಲಿ 2ನೇ ಸ್ಥಾನದಲ್ಲಿದೆ

ಇದರಿಂದಾಗಿ ರಾಜ್ಯದಲ್ಲಿ ಆರ್ಥಿಕ ಚಟುವಟಿಕೆಗಳ ವೃದ್ಧಿಗೆ ನೆರವಾಗಿದೆ.

ಕೃಷಿ ವಲಯಕ್ಕೆ ಕನಿಷ್ಠ ಶೇ 18ರಷ್ಟು ಸಾಲ ವಿತರಿಸಬೇಕೆಂಬುದು ಬ್ಯಾಂಕ್‌ಗಳು ವಿಧಿಸಿಕೊಂಡ ನಿಯಮ. ಆರ್ಥಿಕ ವರ್ಷದಲ್ಲಿ ಒಟ್ಟಾರೆಯಾಗಿ ಶೇ 22ರಷ್ಟು ಸಾಲವನ್ನು ಕೃಷಿ ವಲಯಕ್ಕೆ ವಿತರಿಸಿ, ಕೃಷಿ ಕ್ಷೇತ್ರದ ಬೆಳವಣಿಗೆಗೆ ರಾಜ್ಯದ ಬ್ಯಾಂಕುಗಳು ನೆರವಾಗಿವೆ. 2025–26ನೇ ಸಾಲಿನಲ್ಲಿ ₹2.22 ಲಕ್ಷ ಕೋಟಿ ಗುರಿ ನೀಡಲಾಗಿದ್ದು, ಅದಕ್ಕೆ ಪ್ರತಿಯಾಗಿ ₹2.47 ಲಕ್ಷ ಕೋಟಿ ಸಾಲ ವಿತರಿಸಲಾಗಿದೆ. ಸೂಕ್ಷ್ಮ, ಸಣ್ಣ ಮತ್ತು ಮಧ್ಯಮ ಕೈಗಾರಿಕೆ (ಎಂಎಸ್‌ಎಂಇ) ವಲಯಕ್ಕೆ ₹2.02 ಲಕ್ಷ ಕೋಟಿ ಸಾಲ ನೀಡಲಾಗಿದೆ. ಇದು ಗುರಿಗಿಂತಲೂ (₹1.90 ಲಕ್ಷ ಕೋಟಿ) ಹೆಚ್ಚು.

ಒಟ್ಟಾರೆಯಾಗಿ ರಾಜ್ಯದಲ್ಲಿ ಸಾಲ ವಿತರಣೆ ಮತ್ತು ಆದ್ಯತಾ ವಲಯಕ್ಕೆ ಸಾಲದ ಲಭ್ಯತೆ ಉತ್ತಮವಾಗಿದೆ ಎಂದು ಪ್ರಕಟಣೆ ತಿಳಿಸಿದೆ.

ಮೇ 28ರಿಂದ ನಾಮನಿರ್ದೇಶನಗಳು ಪ್ರಕಟ

'ಮಹಾನ್'ನಲ್ಲಿ ರೈತನಾದ ವಿಜಯ ರಾಘವೇಂದ್ರ

'ಲವ್ ಬರ್ಡ್', 'ಬ್ಯಾಡ್' ಸಿನಿಮಾ ಬಳಿಕ ಪಿ.ಸಿ.ಶೇಖರ್ ಆಕ್ಷನ್ ಕಟ್ ಹೇಳಿರುವ 'ಮಹಾನ್' ಚಿತ್ರದ ಫಸ್ಟ್‌ಲುಕ್ ಇತ್ತೀಚೆಗೆ ಬಿಡುಗಡೆಯಾಗಿದೆ.

ಸಿನಿಮಾದಲ್ಲಿ ನಾಯಕನಾಗಿ ವಿಜಯ ರಾಘವೇಂದ್ರ ನಟಿಸಿದ್ದು, ರೈತನಾಗಿ ಅವರು ಬಣ್ಣಹಚ್ಚಿದ್ದಾರೆ. ಆಕಾಶ್ ಪಿಕ್ಚರ್ಸ್ ಲಾಂಛನದಲ್ಲಿ ಪ್ರಕಾಶ್ ಈ ಚಿತ್ರವನ್ನು ನಿರ್ಮಾಣ ಮಾಡಿದ್ದಾರೆ. 'ಇದು ದೇಶಕ್ಕೆ ಅನ್ನ ನೀಡುವ ಅನ್ನದಾತನಾದ ರೈತನ ಕುರಿತಾದ ಕಥೆ. ಹಾಗಾಗಿ ಚಿತ್ರಕ್ಕೆ 'ಮಹಾನ್' ಎಂದು ಹೆಸರಿಡಲಾಗಿದೆ. ವಿಜಯ ರಾಘವೇಂದ್ರ ಅವರ ಜನ್ಮದಿನದ ಪ್ರಯುಕ್ತ ಅವರ ಪಾತ್ರದ ಲುಕ್ ಬಿಡುಗಡೆ ಮಾಡಿದ್ದೇವೆ' ಎಂದಿದ್ದಾರೆ ಪಿ.ಸಿ.ಶೇಖರ್.

'ಇದು ಪಿ.ಸಿ.ಶೇಖರ್ ಅವರ ನಿರ್ದೇಶನದ ಹನ್ನೊಂದನೇ ಚಿತ್ರವಾಗಿದೆ. ವಿಜಯ ರಾಘವೇಂದ್ರ, ರಾಧಿಕಾ ನಾರಾಯಣ್, ಮಿತ್ರ, ನಮ್ರತಾ ಗೌಡ, ವರ್ಷ ಬೊಳ್ಳಮ್ಮ, ಕಿರಣ್ ಶ್ರೀನಿವಾಸ್ ಮುಂತಾದವರು ಚಿತ್ರದ ತಾರಾಬಳಗದಲ್ಲಿದ್ದು, ಶೀಘ್ರದಲ್ಲೇ ಸಿನಿಮಾ ತೆರೆಗೆ ಬರಲಿದೆ.

ವಿಜಯ ರಾಘವೇಂದ್ರ

ರಾಮ್ ಚರಣ್, ಶಿವರಾಜ್‌ಕುಮಾರ್

'ಪೆದ್ದಿ'ಯಲ್ಲಿ ರಾಮ್ ಚರಣ್‌ಗೆ ಶಿವಣ್ಣ ಗುರು

ರಾಮ್ ಚರಣ್ ನಟನೆಯ ತೆಲುಗು ಚಿತ್ರ 'ಪೆದ್ದಿ' ಜೂನ್ 4ರಂದು ತೆರೆ ಕಾಣುತ್ತಿದೆ. ಚಿತ್ರದ ಪ್ರಚಾರಕ್ಕಾಗಿ ಚಿತ್ರತಂಡ ಇತ್ತೀಚೆಗೆ ಬೆಂಗಳೂರಿಗೆ ಆಗಮಿಸಿತ್ತು. ಕುಸ್ತಿಪಟುವಿನ ಕಥೆಯನ್ನು ಹೊಂದಿರುವ ಚಿತ್ರಕ್ಕೆ ಬುಚ್ಚಿ ಬಾಬು ಆಕ್ಷನ್ ಕಟ್ ಹೇಳಿದ್ದಾರೆ.

'ಚಿತ್ರದಲ್ಲಿ ಶಿವಣ್ಣ ನನ್ನ ಗುರು ಪಾತ್ರ ಮಾಡಿದ್ದಾರೆ. ಅವರನ್ನು ಬಿಟ್ಟು ಬೇರೆ ಯಾರೂ ಈ ಪಾತ್ರಕ್ಕೆ ಸೂಕ್ತರಲ್ಲ ಎಂಬಂತೆ ನಟಿಸಿದ್ದಾರೆ. ಅವರಿಂದ ಸಾಕಷ್ಟು ಕಲಿತಿದ್ದೇನೆ. ಅವರು ಈ ಚಿತ್ರವನ್ನು ಒಪ್ಪಿಕೊಂಡು ನಮ್ಮ ಜತೆ ನಟಿಸಿದ್ದು ಅತ್ಯಂತ ಸಂತಸ ಮೂಡಿಸಿದೆ' ಎಂದರು ರಾಮ್ ಚರಣ್.

'ಚಿರಂಜೀವಿ ಕುಟುಂಬದೊಂದಿಗೆ ನಮಗೆ ಅವಿನಾಭಾವ ಸಂಬಂಧವಿದೆ. ರಾಮ್ ಅವರು ಈ ಸಿನಿಮಾಗೆ ಹಾಕಿರುವ ಶ್ರಮ ನೋಡಿದರೆ, ಅವರಿಗೆ ಈ ಸಲ ರಾಷ್ಟ್ರ ಪ್ರಶಸ್ತಿ ನೀಡಬೇಕು. ಸಿನಿಮಾ ಅಷ್ಟು ಚೆನ್ನಾಗಿ ಬಂದಿದೆ. ಅದಕ್ಕೆ ನಾನೇ ಗ್ಯಾರಂಟಿ ಕೊಡುವೆ. ರಾಮ್ ಚರಣ್ ನನಗೆ ಸಹೋದರನಿದ್ದಂತೆ' ಎಂದು ಶಿವರಾಜ್‌ಕುಮಾರ್ ಹೇಳಿದರು. ರಾಮ್ ಚರಣ್ ಜೋಡಿಯಾಗಿ ಜಾಹ್ನವಿ ಕಪೂರ್ ನಟಿಸಿದ್ದಾರೆ. ಜಗಪತಿ ಬಾಬು, ದಿವ್ಯೇಂದು ಶರ್ಮಾ ಸೇರಿದಂತೆ ದೊಡ್ಡ ತಾರಾ ಬಳಗ ಈ ಚಿತ್ರದಲ್ಲಿದ್ದು, ಎ.ಆರ್. ರೆಹಮಾನ್ ಸಂಗೀತವಿದೆ.

CASAGRAND Presents ಪ್ರಜಾವಾಣಿ ಕನ್ನಡ ಸಿನಿ ಸಮ್ಮಾನ

ಜೂನ್ 19ಕ್ಕೆ ಸಿನಿ ಸಮ್ಮಾನ

ಚಂದನವನದ ಪ್ರತಿಭೆಗಳನ್ನು ಗುರುತಿಸುವ 'ಪ್ರಜಾವಾಣಿ ಕನ್ನಡ ಸಿನಿ ಸಮ್ಮಾನ'ದ ನಾಲ್ಕನೇ ಆವೃತ್ತಿಯ ಸಮಾರಂಭವು ಜೂನ್ 19ರಂದು ನಡೆಯಲಿದೆ. ಪ್ರಶಸ್ತಿಗೆ ನಾಮನಿರ್ದೇಶನಗೊಂಡವರ ಹೆಸರುಗಳು ಹಾಗೂ ಸಿನಿಮಾಗಳ ವಿವರಗಳು ಮೇ 28ರಿಂದ ಪ್ರಕಟವಾಗಲಿವೆ.

ಒಟ್ಟು 27 ವಿಭಾಗಗಳಲ್ಲಿ ಪ್ರಶಸ್ತಿಗಳು ಇರಲಿವೆ. ನಾಲ್ಕನೇ ಆವೃತ್ತಿಗೆ 2025ರಲ್ಲಿ ತೆರೆಕಂಡ ಸಿನಿಮಾಗಳನ್ನು ಪರಿಗಣಿಸಲಾಗಿದೆ. 150ಕ್ಕೂ ಅಧಿಕ ಸಿನಿಮಾಗಳು ಈ ವರ್ಷದ ಪ್ರಶಸ್ತಿಗೆ ಸ್ಪರ್ಧಿಸಿದ್ದವು. 'ಸಿನಿ ಸಮ್ಮಾನ'ದ 21 ತಾಂತ್ರಿಕ ತೀರ್ಪುಗಾರರು ಈ ಸಿನಿಮಾಗಳನ್ನು ವೀಕ್ಷಿಸಿ ನಾಮನಿರ್ದೇಶನಗಳನ್ನು ಸಿದ್ಧಪಡಿಸಿದ್ದಾರೆ. ಈ ಪಟ್ಟಿಯು ಇದೀಗ 'ಸಿನಿ ಸಮ್ಮಾನ'ದ ಮುಖ್ಯ ತೀರ್ಪುಗಾರರ ಕೈಸೇರಿದ್ದು, ಶೀಘ್ರದಲ್ಲೇ ಅಂತಿಮ ಮುದ್ರೆ ಬೀಳಲಿದೆ. ವಿಜೇತರ ಆಯ್ಕೆಗಾಗಿ ಚಿತ್ರರಂಗದ ಸಾವಿರಕ್ಕೂ ಹೆಚ್ಚು ಜನರಿಂದ ಮತದಾನ ನಡೆಯಲಿದೆ. ಚಿತ್ರರಂಗದ ಪ್ರಮುಖ ಸಂಘ-ಸಂಸ್ಥೆಗಳ ಸದಸ್ಯರು ಮತದಾನದ ಮೂಲಕ ನಾಮನಿರ್ದೇಶಿತರಾದವರಲ್ಲಿ ಒಬ್ಬರನ್ನು ಆಯ್ಕೆ ಮಾಡಲಿದ್ದಾರೆ.

ದ್ವಾಪರ..ಹಾಡಿಗೆ ಪೂಜಾ ಗಾಂಧಿ, ಶೇಖರ್ ಮಾಸ್ಟರ್ ಹಾಗೂ ಅನುಶ್ರೀ ಹೆಜ್ಜೆ



3ನೇ ಆವೃತ್ತಿಯ ರಂಗೇರಿಸಿದ ನಟ ಪೃಥ್ವಿ ಅಂಬಾರ್

ಜನಸಂಖ್ಯೆ ಸ್ವರೂಪ ಅಧ್ಯಯನಕ್ಕೆ ಸಮಿತಿ

ಅಕ್ರಮ ವಲಸೆ, ಅಸ್ವಾಭಾವಿಕ ಬದಲಾವಣೆ ಪರಿಶೀಲನೆಗೆ ನಿರ್ಧಾರ

ಪ್ರಜಾವಾಣಿ ವಾರ್ತೆ

ನವದೆಹಲಿ: ಅಕ್ರಮ ವಲಸೆ ಮತ್ತು ಇತರೆ ಅಸ್ವಾಭಾವಿಕ ಕಾರಣಗಳಿಂದ ದೇಶದ ಜನಸಂಖ್ಯೆಯ ಸ್ವರೂಪದಲ್ಲಾಗಿರುವ ಬದಲಾವಣೆಗಳ ಕುರಿತು 'ವೈಜ್ಞಾನಿಕ ಅಧ್ಯಯನ' ನಡೆಸಲು ಸುಪ್ರೀಂ ಕೋರ್ಟ್‌ನ ನಿವೃತ್ತ ನ್ಯಾಯಮೂರ್ತಿ ಪ್ರಕಾಶ್ ಪ್ರಭಾಕರ್ ನವೊಲೆಕರ್ ನೇತೃತ್ವದಲ್ಲಿ ಕೇಂದ್ರ ಸರ್ಕಾರವು ಉನ್ನತ ಮಟ್ಟದ ಸಮಿತಿ ರಚಿಸಿದೆ. ಈ ಬಗ್ಗೆ ಕೇಂದ್ರ ಗೃಹ ಸಚಿವಾಲಯವು ಮಂಗಳವಾರ ಗೆಜೆಟ್ ಅಧಿಸೂಚನೆ ಹೊರಡಿಸಿದೆ. 2025ರ ಸ್ವಾತಂತ್ರ್ಯ ದಿನಾಚರಣೆ ವೇಳೆ ಪ್ರಧಾನಿ ನರೇಂದ್ರ ಮೋದಿ ಅವರು ಈ ಸಮಿತಿ ರಚಿಸುವ ಬಗ್ಗೆ ಘೋಷಣೆ ಮಾಡಿದ್ದರು. ನಂತರ ಸೆಪ್ಟೆಂಬರ್‌ನಲ್ಲಿ ಸಚಿವ ಸಂಪುಟವು ಇದಕ್ಕೆ ಒಪ್ಪಿಗೆ ನೀಡಿತ್ತು. ವರದಿ ನೀಡಲು ಒಂದು ವರ್ಷ ಕಾಲಾವಕಾಶ ನೀಡಲಾಗಿದೆ.

ಸಮಿತಿ: ಯಾರಿದ್ದಾರೆ?

1. ನ್ಯಾ. ಪ್ರಕಾಶ್ ಪ್ರಭಾಕರ್ ನವೊಲೆಕರ್, ನಿವೃತ್ತ ನ್ಯಾಯಮೂರ್ತಿ (ಸಮಿತಿ ನೇತೃತ್ವ)
2. ಗಣತಿ ಕಮಿಷನರ್ (ಸದಸ್ಯ)
3. ದುರ್ಗಾ ಶಂಕರ್ ಮಿಶ್ರಾ, ನಿವೃತ್ತ ಐಎಎಸ್ ಅಧಿಕಾರಿ (ತಜ್ಞ ಸದಸ್ಯ)
4. ಬಾಲಾಜಿ ಶ್ರೀವಾಸ್ತವ್, ನಿವೃತ್ತ ಐಪಿಎಸ್ ಅಧಿಕಾರಿ (ತಜ್ಞ ಸದಸ್ಯ)
5. ಶಮಿಕಾ ರವಿ, (ತಜ್ಞ ಸದಸ್ಯೆ, ಪ್ರಧಾನಿ ಆರ್ಥಿಕ ಸಲಹೆಗಾರರ ಸಮಿತಿಯ ಸದಸ್ಯೆ)

ಒಳನುಸುಳುವಿಕೆ ಮತ್ತು ಇತರೆ ಅಸ್ವಾಭಾವಿಕ ಕಾರಣಗಳಿಂದ ಜನಸಂಖ್ಯೆಯ ಸ್ವರೂಪದಲ್ಲಿ ಬದಲಾವಣೆಗಳಾಗಿವೆ. ಇದು ದೇಶದ ಭವಿಷ್ಯಕ್ಕೆ ಪ್ರಮುಖ ಸವಾಲಾಗಲಿದೆ. ಜೊತೆಗೆ, ದೇಶದ ಸಾರ್ವಭೌಮತ್ವ, ಭದ್ರತೆಯೊಂದಿಗೆ ಇದು ಸಂಬಂಧ ಹೊಂದಿದೆ

ಅಮಿತ್ ಶಾ, ಕೇಂದ್ರ ಗೃಹ ಸಚಿವ ('ಎಕ್ಸ್' ಪೋಸ್ಟ್)

ಅಧಿಸೂಚನೆಯಲ್ಲೇನಿದೆ?

- ದೇಶದ ಕೆಲವು ಭಾಗಗಳಲ್ಲಿ ಪ್ರಮುಖವಾಗಿ ಗಡಿ ಜಿಲ್ಲೆಗಳಲ್ಲಿ ಜನಸಂಖ್ಯೆಯ ಸ್ವರೂಪದಲ್ಲಿ ಬದಲಾವಣೆಗಳನ್ನು ಕಾಣಬಹುದಾಗಿದೆ. ಈ ಬದಲಾವಣೆಗಳು ಸ್ವಾಭಾವಿಕವಾಗಿಲ್ಲ. ಅಕ್ರಮ ವಲಸೆ, ನೆರೆಯ ದೇಶದ ಜನರು ನಮ್ಮ ಗಡಿ ಒಳಗೆ ಆಗಿಂದಾಗ್ಗೆ ಬಂದು ಹೋಗುತ್ತಿರುವುದು ಮತ್ತು ಇವುಗಳನ್ನು ತಡೆಗಟ್ಟದ ಆಡಳಿತಾತ್ಮಕ ವೈಫಲ್ಯದ ಕಾರಣ ಜನಸಂಖ್ಯೆ ಸ್ವರೂಪದಲ್ಲಿ ಬದಲಾವಣೆಗಳಾಗಿವೆ
- ಈ ಅತಿದೊಡ್ಡ ಸವಾಲು ಕೇವಲ ಗಡಿ ಜಿಲ್ಲೆಗಳಿಗೆ ಮಾತ್ರವೇ ಸೀಮಿತವಾಗಿಲ್ಲ. ಇದು ಇತರೆ ಪ್ರದೇಶವನ್ನೂ ವ್ಯಾಪಿಸಿದೆ. ನಗರಗಳು, ಕಾರ್ಖಾನೆಗಳು, ಬುಡಕಟ್ಟು ಜನರು ವಾಸಿಸುವ ಪ್ರದೇಶಗಳು ಮತ್ತು ಇತರೆ ಸಾಮಾಜಿಕ ಆರ್ಥಿಕವಾಗಿ ಸೂಕ್ಷ್ಮ ಎನಿಸಿರುವ ಪ್ರದೇಶಗಳಿಗೂ ವ್ಯಾಪಿಸಿದೆ. ಇದರಿಂದ ಸರ್ಕಾರವು ಸೇವೆ ಒದಗಿಸಲು, ಸಂಪನ್ಮೂಲ ಹಂಚಿಕೆ, ಸ್ಥಳೀಯ ಆಡಳಿತ ಮತ್ತು ಸಾಮಾಜಿಕ ಒಗ್ಗಟ್ಟಿಗೆ ಸಮಸ್ಯೆಯಾಗುತ್ತಿದೆ
- ಈ ಸಮಸ್ಯೆಯನ್ನು ಪರಿಹರಿಸಲು ಈಗಿರುವ ಸಾಂಸ್ಥಿಕ ಚೌಕಟ್ಟು ಪೂರಕವಾಗಿಲ್ಲ. ರಾಜ್ಯ–ಕೇಂದ್ರ ಸರ್ಕಾರಗಳ ಮಧ್ಯೆ ಸಹಕಾರ, ಸಾಕ್ಷ್ಯ ಆಧಾರಿತ ಮತ್ತು ಕಾಲಮಿತಿಯೊಳಗೆ ಸಮಸ್ಯೆ ಬಗೆಹರಿಸುವ ವ್ಯವಸ್ಥೆ ಮತ್ತು ಇದಕ್ಕೆ ಪರಿಹಾರ ಸೂಚಿಸುವ ವ್ಯವಸ್ಥೆ ಇಲ್ಲವಾಗಿದೆ

ಯಾವುದರ ಕುರಿತು ಅಧ್ಯಯನ?

- ಅಕ್ರಮ ವಲಸೆಯೂ ಸೇರಿ ಜನಸಂಖ್ಯೆಯ ಸ್ವರೂಪದಲ್ಲಿ ಆಗಿರುವ ಬದಲಾವಣೆಯಿಂದಾಗಿ ಉದ್ಭವಿಸಿರುವ ಸವಾಲುಗಳ ಬಗ್ಗೆ, ಇದರ ಕಾರಣಗಳ ಬಗ್ಗೆ ಮತ್ತು ಅಸ್ವಾಭಾವಿಕವಾಗಿ ನಮ್ಮ ದೇಶದಲ್ಲಿ ಬಂದು ನೆಲಸಿರುವ ಮಾದರಿಗಳ ಬಗ್ಗೆ ಮತ್ತು ಯೋಚಿತವಾಗಿ ನಡೆಸುವ ಅಕ್ರಮ ವಲಸೆ ಬಗ್ಗೆ ಅಧ್ಯಯನ
- ದೇಶದ ಫಲವಂತಿಕೆ ದರದಲ್ಲಿ ಆದ ಬದಲಾವಣೆಗಳು, ನೆರೆ ದೇಶದ ಜನರು ನಮ್ಮ ದೇಶದೊಳಗೆ ಬಂದು–ಹೋಗುವುದು, ಆರ್ಥಿಕ ಅವಕಾಶಗಳು ಮತ್ತು ಇತರೆ ಸಾಮಾಜಿಕ–ಪರಿಸರ ಕಾರಣಗಳು
- ಧಾರ್ಮಿಕ, ಜಾತಿ–ಸಮುದಾಯಗಳಿಗೆ ಸಂಬಂಧಿಸಿ ಜನಸಂಖ್ಯೆ ಸ್ವರೂಪದಲ್ಲಾದ ಬದಲಾವಣೆ ಕುರಿತು. ಅಸ್ವಾಭಾವಿಕ ಎನಿಸುವ ಅಕ್ರಮ ವಲಸೆಯಿಂದಾದ ಬದಲಾವಣೆಗಳ ಕುರಿತು ಗಮನಹರಿಸಿ ವಿಶ್ಲೇಷಿಸಬೇಕು

ಸಮಿತಿ ವರದಿಯಲ್ಲೇನಿರಬೇಕು?

- ಕಾನೂನಾತ್ಮಕವಾದ, ನ್ಯಾಯಸಮ್ಮತವಾದ ಮತ್ತು ಕಾಲಮಿತಿ ಇರುವ ಶಾಶ್ವತ ಕಾರ್ಯಯೋಜನೆಯೊಂದನ್ನು ರೂಪಿಸಿ. ಅಕ್ರಮ ವಲಸಿಗರನ್ನು ಗುರುತಿಸುವುದು, ವಶಕ್ಕೆ ಪಡೆಯುವುದು ಮತ್ತು ಅವರದೇ ದೇಶಕ್ಕೆ ವಾಪಸು ಕಳುಹಿಸುವ ಯೋಜನೆ ಇದಾಗಿರಬೇಕಿದೆ
- ದೇಶದ ಗಡಿ ನಿರ್ವಹಣೆ ಶಕ್ತಿಯುತಗೊಳಿಸುವ, ಜನಸಂಖ್ಯೆಯನ್ನು ನಿಯಂತ್ರಿಸುವ ಸಾಂಸ್ಥಿಕ ವ್ಯವಸ್ಥೆಯ ಕುರಿತು ಶಿಫಾರಸು ನೀಡಿ
- ಅಕ್ರಮ ವಲಸೆಯಿಂದಾಗಿ ಜನಸಂಖ್ಯೆ ಸ್ವರೂಪದಲ್ಲಿ ಆಗುವ ಬದಲಾವಣೆಯ ಸಂಬಂಧಿಸಿದಂತೆ ಕಾರ್ಯನಿರ್ವಹಿಸಲು ಕೇಂದ್ರ ಸರ್ಕಾರ ಮತ್ತು ರಾಜ್ಯಗಳ ಮಧ್ಯೆ ಸಹಕಾರವನ್ನು ಹೆಚ್ಚಿಸಲು ನೀತಿಯೊಂದನ್ನು ಶಿಫಾರಸು ಮಾಡಿ

ಕಡಿಮೆ ಹಾಜರಾತಿ: ದೆಹಲಿ ಹೈಕೋರ್ಟ್ ತೀರ್ಪಿಗೆ ತಡೆ

ಪ್ರಜಾವಾಣಿ ವಾರ್ತೆ

ನವದೆಹಲಿ: ಅಗತ್ಯಕ್ಕಿಂತ ಕಡಿಮೆ ಹಾಜರಾತಿ ಹೊಂದಿದ್ದಾರೆ ಎಂಬ ಕಾರಣ ನೀಡಿ ಕಾನೂನು ವಿದ್ಯಾರ್ಥಿಗಳು ಪರೀಕ್ಷೆಗೆ ಹಾಜರಾಗದಂತೆ ನಿರ್ಬಂಧ ವಿಧಿಸುವಂತಿಲ್ಲ ಎಂಬ ದೆಹಲಿ ಹೈಕೋರ್ಟ್ ತೀರ್ಪಿಗೆ ಸುಪ್ರೀಂ ಕೋರ್ಟ್ ಮಂಗಳವಾರ ತಡೆ ನೀಡಿದೆ.

'ಹೈಕೋರ್ಟ್‌ನ ಈ ತೀರ್ಪಿನಿಂದಾಗಿ ದೇಶದಾದ್ಯಂತ ಕಾನೂನು ಕಾಲೇಜುಗಳು ಹಾಗೂ ವಿಶ್ವವಿದ್ಯಾಲಯಗಳು ಸಂಕಷ್ಟ ಎದುರಿಸುವಂತಾಗಿದೆ' ಎಂದೂ ಸುಪ್ರೀಂ ಕೋರ್ಟ್ ಹೇಳಿದೆ.

ನ್ಯಾಯಮೂರ್ತಿಗಳಾದ ವಿಕ್ರಮ್ ನಾಥ್ ಹಾಗೂ ಸಂದೀಪ್ ಮೆಹ್ತಾ ಅವರು ಇದ್ದ ನ್ಯಾಯಪೀಠವು ಈ ಕುರಿತು ಭಾರತೀಯ ವಕೀಲರ ಸಂಘ (ಬಿಸಿಐ) ಸಲ್ಲಿಸಿದ್ದ ಅರ್ಜಿ ವಿಚಾರಣೆ ನಡೆಸಿತು. ಕಳೆದ ವರ್ಷ ನವೆಂಬರ್‌ನಲ್ಲಿ ದೆಹಲಿ ಹೈಕೋರ್ಟ್ ಈ ತೀರ್ಪು ನೀಡಿತ್ತು. ಈ ಕುರಿತು ಜುಲೈ 21ರ ಒಳಗಾಗಿ ಪ್ರತಿಕ್ರಿಯೆ ಸಲ್ಲಿಸುವಂತೆ ನ್ಯಾಯಪೀಠ ನಿರ್ದೇಶನ ನೀಡಿತು.

ಬಿಸಿಐನ ಕಾನೂನು ಶಿಕ್ಷಣ ನಿಯಮಗಳ ಪ್ರಕಾರ, ಪರೀಕ್ಷೆಗೆ ಹಾಜರಾಗುವುದಕ್ಕೆ ವಿದ್ಯಾರ್ಥಿಯು ಕನಿಷ್ಠ ಶೇ 70ರಷ್ಟು ಹಾಜರಾತಿ ಹೊಂದಿರುವುದು ಕಡ್ಡಾಯ. ವಿಶೇಷ ಪ್ರಕರಣಗಳಲ್ಲಿ ಶೇ 65ರಷ್ಟು ಹಾಜರಾತಿ ಇದ್ದರೂ ಪರೀಕ್ಷೆಗೆ ಹಾಜರಾಗಲು ಅವಕಾಶ ನೀಡಲಾಗುತ್ತದೆ.

'ನಿರ್ಬಂಧ ವಿಧಿಸುವಂತಿಲ್ಲ'

ಅಮಿಟಿ ವಿಶ್ವವಿದ್ಯಾಲಯದ ವಿದ್ಯಾರ್ಥಿ ಸುಶಾಂತ್ ರೋಹಿಲ್ಲಾ 2017ರಲ್ಲಿ ಆತ್ಮಹತ್ಯೆ ಮಾಡಿಕೊಂಡಿದ್ದರು. ಕಡಿಮೆ ಹಾಜರಾತಿ ಇದ್ದ ಕಾರಣಕ್ಕೆ ಅವರಿಗೆ ಕಿರುಕುಳ ನೀಡಲಾಗುತ್ತಿತ್ತು. ಈ ಕಾರಣಕ್ಕೆ ಆತ್ಮಹತ್ಯೆ ಮಾಡಿಕೊಂಡಿದ್ದರು ಎಂದು ಆರೋಪಿಸಲಾಗಿತ್ತು. ಈ ಹಿನ್ನೆಲೆಯಲ್ಲಿ, ನಿಗದಿಗಿಂತ ಕಡಿಮೆ ಹಾಜರಾತಿ ಇದ್ದರೂ ಪರೀಕ್ಷೆಗೆ ಹಾಜರಾಗದಂತೆ ಯಾವುದೇ ವಿದ್ಯಾರ್ಥಿಗೆ ನಿರ್ಬಂಧ ವಿಧಿಸುವಂತಿಲ್ಲ ಎಂದು ಹೈಕೋರ್ಟ್ ತೀರ್ಪು ನೀಡಿತ್ತು.

ಎಐಎಡಿಎಂಕೆ ಶಾಸಕ ರಾಜೀನಾಮೆ

ಚೆನ್ನೈ (ಪಿಟಿಐ): ಎಐಎಡಿಎಂಕೆ ಬಂಡಾಯ ಬಣದ ಮತ್ತೊಬ್ಬ ಶಾಸಕ ಎಸಕ್ಕಿ ಸುಬಯ್ಯಾ ಅವರು ವಿಧಾನಸಭಾ ಸದಸ್ಯತ್ವಕ್ಕೆ ಮಂಗಳವಾರ ರಾಜೀನಾಮೆ ನೀಡಿದ್ದು, ಮುಖ್ಯಮಂತ್ರಿ ಸಿ. ಜೋಸೆಫ್ ವಿಜಯ್ ನೇತೃತ್ವದ ಟಿವಿಕೆ ಪಕ್ಷಕ್ಕೆ ಸೇರ್ಪಡೆ ಆಗಿದ್ದಾರೆ.

ಎರಡು ದಿನದಲ್ಲಿ ಬಂಡಾಯ ಬಣದ ನಾಲ್ವರು ಶಾಸಕರು ರಾಜೀನಾಮೆ ನೀಡಿ ಆಡಳಿತಾರೂಢ ಟಿವಿಕೆಗೆ ಸೇರ್ಪಡೆ ಆಗಿರುವುದರಿಂದ, 234 ಸದಸ್ಯ ಬಲದ ತಮಿಳುನಾಡು ವಿಧಾನಸಭೆಯಲ್ಲಿ 47 ಶಾಸಕರನ್ನು ಹೊಂದಿದ್ದ ವಿರೋಧ ಪಕ್ಷ ಎಐಎಡಿಎಂಕೆಯ ಶಾಸಕರ ಸಂಖ್ಯೆ ಇದೀಗ 43ಕ್ಕೆ ಇಳಿದಿದೆ.

ಮಹತ್ವದ ಬೆಳವಣಿಗೆಯಲ್ಲಿ ಬಂಡಾಯ ಶಾಸಕರ ಬಣದಲ್ಲಿ ಗುರುತಿಸಿಕೊಂಡಿರುವ ಮಾಜಿ ಸಚಿವರಾದ ಎನ್.ಆರ್. ವಿಶ್ವನಾಥನ್ ಹಾಗೂ ಪಿ. ತಂಗಮಣಿ ಸೇರಿದಂತೆ ಹಿರಿಯ ಮುಖಂಡರು ಎಐಎಡಿಎಂಕೆ ಮುಖ್ಯಸ್ಥ ಎಡಪ್ಪಾಡಿ ಕೆ. ಪಳನಿಸ್ವಾಮಿ ಅವರ ನಿವಾಸಕ್ಕೆ ಭೇಟಿ ನೀಡಿದ್ದು, ಕುತೂಹಲ ಕೆರಳಿಸಿದೆ.

ಉಭಯ ಬಣಗಳ ನಡುವಿನ ಹೊಂದಾಣಿಕೆಯ ಕುರಿತಂತೆ ಊಹಾಪೋಹದ ಸುದ್ದಿ ಕೇಳಿಬರುತ್ತಿದ್ದುದರಿಂದ, ಅವರು ಪಕ್ಷದ ವರಿಷ್ಠನನ್ನು ಯಾವ ಕಾರಣಕ್ಕೆ ಭೇಟಿಯಾಗಿದ್ದಾರೆ ಎಂಬುದು ತಕ್ಷಣಕ್ಕೆ ಗೊತ್ತಾಗಿಲ್ಲ.

ಬಂಡಾಯ ಗುಂಪಿನಲ್ಲಿ ಗುರುತಿಸಿಕೊಂಡಿದ್ದ ಶಾಸಕ ಬಾಲಕೃಷ್ಣ ಅವರು ಪಳನಿಸ್ವಾಮಿ ಬಣಕ್ಕೆ ಮರಳಲು ಮುಂದಾಗಿದ್ದಾರೆ ಎನ್ನಲಾಗಿದೆ.

ಎಡಪ್ಪಾಡಿ ಕೆ. ಪಳನಿಸ್ವಾಮಿ ನೇತೃತ್ವದ ಬಣವು ಎಐಎಡಿಎಂಕೆಯ ಮೂವರು ಶಾಸಕರ ರಾಜೀನಾಮೆಯನ್ನು ಅಂಗೀಕರಿಸಬಾರದು ಎಂದು ವಿಧಾನ ಸಭಾಧ್ಯಕ್ಷ ಜೆಸಿಡಿ ಪ್ರಭಾಕರ್ ಅವರಿಗೆ ಮನವಿ ಸಲ್ಲಿಸಿದೆ. ರಾಜೀನಾಮೆ ಅಂಗೀಕಾರವಾಗಿ, ಅಧಿಸೂಚನೆ ಪ್ರಕಟಗೊಳ್ಳುವ ಮುನ್ನವೇ ಈ ಮೂವರು ಶಾಸಕರು ಆಡಳಿತಾರೂಢ ಟಿವಿಕೆ ಪಕ್ಷಕ್ಕೆ ಸೇರ್ಪಡೆ ಆಗಿದ್ದಾರೆ ಎಂದು ದೂರಿದೆ.

ಪಳನಿಸ್ವಾಮಿ ಬಣದ ಮುಖಂಡರು ವಿಧಾನಸಭಾಧ್ಯಕ್ಷರನ್ನು ಭೇಟಿಯಾಗಿ ಮನವಿ ಸಲ್ಲಿಸಿದ ಸ್ವಲ್ಪ ಹೊತ್ತಿನ ಬಳಿಕ, ಬಂಡಾಯ ಬಣದ ಅಂಬಾಸಮುದ್ರಂ ವಿಧಾನಸಭಾ ಕ್ಷೇತ್ರದ ಶಾಸಕ ಎಸಕ್ಕಿ ಸುಬಯ್ಯಾ ಅವರು ಜೆಸಿಡಿ ಪ್ರಭಾಕರ್ ಅವರನ್ನು ಭೇಟಿಯಾಗಿ ರಾಜೀನಾಮೆ ಸಲ್ಲಿಸಿದರು. ಕೆಲ ಹೊತ್ತಿನಲ್ಲೇ ರಾಜೀನಾಮೆ ಅಂಗೀಕಾರವಾಗಿದೆ ಎಂದು ಸಭಾಧ್ಯಕ್ಷರು ತಿಳಿಸಿದರು.

ಶಾಸಕರ ಖರೀದಿ: ಕಾಂಗ್ರೆಸ್ ಕಳವಳ

ರಾಜೀನಾಮೆ ಅಂಗೀಕಾರವನ್ನು ಪ್ರಕಟಿಸಿದ ಬೆನ್ನಿಗೆ ಎಸಕ್ಕಿ, ಟಿವಿಕೆಯ ಪ್ರಧಾನ ಕಚೇರಿಯಲ್ಲಿ ಪಕ್ಷಕ್ಕೆ ಸೇರ್ಪಡೆಗೊಂಡರು. ಸದಸ್ಯತ್ವವನ್ನು ಪಡೆದುಕೊಂಡರು.

ಎಐಎಡಿಎಂಕೆ ಶಾಸಕರು ರಾಜೀನಾಮೆ ನೀಡುತ್ತಿರುವುದಕ್ಕೆ ಕಾಂಗ್ರೆಸ್ ಕಳವಳ ವ್ಯಕ್ತಪಡಿಸಿದೆ. ಶಾಸಕರ ಖರೀದಿ ನಡೆಯುತ್ತಿದೆ ಎಂದು ಸಂಸದ ಎಸ್. ಜೋತಿಮನಿ ದೂರಿದ್ದಾರೆ. ಆಡಳಿತಾರೂಢ ಮೈತ್ರಿ ಸರ್ಕಾರದ ಭಾಗವಾಗಿರುವ ಸಿಪಿಎಂ, ವಿಸಿಕೆ ಸಹ ಶಾಸಕರ ರಾಜೀನಾಮೆ ಆರೋಗ್ಯಕರವಲ್ಲ ಎಂದು ಆಕ್ಷೇಪ ವ್ಯಕ್ತಪಡಿಸಿವೆ. ಕಂದಾಯ ಸಚಿವ ಕೆ.ಎ. ಸೆಂಗೊಟ್ಟೈಯ್ಯನ್ ಸಂಸದರ ಆರೋಪವನ್ನು ನಿರಾಕರಿಸಿದ್ದಾರೆ.

ಭಾರತ ಪ್ಯಾರಾಲಿಂಪಿಕ್ ಸಮಿತಿ (ಪಿಸಿಐ) ಬೆಂಗಳೂರಿನಲ್ಲಿ ಮಂಗಳವಾರ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ (ಕುಳಿತವರು) ಎಡದಿಂದ; ಕ್ರೀಡಾ ನಿರೂಪಕ ಮಹಾವೀರ್ ರಾವತ್, ಗೋಸ್ಪೋರ್ಟ್ಸ್ ಫೌಂಡೇಷನ್ ಸಿಇಒ ದೀಪ್ತಿ ಬೋಪಯ್ಯ, ಪ್ಯಾರಾ ಆರ್ಚರಿ ಕೋಚ್ ಅಭಿಲಾಷ್ ಚೌಧರಿ, ಇಂಡಿಯನ್ ಆಯಿಲ್ ಸಂಸ್ಥೆಯ ಚಂದ್ರಿಮಾ ಶರ್ಮಾ, ಪ್ಯಾರಾ ಬ್ಯಾಡ್ಮಿಂಟನ್ ಆಟಗಾರ ಪ್ರಮೋದ್ ಭಗತ್, ಪ್ಯಾರಾ ಅಥ್ಲೀಟ್ ದೀಪ್ತಿ ಜೀವಾಂಜಿ, ಪಿಸಿಐ ಉಪಾಧ್ಯಕ್ಷ ಸತ್ಯಪ್ರಕಾಶ್ ಸಾಂಗ್ವಾನ್ ಮತ್ತು ಪ್ಯಾರಾ ಆರ್ಚರ್ ಪಾಯಲ್ ನಾಗ್ ಅವರಿಗೆ 'ಪ್ಯಾರಾಲಿಂಪಿಕ್ ಲಿಮಿಟ್‌ಲೆಸ್ ಇಂಪ್ಯಾಕ್ಟ್ ಅಂತರರಾಷ್ಟ್ರೀಯ ಪ್ರಶಸ್ತಿ' ನೀಡಿ ಗೌರವಿಸಲಾಯಿತು — ಪ್ರಜಾವಾಣಿ ಚಿತ್ರ

ಅಂಧ ಅಥ್ಲೀಟ್ ರಕ್ಷಿತಾರಾಜುಗೆ ಚಿನ್ನ

ಪ್ಯಾರಾ ಅಥ್ಲೆಟಿಕ್ಸ್: ಮೊದಲ ದಿನ ಕರ್ನಾಟಕಕ್ಕೆ 8 ಪದಕ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಚಿಕ್ಕಮಗಳೂರಿನ ಅಂಧ ಅಥ್ಲೀಟ್ ರಕ್ಷಿತಾರಾಜು ಅವರು ಇಲ್ಲಿನ ಕಂಠೀರವ ಕ್ರೀಡಾಂಗಣದಲ್ಲಿ ಮಂಗಳವಾರ ಆರಂಭವಾದ ಎಂಟನೇ ಆವೃತ್ತಿಯ ಇಂಡಿಯನ್ ಓಪನ್ ಅಂತರರಾಷ್ಟ್ರೀಯ ಪ್ಯಾರಾ ಅಥ್ಲೆಟಿಕ್ಸ್ ಚಾಂಪಿಯನ್‌ಷಿಪ್‌ನ ಮಹಿಳೆಯರ 1500 ಮೀಟರ್ (ಟಿ11) ಓಟದಲ್ಲಿ ಚಿನ್ನದ ಸಾಧನೆ ಮೆರೆದರು.

ಕೂಟದ ಮೊದಲ ದಿನ ಕರ್ನಾಟಕದ ಪ್ಯಾರಾ ಅಥ್ಲೀಟ್‌ಗಳು ನಾಲ್ಕು ಚಿನ್ನ ಸೇರಿದಂತೆ ಒಟ್ಟು ಎಂಟು ಪದಕಗಳನ್ನು ಗೆದ್ದುಕೊಂಡರು. ಮಹಿಳೆಯರ 100 ಮೀಟರ್ (ಟಿ37) ಓಟದಲ್ಲಿ ಭಾರತಿ ಭರತೇಶ್, ಶಾಟ್‌ಪಟ್ (ಎಫ್33) ಸ್ಪರ್ಧೆಯಲ್ಲಿ ಮೇಧಾ ಜಯಂತ್, ಪುರುಷರ 1500 ಮೀ. (ಟಿ13) ಓಟದಲ್ಲಿ ಶಂಕರಪ್ಪ ಶರತ್ ಅವರು ಸ್ವರ್ಣ ಗೆದ್ದರು.

ಮಹಿಳೆಯರ ಶಾಟ್‌ಪಟ್‌ನಲ್ಲಿ (ಎಫ್57) ಶೈಲಾ ಶಿಲ್ಪಾ, 100 ಮೀ ಓಟದಲ್ಲಿ (ಟಿ37) ಹರ್ಷಿತಾ ಟೇಟರ್, ಪುರುಷರ 100 ಮೀ. (ಟಿ38) ಓಟದಲ್ಲಿ ಸಚ್ಚಿದಾನಂದ ದೇವಾಡಿಗ ಬೆಳ್ಳಿ ಪದಕಕ್ಕೆ ಕೊರಳೊಡ್ಡಿದರು. ಪುರುಷರ 100 ಮೀ (ಟಿ47) ಓಟದಲ್ಲಿ ಬಾಬು ಜಾನು ಅವರು ಕಂಚಿನ ಪದಕ ತಮ್ಮದಾಗಿಸಿಕೊಂಡರು.

ಹುಟ್ಟಿನಿಂದಲೇ ದೃಷ್ಟಿಯನ್ನು ಕಳೆದುಕೊಂಡಿರುವ 25 ವರ್ಷ ವಯಸ್ಸಿನ ರಕ್ಷಿತಾರಾಜು 1500 ಮೀಟರ್ ದೂರವನ್ನು 5 ನಿಮಿಷ 17.54 ಸೆಕೆಂಡ್‌ಗಳಲ್ಲಿ ತಲುಪಿದರು.

ಮೂಡಿಗೆರೆ ತಾಲ್ಲೂಕಿನ ಬಾಳೂರಿನ ಗುಡ್ನಳ್ಳಿ ಗ್ರಾಮದ ರಕ್ಷಿತಾರಾಜು ಅವರು ಏಷ್ಯನ್ ಪ್ಯಾರಾ ಕ್ರೀಡಾಕೂಟದಲ್ಲಿ ಸತತ ಎರಡು (2018 ಮತ್ತು 2022) ಬಾರಿ ಚಿನ್ನ ಗೆದ್ದಿದ್ದಾರೆ. ಪ್ಯಾರಿಸ್ ಒಲಿಂಪಿಕ್ಸ್‌ನಲ್ಲಿ ಸ್ಪರ್ಧಿಸಿದ್ದ ಅವರು ಐದನೇ ಸ್ಥಾನ ಗಳಿಸಿದ್ದರು.

'ಇದು ಮುಂದಿನ ಏಷ್ಯನ್ ಗೇಮ್ಸ್‌ಗೆ ಟ್ರಯಲ್ಸ್ ಕೂಡಾ ಆಗಿದ್ದರಿಂದ ಉತ್ತಮ ಸಮಯದಲ್ಲಿ ಗುರಿ ತಲುಪಿ, ಚಿನ್ನ ಗೆದ್ದಿರುವುದು ಖುಷಿ ತಂದಿದೆ. ಏಷ್ಯನ್ ಗೇಮ್ಸ್‌ನಲ್ಲಿ ಹ್ಯಾಟ್ರಿಕ್ ಚಿನ್ನ ಸಾಧನೆ ಮಾಡುವುದು ಮತ್ತು ಪ್ಯಾರಾ ಒಲಿಂಪಿಕ್ಸ್‌ನಲ್ಲಿ ಪದಕ ಜಯಿಸುವುದು ನನ್ನ ಮುಂದಿನ ಗುರಿಯಾಗಿದೆ. ಈ ನಿಟ್ಟಿನಲ್ಲಿ ಸಾಯ್ ಕೇಂದ್ರದಲ್ಲಿ ಕಠಿಣ ತರಬೇತಿ ನಡೆಸುತ್ತಿದ್ದೇನೆ' ಎಂದು ರಕ್ಷಿತಾರಾಜು ಅವರು 'ಪ್ರಜಾವಾಣಿ' ಜೊತೆ ಸಂತಸ ಹಂಚಿಕೊಂಡರು.



ಗೈಡ್ ರನ್ನರ್ ರಾಹುಲ್ ಬಾಲಕೃಷ್ಣ ಅವರೊಂದಿಗೆ ಓಡಿದ ರಕ್ಷಿತಾರಾಜು

ಪ್ರಜ್ಞಾನಂದ, ಗುಕೇಶ್‌ಗೆ 'ಆರ್ಮ್‌ಗೆಡನ್' ಜಯ

ಓಸ್ಲೊ (ಪಿಟಿಐ): ವಿಶ್ವ ಚಾಂಪಿಯನ್ ಗುಕೇಶ್ ಅವರು ಸುದೀರ್ಘ ಪಂದ್ಯದಲ್ಲಿ ಜರ್ಮನಿಯ ವಿನ್ಸೆಂಟ್ ಕೀಮರ್ ಅವರನ್ನು 'ಆರ್ಮ್‌ಗೆಡನ್' ಮೂಲಕ ಸೋಲಿಸಿದರು. ನಾರ್ವೆ ಚೆಸ್ ಟೂರ್ನಿಯ ಮೊದಲ ಸುತ್ತಿನಲ್ಲಿ ಭಾರತದ ಇನ್ನೊಬ್ಬ ಆಟಗಾರ ಪ್ರಜ್ಞಾನಂದ ಅವರೂ ಸಹ 'ಆರ್ಮ್‌ಗೆಡನ್' ಮೂಲಕ ಅಮೆರಿಕದ ವೆಸ್ಲಿ ಸೊ ಅವರನ್ನು ಸೋಲಿಸಿದರು.

ಈ ಟೂರ್ನಿಯ ನಿಯಮಗಳ ಪ್ರಕಾರ ಕ್ಲಾಸಿಕಲ್ ಮಾದರಿಯ ಪಂದ್ಯ ಡ್ರಾ ಆದಲ್ಲಿ ತಕ್ಷಣ ನಿರ್ಣಾಯಕ ಫಲಿತಾಶ ಪಡೆಯಲು ಅಲ್ಪಾವಧಿಯ ಆಟ 'ಆರ್ಮ್‌ಗೆಡನ್' (ಸಡನ್‌ಡೆತ್ ಟೈಬ್ರೇಕರ್) ಆಡಲಾಗುತ್ತದೆ. ಬಿಳಿ ಕಾಯಿಗಳಲ್ಲಿ ಆಡುವವರಿಗೆ 10 ನಿಮಿಷ, ಕಪ್ಪು ಕಾಯಿಗಳನ್ನು ನಡೆಸುವವರಿಗೆ ಏಳು ನಿಮಿಷ ಅವಧಿಯಿರುತ್ತದೆ. ಇಲ್ಲಿ ಡ್ರಾಕ್ಕೆ ಅವಕಾಶವಿಲ್ಲ. ಒಂದೊಮ್ಮೆ ಡ್ರಾ ಆದಲ್ಲಿ ಕಪ್ಪು ಕಾಯಿಗಳಲ್ಲಿ ಆಡುವ ಆಟಗಾರ ವಿಜಯಿಯೆನಿಸುತ್ತಾನೆ.

ಇಲ್ಲಿನ ಚಾರಿತ್ರಿಕ ಡೈಕ್‌ಮನ್ ಬ್ಯೋವಿಕಾ ಸಾರ್ವಜನಿಕ ಗ್ರಂಥಾಲಯ ಸಭಾಂಗಣದಲ್ಲಿ ಈ ಟೂರ್ನಿ ಸೋಮವಾರ ಆರಂಭವಾಯಿತು. ಗುಕೇಶ್ ಆರಂಭದಲ್ಲಿ ಹಿನ್ನಡೆ ಕಂಡರೂ ಅದರಿಂದ ಪಾರಾದರು. ಕೀಮರ್ ಗೆಲುವಿಗೆ ಇನ್ನಿಲ್ಲದ ಯತ್ನ ನಡೆಸಿದ ಪರಿಣಾಮ ಪಂದ್ಯ 144 ನಡೆಗಳನ್ನು ಕಂಡು ಡ್ರಾ ಆಗಿ ಆರ್ಮ್‌ಗೆಡನ್ ನೆರವು ಪಡೆಯಬೇಕಾಯಿತು. ಗುಕೇಶ್ 1.5 ಪಾಯಿಂಟ್ ಪಡೆದರೆ, ಕೀಮರ್ ಅವರಿಗೆ 1 ಪಾಯಿಂಟ್ ದೊರೆಯಿತು.

ಪ್ರಜ್ಞಾನಂದ ಮತ್ತು ಸೊ ನಡುವಣ ಪಂದ್ಯವೂ ಡ್ರಾ ಮೊದಲು ಹೋರಾಟದಿಂದ ಕೂಡಿತ್ತು. ಅರ್ಮ್‌ಗೆಡನ್ ಮೂಲಕ ಹೆಚ್ಚುವರಿ ಅರ್ಧ ಪಾಯಿಂಟ್ ದೊರೆಯಿತು.

ಕಾರ್ಲ್‌ಸನ್‌ಗೆ ಸೋಲು: ಆದರೆ ಮೊದಲ ದಿನ ಅಚ್ಚರಿಯ ಫಲಿತಾಂಶದಲ್ಲಿ ಹಾಲಿ ಚಾಂಪಿಯನ್ ಮ್ಯಾಗ್ನಸ್ ಕಾರ್ಲ್‌ಸನ್ ಅವರು ಫ್ರಾನ್ಸ್‌ನ ಅಲಿರೇಝಾ ಫಿರೋಝ್‌ಜಾ ಅವರಿಗೆ ಸೋತರು. ಅಲಿರೇಜಾ ಗೆಲುವಿಗಾಗಿ ಪೂರ್ಣ ಮೂರು ಪಾಯಿಂಟ್ ಪಡೆದು ಅಗ್ರಸ್ಥಾನಕ್ಕೇರಿದರು.

ಹಂಪಿಗೆ ಹಿನ್ನಡೆ: ಮಹಿಳಾ ವಿಭಾಗದಲ್ಲಿ ಕಜಾಕಸ್ತಾನದ ಬಿಬಿಸಾರ ಅಸೌಬಯೇವಾ ಅವರು ಭಾರತದ ಅಗ್ರ ಆಟಗಾರ್ತಿ ಕೋನೇರು ಹಂಪಿ ಅವರನ್ನು ಸೋಲಿಸಿ ಪೂರ್ಣ 3 ಪಾಯಿಂಟ್ ಗಳಿಸಿ ಅಗ್ರಸ್ಥಾನಕ್ಕೇರಿದರು.

ಸಿಂಧು, ಸಾತ್ವಿಕ್–ಚಿರಾಗ್ ಮುನ್ನಡೆ

ಸಿಂಗಪುರ (ಪಿಟಿಐ): ಭಾರತದ ಅನುಭವಿ ಆಟಗಾರ್ತಿ ಪಿ.ವಿ.ಸಿಂಧು ಅವರು ಸಿಂಗಪುರ ಓಪನ್ ಸೂಪರ್ 750 ಬ್ಯಾಡ್ಮಿಂಟನ್ ಟೂರ್ನಿಯ ಮಹಿಳೆಯರ ಸಿಂಗಲ್ಸ್ ಮೊದಲ ಸುತ್ತಿನಲ್ಲಿ ಮಂಗಳವಾರ ಐದನೇ ಶ್ರೇಯಾಂಕದ ಪುತ್ರಿ ಕುಸುಮ ವಾರ್ದನಿ ಅವರನ್ನು 21–17, 21–18 ರಿಂದ ಸೋಲಿಸಿದರು.

₹9.50 ಕೋಟಿ ಬಹುಮಾನ ಮೊತ್ತ ಹೊಂದಿರುವ ಈ ಟೂರ್ನಿಯಲ್ಲಿ ಸಿಂಧು ಅವರು ಎರಡನೇ ಸುತ್ತಿನಲ್ಲಿ ಜಪಾನ್‌ನ ರಿಕೊ ಗುಂಜಿ ಅವರನ್ನು ಎದುರಿಸಲಿದ್ದಾರೆ.

ವಿಶ್ವ ಕ್ರಮಾಂಕದಲ್ಲಿ ನಾಲ್ಕನೇ ಸ್ಥಾನದಲ್ಲಿರುವ ಸಾತ್ವಿಕ್ ಸಾಯಿರಾಜ್ ರಣಕಿರೆಡ್ಡಿ–ಚಿರಾಗ್ ಶೆಟ್ಟಿ ಜೋಡಿ ಪುರುಷರ ಡಬಲ್ಸ್‌ನಲ್ಲಿ ಕ್ರಮಾಂಕಪಟ್ಟಿಯಲ್ಲಿ 25ನೇ ಸ್ಥಾನದಲ್ಲಿರುವ ಚೆನ್ ಝಿಯಿ– ಪ್ರೆಸ್ಲಿ ಸ್ಮಿತ್ ಜೋಡಿಯನ್ನು ಸೋಲಿಸಿ ಎರಡನೇ ಸುತ್ತಿಗೆ ಮುನ್ನಡೆಯಿತು.

ಆದರೆ ಆಯುಷ್ ಶೆಟ್ಟಿ ಮತ್ತು ಉನ್ನತಿ ಹೂಡ ಬೇಗನೇ ಹೊರಬಿದ್ದರು. ಆಯುಷ್ 21–11, 14–21, 12–21ರಲ್ಲಿ ವಿಶ್ವ ಚಾಂಪಿಯನ್‌ಷಿಪ್ ಕಂಚು ವಿಜೇತ ವಿಕ್ಟರ್ ಆಕ್ಸೆಲ್‌ಸನ್ ಅವರಿಗೆ ಮಣಿದರು.

ಪುರುಷರ ಡಬಲ್ಸ್‌ನಲ್ಲಿ ಏಳನೇ ಶ್ರೇಯಾಂಕದ ತಕುರೊ ಹೊಕಿ– ಯುಗೊ ಕೊಬಯಾಶಿ (ಜಪಾನ್) ಜೋಡಿ 21–15, 21–13 ರಿಂದ ಭಾರತದ ಹರಿಹರನ್ ಅಮ್ಸಕರುಣನ್– ಎಂ.ಆರ್. ಅರ್ಜುನ್ ಜೋಡಿಯನ್ನು ಮಣಿಸಿತು.

'ರಾಸಾಯನಿಕ ಖರೀದಿಗೆ ನಕಲಿ ಗುರುತಿನ ಚೀಟಿ'

ನವದೆಹಲಿ (ಪಿಟಿಐ): ದೆಹಲಿಯ ಕೆಂಪುಕೋಟೆ ಸಮೀಪ ನಡೆದ ಕಾರು ಬಾಂಬ್ ಸ್ಫೋಟ ಪ್ರಕರಣದ ಪ್ರಮುಖ ಆರೋಪಿ ಡಾ. ಉಮರ್ ಉನ್ ನಬಿ ಸ್ಫೋಟಕಗಳನ್ನು ತಯಾರಿಸಲು ರಾಸಾಯನಿಕ ಖರೀದಿಗೆ ನಕಲಿ ಗುರುತಿನ ಚೀಟಿ ಬಳಸಿದ್ದನ್ನು ಎನ್‌ಐಎ ಪತ್ತೆ ಮಾಡಿದೆ.

'ಉಮರ್ ಸ್ಫೋಟಕ ವಸ್ತುವನ್ನು ತಯಾರಿಸುವ ಉದ್ದೇಶದಿಂದ ಫರೀದಾಬಾದ್‌ನ ಅಲ್ ಫಲಾಹ್ ವಿಶ್ವವಿದ್ಯಾಲಯದಲ್ಲಿನ ತನ್ನ ಫ್ಲ್ಯಾಟ್‌ನಲ್ಲಿ ತಾತ್ಕಾಲಿಕ ಪ್ರಯೋಗಾಲಯ ಸ್ಥಾಪಿಸಿದ್ದ' ಎಂದು ಎನ್‌ಐಎ ಅಧಿಕಾರಿಗಳು ಮಂಗಳವಾರ ತಿಳಿಸಿದ್ದಾರೆ.

'ಮುಂಬೈನ ಸಣ್ಣ ವ್ಯಾಪಾರಿಯೊಬ್ಬರಿಂದ 2024ರ ಸೆಪ್ಟೆಂಬರ್ 25ರಂದು ರಾಸಾಯನಿಕ ಪೂರೈಕೆ ಮಾಡಿದ ರಸೀದಿಯನ್ನು ತನಿಖಾಧಿಕಾರಿಗಳು ವಶಪಡಿಸಿಕೊಂಡಿದ್ದರು. ಸ್ಫೋಟಕ ತಯಾರಿಕೆ ವಸ್ತುಗಳನ್ನು ಸಂಗ್ರಹಿಸುವ ಪೂರೈಕೆ ಸರಪಳಿಯನ್ನು ಭೇದಿಸಲು ಇದರಿಂದ ಸಾಧ್ಯವಾಯಿತು' ಎಂದು ಮಾಹಿತಿ ನೀಡಿದ್ದಾರೆ.

ಉದ್ಯೋಗ ವಾಣಿ

GSSS | GEETHA SHISHU SHIKSHANA SANGHA (R)
INSTITUTE OF ENGINEERING AND TECHNOLOGY FOR WOMEN
KRS Road, Metagalli, Mysuru – 570016

APPOINTMENT NOTIFICATION
TEACHING & NON TEACHING STAFFS

Position	Department	Qual.&Exp.
Professor	CSE	As per AICTE Norms
Associate Professor	CSE (AI & ML)	
Assistant Professor	CSE / ISE / CSE (AI & ML) / AI & DS/ ECE/ EEE	
Associate Professor & Assistant Professor	MBA (Specialization in Finance / Analytics)	

Position	Dept.	Qualification & Experience
Lab Instructor Asst. Lab Instructor	ECE, EEE, AI & DS	Diploma in CSE / ISE / ECE/ EEE or B.Sc - CS / IT

- **Salary:** Based on credentials & experience.
- **Accommodation will be provided for the post of Professor and Associate Professor.**
- Application with latest colour photo and copies of qualification and experience must be sent on or before **10-06-2026** to: **The Secretary, GSSS(R), KRS Road, Metagalli, Mysuru - 570 016.**

Dr. M. Jagannatha Shenoi, President | www.geethashishu.in | Smt. Anupama B. Pandit, Secretary

ಸತತ ಎರಡನೇ ಫೈನಲ್‌ಗೆ ಆರ್‌ಸಿಬಿ ಲಗ್ಗೆ

ನಾಯಕ ರಜತ್ ಆರ್ಭಟ ● ಡಫಿ, ರಸಿಕ್ ಅಮೋಘ ಬೌಲಿಂಗ್ ● 31ರಂದು ಅಹಮದಾಬಾದಿನಲ್ಲಿ ಫೈನಲ್

ರಜತ್ ಪಾಟೀದಾರ್

ಧರ್ಮಶಾಲಾ (ಪಿಟಿಐ): ಹಾಲಿ ಚಾಂಪಿಯನ್ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡವು ಸತತ ಎರಡನೇ ವರ್ಷವೂ ಫೈನಲ್‌ಗೆ ಲಗ್ಗೆ ಇಟ್ಟಿತು.

ಮಂಗಳವಾರ ನಡೆದ ಐಪಿಎಲ್ ಕ್ವಾಲಿಫಯರ್ (1) ಪಂದ್ಯದಲ್ಲಿ ನಾಯಕ ರಜತ್ ಪಾಟೀದಾರ್ (ಅಜೇಯ 93) ಅವರ ಸಿಡಿಲಬ್ಬರದ ಬ್ಯಾಟಿಂಗ್ ಬಲದಿಂದ ಆರ್‌ಸಿಬಿಯು 20 ಓವರ್‌ಗಳಲ್ಲಿ 5 ವಿಕೆಟ್‌ಗಳಿಗೆ 254 ರನ್ ಗಳಿಸಿ, ಬೃಹತ್ ಗುರಿಯನ್ನು ಗುಜರಾತ್ ಟೈಟನ್ಸ್‌ಗೆ ಒಡ್ಡಿತು. ಜೇಕಬ್ ಡಫಿ (39ಕ್ಕೆ3) ಹಾಗೂ ರಸಿಕ್ ಸಲಾಮ್ ದಾರ್ (24ಕ್ಕೆ2) ಅವರ ಅಮೋಘ ಬೌಲಿಂಗ್‌ನಿಂದಾಗಿ ಆರ್‌ಸಿಬಿಯು 92 ರನ್‌ಗಳಿಂದ ನಿರಾಯಾಸ ಗೆಲುವು ಸಾಧಿಸಿತು. ಟೈಟನ್ಸ್‌ಗೆ 19.3 ಓವರ್‌ಗಳಲ್ಲಿ 162 ರನ್ ಗಳಿಸಲಷ್ಟೇ ಸಾಧ್ಯವಾಯಿತು. ರಾಹುಲ್ ತೆವಾಟಿಯಾ (68; 43ಎ) ಅವರೊಬ್ಬರೇ ಒಂದಿಷ್ಟು ದಿಟ್ಟತನ ತೋರಿದರು.

ಗುಜರಾತ್ ತಂಡಕ್ಕೆ ತನ್ನ ತವರು ಅಹಮದಾಬಾದಿನಲ್ಲಿ ನಡೆಯಲಿರುವ ಫೈನಲ್ ಪ್ರವೇಶಿಸಲು ಇನ್ನೂ ಒಂದು ಅವಕಾಶ ಬಾಕಿ ಇದೆ. ಇದೇ 29ರಂದು ಮುಲ್ಲನಪುರದಲ್ಲಿ ನಡೆಯುವ ಎರಡನೇ ಕ್ವಾಲಿಫಯರ್‌ನಲ್ಲಿ ಆಡಲಿರುವ ಟೈಟನ್ಸ್ ತಂಡವು ಗೆದ್ದರೆ ಫೈನಲ್ ಪ್ರವೇಶಿಸಬಹುದು.

ಸಾಯಿ ಕೈ ಜಾರಿದ ಬ್ಯಾಟ್: ಬೃಹತ್ ಗುರಿ ಬೆನ್ನಟ್ಟಿದ ಗುಜರಾತ್ ತಂಡಕ್ಕೆ ಸಾಯಿ ಸುದರ್ಶನ್ ಮತ್ತು ಗಿಲ್ ಅಮೋಘ ಆರಂಭ ನೀಡಿದರು. ಆದರೆ ಡಫಿ ಹಾಕಿದ ಮೂರನೇ ಓವರ್‌ನಲ್ಲಿ ಸಾಯಿ ಸುದರ್ಶನ್‌ಗೆ (14 ರನ್) ಅದೃಷ್ಟ ಕೈಕೊಟ್ಟಿತು. ಎಡಗೈ ಬ್ಯಾಟರ್ ಸಾಯಿ ಕೈಯಿಂದ ಜಾರಿದ ಬ್ಯಾಟ್ ಸ್ಟಂಪ್‌ಗೆ ತಗುಲಿತು. ಹಿಟ್ ವಿಕೆಟ್ ಆದ ಸಾಯಿ ಬೇಸರದಿಂದ ಡಗ್‌ಔಟ್ ಸೇರಿದರು. ಇಲ್ಲಿಂದ ಟೈಟನ್ಸ್ ಸೋಲಿನ ಹಾದಿ ಹಿಡಿಯಿತು.

ಭುವನೇಶ್ವರ್ ಕುಮಾರ್ ಬೌಲಿಂಗ್‌ನಲ್ಲಿ ಗಿಲ್ ಕ್ಲೀನ್ ಬೌಲ್ಡ್ ಆದರು. ಜೋಸ್ ಬಟ್ಲರ್ (29; 11ಎ) ಎರಡು ಸಿಕ್ಸರ್, ನಾಲ್ಕು ಬೌಂಡರಿ ಹೊಡೆದು ಆಟಕ್ಕೆ ಕುದುರಿಕೊಂಡಿದ್ದರು. ಆದರೆ ಅವರು ಜೋಶ್ ಹೇಝಲ್‌ವುಡ್ ಅವರ ಮಿಂಚಿನ ಎಸೆತದಲ್ಲಿ ಬೌಲ್ಡ್ ಆದರು. ಅಲ್ಲಿಂದ ಬ್ಯಾಟರ್‌ಗಳು ಡಗ್‌ಔಟ್‌ಗೆ ಸಾಲುಗಟ್ಟಿದರು. ಐವರು ಬ್ಯಾಟರ್‌ಗಳು ಒಂದಂಕಿಯಷ್ಟೇ ಗಳಿಸಿದರು.

ರಜತ್ ಜೀವದಾನ, ಟೈಟನ್ಸ್‌ಗೆ ದುಬಾರಿ: ರಜತ್ ಪಾಟೀದಾರ್ ಅವರ ಎರಡು ಕ್ಯಾಚ್‌ಗಳನ್ನು ಕೈಚೆಲ್ಲಿದ ಟೈಟನ್ಸ್ ತಂಡದ ಫೀಲ್ಡರ್‌ಗಳು ಪಂದ್ಯದ ಸೋಲಿಗೆ ಪ್ರಮುಖ ಕಾರಣರಾದರು.

ಇದರಿಂದಾಗಿ ರಜತ್ ಅವರ ಬೀಸಾಟ ತಾರಕಕ್ಕೇರಿತು. ಅವರ ಆಟದಿಂದಾಗಿ ಐಪಿಎಲ್ ಇತಿಹಾಸದಲ್ಲಿಯೇ ಪ್ಲೇ ಆಫ್ ಹಂತದಲ್ಲಿ ಅತ್ಯಧಿಕ ಮೊತ್ತ ದಾಖಲಾಯಿತು. ರಜತ್ 33 ಎಸೆತಗಳಲ್ಲಿ ಅಜೇಯ 93 ರನ್ ಗಳಿಸಿದರು. ಅದರಲ್ಲಿ 9 ಸಿಕ್ಸರ್ ಮತ್ತು ಐದು ಬೌಂಡರಿ ಇದ್ದವು. ಇದರಿಂದಾಗಿ ಆರ್‌ಸಿಬಿ ತಂಡಕ್ಕೆ ಇನಿಂಗ್ಸ್‌ನ ಕೊನೆಯ 5 ಓವರ್‌ಗಳಲ್ಲಿ 86 ರನ್‌ಗಳು ಹರಿದುಬಂದವು.

ಫಿಲ್ ಸಾಲ್ಟ್ ಅವರಿಗೆ ವಿಶ್ರಾಂತಿ ನೀಡಲಾಯಿತು. ವಿರಾಟ್ ಕೊಹ್ಲಿ ಅವರೊಂದಿಗೆ ಇನಿಂಗ್ಸ್ ಆರಂಭಿಸಿದ ವೆಂಕಟೇಶ್ ಅಯ್ಯರ್ (19 ರನ್) ಅವರು ಸಿರಾಜ್ ಹಾಕಿದ ಮೊದಲ ಓವರ್‌ನಲ್ಲಿಯೇ ರನ್ ಸೂರೆ ಮಾಡಿದರು. ಎರಡನೇ ಓವರ್‌ನಲ್ಲಿ ಕಗಿಸೊ ರಬಾಡ ಹಾಕಿದ ಎರಡನೇ ಓವರ್‌ನಲ್ಲಿ ವೆಂಕಟೇಶ್ ಔಟಾದರು.

ಕೊಹ್ಲಿಯೊಂದಿಗೆ ಸೇರಿಕೊಂಡ ದೇವದತ್ತ ಪಡಿಕ್ಕಲ್ (30; 19ಎ) ಇನಿಂಗ್ಸ್‌ಗೆ ಬಲ ತುಂಬಿದರು. ಎರಡನೇ ವಿಕೆಟ್ ಜೊತೆಯಾಟದಲ್ಲಿ ಇಬ್ಬರೂ 72 ರನ್ ಸೇರಿಸಿದರು. 9ನೇ ಓವರ್‌ನಲ್ಲಿ ವಿಂಡೀಸ್ ಆಲ್‌ರೌಂಡರ್ ಜೇಸನ್ ಹೋಲ್ಡರ್ ಎಸೆತದಲ್ಲಿ ವಿರಾಟ್ ಕ್ಲೀನ್ ಬೌಲ್ಡ್ ಆದರು.

ಸ್ಪಿನ್ನರ್ ರಶೀದ್ ಖಾನ್ ಮತ್ತು ಹೋಲ್ಡರ್ ಅವರು ಮಧ್ಯಮ ಹಂತದಲ್ಲಿ ಉತ್ತಮವಾಗಿ ಬೌಲಿಂಗ್ ಮಾಡಿದರು. ಆದರೆ ಪ್ರಸಿದ್ಧ ಕೃಷ್ಣ ಹಾಕಿದ 14ನೇ ಓವರ್‌ನಲ್ಲಿ ರಜತ್ 18 ರನ್ ಗಳಿಸಿದರು. ಅದೇ ಓವರ್‌ನಲ್ಲಿ ರಜತ್ ಅವರಿಗೆ ಎರಡು ಜೀವದಾನ ದೊರೆತವು. ಖೆಜ್ರೊಲಿಯಾ ಅವರು ತಮ್ಮ ನಂತರದ ಓವರ್‌ಗಳಲ್ಲಿ ಎರಡು ನೋಬಾಲ್ ಮತ್ತು ವೈಡ್ ಕೂಡ ಹಾಕಿದರು. ಅವರ ಒಂದೇ ಓವರ್‌ನಲ್ಲಿ ಬ್ಯಾಟರ್‌ಗಳು 28 ರನ್ ಗಳಿಸಿದರು.

ರಜತ್ ಮತ್ತು ಕೃಣಾಲ್ ಪಾಂಡ್ಯ ಅವರು ನಾಲ್ಕನೇ ವಿಕೆಟ್ ಜೊತೆಯಾಟದಲ್ಲಿ 95 ರನ್ ಸೇರಿಸಿದರು. ರಬಾಡ ಬೌಲಿಂಗ್‌ನಲ್ಲಿ ರಜತ್ ಅವರು ಸಿಕ್ಸರ್ ಹೊಡೆಯುವ ಮೂಲಕ ಅರ್ಧಶತಕದ ಗಡಿ ದಾಟಿದರು. ಇನ್ನೊಂದೆಡೆ ಟಿಮ್ ಡೇವಿಡ್ (4 ರನ್) ಅವರು ಬೇಗನೆ ಔಟಾದರು. ಜಿತೇಶ್ ಶರ್ಮಾ 5 ಎಸೆತಗಳಲ್ಲಿ ಅಜೇಯ 15 ರನ್ ಹೊಡೆದರು.

ವಿಕೆಟ್ ಗಳಿಸಿದ ರಸಿಕ್ ಸಲಾಮ್ ದಾರ್ ಅವರನ್ನು ವಿರಾಟ್ ಕೊಹ್ಲಿ, ಜೇಕಬ್ ಡಫಿ ಹಾಗೂ ಭುವನೇಶ್ವರ್ ಕುಮಾರ್ ಅಭಿನಂದಿಸಿದರು ಚಿತ್ರಗಳು: ಎಎಫ್‌ಪಿ/ಪಿಟಿಐ

ಐಪಿಎಲ್: ಪ್ಲೇಆಫ್‌ಗಳಲ್ಲಿ ಅತ್ಯಧಿಕ ಮೊತ್ತ

ಮೊತ್ತ	ತಂಡ	ಎದುರಾಳಿ	ತಾಣ	ವರ್ಷ
5ಕ್ಕೆ 254	ಆರ್‌ಸಿಬಿ	ಜಿ.ಟಿ	ಧರ್ಮಶಾಲಾ	2026
3ಕ್ಕೆ 233	ಜಿ.ಟಿ	ಎಂ.ಐ	ಅಹಮದಾಬಾದ್	2023
5ಕ್ಕೆ 228	ಎಂ.ಐ	ಜಿ.ಟಿ	ಮುಲ್ಲನಪುರ	2025
6ಕ್ಕೆ 226	ಪಿಬಿಕೆಎಸ್	ಸಿಎಸ್‌ಕೆ	ವಾಂಖೆಡೆ	2014
5ಕ್ಕೆ 222	ಸಿಎಸ್‌ಕೆ	ಡಿ.ಸಿ	ಚೆನ್ನೈ	2012

ಐಪಿಎಲ್‌ನಲ್ಲಿ ಆರ್‌ಸಿಬಿ ಅತಿ ಹೆಚ್ಚು ರನ್

ರನ್	ಎದುರಾಳಿ	ತಾಣ	ವರ್ಷ
5ಕ್ಕೆ 263	ಪಿಡಬ್ಲ್ಯುಐ	ಬೆಂಗಳೂರು	2013
7ಕ್ಕೆ262	ಎಸ್‌ಆರ್‌ಎಚ್	ಬೆಂಗಳೂರು	2024
5ಕ್ಕೆ254	ಜಿ.ಟಿ	ಧರ್ಮಶಾಲಾ	2026

ಸ್ಕೋರ್ ಕಾರ್ಡ್

ರಾಯಲ್ ಚಾಲೆಂಜರ್ಸ್ ಬೆಂಗಳೂರು: 5ಕ್ಕೆ 254 (20 ಓವರುಗಳಲ್ಲಿ)

ವೆಂಕಟೇಶ್ ಸಿ ಶುಭಮನ್ ಬಿ ರಬಾಡ 19 (7ಎ, 4x3, 6x1)
ಕೊಹ್ಲಿ ಬಿ ಹೋಲ್ಡರ್ 43 (25ಎ, 4x5, 6x1)
ಪಡಿಕ್ಕಲ್ ಸಿ ಬಟ್ಲರ್ ಬಿ ಹೋಲ್ಡರ್ 30 (19ಎ, 4x5)
ರಜತ್ ಪಾಟೀದಾರ್ ಔಟಾಗದೇ 93 (33ಎ, 4x5, 6x9)
ಕೃಣಾಲ್ ಸಿ ಸಾಯಿ ಬಿ ರಬಾಡ 43 (28ಎ, 4x5, 6x2)
ಡೇವಿಡ್ ಬಿ ಪ್ರಸಿದ್ಧ 4 (5ಎ)
ಜಿತೇಶ್ ಶರ್ಮಾ ಔಟಾಗದೇ 15 (5ಎ, 4x1, 6x1)
ಇತರೆ: 7 (ಬೈ 1, ಲೆಗ್‌ಬೈ 1, ನೋಬಾಲ್ 2, ವೈಡ್ 3)
ವಿಕೆಟ್ ಪತನ: 1–21 (ವೆಂಕಟೇಶ್ ಅಯ್ಯರ್, 1.6), 2–93 (ವಿರಾಟ್ ಕೊಹ್ಲಿ, 8.2), 3–94 (ದೇವದತ್ತ ಪಡಿಕ್ಕಲ್, 8.4), 4–189 (ಕೃಣಾಲ್ ಪಾಂಡ್ಯ, 16.1), 5–214 (ಟಿಮ್ ಡೇವಿಡ್, 17.6).
ಬೌಲಿಂಗ್: ಮೊಹಮ್ಮದ್ ಸಿರಾಜ್ 3–0–46–0; ಕಗಿಸೊ ರಬಾಡ 4–0–54–2; ಜೇಸನ್ ಹೋಲ್ಡರ್ 4–0–39–2; ರಶೀದ್ ಖಾನ್ 3–0–29–0; ಪ್ರಸಿದ್ಧ ಕೃಷ್ಣ 4–0–53–1; ಕುಲವಂತ ಖೆಜ್ರೋಲಿಯಾ 2–0–31–0

ಗುಜರಾತ್ ಟೈಟನ್ಸ್: 162 (19.3 ಓವರ್‌ಗಳಲ್ಲಿ)

ಸಾಯಿ ಹಿಟ್‌ವಿಕೆಟ್ ಬಿ ಡಫಿ 14 (9ಎ, 4x3)
ಶುಭಮನ್ ಬಿ ಭುವನೇಶ್ವರ್ 2 (7ಎ)
ಬಟ್ಲರ್ ಬಿ ಹೇಝಲ್‌ವುಡ್ 29 (11ಎ, 4x4, 6x2)
ನಿಶಾಂತ್ ಸಿ ಮತ್ತು ಬಿ ಸಲಾಂ 5 (3ಎ, 4x1)
ವಾಷಿಂಗ್ಟನ್ ಸಿ ಹೇಝಲ್‌ವುಡ್ ಬಿ ಡಫಿ 8 (8ಎ, 4x1)
ಹೋಲ್ಡರ್ ಸಿ ಹೇಝಲ್‌ವುಡ್ ಬಿ ಸಲಾಂ 0 (3ಎ)
ತೆವಾಟಿಯಾ ಸಿ ಪಾಟೀದಾರ್ ಬಿ ಭುವನೇಶ್ವರ್ 68 (43ಎ, 4x8, 6x4)
ರಶೀದ್ ಸಿ ಶರ್ಮಾ ಬಿ ಡಫಿ 8 (9ಎ, 6x1)
ರಬಾಡ ಸಿ ಕೊಹ್ಲಿ ಬಿ ಪಾಂಡ್ಯ 9 (5ಎ, 4x2)
ಸಿರಾಜ್ ಸಿ ಡೇವಿಡ್ ಬಿ ಕೃಣಾಲ್ 5 (13ಎ, 4x1)
ಪ್ರಸಿದ್ಧ ಕೃಷ್ಣ ಔಟಾಗದೇ 6 (7ಎ, 4x1)
ಇತರೆ: 8 (ಲೆಗ್‌ಬೈ 1, ನೋಬಾಲ್ 1, ವೈಡ್ 6)
ವಿಕೆಟ್ ಪತನ: 1–17 (ಸಾಯಿ ಸುದರ್ಶನ್, 2.3), 2–27 (ಶುಭಮನ್ ಗಿಲ್, 3.1), 3–51 (ಜೋಸ್ ಬಟ್ಲರ್, 4.5), 4–51 (ನಿಶಾಂತ್ ಸಿಂಧು, 5.1), 5–51 (ಜೇಸನ್ ಹೋಲ್ಡರ್, 5.4), 6–65 (ವಾಷಿಂಗ್ಟನ್ ಸುಂದರ್, 8.2), 7-78 (ರಶೀದ್ ಖಾನ್, 10.3), 8–88 (ಕಗಿಸೊ ರಬಾಡ, 11.2), 9–156 (ರಾಹುಲ್ ತೆವಾಟಿಯಾ, 18.1), 10–162 (ಮೊಹಮ್ಮದ್ ಸಿರಾಜ್, 19.3)
ಬೌಲಿಂಗ್: ಜೇಕಬ್ ಡಫಿ 4–0–39–3; ಭುವನೇಶ್ವರ್ ಕುಮಾರ್ 4–0–28–2; ಜೋಶ್ ಹೇಝಲ್‌ವುಡ್ 4–0–39–1; ರಸಿಕ್ ಸಲಾಂ 3–1–24–2; ಕೃಣಾಲ್ ಪಾಂಡ್ಯ 3.3–0–16–2; ರೊಮಾರಿಯೊ ಶೆಫರ್ಡ್ 1–0–15–0
ಪಂದ್ಯದ ಆಟಗಾರ: ರಜತ್ ಪಾಟೀದಾರ್
ಆರೆಂಜ್ ಕ್ಯಾಪ್: ಸಾಯಿ ಸುದರ್ಶನ್ (ಜಿ ಟಿ, 652 ರನ್)
ಪರ್ಪಲ್ ಕ್ಯಾಪ್: ಭುವನೇಶ್ವರ್ ಕುಮಾರ್ (ಆರ್‌ಸಿಬಿ, 26 ವಿಕೆಟ್)

ಫಲಿತಾಂಶ: ಆರ್‌ಸಿಬಿ ತಂಡಕ್ಕೆ 92 ರನ್‌ಗಳ ಜಯ

ಬ್ಯಾಟಿಂಗ್ ಬಲಶಾಲಿಗಳ ಜಿದ್ದಾಜಿದ್ದಿ

ಎಲಿಮಿನೇಟರ್ ಇಂದು: ಸನ್‌ರೈಸರ್ಸ್– ರಾಜಸ್ಥಾನ ರಾಯಲ್ಸ್ ಹಣಾಹಣಿ

ಪ್ರಜಾವಾಣಿ ವಾರ್ತೆ

ಮುಲ್ಲನಪುರ: ಬೇಸಿಗೆಯ ರಾತ್ರಿಯ ಬಾನಂಗಳದಲ್ಲಿ 'ಸಿಕ್ಸರ್ ಸಿಡಿಮದ್ದು'ಗಳ ಬೆಳಕಿನ ಚಿತ್ತಾರ ಬಿಡಿಸಲು ಸನ್‌ರೈಸರ್ಸ್ ಹೈದರಾಬಾದ್ ಮತ್ತು ರಾಜಸ್ಥಾನ ರಾಯಲ್ಸ್ ಬ್ಯಾಟರ್‌ಗಳು ಸಿದ್ಧರಾಗಿದ್ದಾರೆ.

ಮಹಾರಾಜ ಯಾದವೇಂದ್ರಸಿಂಗ್ ಅಂತರ ರಾಷ್ಟ್ರೀಯ ಕ್ರಿಕೆಟ್ ಕ್ರೀಡಾಂಗಣದಲ್ಲಿ ಬುಧವಾರ ನಡೆಯುವ ಇಂಡಿಯನ್ ಪ್ರೀಮಿಯರ್ ಲೀಗ್ ಟೂರ್ನಿಯ ಎಲಿಮಿನೇಟರ್ ಪಂದ್ಯವು ಕುತೂಹಲ ಕೆರಳಿಸಿರುವುದೇ ಉಭಯ ತಂಡಗಳಲ್ಲಿರುವ ಬ್ಯಾಟರ್‌ಗಳಿಂದಾಗಿ. ಸನ್‌ರೈಸರ್ಸ್ ತಂಡದಲ್ಲಿ ಟ್ರಾವಿಸ್ ಹೆಡ್ ಮತ್ತು ಅಭಿಷೇಕ್ ಶರ್ಮಾ ಇದ್ದಾರೆ. 25 ವರ್ಷದ ಅಭಿಷೇಕ್ ಅವರು 206.22ರ ಸ್ಟ್ರೈಕ್‌ರೇಟ್‌ನಲ್ಲಿ ರನ್ ಸೂರೆ ಮಾಡಿದ್ದಾರೆ. ಮೂರನೇ ಕ್ರಮಾಂಕದ ಇಶಾನ್ ಕಿಶನ್ ಅವರು ಪಂದ್ಯ ಗೆಲ್ಲಿಸುವ ಸಾಮರ್ಥ್ಯವನ್ನು ಈಗಾಗಲೇ ಮೆರೆದಿದ್ದಾರೆ. ದಕ್ಷಿಣ ಆಫ್ರಿಕಾದ ಹೆನ್ರಿಕ್ ಕ್ಲಾಸೆನ್ ಅವರ ಅಬ್ಬರದ ಬ್ಯಾಟಿಂಗ್‌ನಿಂದಾಗಿ ಮಧ್ಯಮ ಕ್ರಮಾಂಕವೂ ಬಲಿಷ್ಠವಾಗಿದೆ. ನಿತೀಶ್ ಕುಮಾರ್ ರೆಡ್ಡಿ ಮತ್ತು ಸಲೀಲ್ ಅರೋರಾ ಕೂಡ ತಮ್ಮ ಉಪಯುಕ್ತ ಕಾಣಿಕೆ ನೀಡಿದ್ದಾರೆ.



ರಿಯಾನ್ ಪರಾಗ್



ಪ್ಯಾಟ್ ಕಮಿನ್ಸ್

ಇನ್ನೊಂದು ಕಡೆ ರಾಜಸ್ತಾನ ತಂಡದಲ್ಲಿ ವೈಭವ್ ಸೂರ್ಯವಂಶಿ ಎಂಬ 'ಡೈನಮೈಟ್' ಬ್ಯಾಟರ್ ಇದ್ದಾರೆ. 15 ವರ್ಷದ 'ವಿಸ್ಮಯ ಬಾಲಕ' ಈಗ ಕ್ರಿಕೆಟ್‌ಪ್ರಿಯರ ಕಣ್ಮಣಿಯಾಗಿದ್ದಾರೆ. 232.27ರ ಸ್ಟ್ರೈಕ್‌ರೇಟ್‌ನಲ್ಲಿ 583 ರನ್‌ಗಳ ರಾಶಿ ಪೇರಿಸಿದ್ದಾರೆ. ಟೂರ್ನಿಯುದ್ದಕ್ಕೂ ಘಟಾನುಘಟಿ ಬೌಲರ್‌ಗಳ ಎಸೆತಗಳನ್ನು ಸಿಕ್ಸರ್ ಹೊಡೆದು ಸೈ ಎನಿಸಿಕೊಂಡಿದ್ದಾರೆ. ಶಾಟ್ ಪಿಚ್, 140 ಕಿ.ಮೀ ವೇಗದ ಎಸೆಗಳಿಗೂ ಜಗ್ಗದ ಈ ಹುಡುಗ ನೀಡುವ ಆರಂಭವೇ ರಾಜಸ್ಥಾನಕ್ಕೆ ಶಕ್ತಿ ತುಂಬುತ್ತಿದೆ. ಅವರೊಂದಿಗೆ ಇನಿಂಗ್ಸ್ ಆರಂಭಿಸುವ ಯಶಸ್ವಿ ಜೈಸ್ವಾಲ್, ವಿಕೆಟ್ ಕೀಪರ್ ಧ್ರುವ್ ಜುರೆಲ್ ಮಾತ್ರ ಸ್ಥಿರ ಬ್ಯಾಟರ್ ಆಗಿದ್ದರು. ನಾಯಕ ರಿಯಾನ್ ಪರಾಗ್ ಮತ್ತು ಅವರ ಮಧ್ಯಮ ಕ್ರಮಾಂಕದ ಜೊತೆಗಾರ ಡೊನೊವನ್ ಫೆರೀರಾ ಬುಧವಾರ ಕಣಕ್ಕಿಳಿಯಲಿದ್ದಾರೆ.

2016ರ ಚಾಂಪಿಯನ್ ಸನ್‌ರೈಸರ್ಸ್ ತಂಡವು ಎರಡನೇ ಕ್ವಾಲಿಫೈಯರ್ (2) ಪಂದ್ಯಕ್ಕೆ ಪ್ರವೇಶ ಗಳಿಸುವ ಹುಮ್ಮಸ್ಸಿನಲ್ಲಿದೆ. ಉಭಯ ತಂಡಗಳು ಮುಖಾಮುಖಿಯಾದ ಕಳೆದ ಐದು ಪಂದ್ಯಗಳಲ್ಲಿಯೂ ಸನ್‌ರೈಸರ್ಸ್ ಜಯಭೇರಿ ಬಾರಿಸಿದೆ. ಅಲ್ಲದೇ ಈ ತಂಡವು ರಾಜಸ್ಥಾನ ಎದುರು 14-9ರ ಬಲಾಬಲವನ್ನೂ ಹೊಂದಿದೆ. ಆದರೆ ಮೊದಲ ಆವೃತ್ತಿಯಲ್ಲಿ ಚಾಂಪಿಯನ್ ಆಗಿರುವ ರಾಯಲ್ಸ್ ಮತ್ತೊಮ್ಮೆ ಪ್ರಶಸ್ತಿ ಮೇಲೆ ಕಣ್ಣಿಟ್ಟಿದೆ.

ಸನ್‌ರೈಸರ್ಸ್ ತಂಡದ ಬೌಲಿಂಗ್ ವಿಭಾಗವು ನಾಯಕ ಪ್ಯಾಟ್ ಕಮಿನ್ಸ್ ಅವರ ಅನುಭವ, ಇಶಾನ್ ಮಾಲಿಂಗ, ಸಾಕಿಬ್ ಹುಸೇನ್ ಮತ್ತು ಪ್ರಫುಲ್ ಹಿಂಗೆ ಅವರ ಆತ್ಮವಿಶ್ವಾಸದ ಮೇಲೆ ಅವಲಂಬಿತವಾಗಿದೆ. ಆದರೆ ರಾಜಸ್ಥಾನ ತಂಡದಲ್ಲಿ ಜೋಫ್ರಾ ಆರ್ಚರ್ ಇದ್ದಾರೆ. ಲೀಗ್ ಹಂತದ ಕೊನೆಯ ಪಂದ್ಯದಲ್ಲಿ ಜೋಫ್ರಾ ಆಲ್‌ರೌಂಡ್ ಆಟದಿಂದಾಗಿ ರಾಯಲ್ಸ್ ಇವತ್ತು ಎಲಿಮಿನೇಟರ್ ಆಡುತ್ತಿದೆ. ಅವರು ಲಯದಲ್ಲಿರುವುದು ತಂಡದ ಶಕ್ತಿ ಹೆಚ್ಚಿಸಿದೆ. ಅವರೊಂದಿಗೆ ನಾಂದ್ರೆ ಬರ್ಗರ್, ಕನ್ನಡಿಗ, ಸ್ಪಿನ್ನರ್ ಯಶ್ ರಾಜ್ ಪೂಂಜಾ ಹಾಗೂ ಅನುಭವಿ ರವೀಂದ್ರ ಜಡೇಜ ಅವರಿದ್ದಾರೆ. ಅದರಿಂದಾಗಿ ಮೇಲ್ನೋಟಕ್ಕೆ ಈ ಪಂದ್ಯವು ರೋಚಕ ರಸದೌತಣ ನೀಡುವ ಎಲ್ಲ ಲಕ್ಷಣಗಳೂ ಕಾಣುತ್ತಿವೆ.

ಪಂದ್ಯ ಆರಂಭ: ರಾತ್ರಿ 7.30
ನೇರಪ್ರಸಾರ: ಸ್ಟಾರ್ ಸ್ಪೋರ್ಟ್ಸ್ ನೆಟ್‌ವರ್ಕ್, ಜಿಯೊಹಾಟ್‌ಸ್ಟಾರ್ ಆ್ಯಪ್

ಅತಿ ಹೆಚ್ಚು ರನ್ ಗಳಿಸಿರುವ ಬ್ಯಾಟರ್‌ಗಳು

ಸನ್‌ರೈಸರ್ಸ್ ಹೈದರಾಬಾದ್				
ಬ್ಯಾಟರ್	ಪಂದ್ಯ	ರನ್	ಶತಕ	ಅರ್ಧಶತಕ
ಹೆನ್ರಿಚ್ ಕ್ಲಾಸೆನ್	14	606	-	6
ಇಶಾನ್ ಕಿಶನ್	14	569	-	6
ಅಭಿಷೇಕ್ ಶರ್ಮಾ	14	563	1	4
ಟ್ರಾವಿಸ್ ಹೆಡ್	14	383	-	2
ರಾಜಸ್ಥಾನ ರಾಯಲ್ಸ್				
ಬ್ಯಾಟರ್	ಪಂದ್ಯ	ರನ್	ಶತಕ	ಅರ್ಧಶತಕ
ವೈಭವ್ ಸೂರ್ಯವಂಶಿ	14	583	1	3
ಧ್ರುವ್ ಜುರೇಲ್	14	458	-	5
ಯಶಸ್ವಿ ಜೈಸ್ವಾಲ್	14	397	-	3
ರಿಯಾನ್ ಪರಾಗ್	12	272	-	2

ಹೆಚ್ಚು ವಿಕೆಟ್ ಗಳಿಸಿದವರು

ರಾಜಸ್ಥಾನ ರಾಯಲ್ಸ್		
ಬೌಲರ್	ಪಂದ್ಯ	ವಿಕೆಟ್
ಜೋಫ್ರಾ ಆರ್ಚರ್	14	21
ಬ್ರಿಜೇಶ್ ಶರ್ಮಾ	11	13
ಸನ್‌ರೈಸರ್ಸ್ ಹೈದರಾಬಾದ್		
ಬೌಲರ್	ಪಂದ್ಯ	ವಿಕೆಟ್
ಇಶಾನ್ ಮಾಲಿಂಗ	14	19
ಸಾಕಿಬ್ ಹುಸೇನ್	10	15

ಅಭಿಷೇಕ್ ಶರ್ಮಾ ವೈಭವ್ ಸೂರ್ಯವಂಶಿ

ಕೆಎಸ್‌ಸಿಎ: ಆಯ್ಕೆ ಸಮಿತಿಗಳಿಗೆ ಸದಸ್ಯರ ನೇಮಕ

ಸೀನಿಯರ್ ತಂಡಕ್ಕೆ ಅಮಿತ್ ವರ್ಮಾ ಮುಖ್ಯಸ್ಥ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಾಜಿ ಕ್ರಿಕೆಟಿಗ ಅಮಿತ್ ವರ್ಮಾ ಅವರನ್ನು ಕರ್ನಾಟಕ ರಾಜ್ಯ ಕ್ರಿಕೆಟ್ ಸಂಸ್ಥೆಯ ಸೀನಿಯರ್ ಮತ್ತು 23 ವರ್ಷದೊಳಗಿನವರ ಪುರುಷರ ತಂಡಗಳ ಆಯ್ಕೆ ಸಮಿತಿಯ ಮುಖ್ಯಸ್ಥರನ್ನಾಗಿ ನೇಮಕ ಮಾಡಲಾಗಿದೆ.

ಅಮಿತ್ ವರ್ಮಾ

'ಕ್ರಿಕೆಟ್ ಸಲಹಾ ಸಮಿತಿ (ಸಿ.ಎ.ಸಿ)ಯ ಮಾರ್ಗದರ್ಶನ ಹಾಗೂ ಅಧ್ಯಕ್ಷ ಬಿ.ಕೆ. ವೆಂಕಟೇಶ್ ಪ್ರಸಾದ್ ನೇತೃತ್ವದ ಆಡಳಿತ ಮಂಡಳಿಯು ಕೈಗೊಂಡ ಪಾರದರ್ಶಕ ಪ್ರಕ್ರಿಯೆಯಲ್ಲಿ ಆಯ್ಕೆ ಸಮಿತಿಗಳನ್ನು ನೇಮಕ ಮಾಡಲಾಗಿದೆ. ಸಿ.ಎ.ಸಿಯಲ್ಲಿ ಭಾರತ ತಂಡದ ಮಾಜಿ ಕ್ರಿಕೆಟಿಗರಾದ ಅನಿಲ್ ಕುಂಬ್ಳೆ, ಜಾವಗಲ್ ಶ್ರೀನಾಥ್, ಸುನಿಲ್ ಜೋಶಿ ಮತ್ತು ಮಹಿಳಾ ತಂಡದ ಜಯಶ್ರೀ ದೊರೆಸ್ವಾಮಿ ಅವರಿದ್ದಾರೆ. 2026–27ರ ಸಾಲಿನಲ್ಲಿ ಈ ಸಮಿತಿಗಳು ಕಾರ್ಯನಿರ್ವಹಿಸಲಿವೆ' ಎಂದು ಕೆಎಸ್‌ಸಿಎ ವಕ್ತಾರ ವಿನಯ್ ಮೃತ್ಯುಂಜಯ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಆಯ್ಕೆ ಸಮಿತಿಗಳು ಇಂತಿವೆ: ಪುರುಷರ ಸೀನಿಯರ್–23 ವರ್ಷದೊಳಗಿನವರ ತಂಡ: ಅಮಿತ್ ವರ್ಮಾ (ಚೇರ್ಮನ್), ತೇಜ್‌ಪಾಲ್ ಕೊಠಾರಿ, ಸುನೀಲ್ ರಾಜು, ಸುರೇಶ್ ಶಾನಭಾಳ್

19 ವರ್ಷದೊಳಗಿನವರು: ಎಸ್. ಪ್ರಕಾಶ್ (ಚೇರ್ಮನ್), ರಾಘವೇಂದ್ರ. ಎಂ.ಪಿ. ವಿವೇಕ್, ಡಿ.ಎಸ್. ಅನಂತ್

16 ಮತ್ತು 14 ವರ್ಷದೊಳಗಿನವರು: ಜಿ.ಎನ್. ಉಮೇಶ್ (ಚೇರ್ಮನ್), ಕೆ.ಎಂ. ಅಯ್ಯಪ್ಪ, ಪಿ. ಶ್ರೀರಾಮ್, ಎಸ್. ಧನಂಜಯ್.

ಮಹಿಳೆಯರು: ಸೀನಿಯರ್–23 ವರ್ಷದೊಳಗಿನವರು: ಕೆ.ಆರ್. ಗಾಯತ್ರಿ (ಚೇರ್‌ಪರ್ಸನ್), ನಿವೇದಿತಾ, ಜಿ. ಲೀನಾ, ಪಿ. ಸ್ಫೂರ್ತಿ

19 ಮತ್ತು 15 ವರ್ಷದೊಳಗಿನವರು: ಮಾಲಾ ಸುಂದರೇಶನ್ (ಚೇರ್‌ಪರ್ಸನ್), ಹೇಮಲತಾ, ಪೂಜಾ ಪಾಂಚಾಲ್, ಮೀನಾಕುಮಾರಿ

ಕಾಮನ್‌ವೆಲ್ತ್ ಚೆಸ್: 3 ಚಿನ್ನ ಗೆದ್ದು ಮಿಂಚಿದ ನಕ್ಷತ್ರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ಉದಯೋನ್ಮುಖ ಆಟಗಾರ್ತಿ ನಕ್ಷತ್ರ ಗುಮುದವೆಲ್ಲಿ, ಶ್ರೀಲಂಕಾದ ಕಲುತಾರದಲ್ಲಿ ನಡೆದ ಕಾಮನ್‌ವೆಲ್ತ್ ಯುವ ಚಾಂಪಿಯನ್‌ಷಿಪ್‌ನಲ್ಲಿ ಮೂರು ಚಿನ್ನದ ಪದಕಗಳನ್ನು ಗೆದ್ದು ಅಮೋಘ ಸಾಧನೆ ಪ್ರದರ್ಶಿಸಿದ್ದಾಳೆ.

ಹತ್ತು ವರ್ಷದೊಳಗಿನವರ ವಿಭಾಗದಲ್ಲಿ ಆಡಿದ ನಕ್ಷತ್ರಾ, ಕ್ಲಾಸಿಕಲ್ ವಿಭಾಗದಲ್ಲಿ 9 ಸುತ್ತುಗಳಿಂದ 8.5 ಪಾಯಿಂಟ್ಸ್ ಸಂಗ್ರಹಿಸಿದರೆ, ರ‍್ಯಾಪಿಡ್ ವಿಭಾಗದಲ್ಲಿ 7 ಸುತ್ತುಗಳಿಂದ 6.5 ಪಾಯಿಂಟ್ಸ್ ಹಾಗೂ ಬ್ಲಿಟ್ಜ್‌ನಲ್ಲಿ 7ರಲ್ಲಿ 7 ಅಂಕ ಪಡೆದು ಅಜೇಯರಾಗುಳಿದಳು.

ನಗರದ ವೇಲಮ್ಮಾಳ್ ಶಾಲೆಯ ವಿದ್ಯಾರ್ಥಿನಿಯಾಗಿರುವ ನಕ್ಷತ್ರಾ, ರಾಷ್ಟ್ರೀಯ, ಅಂತರರಾಷ್ಟ್ರೀಯ ಟೂರ್ನಿಗಳಲ್ಲಿ ಉತ್ತಮ ಪ್ರದರ್ಶನ ನೀಡುತ್ತಿದ್ದಾಳೆ.

14 ವರ್ಷದೊಳಗಿನವರ ವಿಭಾಗದಲ್ಲಿ ನಗರದ ಇನ್ನೊಬ್ಬ ಆಟಗಾರ್ತಿ ದಿವ್ಯಶ್ರೀ ಕೊಲ್ಲಿಪಾರ, ರ‍್ಯಾಪಿಡ್ ವಿಭಾಗದಲ್ಲಿ ಬೆಳ್ಳಿ ಮತ್ತು ಕ್ಲಾಸಿಕಲ್ ವಿಭಾಗದಲ್ಲಿ ಕಂಚಿನ ಪದಕ ಗೆದ್ದುಕೊಂಡಳು.

ಸಬಲೆಂಕಾ, ಗಾಫ್ ಮುನ್ನಡೆ

ಫ್ರೆಂಚ್ ಓಪನ್ ಟೆನಿಸ್: ಡೇನಿಯಲ್ ಮೆಡ್ವೆಡೇವ್‌ಗೆ ಆಘಾತ

ಪ್ಯಾರಿಸ್ (ಎಎಫ್‌ಪಿ): ವಿಶ್ವದ ಅಗ್ರಮಾನ್ಯ ಆಟಗಾರ್ತಿ ಅರಿನಾ ಸಬಲೆಂಕಾ ಮತ್ತು ಹಾಲಿ ಚಾಂಪಿಯನ್ ಕೊಕೊ ಗಾಫ್ ಅವರು ಮಂಗಳವಾರ ನೇರ ಸೆಟ್‌ಗಳ ಗೆಲುವಿನೊಡನೆ ಫ್ರೆಂಚ್ ಓಪನ್ ಟೆನಿಸ್ ಟೂರ್ನಿಯಲ್ಲಿ ಎರಡನೇ ಸುತ್ತು ಪ್ರವೇಶಿಸಿದರು. ಪುರುಷರ ಸಿಂಗಲ್ಸ್‌ನಲ್ಲಿ ಆರನೇ ಶ್ರೇಯಾಂಕದ ಡೇನಿಯಲ್ ಮೆಡ್ವೆಡೇವ್ ಅವರು ಆರಂಭಿಕ ಸುತ್ತಿನಲ್ಲೇ ನಿರ್ಗಮಿಸಿದರು.

ಮಹಿಳೆಯರ ಸಿಂಗಲ್ಸ್‌ನ ಮೊದಲ ಸುತ್ತಿನಲ್ಲಿ ಬೆಲರೂಸ್‌ನ ಸಬಲೆಂಕಾ 6-4, 6-2ರಿಂದ ಸ್ಪೇನ್‌ನ ಜೆಸ್ಸಿಕಾ ಬೌಜಾಸ್ ಮನೇರೊ ಅವರನ್ನು ಹಿಮ್ಮೆಟ್ಟಿಸಿದರು. ನಾಲ್ಕು ಗ್ರ್ಯಾನ್‌ಸ್ಲಾಮ್ ಗೆದ್ದಿರುವ 26 ವರ್ಷದ ಸಬಲೆಂಕಾ ಅವರಿಗೆ 50ನೇ ರ‍್ಯಾಂಕ್‌ನ ಜೆಸ್ಸಿಕಾ ಮೊದಲ ಸೆಟ್‌ನಲ್ಲಿ ಕೊಂಚ ಪ್ರತಿರೋಧ ತೋರಿದರು. ಎರಡನೇ ಸೆಟ್‌ನಲ್ಲಿ ಬೆಲರೂಸ್‌ನ ಆಟಗಾರ್ತಿ ಸುಲಭವಾಗಿ ಮೇಲುಗೈ ಸಾಧಿಸಿದರು. ಕಳೆದ ಆವೃತ್ತಿಯಲ್ಲಿ ಫೈನಲ್ ತಲುಪಿದ್ದ ಸಬಲೆಂಕಾ, ಅಮೆರಿಕದ ಕೊಕೊ ಗಾಫ್ ಅವರಿಗೆ ಸೋತಿದ್ದರು.

ರೋಲ್ಯಾಂಡ್ ಗ್ಯಾರೋಸ್‌ನಲ್ಲಿ ಪ್ರಶಸ್ತಿ ಉಳಿಸಿಕೊಳ್ಳುವ ನಿಟ್ಟಿನಲ್ಲಿ ಅಭಿಯಾನ ಆರಂಭಿಸಿದ ಅಮೆರಿಕದ ಗಾಫ್ 6-4, 6-0ರಿಂದ ಸ್ವದೇಶದ ಟೇಲರ್ ಟೌನ್ಸೆಂಡ್ ಅವರನ್ನು ಮಣಿಸಿದರು. ಮೊದಲ ಸೆಟ್‌ನಲ್ಲಿ 3–5 ಹಿನ್ನಡೆ ಅನುಭವಿಸಿದ್ದ ಗಾಫ್ ನಂತರ ನೈಜ ಆಟ ಪ್ರದರ್ಶಿಸಿದರು. ಎರಡನೇ ಸೆಟ್‌ನಲ್ಲಿ ಎದುರಾಳಿಗೆ ಒಂದೂ ಗೇಮ್ ಬಿಟ್ಟುಕೊಡದೆ ಪಾರಮ್ಯ ಮೆರೆದರು. ಮುಂದಿನ ಸುತ್ತಿನಲ್ಲಿ ಅವರಿಗೆ ಈಜಿಪ್ಟ್‌ನ ಮಾಯರ್ ಶೆರಿಫ್ ಎದುರಾಳಿಯಾಗಿದ್ದಾರೆ.

ರಷ್ಯಾದ ಮೆಡ್ವೆಡೇವ್ ಐದು ಸೆಟ್‌ಗಳ ಹಣಾಹಣಿಯಲ್ಲಿ ಆಸ್ಟ್ರೇಲಿಯಾದ ಎದುರಾಳಿ ಆ್ಯಡಂ ವಾಲ್ಟನ್ ಅವರಿಗೆ ಶರಣಾದರು. ವೈಲ್ಡ್‌ಕಾರ್ಡ್ ಪ್ರವೇಶ ಪಡೆದಿರುವ 97ನೇ ಕ್ರಮಾಂಕದ ವಾಲ್ಟನ್ 6-2, 1-6, 6-1, 1-6, 6-4ರಿಂದ ಮೆಡ್ವೆಡೇವ್ ಅವರನ್ನು ಸೋಲಿಸಿದರು. 2021ರಲ್ಲಿ ಅಮೆರಿಕ ಓಪನ್ ಪ್ರಶಸ್ತಿ ಗೆದ್ದಿರುವ ಮೆಡ್ವೆಡೇವ್ ಅವರಿಗೆ ಫ್ರೆಂಚ್ ಓಪನ್‌ನಲ್ಲಿ ಈತನಕ ಕ್ವಾರ್ಟರ್ ಫೈನಲ್ ಹಂತ ದಾಟಲು ಸಾಧ್ಯವಾಗಿಲ್ಲ.

20ನೇ ಕ್ರಮಾಂಕದ ಕ್ಯಾಮರಾನ್ ನೋರಿ ಅವರು ಪಕ್ಕೆಲುಬಿನ ಗಾಯದಿಂದಾಗಿ ತಮ್ಮ ಮೊದಲ ಸುತ್ತಿನ ಪಂದ್ಯದಿಂದ ಹಿಂದೆ ಸರಿದರು. ಪೆರಗ್ವೆಯ ಡೇನಿಯಲ್ ವ್ಯಾಲೆಜೊ ಅವರು 7-6 (9/7), 2-0ರಿಂದ ಮುನ್ನಡೆಯಲ್ಲಿದ್ದಾಗ ಬ್ರಿಟನ್‌ನ ಕ್ಯಾಮೆರಾನ್ ನಿವೃತ್ತಿ ಪಡೆದರು.

ಐದನೇ ಗ್ರ್ಯಾನ್‌ಸ್ಲಾಮ್ ಪ್ರಶಸ್ತಿಯನ್ನು ಎದುರು ನೋಡುತ್ತಿರುವ ಜಪಾನ್ ಅನುಭವಿ ನವೋಮಿ ಒಸಾಕಾ 6-3 7-6(3)ರಿಂದ ಜರ್ಮನಿಯ ಲಾರಾ ಸೀಗೆಮಂಡ್ ಅವರನ್ನು ಸೋಲಿಸಿ, ಎರಡನೇ ಸುತ್ತು ಪ್ರವೇಶಿಸಿದರು.

ಬೆಲರೂಸ್‌ನ ಅರಿನಾ ಸಬಲೆಂಕಾ ಎಎಫ್‌ಪಿ ಚಿತ್ರ

ನಿಯಮಗಳು ಮತ್ತು ಷರತ್ತುಗಳು

- ಈ ಕೊಡುಗೆಯು ಕೇವಲ **Pet Saffa Premium Laxative Granules (160g)** ಖರೀದಿಯ ಮೇಲೆ ಲಭ್ಯವಿರುತ್ತದೆ.
- 27ನೇ ಮೇ 2026 ರಿಂದ 26ನೇ ಜೂನ್ 2026ರವರೆಗೆ ಮಾತ್ರ ಕೊಡುಗೆ ಅನ್ವಯ.
- ಒಂದು ವೇಳೆ 3 ದಿನಗಳಲ್ಲಿ ನಿಮಗೆ ಮಲಬದ್ಧತೆಯಿಂದ ನಿವಾರಣೆ ಲಭಿಸದಿದ್ದಲ್ಲಿ, 30ನೇ ಜೂನ್ 2026 ರೊಳಗೆ **Pet Saffa Premium Laxative Granules (160g)** ಖಾಲಿ ಬಾಟಲಿಯನ್ನು ರಸೀದಿ ಸಮೇತ **Divisa Herbals Pvt. Ltd. (Mauza Rampur Jattan, Nahan Road, Kala Amb, District Sirmour, Himachal Pradesh-173030)** ವಿಳಾಸಕ್ಕೆ ಹಿಂದಿರುಗಿಸಿ, ನೀವು ರಿಫಂಡ್ ಕ್ಲೇಮ್ ಮಾಡಿಕೊಳ್ಳಬಹುದು.
- ಯಾವುದೇ ಕಾರಣಕ್ಕೂ ರಸೀದಿಯಲ್ಲಿ ಉಲ್ಲೇಖಿಸಲಾಗಿರುವ ಪೇಟ್ ಸಫಾ ಪ್ರಿಮಿಯಂ ಲ್ಯಾಕ್ಸೇಟಿವ್ ಗ್ರ್ಯಾನ್ಯೂಲ್ಸ್ (160ಗ್ರಾಂ) ದರಕ್ಕಿಂತ ಹೆಚ್ಚಿನ ಮೊತ್ತಗಳಿಗೆ **Divisa Herbals Pvt. Ltd.** ಹೊಣೆಯಾಗುವುದಿಲ್ಲ.
- ಫಲಿತಾಂಶಗಳು ವ್ಯಕ್ತಿಯಿಂದ ವ್ಯಕ್ತಿಯಲ್ಲಿ ಭಿನ್ನವಾಗಿರಬಹುದು.
- ಎಲ್ಲಾ ತಗಾದೆಗಳು ನಹನಾ ನ್ಯಾಯಾಲಯಗಳ ನ್ಯಾಯವ್ಯಾಪ್ತಿಗೆ ಒಳಪಡುತ್ತವೆ.
- ಯಾವುದೇ ಸಮಯದಲ್ಲಿ ಷರತ್ತು ಮತ್ತು ನಿಬಂಧನೆಗಳನ್ನು ಬದಲಾಯಿಸುವ ಹಕ್ಕನ್ನು **Divisa Herbals Pvt. Ltd.** ಕಾಯ್ದಿರಿಸಿಕೊಂಡಿರುತ್ತದೆ.
- ನೀವು ಯಾವುದೇ ನಿರ್ದಿಷ್ಟ ವೈದ್ಯಕೀಯ ಆರೈಕೆಯಲ್ಲಿದ್ದರೆ, ದಯವಿಟ್ಟು ಇದನ್ನು ಬಳಸುವುದಕ್ಕೂ ಮುನ್ನ ನಿಮ್ಮ ವೈದ್ಯರ ಸಲಹೆ ಪಡೆದುಕೊಳ್ಳಿರಿ.

24x7 Helpline: 9119788888 | www.petsaffa.com | Available at all medical & general stores